# ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ

## ಅಂತರಂಗದ ಆಶಯ

ಒಬ್ಬ ವ್ಯಕ್ತಿಯ ಶೇಕಡ ನೂರರಷ್ಟು ಉತ್ತಮ ಚಿಂತನೆ ಒಂದು ಸಮುದಾಯದ ಇಡೀ ಸಮಾಜದ, ರಾಷ್ಟ್ರದ ಕೊನೆಗೆ ಸಮಸ್ತ ಮಾನವ ಪೀಳಿಗೆಯ ಏಳಿಗೆಗೆ ಸಾಧನವಾಗಬಲ್ಲದು. ಇಂಥವರು ಅಪರೂಪದಲ್ಲಿ ಅಪರೂಪ. ಯುಗಕ್ಕೊಬ್ಬನಾದರು ಅವತರಿಸಬೇಕೆಂಬುದು ನನ್ನ ಅಂತರಂಗದ ಆಶಯ. ಈ ಸಂಬಂಧ ಯೇಸು ಕ್ರಿಸ್ತ, ಬುದ್ಧ, ಬಸವ, ಜ್ಯೋತಿಬಾ ಫುಲೆ, ನಾರಾಯಣ ಗುರು, ಅಂಬೇಡ್ಕರ್ ಮತ್ತು ಸಂತ ಮದರ್ ತೆರಸಾ ಅವರುಗಳನ್ನು ನೆನೆಯುತ್ತಾ ಮುಂದಿನವರ ನಿರೀಕ್ಷೆಯಲ್ಲಿದ್ದೇನೆ. ಇವರನ್ನು ಮಹಾತ್ಮರೆನ್ನಿ, ಯುಗಪುರಷರೆನ್ನಿ, ಸಮಾಜ ಸುಧಾರಕರೆನ್ನಿ, ಮಾನವತವಾದಿಗಳೆನ್ನಿ ಆದರೆ ಇವರೆಲ್ಲರು ವಿವಿಧ ಕಾಲಘಟ್ಟದಲ್ಲಿ ಬಾಳಿ ಬದುಕಿ ಜೀವನ ಸಾರ್ಥಕಗೊಳಿಸಿಕೊಂಡು ಮುಗ್ಧ ಹಾಗೂ ಮೂರ್ಖ ಮಾನವ ಕೋಟಿಗೆ ಸಾರ್ಥಕ ಬದುಕನ್ನು ಬದುಕಿಕೊಳ್ಳಿ ಎಂದು ಒಂದಿಷ್ಟು ಹಿತನುಡಿಗಳನ್ನು ಹೇಳಿ ಕೈಲಾದ ಕೆಲಸವನ್ನು ಮಾಡಿ ಸಂದು ಹೋದವರು. ತಮ್ಮ ಬೋಧನೆಯಂತೆ ಬರಹ, ಬರಹದಂತೆ ಬದುಕು ಈ ಮೂರು ಮಿಳಿತವಾಗಿದ್ದ ಅವರ ನುಡಿಗಳು ಸ್ಪಟಿಕದ ಸಲಾಕೆಯಂತಿವೆ. ಸಮಸ್ತ ಮಾನವ ಕೋಟಿ ಮೆಚ್ಚಿ ಅಹುದಹುದೆನ್ನುವಂತಿವೆ. ಯುಗ ಯುಗಗಳೇ ಕಳೆದರು ಎಲ್ಲರಿಗೂ ಕೇಳಿಸುತ್ತಲೇ ಇದೆ. ನಾವೆಲ್ಲರೂ ಇವರಂತಾಗ ಬಯಸೋಣ, ಇವರಂತಾಗದಿದ್ದರೂ ಇವರ ನಡೆ ನುಡಿಗಳನ್ನು ಪಾಲಿಸುವವರಾಗೋಣ, ಪಾಲಿಸಲಾಗದಿದ್ದರೂ ಅವುಗಳನ್ನು ಕೇಳಿಸಿಕೊಳ್ಳೋಣ. ಆದರೆ ಯಾವುದೇ ಕಾರಣಕ್ಕೂ ಕಿವಿ ಮುಚ್ಚಿ, ಕಣ್ಣು ಮುಚ್ಚಿ ಜೀವಂತ ಹೆಣಗಳಾಗದಿರೋಣ ಎಂಬುದೇ ನನ್ನ ಅನುದಿನದ ಆಲೋಚನೆ.

ನಾವುಗಳು ವಿದ್ಯೆ ಕಲಿತವರು, ಬುದ್ಧಿಗಳಿಸಿದವರು, ಒಂದೊಂದು ಕ್ಷೇತ್ರದಲ್ಲಿ 'ಮಾಸ್ಟರ್' ಗಳಾಗಿ ಮಾನವ ಸಮುದಾಯಕ್ಕೆ ಸೇವೆಯಲ್ಲಿ ಸಲ್ಲಿಸಲು ನಿಯೋಜಿಸಲ್ಪಟ್ಟವರು. ಆದರೇನು ಬಂತು ಕೆಳಗೆ ಉಲ್ಲೇಖಿಸಿರುವ ಅಲ್ಲಮ ಪ್ರಭುವಿನ ವಚನದಂತೆ ನಾವು 'ಅಂತರಂಗದಲ್ಲಿ ಅರಿವಾದೊಡೇನು, ಬಹಿರಂಗದಲ್ಲಿ ಕ್ರಿಯೆಯಿಲ್ಲದ ಮೇಲೆ' ಎಂಬತಾಗಿದ್ದೇವೆ. ಆದ್ದರಿಂದ ಅಪಾರ ಹೊಣೆಗಾರಿಕೆಯನ್ನು ಹೊಂದಿದ ಶಿಕ್ಷಕ ವರ್ಗವು ಎಚ್ಚರಿಕೆಯಿಂದ ಹೆಜ್ಜೆಯಿಡಬೇಕು ಹಾಗೂ ಮಾತನಾಡಬೇಕು. ಇಲ್ಲವಾದಲ್ಲಿ ವೈರುಧ್ಯಗಳು ಹುಟ್ಟಿಕೊಳ್ಳಬಹುದು. ಈ ಎಲ್ಲಾ ಎಚ್ಚರಿಕೆಯಿಂದ ಜವಾಬ್ದಾರಿಯನ್ನು ಅರಿತು ಬುಡಕಟ್ಟು ಸಮುದಾಯಗಳ ಅಧ್ಯಯನದಲ್ಲಿ ನಮ್ಮ ವಿಭಾಗವು ತೊಡಗಿಸಿಕೊಂಡಿದೆ.

ಬುಡಕಟ್ಟು ಕಾವ್ಯದ ಸಂಗ್ರಹ ಕಾರ್ಯಕ್ಕೆ ಪ್ರೇರಕ ಶಕ್ತಿಯಾದ ವಿಶ್ರಾಂತ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ, ಜಾನಪದ ಮತ್ತು ಬುಡಕಟ್ಟು ಕ್ಷೇತ್ರದಲ್ಲಿ ಅಪಾರ ಜ್ಞಾನ ಮತ್ತು ಕಾಳಜಿ ಹೊಂದಿದ್ದು, ಈ ಬುಡಕಟ್ಟು ಕಾವ್ಯವು ತುರ್ತಾಗಿ ಪ್ರಕಟವಾಗಬೇಕೆಂಬ ಆಶಯ ವ್ಯಕ್ತಪಡಿಸಿದ ಮಾನ್ಯ ಕುಲಪತಿಗಳಾದ ಡಾ. ಬಿ. ಎ. ವಿವೇಕ ರೈ ಅವರಿಗೂ ಪ್ರಸಾರಾಂಗದ ಹಿಂದಿನ ನಿರ್ದೇಶಕರಾದ ಡಾ. ಹಿ. ಚಿ. ಬೋರಲಿಂಗಯ್ಯ ಹಾಗೂ ಈಗಿನ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ,

ಕಲಿಕೆ ನಿರಂತರ ಈ ನಿಟ್ಟಿನಲ್ಲಿ ವಿಭಾಗದ ಸಹೋದ್ಯೋಗಿಗಳ ಜೊತೆಗಿನ ಚರ್ಚೆಗಳು ಹೊಸ ಚಿಂತನೆಗಳನ್ನು ಪಡೆದುಕೊಳ್ಳುವಲ್ಲಿ ಸಹಕಾರ ನೀಡುತ್ತಿರುವ ಸಹದ್ಯೋಗಿ ಮಿತ್ರರಾದ ಡಾ. ಹಿ. ಚಿ. ಬೋರಲಿಂಗಯ್ಯ, ಡಾ. ಕೆ. ಎಂ. ಮೆಟ್ರಿ, ಡಾ. ಚಲುವರಾಜು, ಡಾ. ಗಂಗಾಧರ ದೈವಜ್ಞ, ಶ್ರೀ ಎ. ಎಸ್. ಪ್ರಭಾಕರ ಅವರಿಗೂ,

ಯಾವ ಉದ್ದೇಶಕ್ಕಾಗಿ ನಮ್ಮನ್ನು ತೊಡಗಿಸಿಕೊಂಡಿದ್ದೇವೋ ಅವರಿಗೆ ನಾವು ಮಾಡುತ್ತಿರುವುದು ಇಷ್ಟವೋ ಅಥವಾ ಇಲ್ಲವೋ ಅಂತು ನಮ್ಮ ಅಧ್ಯಯನಕ್ಕೆ ಪೂರಕವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಕಲ ಮಾಹಿತಿಯನ್ನು ನೀಡಿ ಸಹಕರಿಸಿದ ಸಮಸ್ತ ಸೋಲಿಗ ಬುಡಕಟ್ಟು ಸಮುದಾಯಕ್ಕೂ,

ಬಿಳಿಗಿರಿ ರಂಗನ ಕಾವ್ಯವನ್ನು ಹಾಡಿ ಪ್ರಥಮ ಬಾರಿಗೆ ಅಕ್ಷರ ರೂಪ ಪಡೆದುಕೊಳ್ಳಲು ಸಾಧ್ಯವಾಗಿಸಿದ ಪ್ರಧಾನ ಕಲಾವಿದ ಶ್ರೀ ದಂಬಡಿ ಕ್ಯಾತೇಗೌಡ, ಶ್ರೀ ತಂಬೂರಿ ದಾಸೇಗೌಡ ಮತ್ತು ಶ್ರೀ ಸಪ್ಪೇ ಸಿದ್ದೇಗೌಡ ಅವರಿಗೂ,

ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲಾ ವೀರಪ್ಪನ್ ಆತಂಕದಿಂದ ನನ್ನ ಬರುವಿಕೆಯನ್ನು ನಿರೀಕ್ಷಿಸಿ, ಬಂದ ಬಳಿಕ ಹೋದ ಕೆಲ್ಸ ಆಯ್ತು ಅಯ್ಯೋ ಇನ್ನು ಮೇಲೆ ಈ ತರಹದ ಕೆಲ್ಸಾನೇ ತಗೋಬೇಡಪ್ಪ ಎಂದು ನಿಟ್ಟುಸಿರು ಬಿಡುತ್ತಿದ್ದ ನನ್ನ ಶ್ರೀಮತಿ ಶಾಂತ ಹಾಗೂ ನೀನು ಏನ್ ಕೆಲ್ಸ ಮಾಡ್ತಿದ್ದಿಯಪ್ಪ ಎಂಬ ಪ್ರಶ್ನೆಗಳನ್ನು ಕೇಳುತ್ತ ಈಗ ಯಾವ್ಯಾವ ಪುಸ್ತಕ ಬರಿತಿದ್ದಿಯಪ್ಪ ಎಂದು ವಿಚಾರಿಸಿಕೊಳ್ಳುತ್ತಿದ್ದ ಪ್ರಾಮಾಣಿಕ್ ಮತ್ತು ಆಕರ್ಷಕ್ ಅವರಿಗೂ,

ಆಗಾಗ ನನ್ನ ಜೊತೆ ಶೈಕ್ಷಣಿಕ ಚರ್ಚೆ ಮಾಡುವುದರ ಮೂಲಕ ಅನೇಕ ಹೊಸ ವಿಚಾರಗಳ ಬಗ್ಗೆ ಗಮನ ಸೆಳೆವ ಸ್ನೇಹಿತರಾದ ಡಾ. ಸಿ. ಮಹದೇವ, ಡಾ. ಸಿ. ಆರ್, ಗೋವಿಂದರಾಜು, ಡಾ. ಪಿ. ಮಹದೇವಯ್ಯ, ಡಾ. ವೀರೇಶ ಬಡಿಗೇರ ಹಾಗೂ ಹಿರಿಯರಾದ ಜಿ. ಆರ್. ರಾಮಮೂರ್ತಿ ಅವರಿಗೂ,

ಮೂರು ಬಾರಿ ಅಕ್ಷರ ರೂಪ ಪಡೆದುಕೊಂಡರೂ ಪ್ರಕಟಣೆಗೆ ಸಜ್ಜಾಗದ ನನ್ನ ಈ ಕಾವ್ಯವನ್ನು ನಾಲ್ಕನೇ ಬಾರಿಗೆ ಪಟ್ಟುಬಿಡದೆ ಯಶಸ್ವಿಯಾಗಿ ಪ್ರಕಟಣೆಯ ಬಾಗಿಲಿಗೆ ತಲುಪಿಸಿದ ಸ್ನೇಹಿತರೂ ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಸುಜ್ಞಾನಮೂರ್ತಿ ಹಾಗೂ ಅಕ್ಷರ ಜೋಡಣೆ ಮಾಡಿದ ಜಿ. ಶಿವಕುಮಾರ್, ಚಿತ್ರ ಕಲಾವಿದ ಶ್ರೀ ಕೆ. ಕೆ. ಮಕಾಳಿ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ.

**ಡಾ. ಕೆ. ಕೇಶವನ್ ಪ್ರಸಾದ್**

## ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬರುತ್ತಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿ ಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. 'ಕನ್ನಡ' ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರು ಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾನಿಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಆನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಕನ್ನಡವು ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು. ಕನ್ನಡವು ತಾಂತ್ರಿಕ-ಮೌಖಿಕ ಮಾಧ್ಯಮದಲ್ಲಿ

ಬಳಕೆಯಾಗುತ್ತಿರುವಾಗಲೇ ಕಾಗದದಲ್ಲಿ ಕನ್ನಡ ಅಕ್ಷರಗಳು ಮುದ್ರಣಗೊಂಡು ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಗೊಳ್ಳುವ ಚಿಂತನ ಶರೀರವೂ ಮುಖ್ಯವಾದದ್ದು. ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಡಾ. ಕೆ. ಕೇಶವನ್ ಪ್ರಸಾದ್ ಅವರು 'ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ' ಎನ್ನುವ ಈ ಸಂಕಲನದಲ್ಲಿ ಶ್ರೀ ದಂಬಡಿ ಕ್ಯಾತೇಗೌಡ, ಶ್ರೀ ತಂಬೂರಿ ದಾಸೇಗೌಡ ಮತ್ತು ಶ್ರೀ ಸಪ್ಪೇ ಸಿದ್ದೇಗೌಡ ಈ ಮೂವರು ಗಾಯಕರು ಹಾಡಿದ ಬಿಳಿಗಿರಿ ರಂಗನ ಕುರಿತ ಕಾವ್ಯವನ್ನು ತುಂಬಾ ಪರಿಶ್ರಮ ಪೂರ್ವಕವಾಗಿ ಮತ್ತು ವಿವರವಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ. ಜೊತೆಗೆ ಸೋಲಿಗ ಸಮುದಾಯದ ಕುರಿತು ವಿಸ್ತಾರವಾಗಿ ಪರಿಚಯಿಸುತ್ತಲೇ ಬಿಳಿಗಿರಿ ರಂಗನ ಕಾವ್ಯದ ಮಹತ್ವವನ್ನು ವಿವೇಚಿಸಿದ್ದಾರೆ. ಬುಡಕಟ್ಟು ಅಧ್ಯಯನದ ವೈಧಾನಿಕತೆಯ ಹಿನ್ನೆಲೆಯಲ್ಲಿ ಈ ಸಂಕಥನಕ್ಕೆ ವಿಶೇಷ ಮಹತ್ವವಿದೆ. ಅಪಾರ ತಾಳ್ಮೆ ಮತ್ತು ನಿಖರತೆಯ ಮೂಲಕ ಬಿಳಿಗಿರಿ ರಂಗನ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿದ ಡಾ. ಕೆ. ಕೇಶವನ್ ಪ್ರಸಾದ್ ಅವರ ಸಾಧನೆ ಗಣನೀಯವಾದದ್ದು. ಜೊತೆಗೆ ಸೋಲಿಗರನ್ನು ಕುರಿತ ಜಾನಪದ ಪರಂಪರೆ ಮತ್ತು ಅವರ ಭವಿಷ್ಯವನ್ನು ಕುರಿತು ಮುಖ್ಯವಾಗಿ ಚರ್ಚೆಯನ್ನು ನಡೆಸಿದ್ದಾರೆ. ಪ್ರಧಾನವಾಗಿ ಸಂಪಾದನೆಯ ಕೆಲಸದ ಜೊತೆಗೆ ಜನಪದ ಕಾವ್ಯದ ಒಂದು ಬುಡಕಟ್ಟಿನ ಮೌಖಿಕ ಪರಂಪರೆಯ ಅನನ್ಯತೆಯ ಚರ್ಚೆಯೂ ಆಗಿದೆ. ಇಂತಹ ಮುಖ್ಯವಾದ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಿ ಪ್ರಕಟಿಸಿರುವ ಡಾ. ಕೆ. ಕೇಶವನ್ ಪ್ರಸಾದ್ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳು. ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರಲು ಶ್ರಮಿಸಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಅವರುಗಳನ್ನು ವಿಶೇಷವಾಗಿ ನೆನೆಯುತ್ತೇನೆ.

**ಬಿ. ಎ. ವಿವೇಕ ರೈ**
ಕುಲಪತಿ

# ೧. ಹೇಳಲೇ ಬೇಕಾದ್ದು, ಬೇಡದ್ದು

ಮೌಖಿಕ ಕಾವ್ಯ ಸಂಗ್ರಹ, ಸಂಪಾದನೆ ವಿಚಾರದಲ್ಲಿ ಅದಕ್ಕೆ ಪೂರಕವಾಗಿ ಹಲವಾರು ಅಗತ್ಯಗಳಿವೆ. "ಈ ಕೆಲಸವನ್ನು ಯಾರು ಬೇಕಾದರು ಮಾಡಬಹುದು. ಕೇವಲ ಅಕ್ಷರ ಜ್ಞಾನವಿದ್ದರೆ ಸಾಕು" ಎಂಬ ವಾದವನ್ನು ಮುಂದಿಡುವುದೂ ಉಂಟು. ಅದರೆ ಇದು ಸಮರ್ಥನೀಯವಾದುದಲ್ಲ. ಪುಟ ಸಂಖ್ಯೆಗಳ ಮೂಲಕ ಕಾವ್ಯವನ್ನು ಮೌಲ್ಯೀಕರಿಸುವುದು ಸೂಕ್ತವಲ್ಲ. ಏಕೆಂದರೆ ಕಾವ್ಯ ಹಾಡುವವನ ಸಮುದಾಯದ ಅಥವಾ ಗಾಯಕನ ಹಿನ್ನೆಲೆ, ಕಾವ್ಯದ ಮಹತ್ವ, ಕಾವ್ಯ ನೀಡುವ ವಿವಿಧ ಹೊಳಹುಗಳ ಬಗೆಗೆ ನಮ್ಮ ಗಮನವಿರಬೇಕಾದುದು ಅಗತ್ಯವೇ ಹೊರತು ಪುಟ ಸಂಖ್ಯೆಯಲ್ಲ.

ಈಗಾಗಲೇ ಬುಡಕಟ್ಟು ಅಧ್ಯಯನ ವಿಭಾಗವು 'ಬುಡಕಟ್ಟು ಮಹಾಕಾವ್ಯ ಮಾಲೆ' ಎಂಬ ಯೋಜನೆಯ ಅಡಿಯಲ್ಲಿ ಒಂಬತ್ತು ಮಹಾಕಾವ್ಯಗಳನ್ನು ಪ್ರಕಟಿಸಿದೆ. ಈ ಪ್ರಕಟಣೆಗಳು ನಾಡಿನ ವಿದ್ವಾಂಸರು ಹಾಗೂ ವಿಚಾರವಂತರ ಗಮನ ಸೆಳೆದಿದೆ. ಈ ಮಾಲೆಯ ಒಂದು ಕೃತಿಯಾದ ಮಲೆಮಾದೇಶ್ವರ ಕಾವ್ಯವನ್ನು ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಸಿ. ಎನ್. ರಾಮಚಂದ್ರನ್ ಅವರು ಆಂಗ್ಲಭಾಷೆಗೂ ಅನುವಾದಿಸಿದ್ದಾರೆ. ವಿಭಾಗದ ಬುಡಕಟ್ಟು ಮಹಾಕಾವ್ಯ ಮಾಲೆ ಯಶಸ್ವಿಯಾದುದರ ಹಿನ್ನೆಲೆಯಲ್ಲಿ ಅದೇ ಮಾದರಿಯಲ್ಲಿ ಕಾವ್ಯ ಸಂಗ್ರಹ-ಸಂಪಾದನೆ ಮುಂದುವರಿಸಲು ಸೂಚಿಸಿದ ಹಿಂದಿನ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿಯವರು ಬುಡಕಟ್ಟು ವಿಭಾಗದವರಾದ ನೀವು ಬುಡಕಟ್ಟಿಗೆ ಸಂಬಂಧಿಸಿದಂತೆ ಅಧ್ಯಯನ-ಸಂಶೋಧನೆ

ಕೈಗೊಳ್ಳಬೇಕು ಎಂಬ ಸಲಹೆಯನ್ನು ನೀಡಿದರು. ಆದಕಾರಣ ೧೯೯೮-೯೯ನೇ ಸಾಲಿನ ಸಾಂಸ್ಥಿಕ ಯೋಜನೆ ಅಡಿಯಲ್ಲಿ ಬುಡಕಟ್ಟಿನ ಕಲಾವಿದರೆ ಹಾಡಿದ ಬುಡಕಟ್ಟು ಕಾವ್ಯಗಳನ್ನು ಸಂಗ್ರಹಿಸಿ ಸಂಪಾದಿಸಬೇಕೆಂದು ವಿಭಾಗದ ಅಧ್ಯಾಪಕ ವರ್ಗವೂ ತೀರ್ಮಾನಿಸಿತು. ಆ ಹಿನ್ನೆಲೆಯಲ್ಲಿ ಒಬ್ಬೊಬ್ಬ ಅಧ್ಯಾಪಕನು ಲಭ್ಯವಿರುವ ಒಂದೊಂದು ಬುಡಕಟ್ಟಿನ ಕಾವ್ಯವನ್ನು ಸಂಗ್ರಹಿಸುವ ಯೋಜನೆಯನ್ನು ಹಮ್ಮಿಕೊಂಡೆವು. ಇದು ಒಂದು ರೀತಿಯಲ್ಲಿ ಬುಡಕಟ್ಟು ಸಮುದಾಯಕ್ಕೆ ನಮ್ಮ ಪರೋಕ್ಷ ಸೇವೆ ಎಂದೇ ಹೇಳಬಹುದು. ನಿಗೂಢವಾಗಿ ಉಳಿದಿರುವ ಬುಡಕಟ್ಟಿನ ಮೌಖಿಕ ಸಾಹಿತ್ಯ ಸಂಪತ್ತನ್ನಷ್ಟೆ ಸಂಗ್ರಹಮಾಡದೆ, ಈ ಮೂಲಕ ಆ ಸಮುದಾಯವನ್ನು ಸಮಗ್ರವಾಗಿ ಪರಿಚಯಿಸುವ ಹಾಗೂ ಬುಡಕಟ್ಟೊಂದರ ಸಾಹಿತ್ಯ, ಭಾಷೆ, ಸಂಸ್ಕೃತಿಯನ್ನು ಬಹಿರಂಗಗೊಳಿಸುವುದು ಸಾಧ್ಯವಿದೆ. ಈ ನಿಟ್ಟಿನಲ್ಲಿ ನಮ್ಮ ವಿಭಾಗವು ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂಬ ನಂಬಿಕೆ ನನಗಿದೆ. ಆದರೆ ಅನೇಕ ಮಿತಿಗಳೂ ಇದ್ದುವು ಎಂಬುದನ್ನು ಹೇಳದಿರಲಾಗದು. ಬ್ರಿಟಿಷರ ಆಳ್ವಿಕೆ ಸಂದರ್ಭದಲ್ಲಿ ವೆರಿಯರ್ ಎಲ್ವಿನ್ ಭಾರತಕ್ಕೆ ಕ್ರೈಸ್ತಮತ ಪ್ರಚಾರಕ್ಕಾಗಿ ಬಂದರು. ಕುತೂಹಲಕ್ಕೆ ಬುಡಕಟ್ಟು (ಗೊಂಡ) ಜನರ ಸಂಸ್ಕೃತಿ ಅಧ್ಯಯನಕ್ಕೆ ತೊಡಗಿದಾಗ ಅವರು ಎಷ್ಟು ಪ್ರಭಾವಿತರಾಗುತ್ತಾರೆ ಎಂದರೆ ಬುಡಕಟ್ಟು ಜನಸಮುದಾಯಕ್ಕೆ ತಾವೇ ಮತಾಂತರ ಹೊಂದಿದರು. ಕೊನೆಗೆ ಬುಡಕಟ್ಟಿನ ಮಹಿಳೆಯನ್ನು ಮದುವೆಯಾಗಿ ಅವರಿಗೋಸ್ಕರ ಬಾಳಿ ಬದುಕಿದರು. ಅವರ ಸೇವೆಯನ್ನು ಕೇವಲ ಮಾತಿನಲ್ಲಿ ಹೇಳುವುದಕ್ಕೆ ಬದಲು ಬುಡಕಟ್ಟು ಅಧ್ಯಯನ-ಸಂಶೋಧನೆಗೆ ಮೀಸಲಾದ ನಮ್ಮ ವಿಭಾಗವು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸ ಬೇಕಾದ ಅಗತ್ಯವಿದೆ. ಆದರೆ ಬುಡಕಟ್ಟು ಸಮುದಾಯಗಳ ಸಂಶೋಧನೆಯು ಹೆಚ್ಚಿನ ಕಾಲಾವಕಾಶ ಹಾಗೂ ವಿಶೇಷ ಧನಸಹಾಯವನ್ನು ನಿರೀಕ್ಷಿಸುತ್ತದೆ. ವ್ಯಾಪಕ ಕ್ಷೇತ್ರಕಾರ್ಯದಿಂದ ಮಾತ್ರ ಒಂದು ಬುಡಕಟ್ಟು ಸಮುದಾಯವನ್ನು ಅಧ್ಯಯನಕ್ಕೆ ಒಳಪಡಿಸಲು ಸಾಧ್ಯ. ಕೇವಲ ಹತ್ತು ಹದಿನೈದು ದಿನಗಳ ಸೀಮಿತ ಅವಧಿಯಲ್ಲಿ ಪಿಕನಿಕ್ ಮಾದರಿ ಕ್ಷೇತ್ರ ಕಾರ್ಯಯದಿಂದ ನಮ್ಮ ಉದ್ದೇಶ ಫಲಿಸದೇ ಹೋಗಬಹುದು. ಆದರೆ ನನ್ನ ಈ ಅಧ್ಯಯನ (ಸಂಗ್ರಹ) ಸಂದರ್ಭದಲ್ಲಿ ಅನೇಕ ಕೊರತೆಗಳ ನಡುವೆಯೂ ನನ್ನ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಮಾಣಿಕ ಪ್ರಯತ್ನ ಮಾಡಿದ್ದೇನೆ.

ಸಮಸ್ಯೆಯೆಂದರೆ, ಚಾಮರಾಜನಗರ ಮತ್ತು ಮೈಸುರು ಜಿಲ್ಲೆಯಲ್ಲಿ ಇರುವ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚಿರುವ ಸೋಲಿಗರಲ್ಲಿ ಬಿಳಿಗಿರಿರಂಗನ ಕಾವ್ಯವನ್ನು ಸಮಗ್ರವಾಗಿ ಹಾಡುವವರು ಶ್ರೀಮಾನ್ ದಂಬಡಿ ಕ್ಯಾತೇಗೌಡ ಅವರನ್ನ ಬಿಟ್ಟರೆ ಬೇರೊಬ್ಬರಿಲ್ಲ. ಈತನೋ ಮದ್ಯಪಾನ ಸೇವನೆ ಆಗದೆ ಒಂದು ಹೆಜ್ಜೆ ಮುಂದೆ ಹೋಗುವುದಿಲ್ಲ. ಬಾಯಲ್ಲಿ ಮೊದಲೆ ಹಲ್ಲುಗಳಿಲ್ಲ. ಇಂತಹ ಒಬ್ಬ ವಿಶೇಷ ಕಲಾವಿದನನ್ನು ಕೊನೆಗೂ ಹುಡುಕುವುದೇ ದೊಡ್ಡ ಸಾಧನೆಯಾಯಿತು. ಒಂದು ರೀತಿಯಲ್ಲಿ ಈತ ಸಂಚಾರಿ ಭಿಕ್ಷುಕ. ಹೊಟ್ಟೆಪಾಡಿಗಾಗಿ ನಾಡಿಗೆ ಹೋಗಿ ಗುಡಿ, ಮಠಗಳಲ್ಲಿ ಹಾಡುವುದು ಅಷ್ಟೋ ಇಷ್ಟೋ ಗಳಿಸುವುದು ಕುಡಿಯುವುದು ವಾರದಲ್ಲಿ ಒಂದೋ ಎರಡೋ ದಿನ ತನ್ನ ಪೋಡಿಗೆ ಭೇಟಿಕೊಡುವುದು. ಈತ ಹಾಡಿದ ಬಿಳಿಗಿರಿರಂಗನ ಕಾವ್ಯವನ್ನು ಲಿಪ್ಯಂತರಗೊಳಿಸುವಾಗ ನನ್ನಲ್ಲಿದ್ದ ಅಪಾರ ತಾಳ್ಮೆ ಖರ್ಚಾಯಿತು. ಕೆಲವೊಮ್ಮೆ ಒಂದೊಂದು ಪದವನ್ನು ಸ್ಪಷ್ಟಪಡಿಸಿಕೊಳ್ಳಲು ಐದತ್ತು ನಿಮಿಷವಾದರು ಬೇಕಾಗುತ್ತಿತ್ತು. ಈಗ ಹೇಳಿದ ವಿಚಾರಗಳು ಅನಗತ್ಯವೆನಿಸಿದರು ಅನಿವಾರ್ಯ. ಮುಂದೆ ಹೇಳಹೊರಟಿರುವ ಮಾತುಗಳು ಕಾವ್ಯಕ್ಕೆ ಪೂರಕ. ಕಾವ್ಯವನ್ನು ಓದುವ ಮೊದಲು ಆ ಕಾವ್ಯ ಸೃಷ್ಟಿಪಡೆದ ಸಮುದಾಯವನ್ನು ಕುರಿತು ಒಂದಿಷ್ಟು ಮಾಹಿತಿ ತಿಳಿಸಿಕೊಡುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

## ೧. ಸೋಲಿಗ ಸಮುದಾಯದ ಪರಿಚಯ

ಸೋಲಿಗರು ಪಕ್ಕದ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಕಂಡು ಬಂದರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಕರ್ನಾಟಕದಲ್ಲಿ. ಅದರಲ್ಲೂ ಚಾಮರಾಜ ನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕ್ರಮವಾಗಿ ಕೊಳ್ಳೆಗಾಲ, ಯಳಂದುರು, ಚಾಮರಾಜನಗರ ಮತ್ತು ಹುಣಸೂರು, ಹೆಗ್ಗಡೆದೇವನಕೋಟೆ, ಪಿರಿಯಾ ಪಟ್ಟಣ ತಲ್ಲೂಕುಗಳಲ್ಲಿಯೂ ಇತ್ತೀಚೆಗೆ ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರಾಗಿ ಕೊಡಗು ಜಿಲ್ಲೆ ಮತ್ತು ಕೇರಳ ರಾಜ್ಯದ ಗಡಿಭಾಗದಲ್ಲೂ ತತ್ಕಾಲಿಕ ನೆಲೆ ಕಂಡುಕೊಂಡಿರುವುದು ತಿಳಿದುಬರುತ್ತದೆ. ಒಂದು ಅಂದಾಜಿನ ಪ್ರಕಾರ ಈಗ ಸೋಲಿಗರ ಒಟ್ಟು ಜನಸಂಖ್ಯೆಯೂ ಇಪ್ಪತ್ತೈದು ಸಾವಿಕ್ಕೂ ಅಧಿಕವಾಗಿದೆ. (ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಪ್ರಕಟಿಸಿದ ಮಾಹಿತಿಯಿಂದ) ಸೋಲಿಗರು ವಾಸಿಸುವ ನೆಲೆಗಳನ್ನು “ಪೋಡು” ಎಂದು

ಕರೆಯುವರು. ಸಾಮಾನ್ಯವಾಗಿ ಈ ಪೋಡುಗಳ ಹೆಸರುಗಳು ಗಿಡ-ಮರಗಳು, ಕೆರೆ-ಕಟ್ಟೆ, ಗುಂಡಿ-ಮಾಳ ಇತ್ಯಾದಿಗಳೇ ಆಗಿರುತ್ತವೆ. ಅವುಗಳಲ್ಲಿ ಕೆಲವು ಈ ರೀತಿ ಇವೆ. ಸೀಗೆಪೋಡು, ಮುತ್ತುಗದ ಗದ್ದೆಪೋಡು, ದೊಡ್ಡ ಸಂಪಿಗೆ ಪೋಡು, ಕತ್ತೆಕಲ್ ಪೋಡು, ಮಂಜಿಗುಂಡಿ ಪೋಡು, ಗುಂಡಿಮಾಳ ಪೋಡು ಇತ್ಯಾದಿ.

ಸೋಲಿಗರು, ಸೋಲಿಗ ಎಂದು ಕರೆಯಲ್ಪಡುವ ಇವರು ತಮ್ಮನ್ನು ಸೋಲಿಗಗೌಡ ಎಂದು ಹೇಳಿಕೊಳ್ಳುವರು. ಅದಕ್ಕಾಗಿ ಅವರ ಹೆಸರಿನ ಮುಂದೆ "ಗೌಡ" ಎಂಬುದು ಸೇರಿರುತ್ತದೆ. ಕ್ಯಾತೇಗೌಡ, ಜಡೇಗೌಡ, ಮಾದೇಗೌಡ, ಹೆಣ್ಣು ಮಕ್ಕಳಿಗಾದರೆ ಕ್ಯಾತಿ, ಮಾದಿ, ದ್ಯೆತಿ, ಕಾಡಿ ಎಂದಿರುತ್ತವೆ. ಇತ್ತೀಚೆಗೆ ಈ ಸಾಂಪ್ರದಾಯಿಕ ಹೆಸರುಗಳನ್ನು ಕರೆಯುವುದು ಬಿಟ್ಟು ಆಧುನಿಕವಾಗಿ ನಾಡಿನ ಜನರಂತೆ ಹೆಸರು ಕರೆಯುವುದು ರೂಢಿಯಲ್ಲಿದೆ. ಈ ಸಮುದಾಯಕ್ಕೆ ಸೋಲಿಗ ಎಂಬ ಹೆಸರು ಬಂದುದರ ಬಗ್ಗೆ ಹಲವಾರು ವಿದ್ವಾಂಸರ ಅಭಿಪ್ರಾಯಗಳನ್ನು ಡಾ. ಚಂದ್ರು ಕಾಳೇಹಳ್ಳಿಯವರು ತಮ್ಮ ಸೋಲಿಗರ ಸಂಸ್ಕೃತಿ ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಇದು ಅವರ ಪಿ. ಎಚ್. ಡಿ. ನಿಬಂಧದ ವಿಷಯವೂ ಹೌದು.

**"ಸೋಲಿಗ" ಎಂಬ ಹೆಸರನ್ನು ಕುರಿತ ಕೆಲವು ಮಾಹಿತಿ :** ಒಮ್ಮೆ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಗೊಂಬೆಗಳನ್ನು ಮಾಡಿ ಅವಕ್ಕೆ ಜೀವ ತುಂಬಿದರು. ಒಂದು ನೀಲಯ್ಯನಾಯಿತು. ಇನ್ನೊಂದು ಸಂಕಮ್ಮನಾಯಿತು. ಮುಂದೆ ವಂಶ ಇವರಿಂದ ಬೆಳೆಯಿತು. ಈ ಮಕ್ಕಳು ಸೋಲ ಹಂಬಿನ ಗೆಡ್ಡೆಯನ್ನು ತಿಂದು ಜೀವಿಸುತ್ತಿದ್ದರು. ಹೀಗೆಯೆ ಅವರು ಗೆಡ್ಡೆಯನ್ನು ಕಿತ್ತು ಬೇಯಿಸುತ್ತಾ ತಿನ್ನುತಲ್ಲೆ ಮುಪ್ಪಾದರು. ಆದರೆ ಸೋಲಿನ ಹಂಬು ಮಾತ್ರ ಮತ್ತೆ ಮತ್ತೆ ಚಿಗುರಿ ಹೊಸ ಹೊಸ ಗೆಡ್ಡೆ ಬಿಟ್ಟಿತು. ಒಮ್ಮೆ ಈ ಮುದುಕ ಗೆಡ್ಡೆ ಕೀಳಲು ಹೋದಾಗ ಆ ಸೋಲನ ಹಂಬು ನಿನ್ನ ಕೈಯಿಂದ ನನ್ನ ಗೆಡ್ಡೆಯನ್ನು ಸಾಯುವವರೆಗೂ ಕಿತ್ತರೂ ನನ್ನನ್ನು ಸೋಲಿಸಲಿಕ್ಕೆ ಆಗಲ್ಲ ಆದ್ದರಿಂದ ನನ್ನ ಗೆಡ್ಡೆ ಕಿತ್ತು ಸೋತವನು ನೀನು "ಸೋಲಿಗ" ಎಂದು ಹೇಳಿತು. ಇದು ಒಂದು ಐಹಿತ್ಯವೇ ಹೊರತು ಸತ್ಯಕ್ಕೆ ದೂರವಾದುದು. ಇದು ಸೋಲಿಗನ ಅನುಭವ ಆಗಿರಲೂಬಹುದಷ್ಟೇ ಹೊರತು ಪಾರ್ವತಿ-ಪರಮೇಶ್ವರರ ಕೊಳೆಯಲ್ಲಿ ಸೃಷ್ಟಿಯಾದ ಗೊಂಬೆ ಇವೆಲ್ಲಾ ಕಲ್ಪಿತ ಕಥೆಗಳು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಪಾರ್ವತಿ-ಪರಮೇಶ್ವರರಿಂದ ನೀಲಯ್ಯ ಮತ್ತು ಸಂಕಮ್ಮ ಅವರ ಜನನವಾಗಿ ಮಹದೇಶ್ವರರ ದಯೆಯಿಂದ ಕಾರಯ್ಯ ಬಿಲ್ಲಯ್ಯರು ಹುಟ್ಟಿದರು. ಅವರ ಕಾಲ ಮುಗಿದು ಅವರಿಂದ ವಂಶಾಭಿವೃದ್ಧಿಯಾದ ಮೇಲೆ ಈ ಗುಂಪಿನ ಜನರಿಗೆಲ್ಲಾ ಒಬ್ಬ ರಾಜನಿದ್ದ. ಅವನು ಒಮ್ಮೆ ಶತ್ರುರಾಜರ ವಿರುದ್ಧ ಯುದ್ಧ ಮಾಡಬೇಕಾಗಿ ಬಂದು ಪರಾಜಿತನಾಗಿ ಜೀವ ರಕ್ಷಣೆಗೋಸ್ಕರ ತನ್ನ ಪರಿವಾರದೊಡನೆ ಕಾಡಿಗೆ ಓಡಿ ಹೋದನು. ಅವನು ಯುದ್ಧದಲ್ಲಿ ಸೋತಿದ್ದರಿಂದ "ಸೋಲುರಾಜ" ಎಂದು ಹೆಸರು ಬಂದಿತು. ಆ ಕಾರಣಕ್ಕಾಗಿ ಅವನ ವಂಶಸ್ಥರಿಗೆ ಸೋಲಿಗರು ಎಂದು ಹೆಸರಾಯಿತು. ಇದಕ್ಕೆ ಯಾವುದೇ ಆಧಾರಗಳಿಲ್ಲ. ಮೊದಲ ಭಾಗ ಪೌರಾಣಿಕವಾದದು. ಕೊನೆಯಲ್ಲಿ ಐತಿಹಾಸಿಕ ಸಂಗತಿಯಂತೆ ನಿರೂಪಿತವಾಗಿದೆ. ಇದೂ ಕೂಡ ಸತ್ಯಾಂಶವನ್ನು ಹೇಳುವಲ್ಲಿ ಅರ್ಧ ಅಂಶ ಮಾತ್ರ ಸಾಧ್ಯವಾಗಿದೆ. ಪೌರಾಣಿಕ ಅಂಶವನ್ನು ಕಡೆಗಣಿಸಿ ಐತಿಹಾಸಿಕ ಅಂಶವನ್ನು ಪರಿಗಣಿಸಬಹುದಾದರೂ, ರಾಜರ ಕಲ್ಪನೆಗಿಂತ ಸಮುದಾಯದ ನಾಯಕರಲ್ಲಿ ಉಂಟಾದ ಒಳ ಜಗಳ ಇಲ್ಲವೆ ಭಿನ್ನಾಭಿಪ್ರಾಯಗಳಿಂದ ಒಂದು ಗುಂಪು ಸೋತಿದ್ದೆ ಅಲ್ಲದೆ ಗಡಿಪಾರು ಮಾಡಿರುವ ಸಾಧ್ಯತೆ ಇದೆ. ಈ ಕುರಿತು ಮುಂದೆ ಚರ್ಚಿಸಲಾಗಿದೆ.

ಭಾಷಾಶಾಸ್ತ್ರಜ್ಞರ ದೃಷ್ಟಿಯಿಂದ ಈ ಕೆಳಗಿನ ಅಭಿಪ್ರಾಯ ಮೂಡಿದೆ "ಸೋಲಿಗರಲ್ಲಿ 'ಲ' ಕಾರದ ಸ್ಪಷ್ಟ ಉಚ್ಚಾರಣೆ ಇಲ್ಲದ್ದರಿಂದ" ಇಲು ಎಂಬುದು ಆಗಿ ಉಚ್ಚಾರಣೆ ಪಡೆದು "ಸೋಯಿ" ಎಂಬುದು ಆ ಉಚ್ಚಾರಣೆಯಾಗಿದ್ದು ಅದರ ನಿಜವಾದ ರೂಪವು "ಸ್ವಾಮಿ" ಎಂದಾಗಿದ್ದು ಮಹದೇಶ್ವರ ಸ್ವಾಮಿಯ ಭಕ್ತರಾದುದರಿಂದ ಇವರನ್ನು ಮೊದಲು "ಸ್ವಾಮಿಗೆ" ಎಂದು ಕರೆಯುತ್ತಿದ್ದು ಆ ನಂತರದಲ್ಲಿ "ಸೋಯಿಗ" ಎಂದಾಗಿದ್ದು ಮುಂದೆ ಜನ ಬಳಕೆಯಲ್ಲಿ "ಸೋಲಿಗ" ಎಂದಾಗಿರಬಹುದು.

ಮೇಲಿನ ಮೂರು ಅಭಿಪ್ರಾಯದ ಜೊತೆಗೆ ಮತ್ತೊಂದು ರೀತಿಯಲ್ಲಿ ಆಲೋಚಿಸಿ ಸೇರಿಸಲು ಬಯಸುತ್ತೇನೆ. ಇದು ಪ್ರಮುಖವಾಗಿ ಅವರು ದೈವಗಳು, ಬಳಿಗಳು, ಹೆಸರುಗಳನ್ನು ಆಧರಿಸಿದ್ದಾಗಿವೆ. ಬಿಳಿಗಿರಿರಂಗಯ್ಯನ ಕಾವ್ಯದಲ್ಲಿ ಸೋಲಿಗರ ಬೊಮ್ಮೆಗೌಡ

ಬಿಳಿಗಿರಿರಂಗಯ್ಯನಿಗೆ ತನ್ನ ಕುಲನೆಲೆಯನ್ನು ಹೇಳುವ ಸಂದರ್ಭದಲ್ಲಿ ನಮ್ಮ ಜಾತಿ ಅಂದ್ರೆ ಕುಲದಲ್ಲಿ ಕುರುಬ ಒಕ್ಕಲಿಗ ಜಾತೀಲಿ ದೇವಸೋಲ್ಗ... ಎಂಬುದಾಗಿ ಪ್ರಸ್ತಾಪವಿದೆ. ಹಾಗೆಯೇ ಮಲೆಮಾದೇಶ್ವರ ಕಾವ್ಯದಲ್ಲಿ (ಸಂಕಮ್ಮನ ಸಾಲು) ನೀಲಯ್ಯನ ಕುಲದ ಬಗ್ಗೆ ಹೇಳುತ್ತಾ "ಕುಲದಲ್ಲಿ ಕುರಬೊಕ್ಕಲು ಗೌಡ ನೀತಿಯೊಳಗೆ ನೀಲಯ್ಯ, ಜಾತಿಯೊಳಗೆ, ಮಲೆಯಸ್ವಾಲುಗ ನೀಲಯ್ಯ (ಸಂ. ಮಲೆಮಾದೇಶ್ವರ ಕಾವ್ಯ, ಕೇಶವನ್ ಪ್ರಸಾದ್. ಕೆ. ೧೯೯೭) ಎಂಬುದಾಗಿ ದಾಖಲಾಗಿರುವುದನ್ನು ಪರಿಗಣಿಸಿದಾಗ ನಮಗೆ ಅನೇಕ ವಿಚಾರಗಳು ಸ್ಪಷ್ಟವಾಗುತ್ತವೆ.

ಆದಿಮಾನವನ ಮೂಲವನ್ನು ಕುರುಬ ಜನಸಮುದಾಯದ ಮೂಲಕ ಗುರುತಿಸುತ್ತಿರುವುದು ಸರಿಯಷ್ಟೆ, ಕಾಡುಕುರುಬ, ಜೇನುಕುರಬ, ಮುಳ್ಳು ಕುರುಬ, ಹಂಡೆಕುರುಬ, ಬಂಡೆ ಕುರುಬ, ಗೊಂಡ ಕುರುಬ, ಒಕ್ಕೈ ಕುರುಬ, ಊರು ಕುರುಬ ಇವೆ ಮುಂತಾದ ಕುರುಬ ಸಮುದಾಯಗಳು ಅಸ್ತಿತ್ವದಲ್ಲಿದ್ದುದನ್ನು ಗಮನಿಸದಾಗ ಈ ಸಮುದಾಯ ಗಾತ್ರದಲ್ಲಿ ಒಂದು ಸಣ್ಣ (ಕಾಡು ಕುರುಬ) ಗುಂಪು ಕಾರಣಾಂತರಗಳಿಂದ ಸೋಲಿಗರು ಎಂಬ ಹೆಸರನ್ನು ಪಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಒಂದೇ ಸಮುದಾಯದ ಎರಡು ಪಂಗಡಗಳ ನಡುವೆ ಅಥವಾ ಎರಡು ಸಮುದಾಯಗಳ ನಡುವೆ ಯಜಮಾನಿಕೆ ಅಥವಾ ಹಂಚಿಕೆ ವಿಚಾರದಲ್ಲಿ ಇಬ್ಬರು ಮುಖಂಡರ ನಡುವೆ ನಡೆದ ಸಂಘರ್ಷದಲ್ಲಿ ಒಂದು ಗುಂಪು ಸೋತು ಕಾಡಿಗೆ ಓಡಿ ಹೋಗಿರುವ ಸಾಧ್ಯತೆ ಇದೆ. ಇದೂ ಅಲ್ಲದೇ ಹಿಂದೆ ಪಂಥ ಕಟ್ಟುವುದು, ಜೂಜಾಡುವುದು ಸಾಮಾನ್ಯ ಸಂಗತಿಯಾಗಿತ್ತು. ಅಂಥದ್ದೆ ಒಂದು ಪಂಥದಲ್ಲಿ ಒಂದು ಗುಂಪು ಸೋತು ಮೊದಲೆ ಮಾಡಿಕೊಂಡ ಒಪ್ಪಂದದಂತೆ ತಮ್ಮ ಪಾಲಿನ ಎಲ್ಲವನ್ನು ಒಪ್ಪಿಸಿ ಶರಣಾಗುವುದು ಹಾಗೂ ದೇಶಾಂತರ ಹೊರಟು ಹೋಗುವುದು ರೂಢಿಯಲ್ಲಿತ್ತು. ಇದಕ್ಕೆ ಉದಾಹರಣೆಯಾಗಿ ಪಾಂಡವರು ಕಾಡಿಗೆ ಹೋದ ಮಹಾಭಾರತದ ಕಥೆ ನಮ್ಮ ಮುಂದಿದೆ! ಅದೇ ರೀತಿ ಕುರುಬ ಜನಸಮುದಾಯದಲ್ಲಿ ಇಂಥದ್ದೇ ಒಂದು ಕಾರಣಕ್ಕೆ ಅವರಲ್ಲಿನ ಒಂದು ಗುಂಪು ಸೋತು ಶರಣಾಗಿ ನಾಡಲ್ಲಿ ಬದುಕುವ ಹಕ್ಕನ್ನು ಕಳೆದುಕೊಂಡು ಕಾಡಿಗೆ ಹೋಗಿರುವ ಸಾಧ್ಯತೆಯ ಬಗ್ಗೆ ಆಲೋಚಿಸಬೇಕಾಗಿದೆ. ಈ ರೀತಿ ಸೋತು ಕಾಡಿಗೆ ಹೋದವರೇ ಇಂದಿನ ಸೋಲಿಗರಾಗಿರುವ ಸಾಧ್ಯತೆ ಇದೆ. ಮುಂದುವರಿದು ಇವರಲ್ಲಿ ಮಲೇಸೋಲಿಗ, ಕಾಡುಸೋಲಿಗ, ಊರುಸೋಲಿಗ, ಬುಂಡೆಸೋಲಿಗ, ಉರಿಬತ್ತಿ ಸೋಲಿಗ ಎಂಬ ಉಪಪಂಗಡಗಳಿವೆ. ಕಾಲಾಂತರದಲ್ಲಿ ಅವರಲ್ಲೆ ಗುಂಪುಗಳಾಗಿ ಬೇರೆ ಬೇರೆ ಪ್ರದೇಶದಲ್ಲಿ ನೆಲೆಸಿದ ಮತ್ತು ಕಸುಬನ್ನು ರೂಢಿಸಿಕೊಂಡ ಹಿನ್ನೆಲೆಯಲ್ಲಿ ಈ ಒಳಪಂಗಡಗಳು ಹುಟ್ಟಿಕೊಂಡಿವೆ.

ಇಲ್ಲಿ ಮತ್ತೊಂದು ವಿಚಾರವನ್ನು ಗಮನಿಸಬಹುದಾಗಿದೆ. ಈಗ ಚಾಲ್ತಿಯಲ್ಲಿರುವ ಪ್ರತಿಯೊಂದು ಜಾತಿ ಹೆಸರುಗಳು ಒಂದೊಂದು ವೃತ್ತಿಯ ಹಿನ್ನಲೆಯಲ್ಲಿ ಬಂದವುಗಳಾಗಿವೆ. ಉದಾಹರಣೆಗೆ ಈಡಿಗ, ಗಾಣಿಗ, ಬಡಿಗ, ಈರುಳಿಗ, ಕುಂಚಟಿಗ, ಒಕ್ಕಲಿಗ, ಮಾದಿಗ, ಬಾಣಸಿಗ, ಗಾರುಡಿಗ, ಅಂಬಿಗ, ಅಕ್ಕಸಾಲಿಗ, ಕೋಮಟಿಗ, ಕೊರಗ, ಉಪ್ಪಲಿಗ ಮುಂತಾದವುಗಳನ್ನು ಹೆಸರಿಸಬಹುದಾಗಿದೆ. ಈ ಜಾತಿ ಸೂಚಕ ಪದಗಳು "ಗ" ಕಾರದಿಂದ ಕೊನೆಗೊಳ್ಳುತ್ತವೆ. "ಗ" ಕಾರವು ಕ್ರಿಯೆಯನ್ನು ಸೂಚಿಸುತ್ತದೆ. ಆದ್ದರಿಂದ "ಗ" ಯಿಂದ ಕೊನೆಗೊಳ್ಳುವ ಜಾತಿಗಳ ಹೆಸರನ್ನು ಪರಿಶೀಲಿಸಿದಾಗ ಒಂದೊಂದು ಜಾತಿಯು ತೊಡಗಿಸಿಕೊಂಡಿದ್ದ ವೃತ್ತಿಯನ್ನು ಸೂಚಿಸುವುದು ಕಂಡುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸೋಲಿಗ ಎಂಬುದು ಕ್ರಿಯೆಯನ್ನು ಹೇಳುತ್ತದೆ. ಸೋತ ವ್ಯಕ್ತಿಯು "ಸೋಲಿಗ"ನಾಗುತ್ತಾನೆ. ಎಂಬುದನ್ನು ಗಮನಿಸಬಹುದು. ಇದಕ್ಕೆ ಪೂರಕವಾಗಿ ಮತ್ತೊಂದು ಸ್ಪಷ್ಟನೆಯನ್ನು ಈ ರೀತಿ ನೀಡಬಹುದು. ಸೋಲಿಗ ಅಥವಾ ಸೋಲಿಗರು ಎಂದು ಮಾತ್ರ ಅವರ ಹೆಸರನ್ನು ಮುಂದುವರಿಸಿದ್ದರೆ. ಖಚಿತ ಅಭಿಪ್ರಾಯಕ್ಕೆ ಬರುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಅವರು ತಮ್ಮ ಮೂಲ ಕುಲವನ್ನು ಹೇಳುವಾಗ "ಕುರುಬ ಒಕ್ಕಲಿಗಗೌಡ" ಎಂಬುದಾಗಿಯೇ ಹೇಳುತ್ತಾರೆ. ಇದೂ ಅಲ್ಲದೆ ತಮಗೆ ನಂತರದಲ್ಲಿ ಲಭ್ಯವಾದ ಸೋಲಿಗ ಎಂಬ ಹೆಸರಿನ ಮುಂದೆ "ಗೌಡ" ಎಂಬ ಹೆಸರನ್ನು ಉಳಿಸಿಕೊಂಡು ಮುಂದುವರಿಸುತ್ತಿದ್ದಾರೆ. ಅಂದರೆ ಕುರುಬಗೌಡ ಎಂಬುದು ಸೋಲಿಗ ಗೌಡ ಎಂದು ಮುಂದುವರಿಯಿತು. ಕೇವಲ ಈ ಅಭಿಪ್ರಾಯದೊಂದಿಗೆ ಸೋಲಿಗ ಎಂಬ ಜಾತಿಯ ಸೋತು ಹೋದ ಒಂದು ಸಮುದಾಯಕ್ಕೆ ಬಂದ ಹೆಸರಾಗಿದೆ. ಆ ಸಮುದಾಯವೇ ಇಂದಿನ ಸೋಲಿಗಗೌಡ ಜಾತಿ ಎಂದು ಹೇಳಲು ಬರುತ್ತದೆ. ಮುಂದುವರಿದು ಭಾಷಾ ವಿಜ್ಞಾನಿಗಳು ಮತ್ತು ಸಂಶೋಧಕರು ಹೆಚ್ಚಿನ ಅಧ್ಯಯನದೊಂದಿಗೆ ಅಡಗಿರುವ ಸತ್ಯವನ್ನು ಕಂಡುಕೊಳ್ಳುವುದು ಸಾಧ್ಯವಿದೆ.

ಯಾವುದೋ ಒಂದು ಕಾಲಘಟ್ಟದಲ್ಲಿ ಕಾರಣಾಂತರಗಳಿಂದ ಸೋಲಿಗರು ಕಾಡಲ್ಲೇ ಉಳಿಯುವಂಥಾದುದು ಇತಿಹಾಸವಾಗಿದೆ. ಆದರೆ ಕಾಡಲ್ಲಿ ಉಳಿದು ಬದುಕನ್ನು ಕಂಡು ಕೊಂಡುದು ಮಾತ್ರ ಒಂದು ಸಾಹಸವೇ ಸರಿ. ಏಕೆಂದರೆ ದಟ್ಟ ಅರಣ್ಯದಲ್ಲಿ ಕ್ರೂರಮೃಗಗಳ ಮಧ್ಯ ಪ್ರತಿಕ್ಷಣದಲ್ಲು ಸಾವನ್ನು ಎದುರಿಸುತ್ತ ಬದುಕುವುದು ಸುಲಭದ ವಿಚಾರವಲ್ಲ. ಆದರೆ ಅಗತ್ಯ ಸಂದರ್ಭದಲ್ಲಿ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಒಟ್ಟಿನಲ್ಲಿ ಕಾಡಿನ ಪರಿಸರಕ್ಕೆ ಹೊಂದಿಕೊಂಡು ಅಲ್ಲಿ ಲಭ್ಯವಿರುವ ಗೆಡ್ಡೆ-ಗೆಣಸು, ಹಣ್ಣು-ಹಂಪಲು, ಜೇನನ್ನು, ಆಹಾರವಾಗಿ ಉಪಯೋಗಿಸುತ್ತಾ ಬದುಕನ್ನು ಸಾಗಿಸಿದ್ದಾನೆ. ಕ್ರೂರ ಮೃಗಗಳು, ಪ್ರಕೃತಿ ವಿಕೋಪ ಮುಂತಾದ ಪ್ರತಿಯೊಂದು ತೊಡಕುಗಳನ್ನು ಎದುರಿಸಿ ಪ್ರಾಣ ಹಾನಿಯಾದರೂ ಸಹಿಸಿಕೊಂಡಿದ್ದಾನೆ. ಏಕೆಂದರೆ ತನ್ನ ಪ್ರಯತ್ನ ಹಾಗೂ ಶಕ್ತಿಗೆ ಬಹಳ ಮಿತಿ ಇದೆ ಎಂಬುದನ್ನು ಅರ್ಥ ಮಾಡಿಕೊಂಡವನಾಗಿದ್ದಾನೆ. ಕಾಡಿನಲ್ಲಿರುವ ಹುಲಿ, ಚಿರತೆ, ಆನೆ, ಕಾಡೆಮ್ಮೆ, ಹೆಬ್ಬಾವು ಮತ್ತು ಇತರ ವಿಷಜಂತುಗಳಿಗೆ ಹೆದರದೆ ತನ್ನ ಸೂಕ್ಷ್ಮ ಬುದ್ಧಿಯಿಂದ ಬದುಕುವುದು ಸೋಲಿಗರಿಗೆ ಎಂದಿಗೂ ತೊಂದರೆ ಎಂದು ಕಾಡುತ್ತಿದ್ದಿಲ್ಲ. ಸ್ವತಂತ್ರವಾಗಿ ಕಾಡಲ್ಲಿ ಇತರ ಪ್ರಾಣಿಗಳಂತೆ ನಾವು ಒಂದು ಜಾತಿಯ ಕಾಡುವಾಸಿಗಳು (ಪ್ರಾಣಿ) ಎನ್ನುವಷ್ಟರ ಮಟ್ಟಿಗೆ ಜೀವನವನ್ನು ಸಾಗಿಸುತ್ತಿದ್ದರು. ವರುಷದ ಯಾವ ಸಂದರ್ಭದಲ್ಲಿ ಹಸಿವೂ, ಬರ ಎಂಬುದನ್ನು ಕಾಣುತ್ತಿರಲಿಲ್ಲ. ಏಕೆಂದರೆ ಪ್ರತಿಯೊಂದು ಕಾಲದಲ್ಲೂ ಒಂದಲ್ಲ ಒಂದು ಗೆಡ್ಡೆ ಗೆಣಸು, ಸೊಪ್ಪುಸೆದೆ, ಹಣ್ಣು-ಹಂಪಲು ಇದ್ದೆ ಇರುತ್ತಿತ್ತು. ಮತ್ತು ಸದಾ ಕಾಲವು ಜೇನು ದೊರೆಯುತ್ತಿತ್ತು. ಇವುಗಳ ಜೊತೆಗೆ ತನ್ನ ಮಿತಿಯಲ್ಲಿ ಗುಡಿಸಲುಗಳ ಸುತ್ತುಮುತ್ತ ಒಂದಷ್ಟು ಜಾಗವನ್ನು ಹಸನು ಮಾಡಿ ರಾಗಿ, ಅವರೆ, ಹುಚ್ಚೆಳ್ಳುಗಳಂತಹ ಬೆಳೆಯನ್ನು ಬೆಳೆಯುತ್ತಿದ್ದರು. ವರ್ಷದಲ್ಲಿ ಕೆಲವು ಕಾಲ ಇವುಗಳನ್ನು ಆಹಾರವಾಗಿ ಬಳಸಿದರೆ ಉಳಿದ ಸಂದರ್ಭದಲ್ಲಿ ಕಾಡು ಉತ್ಪನ್ನವೇ ಅವರ ಆಹಾರವಾಗಿರುತ್ತಿತ್ತು.

ಬಹಳ ಪ್ರಮುಖವಾಗಿ ಸೋಲಿಗರಲ್ಲಿ ಗುರುತಿಸಬಹುದಾದ ಒಂದು ಗುಣಾತ್ಮಕ ಅಂಶವೆಂದರೆ, ತಮಗೆ ಹಸಿವಾದಾಗ ಮಾತ್ರ ಆಹಾರವನ್ನು ಹುಡುಕುವುದು ತಿನ್ನುವುದು, ಅನಗತ್ಯವಾಗಿ ಆಹಾರ ಸಂಗ್ರಹ ಮಾಡಿಕೊಳ್ಳುವುದು ಇವರಿಗೆ ಒಗ್ಗದ ವಿಚಾರ. ಒಂದು ರೀತಿಯಲ್ಲಿ ಕಾಡು ಪ್ರಾಣಿಗಳಂಥದ್ದೆ ಗುಣ ಇವರಿಗೂ ದತ್ತವಾಗಿರಬಹುದು. ಅಥವಾ ಬೇಕೆಂದಾಗ ಕಾಡಲ್ಲಿ ಹೇರಳವಾಗಿ ಲಭ್ಯವಿರುವ ಯಾವುದಾದರೂ ಒಂದು ಆಹಾರ ಪದಾರ್ಥವನ್ನು ಪಡೆಯುವ ಮುಕ್ತ ಅವಕಾಶವಿದ್ದುದರಿಂದ ಸಹಜವಾಗಿ ಆಹಾರ ಅಗತ್ಯ ಅವನಿಗೆ ಕಂಡು ಬಂದಿರುವುದಿಲ್ಲ. ಎರಡನೆಯ ಗುಣಾತ್ಮಕ ಅಂಶ ಒಂದು ಕುಟುಂಬದಲ್ಲಿ ಮಕ್ಕಳು ಬೆಳೆದು ಮದುವೆಯಾಗುವವರೆಗೆ ಮಾತ್ರ ಒಟ್ಟಾಗಿರುತ್ತಾರೆ. ಮದುವೆಯಾದ ಮರುದಿನವೇ ಅವರು ಮತ್ತೊಂದು ಗುಡಿಸಲು ನಿರ್ಮಿಸಿ ಪ್ರತ್ಯೇಕ ಬದುಕುತ್ತಾರೆ. ಇವರಲ್ಲಿ ಅನಗತ್ಯವಾಗಿ ಒಬ್ಬರನ್ನೊಬ್ಬರು ಅವಲಂಬಿಸಿ ಬದುಕುವುದು ಊಹಿಸಲು ಸಾಧ್ಯವಾಗದು. ಮುಪ್ಪಿನ ಮುದುಕ ಮುದುಕಿಯರು ಸಣ್ಣ ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಹಾಗೂ ಮನೆ ಕಾಯುತ್ತಾರೆ. ಎಂಟು-ಹತ್ತು ವರ್ಷ ತುಂಬಿದ ಮಕ್ಕಳೆಲ್ಲರೂ ಕಾಡಿಗೆ ಹೋಗಿ ಕಾಡು ಉತ್ಪನ್ನದ ಸಂಗ್ರದಲ್ಲಿ ತೊಡಗುತ್ತಾರೆ. ಕನಿಷ್ಠ ಒಣಗಿದ ಉರುವಲನ್ನಾದರು ಸಂಗ್ರಹಿಸುತ್ತಾರೆ. ಏಕೆಂದರೆ ಕ್ರೂರ ಪ್ರಾಣಿಗಳ ರಕ್ಷಣೆಗಾಗಿ ಮತ್ತು ಚಳಿ ಕಾಯಿಸುವ ಸಲುವಾಗಿ ಪ್ರತಿ ರಾತ್ರಿ ಬೆಂಕಿಯನ್ನು ಹಚ್ಚಲೇ ಬೇಕು. ಅದಕ್ಕಾಗಿ ಉರುವಲು ಬೇಕೆ ಬೇಕು.

ಸೋಲಿಗರನ್ನು ಕುರಿತು ಹೇಳುವಾಗ ಈ ವಿಚಾರಗಳ ಜೊತೆಗೆ ಅವರ ಆರೋಗ್ಯದ ಬಗ್ಗೆ ಹೇಳುವುದು ಸೂಕ್ತವೆನಿಸುತ್ತದೆ. ಪ್ರಕೃತಿಗೆ ಮೈಯೊಡ್ಡಿ ಬದುಕುವ ಪ್ರತಿಯೊಂದು ಜಿವಿಗೂ ಹೆಚ್ಚಿನ ರೋಗ ನಿರೋಧಕ ಶಕ್ತಿ ಇರುತ್ತದೆ. ಕಾಡುವಾಸಿಗರಾದ ಸೋಲಿಗರಿಗೆ ಸಹಜವಾಗಿ ಬರುತ್ತಿದ್ದ ರೋಗಗಳೆಂದರೆ ಮಲೇರಿಯಾ, ಕಜ್ಜಿ, ಬಾಣಂತಿಗೆ ಸಂಬಂಧಿಸಿದ ರೋಗ. ಆದರೆ ಅವುಗಳನ್ನು ತಮ್ಮದೇ ಹಸಿರು ಸೊಪ್ಪು, ನಾರು-ಬೇರು ಇತ್ಯಾದಿ ಔಷಧಿ ಅಥವಾ ಕಷಾಯವನ್ನು ಕುಡಿಯುವುದರ ಮೂಲಕ ಪರಿಹಾರ ಕಂಡುಕೊಳ್ಳುತ್ತಿದ್ದರು. ಆದರೆ ಕ್ರೂರಪ್ರಾಣಿಗಳಿಂದ ಆಗುತ್ತಿದ್ದ ತೊಂದರೆ (Animals Attacks), ಜೇನು ಬೇಟೆ ಸಂದರ್ಭದಲ್ಲಿ ನೂರಾರು ಅಡಿ ಎತ್ತರದ ಮರದಿಂದ ಬಿದ್ದಾಗ ಆಗುತ್ತಿದ್ದ ಅಪಾಯಗಳಿಗೆ ಇವರಿಂದ ಪೂರ್ಣ ಪ್ರಮಾಣದ ಗುಣವಾಗುವ ಔಷಧಿ ಇರಲಿಲ್ಲ. ಅಂತಹವರು ಶಾಶ್ವತ ರೋಗಿಗಳಾಗಿ ಅಥವಾ ಅಂಗವಿಕಲರಾಗಿ ಬದುಕುವುದು ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಸಾಯುವವರ ಸಂಖ್ಯೆಯ ಹೆಚ್ಚಿರುತ್ತಿತ್ತು.

ಏನೆಲ್ಲಾ ತೊಂದರೆಗಳಿದ್ದರೂ ಹೆದರದೇ ಕಾಡನ್ನೇ ತಮ್ಮ ಬದುಕಿನ ನೆಲೆಯನ್ನಾಗಿ ಮಾಡಿಕೊಂಡು ಸಂತೋಷದಿಂದಲೇ ಬದುಕಿದ್ದಾರೆ ಎಂಬುದು ಸೋಲಿಗರ ಹಿರಿಯ ಮುಖಂಡರನ್ನು ಸಂದರ್ಶನ ನಡೆಸಿದಾಗ ತಿಳಿದುಬಂದ ಸಂಗತಿಯಾಗಿದೆ. ಪ್ರತಿಯೊಂದು ಸಮಸ್ಯೆಗೂ ಅವರದೇ ಆದ ಒಂದು ಪರಿಹಾರವನ್ನು ಕಂಡುಕೊಂಡಿದ್ದಾರೆ. ಉದಾಹರಣೆಗೆ ಚಳಿಯಿಂದ ಪಾರಾಗಲು ಅವರಿಗೆ ಉಣ್ಣೆ ಬಟ್ಟೆಯಾಗಲಿ, ಕಂಬಳಿಗಳಾಗಲಿ ಇಲ್ಲ ಮದ್ಯಪಾನ, ಧೂಮಪಾನವಾಗಲಿ ಇದ್ದಿರಲಿಲ್ಲ. ಬದಲಾಗಿ ಬೆಂಕಿ ಕಾಯಿಸುವುದು ಕಷಾಯ ಕುಡಿಯುವುದು ಉಷ್ಣ ಆಹಾರವನ್ನು ಸೇವಿಸುವುದು. ಜೊತೆಗೆ ಕೆಲವರು ಮಾತ್ರ ಭಂಗಿ ಸೇದುವ ಚಟಕ್ಕೆ ಬಲಿಯಾಗಿದ್ದರು. ಇದು ಒಂದು ರೀತಿಯಲ್ಲಿ ಹೆಚ್ಚು ಅಪಾಯವಿಲ್ಲ ಹಾಗೂ ಎಂದಿಗೂ ಮಿತಿಯನ್ನು ಮೀರುತ್ತಿರಲಿಲ್ಲ. ಆದರೆ ನಾಡಿನ ಜನರ ಸಹವಾಸವನ್ನು ಕಂಡುಕೊಂಡ ಬಳಿಕ ಸೋಲಿಗರ ಹಳೆ "ಮಾದರಿ ಬದುಕು" ಕೊನೆಗೊಂಡು ಹೊಸದೊಂದು ಜೀವನ ಕ್ರಮವನ್ನು ರೂಢಿಸಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಇದು ಅವರ ಹಿಂದಿನ ಬದುಕಿಗಿಂತ ಉತ್ತಮವಾಗಿದೆ ಎಂದು ಹೇಳಬಹುದಾದರೂ ಅತಂತ್ರದ ಸ್ಥಿತಿಯನ್ನು ತಲುಪಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಮೇಲೆ ಹೇಳಿದಂತೆ ಸೋಲಿಗರು ಇಂದು ಸಮಾಜದ ಪ್ರಮುಖವಾಹಿನಿಗೆ ಬರುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳುವುದಕ್ಕಿಂತ ಸರ್ಕಾರ ಮತ್ತು ಸ್ವಯಂ ಸೇವಾ ಸಂಘ ಸಂಸ್ಥೆಗಳು ಸೋಲಿಗರೇ ಅಲ್ಲದೆ ಇಂತಹ ಹಲವಾರು ಬುಡಕಟ್ಟು ಸಮುದಾಯಗಳನ್ನು ಪ್ರಮುಖವಾಹಿನಿಗೆ ತರುವ ಪ್ರಯತ್ನ ಮಾಡುತ್ತಿವೆ. ಮೂಲತಃ ಸೋಲಿಗರು ಮತ್ತು ಇತರೆ ಬುಡಕಟ್ಟು ಸಮುದಾಯಗಳಿಗೆ ಈ ಪ್ರಯತ್ನ ಒಪ್ಪಿತವೆ ಅಥವಾ ಇಲ್ಲವೆ ಎಂದು ಯಾರು ತಿಳಿಯುವ ಗೋಜಿಗೆ ಹೋಗಿಲ್ಲ. ಒಟ್ಟಿನಲ್ಲಿ ಸರ್ಕಾರ ಹಾಗೂ ಸಂಘ-ಸಂಸ್ಥೆಗಳು ಸಂವಿಧಾನಬದ್ಧವಾದ ಹಕ್ಕನ್ನು ಪ್ರತಿಯೊಬ್ಬ ಮಾನವನು ಪಡೆದುಕೊಳ್ಳುವುದು ನ್ಯಾಯ ಸಮ್ಮತ ಎಂಬ ಧೋರಣೆಯೊಂದಿಗೆ ಬುಡಕಟ್ಟು ಮತ್ತು ನಿರ್ಲಕ್ಷಿತ ಸಮುದಾಯಗಳ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಈ ಸಂಬಂಧ ಸರ್ಕಾರದ ಹಾಗೂ ಖಾಸಗಿಯವರ ಸಹಯೋಗದಲ್ಲಿ ನೂರಾರು ಯೋಜನೆಗಳು ಸಿದ್ಧವಾಗಿವೆ. ಅವುಗಳು ಈಗಾಗಲೇ ಅನುಷ್ಠಾನಕ್ಕೆ ಬಂದಿವೆ. ಕಾಡಿನ ಮನುಷ್ಯರನ್ನು ನಾಡಿನ ಮನುಷ್ಯರನ್ನಾಗಿ ಬದಲಿಸುವ ಪ್ರಯೋಗಗಳು ನಡೆದಿವೆ. ಬೇಕು ಬೇಡವಾದಷ್ಟು ಅನುಕೂಲಗಳನ್ನು ಮಾಡಿದ್ದಾರೆ. ಮೂಲ ಬೇಡಿಕೆಗಳಾದ ಮನೆ, ಆರೋಗ್ಯ ಮತ್ತು ಶಿಕ್ಷಣವನ್ನು ಒದಗಿಸಿದ್ದಾರೆ. ಇದಿಷ್ಟನ್ನು ನೀಡಿದರೆ ಈ ಸಮುದಾಯದ ಸಂಪೂರ್ಣ ಅಭಿವೃದ್ಧಿ ಸಾಧ್ಯವಾಯಿತೆ? ಅಥವಾ ಇವರ ಬೇಕುಗಳು ಯಾವುವು? ಎಂದು ಅಧ್ಯಯನದ ಮೂಲಕ ತಿಳಿದುಕೊಂಡು ಅನಂತರ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಲಾಯಿತೇ? ಈ ಪ್ರಶ್ನೆಯನ್ನು ಕೇಳುವ ಕಾಲ ಮುಗಿದು ಹೋಗಿದೆ. ಏಕೆಂದರೆ ನಾವು ಅಭಿವೃದ್ಧಿಗೆ ಒಳಪಡಿಸುವವರನ್ನು ಒಂದು ವಸ್ತು ಅಥವಾ ಪ್ರಾಣಿಯಾಗಿ ತೀರ್ಮಾನಿಸುವುದು ಸರಿಯಾದ ಕ್ರಮವಲ್ಲ. ಅಥವಾ ಈ ಸಮುದಾಯ ಹಿಂದುಳಿದಿದೆ ಅವರನ್ನು ಮುಂದುವರಿಯಲು ಅನುವು ಮಾಡಿಕೊಡುವುದು ನಮ್ಮ ಜವಾಬ್ದಾರಿ ಎಂದು ಭ್ರಮಿಸಿಕೊಳ್ಳುವುದು, ಇಂತಹ ನಿರ್ಧಾರಗಳಿಂದ ಸಮುದಾಯಕ್ಕೆ ಸಂದಾಯವಾಗಬಹುದಾದ ಒಳಿತಿಗಿಂತ ಅಪಾಯಗಳೇ ಹೆಚ್ಚು ಎಂಬುದನ್ನು ಸೂಕ್ಷ್ಮ ಮನಸ್ಸಿನ ಯಾರೇ ಆದರು ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ಸಾವಿರಾರು ವರ್ಷಗಳಿಂದಲೂ ಮಾನವನ ಸಹವಾಸವಿಲ್ಲದೆ ಸ್ವತಂತ್ರ ಬದುಕನ್ನು ಬದುಕುತ್ತಿರುವ ಸಮುದಾಯವೊಂದು ತನ್ನಂಥಹದೇ ಮಾನವನ ಜೀವಿಯನ್ನು ಕಾಣಲು ಇಲ್ಲವೇ ಬೆರೆಯಲು ಸಂದೇಹ ಪಡುತ್ತಾನೆ. ಆದರೆ ಕಾಡಿನ ಯಾವುದೇ ಪ್ರಾಣಿಯೊಂದನ್ನು ಕಂಡಾಗಲೂ ಅವನಿಗೆ ಆಶ್ಚರ್ಯ ಅಥವಾ ಭಯ ಅನಿಸುವುದಿಲ್ಲ. ಏಕೆಂದರೆ ಅದು ತನ್ನ ಪರಿಸರದಲ್ಲಿ ನಿತ್ಯ ಕಾಣುವ ಒಂದು ಜಾತಿಯ ಪ್ರಾಣಿ ಎಂದು ಪರಿಗಣಿಸುತ್ತಾನೆ. ಸೋಲಿಗರ ಸಂದರ್ಭದಲ್ಲಿ ಇಂತಹ ಘಟನೆಗಳು ಮೂವತ್ತು ವರ್ಷಗಳ ಹಿಂದೆ ಸಾಮಾನ್ಯವಾಗಿತ್ತು - ವಾರದಲ್ಲಿ ಒಮ್ಮೆ ಅಥವಾ ಅಪರೂಪಕ್ಕೆ ನಾಡಿನ ಜನರು ಬಿಳಿರಂಗನ ಬೆಟ್ಟಕ್ಕೆ ಹೋಗುತ್ತಿದ್ದಾಗ ಸೋಲಿಗರ್ಯಾರು ನಾಡಿನ ಜನರನ್ನು ಬೆರೆಯುತ್ತಿರಲಿಲ್ಲ. ಬದಲಾಗಿ ಇವರನ್ನು ಕಂಡ ಬಳಿಕ ಪೊದೆಯೊಳಗೆ ಮರೆಯಾಗುತ್ತಿದ್ದರು. ಅವರು ಬಂದು ಹೋದ ಬಳಿಕ ಅವರ ಎತ್ತಿನ ಬಂಡಿಯ ಹೆಜ್ಜೆಯನ್ನು ಮೂಸಿ ನೋಡುತ್ತಿದ್ದರು. ನಾಡಿನ ಜನರ ಜೊತೆಗಿನ ಅಂತರ ಇಷ್ಟೊಂದು ದೂರವಿತ್ತು. ಆದರೆ ಇಂದು ಆ ಅಂತರ ಕಡಿಮೆಯಾಗಿದೆ ಅಷ್ಟೆ ಅಲ್ಲ ನಾಡ ಜನರ ಜೊತೆ ಬೆರೆತು ಹೋಗಿದ್ದಾರೆ ಆದರೆ

ಕಾಡಿನ ಒಳ ಭಾಗದಲ್ಲಿರುವ ಬುಡಕಟ್ಟು ಸಮುದಾಯಕೆ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯವನ್ನು ತಲುಪಿಸಲು ಸಾಧ್ಯವಾಗಿಲ್ಲ ಎಂಬುದಕ್ಕೆ ಸಕಾರಣಗಳಿವೆ.

ಇದೂವರೆಗಿನ ಅಭಿವೃದ್ಧಿ ಕಾರ್ಯಗಳನ್ನು ಅವಲೋಕಿಸಿದಾಗ ಸರ್ಕಾರವಾಗಲಿ ಖಾಸಗಿ ಸೇವಾ ಸಂಘ, ಸಂಸ್ಥೆಗಳಾಗಲಿ ನಿಸ್ವಾರ್ಥದಿಂದ ತಮ್ಮನ್ನು ಒಪ್ಪಿಸಿಕೊಂಡು ಕೆಲಸ ಮಾಡುತ್ತಿವೆ ಎಂದು ಹೆಸರಿಸಲು ಯಾವೊಂದು ಸಿಗುವುದಿಲ್ಲ. ಏಕೆಂದರೆ ಅಭಿವೃದ್ಧಿ ಮಾಡಲು ಹೊರಟ ಸಮುದಾಯಗಳು ಕೇವಲ ಬಂಡಾವಾಳ ಹಾಕುತ್ತಾರೆ. ಸಂಘ ಸಂಸ್ಥೆಗಳ ಅಭಿವೃದ್ಧಿಯೇ ಅಂತಿಮ ಗುರಿಯಾಗಿ ಮೂಲ ಉದ್ದೇಶವನ್ನೇ ಮರೆತು ಕಾಟಾಚಾರಕ್ಕೆ ಯೋಜನೆಗಳನ್ನು ನಿರ್ಮಿಸಿ ಲೆಕ್ಕಾ ಚಾರಕ್ಕೆ ಅಭಿವೃದ್ಧಿಪಡಿಸಿ ಹಾಳೆಯ ಮೇಲೆ ಸಾಧನೆ ಮಾಡುವ ಅಪಾಯವಿದೆ.

ಸರ್ಕಾರಕ್ಕಾಗಲಿ, ಸಮಾಜಸೇವೆಗೆ ಮುಂದಾಗಿರುವ ಸಂಘ ಸಂಸ್ಥೆಗಳಿಗಾಗಲಿ ಪ್ರಾಮಾಣಿಕವಾದ ಕಾಳಜಿ ಇದ್ದರೆ ಆಯಾ ಸಮುದಾಯದಲ್ಲಿ ವೈದ್ಯರನ್ನು ಉಪಾಧ್ಯಾಯರನ್ನು, ಐ.ಎ.ಎಸ್, ಕೆ.ಎ.ಎಸ್ ಅಧಿಕಾರಿಗಳನ್ನು, ದಾದಿಯರನ್ನು, ಇಂಜಿನಿಯರ್ ಗಳನ್ನು ಸೃಷ್ಟಿಸಿ ಒಂದೊಂದು ಕ್ಷೇತ್ರದಲ್ಲೂ ದುಡಿಯಲು ಅನುವಾಗುವಂತೆ ಕೆಲಸಗಾರರನ್ನು ಸಿದ್ಧಪಡಿಸಿ ತರಬೇತಿಗೊಳಿಸಿ ಗರಿಷ್ಠ ೧೫-೨೦ ವರ್ಷಗಳು ಸೇವೆ ಸಲ್ಲಿಸಬೇಕು. ಅನಂತರ ಆಯಾ ಕ್ಷೇತ್ರದಲ್ಲಿ ಆ ಸಮುದಾಯಗಳ ಅಭಿವೃದ್ಧಿಯನ್ನು ಆಯಾ ಸಮುದಾಯದ ಕಾರ್ಯಕರ್ತರು, ಕೆಲಸಗಾರರು, ತರಬೇತಿದಾರರು ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಿ ಸೇವಾ ಸಂಸ್ಥೆಯನ್ನು ಅವರಿಗೆ ಒಪ್ಪಿಸಿ ಹೊರನಡೆಯುವುದು ಸೂಕ್ತ. ಇದನ್ನು ಬಿಟ್ಟು ಗೆದ್ದಲು ಹುಳು ಕಟ್ಟಿದ ಭವ್ಯವಾದ ಹುತ್ತದಲ್ಲಿ ವಿಷಜಂತು ಹಾವು ಬಂದು ಸೇರಿಕೊಂಡು ಭಯಾನಕವಾಗಿ ಗೋಚರವಾಗಬಾರದು. ಹಾಗೂ ಹುತ್ತದಲ್ಲಿ ಗೆದ್ದಲು ಸಂಗ್ರಹಿಸಿರುವ ಅಥವಾ ಅದರಲ್ಲಿ ಕಟ್ಟುವ ತುಡುಬೆ ಜೇನನ್ನು ತಿನ್ನುವ ಸಲುವಾಗಿ ಹುತ್ತವನ್ನು ನಾಶಪಡಿಸುವ ಕಾಡು ಕರಡಿಯಾಗಬಾರದು.

ಇಂದು ಭಾರತಾದ್ಯಂತ ಪ್ರಚಲಿತವಿರುವ ಹೆಚ್ಚಿನ ಸಂಘ-ಸಂಸ್ಥೆಗಳು ಉದ್ದೇಶಿತ ಸಮುದಾಯಗಳ ಅಭಿವೃದ್ಧಿಗಿಂತ ಸಂಸ್ಥೆಯ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂದು ಭ್ರಮಿಸಿಕೊಂಡಿವೆ. ಪ್ರಶಸ್ತಿ ಪಡೆಯುವುದು ಆರಂಭವಾಗಿದೆ. ಪ್ರಶಸ್ತಿಯನ್ನು ಕೊಡುವ ಹಾಗೂ ಅರ್ಹರು ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿ ತನಗೆ ಕೊಡ ಮಾಡಿಕೊಳ್ಳುವ ವ್ಯಕ್ತಿಗಳು ಹಾಗೂ ಸಂಸ್ಥೆಗಳೂ ಹುಟ್ಟಿಕೊಳ್ಳುತ್ತಿವೆ. ಒಟ್ಟಿನಲ್ಲಿ ಮುಂದುವರಿದ ಸಮುದಾಯಗಳು ಅನ್ಯರ ಅಭಿವೃದ್ಧಿಯ ನೆಪದಲ್ಲೂ ತನ್ನ ಅಭಿವೃದ್ಧಿಯನ್ನು ಕಂಡುಕೊಳ್ಳಲು ಈ ಸಂಘ ಸಂಸ್ಥೆಗಳು ಒಂದು ಧಾಳವಾಗಿ ಬಳಕೆಯಾಗುತ್ತಿರುವುದು ಒಂದು ವಿಪರ್ಯಾಸವೇ ಸರಿ. ಸೇವೆಯನ್ನೇ ಮಾಡಬೇಕು ಎಂದು ಹುಟ್ಟಿಕೊಳ್ಳುವ ಸಂಘ ಸಂಸ್ಥೆಗಳು ಅವರಿಂದಲೇ ಸೇವೆಯನ್ನು ಮಾಡಿಸಿಕೊಂಡು ದಣಿಯುವಂತೆ ದಬ್ಬಾಳಿಕೆ ಮಾಡುವುದನ್ನು ಕಾಣಬಹುದು. ಇಂದು ಬುಡಕಟ್ಟುಗಳು ಅತಂತ್ರ ಸ್ಥಿತಿಯನ್ನು ತಲುಪಿ ಹಿಂದಿನ ನೆಮ್ಮದಿಯ ಬದುಕು ಇಲ್ಲ ಅಥವಾ ಬಯಸಿದಂತ ಉತ್ತಮ ಬದುಕು ಅವರಿಗೆ ಸಿಗಲಿಲ್ಲ ಎಂದು ಪರಿತಪಿಸುವಂತಾಗಿದೆ.

ಮೇಲಿನ ಈ ಕಟು ಸತ್ಯವನ್ನು ಅರಿಯಲು ಸಮುದಾಯದ ಜೊತೆ ಕೆಲವಾರು ತಿಂಗಳ ಒಡನಾಟ ಹಾಗೂ ಹತ್ತಿಪ್ಪತ್ತು ವರ್ಷಗಳ ಕಾಲ ಸತತ ಸಂಪರ್ಕ ಇಟ್ಟುಕೊಂಡಾಗ ತಿಳಿದು ಬಂದವುಗಳಾಗಿವೆ. ಇಷ್ಟಾಗಿಯೂ ಹೇಳಲಾಗದ ಅಂತರಂಗದ ಕಹಿ ಅನುಭವಗಳು ಬಹಳಷ್ಟಿವೆ ಎಲ್ಲವನ್ನು ಹೇಳಿದರೆ ನಮ್ಮ ಬದುಕು ಕಷ್ಟಸಾಧ್ಯವಾಗುತ್ತದೆ ಎಂದು ಹಿಂಜರಿಯುವ ಜನರು ಹೆಚ್ಚು ಹೇಳಲು ಇಷ್ಟಪಡುವುದಿಲ್ಲ. ಸೋಲಿಗರ ಅನೇಕ ಹಿರಿಯರನ್ನು ಸಂದರ್ಶನದ ಮೂಲಕ ಮಾಹಿತಿ ಕೇಳಿದಾಗ ಏನನ್ನು ಹೇಳಲು ಹಿಂಜರಿದರು. ಆದರೆ ಆ ಹಿಂಜರಿತದ ಜೊತೆಗೆ ನಮ್ಮ ಮಕ್ಕಳು ಹಿಂದಿನ ಎಲ್ಲಾ ಪ್ರತಿಭೆಯನ್ನು ಮರೆಯುತ್ತಿದ್ದಾರೆ. ಇದರಿಂದ ಓದಿದ್ದಕ್ಕೆ ಕೆಲಸವೂ ಇಲ್ಲ ಅಥವಾ ಹಿಂದೆ ಮಾಡುತ್ತಿದ್ದ ಕೆಲಸವನ್ನು ಮಾಡಲು ಇಷ್ಟಪಡುತ್ತಿಲ್ಲ. ಉದಾಹರಣೆಗೆ ದಿನದ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಯಾವಾಗಲಾದರೂ ಕಾಡಲ್ಲಿ ಉತ್ಪನ್ನ ಸಂಗ್ರಹಿಸುವ ಧೈರ್ಯ ಸಾಹಸ ಇಂದಿನ ಹುಡುಗರಲ್ಲಿ ಕಂಡುಬರುತ್ತಿಲ್ಲ. ಮರ ಹತ್ತುವುದು ಈ ಜನರಿಗೆ ಅನಿವಾರ್ಯವಾಗಿ ಗೊತ್ತಿರಲೇ ಬೇಕಾದ ಕಲೆ. ಕಾಡು ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಹೆಣ್ಣು-ಗಂಡು ಎಲ್ಲರೂ ಹಲವಾರು ತಂತ್ರಗಳನ್ನು ಕಲಿತಿರಬೇಕು. ಇಂದು ವಿದ್ಯಾಭ್ಯಾಸ ಪಡೆಯುವುದು ಮತ್ತು ಆಧುನಿಕ ಸೌಲಭ್ಯಗಳ ಲಭ್ಯವಾದುದರಿಂದ ಪ್ರತಿಭೆಗಳು ನಾಶವಾಗುತ್ತಿದೆ ಎಂದು ಕೊರಗುತ್ತಿದ್ದಾರೆ.

ಹಳೆಯ ಜನರಿಗೆ ಕಾಡಿನ ಪ್ರತಿಯೊಂದು ಪ್ರಾಣಿ-ಪಕ್ಷಿ, ಗಿಡ-ಮರ, ನಾರು-ಬೇರು, ಗೆಡ್ಡೆ-ಗೆಣಸು ಔಷಧಿಯನ್ನು ಗುರುತಿಸುವ ನೆನಪಿನ ಶಕ್ತಿ ಇತ್ತು. ಇಂದಿನ ಹುಡುಗರು ಕಾಡಿಗೆ ಹೋಗಲು ಹಿಂಜರಿಯುತ್ತಾರೆ. ಆದ್ದರಿಂದ ಕಾಡಿನ ಬಗ್ಗೆ ಅವರಿಗೆ ಯಾವುದೇ ಜ್ಞಾನವು ಉಳಿಯುತ್ತಿಲ್ಲ ಎನ್ನುತ್ತಾರೆ. ಇಂತಹ ಹತ್ತು ಹಲವಾರು ತಂತ್ರಗಾರು ಹುಟ್ಟಿನಿಂದಲೇ ಒಂದಷ್ಟು ಸಹಜವಾಗಿರುತ್ತಿದ್ದವು. ಇಂದು ಅದನ್ನು ಒಂದು ಕೋರ್ಸ್ ಮಾದರಿಯಲ್ಲಿ ಪಠ್ಯದಲ್ಲಿ ಕಲಿಯಬೇಕಾಗಿರುವುದು ವಿಪರ್ಯಾಸವೇ ಸರಿ.

ಇಷ್ಟೆಲ್ಲಾ ಗೊಂದಲಗಳ ನಡುವೆಯು ಕೆಸರಿನ ಕಮಲಗಳಂತೆ ಆರಂಭದಲ್ಲಿ ಶಿಕ್ಷಣವನ್ನು ಪಡೆದವರ ಸ್ಥಿತಿ ಅಷ್ಟೇನು ಆಶಾದಾಯಕವಾಗಿಲ್ಲ. ಹಾಗೂ ಇವರು ಇನ್ನೊಬ್ಬರ ಹಂಗಿನಿಂದ ಬೆಳೆದು ಬಂದು ಬದುಕನ್ನು ಕಂಡುಕೊಳ್ಳುತ್ತಿರುವ ಅವಲಂಬಿತರು. ಮೊದಲನೆಯದಾಗಿ ರಾಜಕೀಯದ ಬಲವಿಲ್ಲ. ಹಣದ ಶಕ್ತಿಯಿಲ್ಲ. ಇದರಿಂದ ಅನ್ಯರನ್ನೇ ನಂಬಿ ಬದುಕಬೇಕಾದ ಸ್ಥಿತಿ ಬಂದಿದೆ. ತನ್ನ ಸಮುದಾಯವನ್ನು ನಿಜವಾಗಿ ಅಭಿವೃದ್ಧಿ ಪಡಿಸಬೇಕು ಎಂಬ ಹಂಬಲವಿದ್ದರೂ ಏನು ಮಾಡಲಾಗದ ಸ್ಥಿತಿಯಲ್ಲಿ ಇವರಿದ್ದಾರೆ. ಇಡೀ ಸಮುದಾಯವೇ ಸೇರಿ ತಮಗಾಗುವ ಅನ್ಯಾಯವನ್ನು ಪ್ರತಿಭಟಿಸಬೇಕು ಎಂಬ ಆಲೋಚನೆ ಇದ್ದರೂ ಅನಂತರ ಏನು ಎಂಬುದು ಯಾರಿಗೂ ತಿಳಿಯದಾಗಿದೆ. ಪ್ರತಿಭಟನೆಗೆ ಮುಂದಾದರೂ, ಅಲ್ಪ ಆಸೆಗೆ ಬಲಿಯಾದ ಕೆಲವರು ಸಂಘಟನೆಯನ್ನು ಹಗುರ ಮಾಡಿಬಿಡುತ್ತಾರೆ. ಇಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ನೌಕರಿ ಪಡೆಯಲಿಲ್ಲ. ಅವರ ಬದುಕು ಸುಖಮಯವಾಗಲಿಲ್ಲ. ಕೆಳಗಿನ ಒಂದು ಉದಾಹರಣೆಯ ಮೂಲಕ ಬುಡಕಟ್ಟು ಸಮುದಾಯ ಯಾವ ದಾರಿಯನ್ನು ಹಿಡಿದಿದೆ ಎಂಬುದನ್ನು ಅರಿತುಕೊಳ್ಳಬಹುದಾಗಿದೆ.

ಒಂದು ಸಂಘಟನೆಯ ಮೂಲನಿವಾಸಿಗಳ ಅಭಿವೃದ್ಧಿ ದೃಷ್ಟಿಯಿಂದ ಸಾರಾಯಿ ನಿಷೇಧಿಸಬೇಕು ಎಂದು ಹೋರಾಟ ಮಾಡಿ ಸಂಬಂಧಿಸಿದವರಿಗೆ ಮನವಿಯನ್ನು ಸಲ್ಲಿಸಿತು. ಇದೇ ಸಮುದಾಯದ ಜನರಿಂದ ಮತ್ತೊಂದು ಕಡೆ ನಮಗೆ ಸರಾಯಿಬೇಕು ಎಂದು ಹೋರಾಟ ಮಾಡಿಸಲಾಯಿತು. ಅಂದರೆ ಮುಗ್ಧರಾದ ಬುಡಕಟ್ಟು ಸಮುದಾಯಗಳು ನಾವು ಏನು ಮಾಡುತ್ತಿದ್ದೇವೆ ಎಂಬುದನ್ನು ಅರಿಯದಂತಹ ಸ್ಥಿತಿಯಲ್ಲಿದ್ದಾರೆ. ಇವರನ್ನು ಯಾರು ಯಾವುದೇ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ. ಕುಂಬಾರ ಅಂಗಳದಲ್ಲಿ ಇರುವ ಮಣ್ಣಿನಂತಾಗಿದೆ ಈ ಸಮುದಾಯದ ಸ್ಥಿತಿ. ಮಣ್ಣಿಗೆ ನಾನು ಏನಾಗುತ್ತೇನೆ. ಏನಾಗಬೇಕು ಎಂದು ನಿರ್ಧರಿಸಲು ಸಾಧ್ಯವಿಲ್ಲ, ಗೊತ್ತು ಗುರಿಯೂ ಇಲ್ಲ. ಅದನ್ನು ಕಂಬಾರ ತನ್ನ ಮನಬಂದಂತೆ ಏನು ಬೇಕಾದರು ಮಾಡಬಲ್ಲ. ಈ ಹಿನ್ನೆಲೆಯಲ್ಲೇ ನಾನು ಒತ್ತಾಯಿಸುವುದು ಏನೆಂದರೆ ಸಮುದಾಯದ ಅಭಿವೃದ್ಧಿಯನ್ನು ಸಮುದಾಯವೇ ಮಾಡಿಕೊಳ್ಳಬೇಕು ಹಾಗೂ ಅವರಲ್ಲೇ ನಾಯಕ ಹುಟ್ಟಿಕೊಳ್ಳಬೇಕೆ ಹೊರತು, ಆ ಗುಂಪಿಗೆ ಹೊರಗಿನಿಂದ ಹೋದವ ನಾಯಕನಾಗಲಾರ. ಬದಲಾಗಿ ಮಾರಕನಾಗುವ ಸಾಧ್ಯತೆಯೇ ಹೆಚ್ಚು.

ಸೋಲಿಗ ಅಂದು-ಇಂದು ಎರಡರ ಬದುಕಿನ ಅವಲೋಕನ ಜೊತೆಗೆ ಮುಂದೆ ಏನು ಎಂಬುದನ್ನು ಚಿಂತನೆಗೆ ಒಳಪಡಿಸಬೇಕಾಗಿದೆ. ಮುಂದಿನದನ್ನು ತೀರ್ಮಾನಿಸಲು ಸಾಧ್ಯವಿಲ್ಲದ ಕಾರಣ ಇಂದಿನ ಸರಿತಪ್ಪುಗಳನ್ನು ಸರಿಪರಿಡಿಸಿಕೊಳ್ಳುವ ಮೂಲಕ ಮುಂದಿನ ಬದುಕನ್ನು ಹಸನು ಮಾಡಿಕೊಳ್ಳುವುದು ಮಾತ್ರ ಸಾಧ್ಯ. ದೃಢಕಾಯನಾದ ವ್ಯಕ್ತಿಯ ಜೊತೆ ಬಲಹೀನನನ್ನು ಸ್ಪರ್ಧೆಗೆ ಇಳಿಸಿದರೆ ನಿರೀಕ್ಷೆಯಂತೆ ದೃಢಕಾಯ ಗೆಲ್ಲುತ್ತನೆ. ಆದ್ದರಿಂದ ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಎಲ್ಲಾ ಸೌಲಭ್ಯಗಳಿಂದಲು ವಂಚಿತರಾದ ಸೋಲಿಗ ಮತ್ತು ಎಲ್ಲಾ ಬುಡಕಟ್ಟು ಸಮುದಾಯಗಳನ್ನು ವಿಶೇಷವಾಗಿ ಪರಿಗಣಿಸಬೇಕು. ಅವರಿಗೆ ಕೇವಲ ವಿದ್ಯಾಭ್ಯಾಸ ಮತ್ತು ಮನೆ ಕೊಡುವ, ಸಾಲನೀಡುವ, ಸಂದರ್ಭದಲ್ಲಿ ವಿಶೇಷವಾಗಿ ಪರಿಗಣಿಸುವುದರ ಜೊತೆಗೆ ಕನಿಷ್ಟ ಹತ್ತು ವರ್ಷಗಳ ಕಾಲ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ನೌಕರಿ ನೀಡುವುದಕ್ಕೆ ಅವಕಾಶ ಕಲ್ಪಿಸಬೇಕು. ಆಗ ಮಾತ್ರ ಪ್ರಮುಖವಾಹಿನಿಯ ಜೊತೆ ಸೇರಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲವಾದರೆ ಅವರ ಅತಂತ್ರದ ಸ್ಥಿತಿಗೆ ನಾವೇ ಕಾರಣರಾಗಬೇಕಾಗುತ್ತದೆ.

ಇತ್ತೀಚೆಗೆ ಅರಣ್ಯದಿಂದ ಬುಡಕಟ್ಟು ಸಮುದಾಯಗಳನ್ನು ತೆರವುಗೊಳಿಸುತ್ತಿರುವುದು ನಿಜವಾಗಿಯೂ ಬಹಳ ಆತಂಕಕಾರಿಯಾಗಿದೆ. ಏಕೆಂದರೆ ರಾಜ ಮಹಾರಾಜರ ಕಾಲದಿಂದಲೂ ಕಾಡಿನಲ್ಲಿ ಬದುಕುತ್ತ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ. ಹಿಂದಿನ ಕಾಲದಲ್ಲಿ ರಾಜರ ಸಹಜ ಹವ್ಯಾಸಕ್ಕೆ ಕಾಡಿನಲ್ಲಿ ಬೇಟೆ ಆಡುವುದಿತ್ತು. ಅಂತಹ ಸಂದರ್ಭದಲ್ಲಿ ರಾಜನಾಗಲಿ ಆತನ ಸೇನೆಯಾಗಲಿ ಕಾಡಿನಲ್ಲಿ ಮನಬಂದಂತೆ ಅಲೆದಾಡುವುದು ಸಾಧ್ಯವಿರಲಿಲ್ಲ. ಆಗ ಕಾಡವಾಸಿಗರಾಗಿದ್ದ ಸೋಲಿಗರು ಜೇನು ಕುರುಬ, ಕಾಡುಕುರುಬ ಇವರೇ

ಮುಂತಾದವರು ಅರಸರಿಗೆ ಮಾರ್ಗದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ದಿನದ ಯಾವ ಗಳಿಗೆಯಲ್ಲಿ ಎಲ್ಲಿ ಯಾವ ಪ್ರಾಣಿಗಳು ಲಭ್ಯವಾಗುತ್ತವೆ ಎಂಬುದರ ಬಗ್ಗೆ ಮಾಹಿತಿ ನೀಡುತ್ತಿದ್ದರು. ಅಷ್ಟೇ ಅಲ್ಲ ಅವರ ಜೊತೆಗಿದ್ದು ಬೇಟೆಯಲ್ಲಿ ಸಹಾಯ-ಸಹಕಾರ ನೀಡುತ್ತಿದ್ದರು. ಒಟ್ಟಿನಲ್ಲಿ ರಾಜರ ಬೇಟೆಯ ಸಂದರ್ಭದಲ್ಲಿ ಇವರು ಮಾರ್ಗದರ್ಶಕರಾಗಿ, ರಕ್ಷಕರು ಆಗಿರುತ್ತಿದ್ದರು. ಅದಕ್ಕಾಗಿ ಅನೇಕರು ಬಹುಮಾನ ಪ್ರಶಸ್ತಿಯನ್ನು ಪಡೆದಿದ್ದಾರೆ. ಕಾಕನಕೋಟೆಯನ್ನು ಓರ್ವ ಬುಡಕಟ್ಟು ನಾಯಕನಿಗೆ ವಹಿಸಿಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದು.

ಇಂತಹ ಬುಡಕಟ್ಟುಗಳ ಸ್ಥಿತಿ ಇಂದು ಅನಾಥವಾಗಿ ನೆಲೆಯನ್ನು ಕಳೆದುಕೊಳ್ಳಬೇಕಾದ ಅಥವಾ ಬದುಕನ್ನು ದುರಂತ ಮಾಡಿಕೊಳ್ಳಬೇಕಾದ ಸ್ಥಿತಿಗೆ ಬಂದಿರುವುದನ್ನು ಗಮನಿಸಿದರೆ ದುಷ್ಟ ಪ್ರಾಣಿಯು ಸಾಧು ಪ್ರಾಣಿಗಳನ್ನು ಹೊಂಚುಹಾಕಿ ಸಿಗಿದು ತಿನ್ನುವಂತೆ ಮುಂದುವರಿದ ಸಮಾಜದ ತಂತ್ರಕ್ಕೆ ಈ ಮುಗ್ಧ ಸಮುದಾಯಗಳು ಬಲಿಯಾಗ ಬೇಕಾಗಿರುವುದನ್ನು ಯಾವ ರೀತಿ ಅರ್ಥೈಸಿಬೇಕೆಂಬುದೇ ತಿಳಿಯದ ಸಂಗತಿಯಾಗಿದೆ. ಅಷ್ಟಾಗಿಯೂ ನಾನು ಕಂಡುಕೊಂಡ ಸತ್ಯವೇನೆಂದರೆ ಈ ಬುಡಕಟ್ಟುಗರು ಯಾವುದೇ ಕಾರಣಕ್ಕೂ ಕಾಡಿನ ಯಾವ ಮರ ಕಡಿಯುವುದಾಗಲಿ ಅಥವಾ ಪ್ರಾಣಿಗಳನ್ನು ಕೊಲ್ಲುವುದನ್ನಾಗಲಿ ಮಾಡುವುದಿಲ್ಲ. ಹುಲಿ-ಚಿರತೆಯಂತ ಪ್ರಾಣಿಗಳು ಸಾಧು ಪ್ರಾಣಿಗಳನ್ನು ಕೊಂದು ತಿಂದು ಬಳಿಕ ಉಳಿದುದನ್ನು ಇವರು ಆಹಾರಕ್ಕೆ ಬಳಸುತ್ತಾರೆ. ಸ್ವತಃ ಇವರು ಯಾವುದೇ ಪ್ರಾಣಿ, ಪಕ್ಷಿಗಳನ್ನು ಕೊಲ್ಲುವ ಪ್ರಯತ್ನ ಮಾಡುವುದಿಲ್ಲ. ಏಕೆಂದರೆ ಅವುಗಳು ಸಹ ಅವರ ಬಳಗವೆಂಬಂತೆ ಒಟ್ಟಿಗೆ ಬುದುಕುತ್ತಿದ್ದಾರೆ.

ಕಾಡಿನ ಯಾವುದೇ ಗಿಡಮರಗಳನ್ನು ಕಡಿಯದೇ ಕೇವಲ ತಾವು ವಾಸಕ್ಕೆ ಬಳಸಿಕೊಂಡ ಸುತ್ತಿನ ಜಾಗವನ್ನು ಶುಚಿಗೊಳಿಸಿ ಅಲ್ಲಿ ಒಂದಿಷ್ಟು ರಾಗಿ ಅಥವಾ ಕಾಳುಗಳನ್ನು ಬೆಳೆದು ಕೊಳ್ಳುತ್ತಾರೆ. ಅಲ್ಲದೇ ಒಂದೇ ಸ್ಥಳದಲ್ಲಿ ಮೂರುವರ್ಷಕ್ಕಿಂತ ಹೆಚ್ಚು ಕಾಲ ಉಳಿಯುತ್ತಿರಲಿಲ್ಲ. ಅಂದರೆ ಲಭ್ಯವಿದ್ದ ಗೆಡ್ಡೆ ಗೆಣಸು ಇತ್ಯಾದಿಗಳನ್ನು ಬಳಸಿಕೊಂಡಿದ್ದಾರೆ. ಭೂಮಿಯನ್ನು ಬಳಸಿದರೆ ಸಾರ ಕಡಿಮೆಯಾಗಿದೆ. ಆದಕಾರಣ ಮುಂದಿನ ಫಲವತ್ತಾದ ಜಾಗದಲ್ಲಿ ಹೋಗಿ ವಾಸಕ್ಕೆ ಅಣಿಗೊಳಿಸುತ್ತಿದ್ದರು. ಕಾಡಿಗೆ ಯಾವುದೇ ಹಾನಿಯಾಗದಂತೆ ತಮ್ಮ ಬದುಕನ್ನು ಸಾಗಿಸುತ್ತಿದ್ದುದು ಇಲ್ಲಿ ಕಂಡುಬರುತ್ತದೆ.

ಹಾಗಾದರೆ ಕಾಡುಜನರು ಕಳ್ಳರು, ಮರಗಳನ್ನು ಕಡಿಯುತ್ತಾರೆ, ಅನೇಕ ಕಳ್ಳ ವ್ಯವಹಾರ ಮಾಡುತ್ತಾರೆ ಎಂದು ಅರಕ್ಷಕ ಠಾಣೆಯಲ್ಲಿ ದಾಖಲೆಗಳಿವೆ. ಇದಕ್ಕೆ ಕಾರಣವೇನು?. ಈ ಮುಗ್ಧ ಕಾಡುಜನರನ್ನು ಬಳಸಿಕೊಂಡು ನಾಡಿನ ದುಷ್ಟರು ಬೆಲೆಬಾಳುವ ಮರವನ್ನು ಕಡಿಯುವುದು ಕಳ್ಳಸಾಗಣೆ ಮಾಡುವುದು ಯಾರಿಗೂ ತಿಳಿಯದ ಸಂಗತಿಯೇನಲ್ಲ. ಆದರೆ ಆ ದುಷ್ಟರನ್ನು ಹಿಡಿಯುವ ಕೆಲಸ ಸುಲಭದ್ದಲ್ಲವೆಂದು ಹೇಳುವುದು ಅಗತ್ಯವಿಲ್ಲ. ಈ ಸಂದರ್ಭದಲ್ಲಿ ಕೇವಲ ಕೇಸು ದಾಖಲಿಸಲು ಅಥವಾ ಸಾಧನೆಯನ್ನು ತೋರಲು ಬುಡಕಟ್ಟು ಮುಗ್ಧರು ಬಲಿಪಶುವಾಗಿದ್ದಾರೆ. ಈ ಮಾತನ್ನು ನಾನು ಹೇಳುವ ಬದಲು ಅನ್ಯಾಯಕ್ಕೆ ಒಳಗಾದ ಆ ವ್ಯಕ್ತಿಗಳಿಂದಲೇ ಕೇಳಿದರೆ ಎಂತಹ ಕಟುಕನಿಗೂ ಮನಕರಗದಿರದು. ಏನು ಅರಿಯದ ಮುಗ್ದರು ಬೆಲೆಬಾಳುವ ಮರದ ಪಕ್ಕದಲ್ಲಿ ಕುಳಿತು ಕಳ್ಳರಾಗಿ ಛಾಯಚಿತ್ರ ತೆಗೆಸಿಕೊಂಡು ಅವಮಾನಿತರಾಗಿದ್ದಾರೆ. ದನಕ್ಕೆ ಬಡಿದಂತೆ ಬಡಿಸಿಕೊಂಡು ಶಾಶ್ವತ ತೊಂದರೆಗೆ ಒಳಗಾಗಿದ್ದಾರೆ. ಈ ರೀತಿ ಕೃತ್ಯಗಳು ಇಲ್ಲಿಗೆ ಮಾತ್ರ ಸೀಮಿತ ಎಂದು ದಾಖಲಿಸುತ್ತಿಲ್ಲ. ಇಲ್ಲಿಯ ಈ ಸಮುದಾಯ ಯಾವ ಯಾವ ರೀತಿಯಲ್ಲಿ ಅನ್ಯಾಯಕ್ಕೆ ಒಳಗಾಗವುದು ಸಾಧ್ಯವಿದೆ ಎಂಬುದನ್ನು ಹಾಗೂ ವಾಸ್ತವ ಚಿತ್ರವನ್ನು ಪರಿಚಯಿಸುತ್ತಿದೇನೆ ಅಷ್ಟೆ.

ಹಿಂದೆ ಪ್ರಸ್ತಾಪಿಸಿದ ಅರಣ್ಯದಿಂದ ತೆರವು ಮಾಡುವ ಸಂಗತಿ ಬುಡಕಟ್ಟು ಜನರಿಗೆ ಸಂತಸದ ವಿಚಾರವೇನು ಅಲ್ಲ. ನೀರಿನಲ್ಲಿದ್ದ ಮೀನನ್ನು ಹೊರಗೆ ತೆಗೆದಂತೆ ಆಗುವ ಸಾಧ್ಯತೆಗಳಿವೆ. ನಿಜವಾದ ಅರ್ಥದಲ್ಲಿ ಕಾಡನ್ನು ರಕ್ಷಿಸುತ್ತಿದ್ದ ಜನರು ಬುಡಕಟ್ಟುಗಳೇ ಆಗಿದ್ದರು, ಕಾಡಲ್ಲಿದ್ದರೆ ನಾಡಿನ ಕೆಲವು ಆಕಾಂಕ್ಷಿಗಳಿಗೆ ತಮ್ಮ ಕಾರ್ಯ ಸಿದ್ಧಿಯಾಗುವುದಿಲ್ಲ ಎಂಬುದು ಮನವರಿಕೆಯಾಗಿದೆ ಹಾಗೂ ತಮ್ಮಿಂದ ಸಾದ್ಯವಿದ್ದಾಗ ಆದಷ್ಟು ಗಳಿಸುವುದು, ಕಾಡಾದರೇನು? ನಾಡಾದರೇನು? ಒಟ್ಟಿನಲ್ಲಿ ಭೂಮಿಯನ್ನು ಲೂಟಿಮಾಡುವುದು ಅದರಲ್ಲಿ ಪಾಲು ಹಂಚಿಕೊಳ್ಳುವುದು ಇದು ಇಂದು ಜರುಗುತ್ತಿರುವ ಸಾಮಾನ್ಯ ಸಂಗತಿಗಳಾಗಿವೆ. ಇಂತಹ ಸ್ಥಿತಿಯಲ್ಲಿ ನಾಗರಹೊಳೆ,

ಬಂಡೀಪುರದ ಬುಡಕಟ್ಟು ಸಮುದಾಯಗಳು ತೊಂದರೆಗೆ ಸಿಲುಕಿವೆ. ಇದು ಈಗಾಗಲೇ ರಾಜ್ಯಮಟ್ಟದ ಸುದ್ಧಿಯಾಗಿದೆ. ಇದರ ವಿರುದ್ಧ ಹೋರಾಟಗಳು ನಡೆದಿವೆ.

ಆದರೆ ಬಿಳಿಗಿರಿರಂಗನ ಬೆಟ್ಟದ ಮತ್ತು ಸುತ್ತ-ಮುತ್ತಲಿರುವ ಬುಡಕಟ್ಟುಗಳ ಸಮಸ್ಯೆಯೇ ಬೇರೆಯಾಗಿದೆ. ಇಲ್ಲಿನ ಸೋಲಿಗ ಸಮುದಾಯವು ಅತಿ ಬೇಗನೆ ಮುಂದುವರಿದಿರುವುದು ಮತ್ತು ಮುಂದುವರಿಯುತ್ತಿರುವುದು ಸಮುದಾಯ ಅಸ್ತಿತ್ವವನ್ನೇ ಅಲುಗಾಡಿಸುವಂತಿದೆ. ಏಕೆಂದರೆ ಕಾಫಿಯಂತಹ ದುಭಾರಿ ಬೆಳೆ ಬೆಳೆಯುವುದು ಸಾಧ್ಯವಾಗುತ್ತಿದೆ. ವಿದ್ಯಾವಂತರಾದ ಸೋಲಿಗರ ಯುವಕರು ವ್ಯವಸಾಯ ಮಾಡಲು ಹಿಂಜರಿಯುತ್ತಿದ್ದಾರೆ. ಇದರಿಂದ ಹೊರಗಿನ ಹಣವಂತರು (ಬೆಂಗಳೂರು, ಮೈಸೂರು) ಮುಂದೆ ಒಂದು ದಿನ ಬಿಳಿಗಿರಿರಂಗನ ಬೆಟ್ಟ ಮಿನಿ ಊಟಿ ಆಗುತ್ತದೆ ಎಂಬ ಆಶಯವನ್ನು ಹೊಂದಿದ್ದು ಸೋಲಿಗರಿಗೆ ನೀಡಿರುವ ಒಂದು ಅಥವಾ ಎರಡು ಎಕರೆ ಭೂಮಿಯನ್ನೂ ಕೊಂಡು ಕೊಳ್ಳುವಲ್ಲಿ ಪೈಪೋಟಿ ನಡೆಸಿದ್ದಾರೆ. ಇದರಿಂದ ಇತ್ತ ಕಾಡು ಬದುಕು ಇಲ್ಲ. ಅತ್ತ ನಾಡ ಬದುಕು ಇಲ್ಲದಂತೆ ಮತ್ತೊಮ್ಮೆ ಅತಂತ್ರ ಬದುಕಿಗೆ ಮೊರೆ ಹೋಗಬೇಕಾದ ಸ್ಥಿತಿ ಬರುವುದರಲ್ಲಿ ಆಶ್ಚರ್ಯವಿಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲಭ್ಯವಾದ ಹಲವಾರು ಜನರ ಅಭಿಪ್ರಾಯವನ್ನು ದಾಖಲಿಸುವುದಾದರೆ ನಾಡಿನ ಜನರು ಹೀಗೆ ತಮ್ಮ ಆಕ್ರಮಣ ಬುದ್ಧಿಯನ್ನು ಮುಂದುವರಿಸಿದರೆ ಒಂದಿಲ್ಲ ಒಂದು ದಿನ ಅವರ ವಿರುದ್ಧ ದಂಗೆ ಏಳುವುದು ಖಚಿತವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈಗಾಗಲೇ ಅಂತಹ ಅತಿರೇಕದ ಒಂದೆರಡು ಸಂದರ್ಭಗಳು ಬಂದಿದ್ದರು ತಮ್ಮಲ್ಲಿನ ಒಗ್ಗಟ್ಟಿನ ಕೊರತೆಯಿಂದ ತಣ್ಣಗಾಗಿವೆ ಎನ್ನುತ್ತಾರೆ.

ಒಂದು ಬುಡಕಟ್ಟು ಯಾವುದೇ ಸಂದರ್ಭದಲ್ಲಿ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಅಷ್ಟಕ್ಕೂ ಅದು ರೂಢಿಸಿಕೊಂಡು ಬಂದಿರುವ ಯಾವುದೇ ರೀತಿ-ನೀತಿಗಳು ಆ ಸಮುದಾಯದ ಅನೇಕ ದಿನಗಳ ಅನುಭವ ಮತ್ತು ಸಾಧನೆಯಿಂದಾಗಿರುತ್ತದೆ. ಉದಾಹರಣೆಗೆ ಸೋಲಿಗರ ಕಟ್ಟೆಮನೆ ನ್ಯಾಯವನ್ನು ಕುರಿತು ಹೇಳುವುದಾದರೆ, ಒಂದು ಉತ್ತಮ ಹಾಗೂ ಸಾರ್ವತ್ರಿಕ ಸ್ಥಾನವಾಗಿದ್ದ 'ಕಟ್ಟೆಮನೆ ನ್ಯಾಯ' ಇಂದು ಇಲ್ಲದಾಗಿದೆ. ಕಾರಣ ಹೊರಗಿನ ಪ್ರಭಲವಾದ ಶಕ್ತಿ ಸಮುದಾಯವನ್ನು ಸಮುದಾಯದ ಹಳೆ ಪದ್ಧತಿಯನ್ನು ಹಗುರುಗೊಳಿಸಿದ್ದು ಅತ್ಯಂತ ಕಿರಿಯ ವಯಸ್ಸಿನ ಕೆಲವರು ರಾಜಕೀಯ ಪ್ರವೇಶ ಪಡೆದು ತಮ್ಮ ಹಿರಿಯರನ್ನು ಮತ್ತು ತಮ್ಮದೇ ನೀತಿ ನಿಯಮಗಳನ್ನು ಗೌರವಿಸದೆ ಇರುವುದು. ಇದರಿಂದ ಇವರಲ್ಲಿದ್ದ ಐದು ಕುಲದವರಿಗೂ ಇದ್ದ ಒಂದೊಂದು ಜವಬ್ದಾರಿ ಇಂದು ಕೇವಲ ಹೆಸರಿಗೆ ಮಾತ್ರ ಎಂಬಂತಾಗಿದೆ. ನಾಯಕನಾದವನಿಗೆ ಪ್ರಭಾವಿತ ಶಕ್ತಿಯ ವಿರುದ್ಧ ಏನನ್ನು ಹೇಳಲು ಹಿಂಜರಿಯುವುದು ತನ್ನ ಜೀವನ ಮಾರ್ಗಕ್ಕೆ ಅವರನ್ನೇ ಆಶ್ರಯಿಸಿರುವುದು ತನ್ನ ಅಧಿಕಾರವನ್ನು ಸಮರ್ಥವಾಗಿ ಬಳಸಲು ಸಾಧ್ಯವಾದಂತೆ ಕಾಣುತ್ತಿಲ್ಲ.

ಮಿಗಿಲಾಗಿ ಹಣವನ್ನು ಕಾಣದೆ, ಬರಡಾಗಿದ್ದ ಮನಸ್ಸುಗಳು ಹಣವೆಂದರೆ ಯಾವುದೇ ಕೆಲಸವನ್ನು ಮಾಡಲು ಒಪ್ಪಿಕೊಳ್ಳುವುದು ಅಪಾಯಕಾರಿಯಾಗಿದೆ. ಸರಾಯಿ ಎಂಬ ಭೂತವನ್ನು ಬಳಸಿಕೊಂಡು ಇಡಿ ಸಮುದಾಯವನ್ನೇ ರಾಜಕೀಯ ನಾಯಕರು ಹಾಗೂ ಸಂಘ ಸಂಸ್ಥೆಗಳು ಹೇಗೆಂದರೆ ಹಾಗೆ ಬಳಸಿಕೊಳ್ಳುವುದು ಸಾಧ್ಯವಿದೆ. ಸೋಲಿಗಗೌಡ ಎಂಬ ಹೆಸರನ್ನು ದುರುಪಯೋಗ ಮಾಡಿಕೊಂಡು ಹೊರರಾಷ್ಟ್ರಕ್ಕೆ ಹೋಗಿ ಬಂದಿರುವ ಉದಾಹರಣೆಗಳು ನನ್ನ ಸಂದರ್ಶನ ವೇಳೆಯಲ್ಲಿ ದಾಖಲೆಗೆ ದೊರತಿದೆ. ಆದರೆ ತಮಗೆ ಅಥವಾ ತಮ್ಮ ಸಮುದಾಯಕ್ಕೆ ಆಗುವ ಅನ್ಯಾಯವನ್ನು ನೋಡಿದರು ನೋಡದವರಂತೆ, ಮೂಕ ಪ್ರೇಕ್ಷಕರಾಗಿ ಕೇವಲ ವೇದನೆಯನ್ನು ಅನುಭವಿಸುತ್ತಾ ಇದ್ದಾರೆ. ಬೇರೆಯವರಿಗೆ ಹೇಳಿಕೊಳ್ಳಲು ಹೆದರುವ ಸ್ಥಿತಿಯನ್ನು ನೋಡಿದಾಗ ಈ ಜನರ ಸ್ಥಿತಿ ಹಿಂದಿಗಿಂತಲೂ ಹೀನಾಯವಾಗಿದೆ ಎಂದೇ ಹೇಳಬೇಕಾಗುತ್ತದೆ.

ಓರ್ವ ಸೋಲಿಗ ಅಜ್ಜನ ಮಾತನ್ನ ಉದಾಹರಿಸುವುದಾದರೆ "ನಾವು ಕಾಡಲ್ಲಿ ವಾಸವಾಗಿದ್ದು ಇಲ್ಲಿ ಕ್ರೂರಪ್ರಾಣಿಗಳಿಗೆ ಹೆದರಲಿಲ್ಲ ಆದರೆ ನಾಡಪ್ರಾಣಿ ಬಂದುದರಿಂದ ನಮಗೆ ಹೆದರಿಕೆ ಜಾಸ್ತಿಯಾಗಿದೆ. ಮುಂದೇನೋ ಗೊತ್ತಾಗ್ತ ಇಲ್ಲಪ್ಪ....."

ಯೋಜನೆಗಳ ಬಗ್ಗೆ ಹೇಳುವುದು ಈ ಸಂದರ್ಭದಲ್ಲಿ ಸೂಕ್ತವೆನಿಸುತ್ತದೆ. ಗೌಳಿಗರು ಹೈನುಗಾರಿಕೆಯಿಂದ ಬದುಕು ಸಾಗಿಸುತ್ತಾರೆ. ಇವರ ಕಸುಬಿಗೆ ಪೂರಕವಾಗಿ ಮನೆಯನ್ನು ನಿರ್ಮಿಸಿ ಕೊಡುವುದು ಸಮಂಜಸ. ಆದರೆ ಗೌಳಿಗರ ವಾಸಕ್ಕೆ ಮನೆ ನೀಡಬೇಕು ಎಂದು ತಿಳಿದು ೧೦-೨೦ ಜಾಗದಲ್ಲಿ ಒಂದು ಗೂಡುಕಟ್ಟಿ ಕೊಟ್ಟರೆ ಏನು ಪ್ರಯೋಜನವಾಗಲಾರದು. ಏಕೆಂದರೆ ಗೌಳಿಗರ ಕಸುಬು ಹೈನುಗಾರಿಕೆ. ಅದಕ್ಕಾಗಿ ಅವರು ಸಾಕುವ ಎಮ್ಮೆಗಳನ್ನು ಕಟ್ಟಲು ವಿಶಾಲವಾದ ಸ್ಥಳಬೇಕು. ಸರ್ಕಾರ ನೀಡುವ ೧೦ x ೨೦ ಅಡಿ ಮನೆಯಲ್ಲಿ ವಾಸವಾದರೆ ಕಸುಬಿನ ಗತಿಯೇನು? ಇದು ಯೋಜನೆಯು ಸಿದ್ದವಾಗುವ ಮೊದಲು ನಿರ್ದಿಷ್ಟ ಸಮುದಾಯರ ಬಗ್ಗೆ ಅಧ್ಯಯನ ನಡೆಯಬೇಕು. ಆ ಬಳಿಕವೆ ಅವರ ಅಗತ್ಯಕ್ಕೆ ಪೂರಕವಾಗಿ ಯೋಜನೆ ಸಿದ್ಧವಾಗಬೇಕು. ಕಾಲ ವಿಳಂಬವಿಲ್ಲದೆ ಕಾಲ ಕಾಲಕ್ಕೆ ನಡೆಯಬೇಕಾದ ಕಾರ್ಯ ನಡೆಯುವಂತೆ ನೋಡಿಕೊಳ್ಳಬೇಕು. ಫಲ-ವಿಫಲಗಳನ್ನು ಜೊತೆ ಜೊತೆಗೆ ಪರಿಶೀಲಿಸಿ ಪರಿಷ್ಕೃತ ಪರಿಹಾರಗಳನ್ನು ಅನುಷ್ಠಾನ ಗೊಳಿಸಬೇಕು. ಇದಕ್ಕೆ ಯಾವುದೇ ಆಡಳಿತಾತ್ಮಕ ಅಡೆತಡೆಗಳು ಬಾರದಂತೆ ಎಚ್ಚರಿಕೆ ವಹಿಸ ಬೇಕು. ಇಲ್ಲವಾದರೆ ಉದ್ದೇಶಿತ ಯೋಜನೆ ಉಚ್ಚಾಟಿತ ಯೋಜನೆಗಳಾಗುವ ಸಾಧ್ಯತೆಗಳಿರುತ್ತವೆ.

ಒಂದರ ಹಿಂದೆ ಒಂದರಂತೆ ಅಸಂಖ್ಯಾತ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಬದಲು ಪರಿಣಾಮಕಾರಿಯಾದ ಕೆಲವೇ ಯೋಜನೆಗಳನ್ನು ಹಮ್ಮಿಕೊಂಡು ಸಮುದಾಯದ ಪ್ರತಿಯೊಂದು ವ್ಯಕ್ತಿ ಹಾಗೂ ಕುಟುಂಬವು ಒಳಗೊಳ್ಳುವಂತೆ ಕಾರ್ಯ ಯೋಜನೆ ರೂಪಿಸುವುದು ಒಳ್ಳೆಯದು. ಉದಾಹರಣೆಗೆ ವಾಸಕ್ಕೆ ಮನೆ ಕಟ್ಟಲು ಒಂದೇ ಯೋಜನೆ ಸಾಕು ಎನಿಸುತ್ತದೆ. ಅದೇ ರೀತಿ ವಿಧ್ಯಾಭ್ಯಾಸ ಸ್ವಯಂ ಉದ್ಯೋಗಕ್ಕೆ, ಕೃಷಿಗೆ ಮತ್ತು ಮನೆ ಕಟ್ಟಲು ಹತ್ತು ಹದಿನೈದು ಹೆಸರಿನ ಯೋಜನೆಗಳ ಅನುಷ್ಠಾನದಿಂದ ಬುಡಕಟ್ಟಿಗೆ ಏನು ಲಾಭವಾಗುವುದಿಲ್ಲ. ಬದಲಾಗಿ ಅಲೆದಾಟ, ಅನಗತ್ಯ ಖರ್ಚು ಆಗುವುದರಲ್ಲಿ ಸಂಶಯವಿಲ್ಲ.

## ೩. ಕಾವ್ಯವನ್ನು ಕುರಿತು....

ಮುಂದುವರಿದು ಸೋಲಿಗರು ಹಾಡಿದ ಬಿಳಿಗಿರಿರಂಗನ ಕಾವ್ಯವನ್ನು ಕುರಿತು ಚರ್ಚಿಸಲಾಗಿದೆ. ಹಿಂದೆ ಹೇಳಿದಂತೆ ಸೋಲಿಗರು, ದ್ರಾವಿಡ ಮೂಲದವರು. ಈ ನೆಲಕ್ಕೆ ಪ್ರಾಚೀನರು ಹೌದು. ಕಾಲಾಂತರದಲ್ಲಿ ಶೈವ ಪಂಥಕ್ಕೆ ಪ್ರಭಾವಿತರಾದುದು ಉಂಟು. ಇದರ ಮಧ್ಯ ವೈಷ್ಣವ ಪಂಥವು ಕೂಡ ಈ ಅರಣ್ಯವಾಸಿ ಸೋಲಿಗರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಇದು ಸಾಮಾನ್ಯ ಸಂಗತಿಯಲ್ಲ. ಇದಕ್ಕೊಂದು ಐತಿಹಾಸಿಕ ಕಾರಣ ಇದ್ದಿರಲೇ ಬೇಕು ಎಂದು ಪರಿಶೀಲಿಸಿದಾಗ ತಿಳಿದು ಬಂದ ಸಂಗತಿ ಈ ರೀತಿ ಇದೆ. "Ramanujacharya, the doyen seen of the Sri Vaishnavas who lived in the early 1200's who had to run away from hims perseverant and virify a survival of sorts for himself and his many followers in his native Madras State, had soughts sanctuary in the hill city of Melkote, in the nieghbouring Mysore State, and even gone to establish new Srivaishnava fellowship there." (The Quartery journal of the Mythic society, July-September 1997- Page.4)

ಹನ್ನೆರಡನೇ ಶತಮಾನದ ಆರಂಭದಲ್ಲಿ ಮದ್ರಾಸ್ ಪ್ರಾಂತ್ಯದ ರಾಜನಾಗಿದ್ದ ಚೋಳರ ಆಳ್ವಿಕೆ ಸಂದರ್ಭದಲ್ಲಿ ರಾಮಾನುಜಾಚಾರ್ಯರು ಮತ ಸಂಪ್ರದಾಯಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಹೊಂದಿದ್ದ ಕಾರಣಕ್ಕಾಗಿ ತಮಿಳುನಾಡಿನಿಂದ ಗಡಿಪಾರು ಮಾಡಲಾಗುತ್ತದೆ. ಆಗ ತಮ್ಮ ಅನುಯಾಯಿಗಳನ್ನು ಕರೆದುಕೊಂಡು ಜೀವ ಉಳಿಸಿಕೊಳ್ಳುವ ಸಲುವಾಗಿ ಆಶ್ರಯವನ್ನು ಅರಸಿ ಕರ್ನಾಟಕದ ಕಡೆಗೆ ಬರುತ್ತಾರೆ. ತಮಿಳುನಾಡಿನಿಂದ ಬಹಳ ಸಮೀಪದ ಹಾದಿಯಲ್ಲಿ ಚಾಮರಾಜನಗರಕ್ಕೆ ಅರಣ್ಯದ ನಡುವಿನಿಂದ ಬಂದು ಅಲ್ಲಿದ್ದ ಬುಡಕಟ್ಟು ಸಮುದಾಯಗಳ ನಡುವೆ ತಮ್ಮ ಮತ ಪ್ರಚಾರ ಮುಂದುವರಿಸಿ, ಈಗಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ವಲ್ಪಕಾಲ ಆಶ್ರಯವನ್ನು ಪಡೆಯುತ್ತಾರೆ. ಆ ಸಂದರ್ಭದಲ್ಲಿ ಸೋಲಿಗರು ವೈಷ್ಣವ ಮತಕ್ಕೆ ಪ್ರಭಾವಿತರಾಗಿರುತ್ತಾರೆ. ರಾಮಾನುಜಾಚಾರ್ಯರ ಜೊತೆಯಲ್ಲಿ ಬಂದಿದ್ದ ಅನುಯಾಯಿಗಳಲ್ಲಿ ಒಬ್ಬಿಬ್ಬರು ಅಲ್ಲೆ ನೆಲೆ ನಿಂತು ಮತ ಪ್ರಚಾರದ ಕಾರ್ಯದಲ್ಲಿ ನಿರತನಾಗಿರುವ ಸಾಧ್ಯತೆ ಇದೆ.

ಪ್ರಸ್ತುತ ಕಾವ್ಯದಲ್ಲಿ ಬರುವ ಆರಂಭದ ಪಾತ್ರಗಳನ್ನು ಗಮನಿಸಿದಾಗ ಸಿಂಗ ಮತ್ತು ರಂಗ ಎಂಬ ಅಣ್ಣತಮ್ಮಂದಿರು ಇರುತ್ತಾರೆ. ಅಣ್ಣನಾದ ಸಿಂಗನು ಸ್ನಾನ ಮಾಡಬೇಕು ಅದಕ್ಕಾಗಿ ಸೀಗೆಕಾಯಿ ಬೇಕು ಎಂದು ತಮ್ಮನಿಗೆ ಹೇಳುತ್ತಾನೆ. ತಮ್ಮನಾದ ರಂಗನು ಅಣ್ಣ ಸೀಗೆಕಾಯಿ ತರಬೇಕಾದರೆ ಬೆಳ್ಳಿಕಲ್ಲ ಬೆಟ್ಟಕ್ಕೆ (ಬಿಳಿಗಿರಿರಂಗನ ಬೆಟ್ಟವನ್ನು ಗ್ರಾಮೀಣ ಪ್ರದೇಶಗಳಲ್ಲಿ ಬಿಳಿಕಲ್ಲ ಬೆಟ್ಟ ಎಂಬುದಾಗಿ ಕರೆಯುವುದುಂಟು) ಹೋಗಬೇಕು. ಅಲ್ಲಿಗೆ ಹೋದರೆ ಬಿಳಿ ಸೀಗೆಕಾಯಿ ಸಿಗುತ್ತೆ ಎಂದು ಹೊರಡುತ್ತಾನೆ. ತಮ್ಮನು ಸೀಗೆಕಾಯಿ ತರುವನೆಂದು ಅಣ್ಣ ತಲಕಾಡಿನಲ್ಲಿ ಕಾಯುತ್ತಿರುತ್ತಾನೆ. ಆದರೆ ತಮ್ಮನಾದ ರಂಗ ಬಿಲಿಕಲ್ಲ ಬೆಟ್ಟಕ್ಕೆ ಬರುತ್ತಾನೆ. ವೈಷ್ಣವ ಪಂಥದ ಅನುಯಾಯಿಯಾದ ಈತ ತನ್ನ ಬಿರುದು ಬಾವಳಿಗಳೊಂದಿಗೆ ಬಂದು ದಾಸಯ್ಯನ ಹುಂಡಿಯಲ್ಲಿ ಒಕ್ಕಲಿಗ ಗಂಗಡಿಕಾರ ಗೌಡನ ಮನೆಯಲ್ಲಿ ವಿಶೇಷ ಕಾರ್ಯದನಿಮಿತ್ತ ಊಟದ ವ್ಯವಸ್ಥೆ ಇರುತ್ತದೆ. ಅವರ ಪದ್ಧತಿಯಂತೆ ಮನೆಯ ಹೆಣ್ಣು ಮಕ್ಕಳ ಊಟ ಮುಗಿಯದೆ ಹೊರಗಿನವರಿಗೆ ಊಟ ನೀಡುವುದಿಲ್ಲ. ಅದನ್ನರಿಯದ ರಂಗದಾಸಯ್ಯ ಒಳಗೆ ನುಗ್ಗುತ್ತಿರುತ್ತಾನೆ. ಆಗ ಅವರು ದಾಸಯ್ಯನನ್ನು ಎಳೆದು ಹೊರಗೆ ಬಿಟ್ಟು ಬಿಡುತ್ತಾರೆ. ಅವಮಾನಿತನಾದ ದಾಸಯ್ಯ "ದಾಸಯ್ನುಂಡಿ ಹಾಳಾಗ್ಲಿ, ಗಂಗವಾಡಿ ಉದ್ಧಾರವಾಗ್ಲಿ" ಎಂದು ಶಾಪವನ್ನು ನೀಡಿ ಮುಂದೆ ಹೋಗುತ್ತಾನೆ. ಹೀಗೆ ಅನೇಕ ಊರುಗಳನ್ನು ದಾಟಿ ಬಿಳಿಕಲ್ಲ ಬೆಟ್ಟಕ್ಕೆ ಬರುತ್ತಾನೆ. ಇದನ್ನೆ ಈ ಕಾವ್ಯದಲ್ಲಿ ಮೇಲುಗಿರಿ ಎಂದು ಕರೆದಿದ್ದಾರೆ.

ಕಾವ್ಯದ ಒಂದು ಪ್ರಸಂಗವು ಮೊದಲೆ ಇದ್ದ ಶೈವಧರ್ಮವನ್ನು ಒಕ್ಕಲೆಬ್ಬಿಸಿ ವೈಷ್ಣವ ಧರ್ಮವನ್ನು ಪ್ರತಿಷ್ಠಾಪಿಸುವ ಘಟನೆಯನ್ನು ಸಾಂಕೇತಿಕವಾಗಿ ವರ್ಣಿಸಲಾಗಿದೆ. ಮೊದಲಿಗೆ ಬುಡಕಟ್ಟು ನಾಯಕನಾಗಿ ಆನಂತರ ಶೈವನಾದ ಈಶ್ವರ ಬಿಳಿಕಲ್ಲ ಬೆಟ್ಟದಲಿದ್ದರುತ್ತಾನೆ. ವೈಷ್ಣವ ಧರ್ಮದ ದಾಸಯ್ಯ ಈಶ್ವರನನ್ನು ಉದ್ದೇಶಿಸಿ ನೀವು ಆರಪ್ಪ ಎಂದು ಕೇಳುತ್ತಾನೆ. ನಾನು ಈಶ್ವರನು ಈ ಬೆಟ್ಟ ಹುಟ್ಟಿದ್ದಾಗ ಹುಟ್ಟಿದ್ದೇವೆ. ಅತ್ತಿಮರದ ಒಳಗೆ ನೆಲೆಗೊಂಡಿದ್ದೇವೆ ಎಂದು ಈಶ್ವರ ಉತ್ತರಿಸುತ್ತಾನೆ. ನೀವು ಏನ್ ಕೆಲ್ಸ ಮಾಡ್ತೀರಿ ಎಂದು ಕೇಳಿದ ತನ್ನ ಅವತಾರವನ್ನು ವರ್ಣಿಸಿ ಹುಲ್ಲೆ ಚರ್ಮ ಉಟ್ಕೊಂಡಿದ್ದೇನೆ. ಹುಲಿ ಚರ್ಮ ಹಾಸಿಕೊಂಡಿದ್ದೇನೆ. ತ್ರಿಶೂಲ ಇಟ್ಟಿದ್ದೇನೆ, ಶಂಕು ಜೋಳಿಗೆ ಇದೆ ಮನೆ ಒಳಗೆ ನಿಶಬ್ಧ ಅಲ್ಲಿ ನಾನಿದ್ದೇನೆ ಎಂದು ಈಶ್ವರ ಹೇಳುತ್ತಾನೆ. ಆಗ ದಾಸಯ್ಯ ನನಗೆ ಸ್ವಲ್ಪ ಜಾಗ ಕೊಡಪ್ಪ ಎಂದು ಕೇಳುತ್ತಾನೆ. ನಾನು ಇರುವುದು ಹುಟ್ಟು ಬಂಡೆ ಮೇಲೆ ನಿನಗೆಲ್ಲಿ ಜಾಗ ಕೊಡಲಿ ದಾಸಯ್ಯ ಎಂದು ಹೇಳಿದರೂ, ನಾನು ನೇಮಕೊಂಡಿದ್ದೇನೆ. ಜಾಗಟೆಯನ್ನಾದರೂ ಇಡಲು ಸ್ವಲ್ಪಜಾಗ ಕೊಡಪ್ಪ ಎಂದು ಬೇಡುತ್ತಾನೆ. ಈಶ್ವರ ಉದಾರಿ ಇಟ್ಟುಕೋ ಎಂದು ಹೇಳಿಬಿಡುತ್ತಾನೆ. ಇದ್ದನ್ನೆ ನೆಪಮಾಡಿಕೊಂಡು ದಾಸಯ್ಯ ಶಂಕವನ್ನು ಇಡುತ್ತಾನೆ. ಆಗ ಅದು ಬಾನಿನ ಆಗಲದಷ್ಟು ವಿಸ್ತರಿಸಿ, ಭೂಮಿ ಗಾತ್ರದ ಜಾಗಟೆ ತಿರುಗಿಬಿಡುತ್ತದೆ. ಇದನ್ನು ಕಂಡು ಕಂತೆ ಬೊಂತೆಯನ್ನೆಲ್ಲಾ ತೆಗೆದುಕೊಂಡು ಈಶ್ವರ ಕಡೆಯ ಕೋಡಿ ಹತ್ತಿರ ಹೊರಟು ಹೋಗುತ್ತಾನೆ. ಆಗ ದಾಸಯ್ಯ ತನ್ನ ಬುದ್ಧಿಯಿಂದ ಈಶ್ವರನನ್ನು ಮೂಲಸ್ಥಾನದಿಂದ ಓಡಿಸಿಬಿಡುತ್ತಾನೆ. ಹಾಗೂ ನಿನಗೆ ಒಂದು ಪೂಜೆಯನ್ನು ಕೊಡಿಸುತ್ತೇನೆ ಎಂದು ವಾಗ್ದಾನ ಮಾಡುತ್ತಾನೆ. ಕಡೆ ಕೋಡಿಗೆ (ಬೆಟ್ಟದ ಅಂಚು) ಹೋಗಿ ಕಪ್ಪು ಬಟ್ಟೆಯನ್ನು ಧರಿಸಿಕೊಂಡು ಈಶ್ವರ ಮೂರ್ತವಾಗುತ್ತಾನೆ.

ಈಶ್ವರನನ್ನು ಓಡಿಸಿ ತಾನು ನೆಲೆಗೊಂಡ ದಾಸಯ್ಯ 'ಕಾ' ಎಂಬ ಕಾಗೆ ಶಬ್ಧವಿಲ್ಲ. 'ಗೂ' ಎಂಬ ಗೂಗೆ ಶಬ್ಧವಿಲ್ಲ ಇಂಥ ಜಾಗದಲ್ಲಿ ಯಾರಿದ್ದರು? ಎಂದು ಒಮ್ಮೆ ಹೊರಗೆ ಬಂದು ನೋಡುತ್ತಾನೆ. ಸೋಲಿಗರ ಬೊಮ್ಮೆಗೌಡ್ನ ಏಳು ಮಂದಿ ಹೆಣ್ಣು ಮಕ್ಕಳು ಹೆಬ್ಬಿದಿರಿನ ಬೊಂಬುಗಳನ್ನು ತೆಗೆದುಕೊಂಡು ನೀರಿಗೆ ಹೋಗ್ತಾ ಇರುತ್ತಾರೆ. ಇದನ್ನು ಕಂಡು ದಾಸಯ್ಯ ಅವರ ಬಳಿ ಹೋಗುತ್ತಾನೆ. ಆಗ ಅವರು ಊರಿನಿಂದ ದಾಸಪ್ಪ ಬಂದಿದ್ದಾನೆ. ತೇರು, ತೆಪ್ಪ, ಹರಿಸೇವೆ ಯಾವತ್ತು ಎಂದು ತಿಳಿದುಕೊಳ್ಳುವ ಸಲುವಾಗಿ ದಾಸಪ್ಪನನ್ನು ಕೇಳಲು ಮುಂದಾಗುತ್ತಾರೆ. ದಾಸಪ್ಪ ಈ ಅವಕಾಶವನ್ನು ಬಳಿಸಿಕೊಂಡು ಏಳು ಜನ ಅಕ್ಕ ತಂಗಿಯರು ನನ್ನ ಎಡಬುಜ, ಬಲಭುಜ ಹಿಡಿದುಕೊಂಡು, ಕುಸ್ಮದೇವಿ ಬಂದು ನನ್ನ ಗಡ್ಡ ಹಿಡಿದುಕೊಂಡು ನನ್ನ ಗಡ್ಡದಾಗೆ ಇದೆಯಲ್ಲ ರಂಗ ಬಾವ, ತೇರು ತೆಪ್ಪ ಯಾವತ್ತು ಎಂದು ಕೇಳಬೇಕು. ಆಗ ನಾನು ತೇರು ತೆಪ್ಪವ ಹೇಳುತ್ತೇನೆ ಎಂದು ಪುಸಲಾಯಿಸುತ್ತಾನೆ. ವಯಸ್ಸಾದ ಅಜ್ಜ ಅಲ್ಲವೆ ಗಡ್ಡ ಹಿಡಿದು ಕೊಂಡರೇನು? ಭುಜ ಹಿಡಿದುಕೊಂಡರೇನು? ನಮ್ಮ ಅಜ್ಜನಂತಲ್ಲವೆ ಎಂದು ಭಾವಿಸಿ ಕುಸ್ಮದೇವಿ ಮತ್ತು ಆರು ಜನ ಅಕ್ಕತಂಗಿಯರು ದಾಸಪ್ಪನ ಭುಜ, ಗಡ್ಡ ಹಿಡಿದುಕೊಂಡಾಗ ಆತನಿಗೆ ತುಂಬಾ ಖುಷಿಯಾಗುತ್ತದೆ. ತೇರು ತೆಪ್ಪದ ವಾರವನ್ನು ತಿಳಿಸಿ ಕಳುಹಿಸುತ್ತಾನೆ.

ಈ ದಾಸಪ್ಪನಿಗೆ ಸೋಲಿಗರ ಬೊಮ್ಮೆಗೌಡನ ಕೊನೆಯ ಮಗಳಾದ ಕುಸ್ಮದೇವಿಯ ಮೇಲೆ ಮನಸ್ಸಾಗಿ ಆಕೆಯನ್ನು ಮದುವೆಯಾಗಬೇಕೆಂದು ದಾಸಯ್ಯ ಮನಸ್ಸಿನಲ್ಲಿ ತೀರ್ಮಾನ ಮಾಡಿಕೊಳ್ಳುತ್ತಾನೆ.

ಈ ದಾಸಪ್ಪ ಯಾರು ಅಂದರೆ ನಾರಾಯಣ. ತನ್ನ ಇಬ್ಬರು ಮಡದಿಯರನ್ನು ಮೇಲುಕೋಟೆಯಲ್ಲಿ ಬಿಟ್ಟು ಬಂದಿರುತ್ತಾನೆ. ಬಹುದಿನಗಳಾದರು ಮನೆಗೆ ಹೋಗಿರುವುದಿಲ್ಲ. ಅದಕ್ಕಾಗಿ ಆತನಿಗೆ ಇಬ್ಬರು ಮಡದಿಯರು ಮನವಿ ಮಾಡಿಕೊಳ್ಳುತ್ತಾರೆ. ಇಂದು ನಮ್ಮ ಮನೆಗೆ ಪಟ್ಟದ ಪಾರ್ವತಿ, ಬೆಟ್ಟದ ಚಾಮುಂಡಿ, ಸೋಸಲೆ ಹೊನ್ನಾದೇವಿ, ಮುಡುಕುತೊರೆ ಮಲ್ಲಯ್ಯ ಆತನ ಮಡದಿ ಗಂಗಾದೇವಿ ಅಲಂಕಾರ ಮಾಡಿಕೊಂಡು ತಮ್ಮ ತಮ್ಮ ಗಂಡಂದಿರ ಜೊತೆ ಬರುತ್ತಿದ್ದಾರೆ, ನೀವು ಇರಬೇಕು. ಅದಕ್ಕಾಗಿ ಹೂವು ತರಬೇಕು ಎಂದು ನಾರಾಯಣ ಅವರನ್ನು ಮಡದಿಯರು ಕೇಳುತ್ತಾರೆ. ಆಗ ಅಯ್ಯೋ ಮಡದಿಯರೇ ನಾನು ಜಗತ್ತಿನ ಇರುವೆ ಒಂಬತ್ತು ಕೋಟಿ ಜೀವರಾಶಿಗಳಿಗೆ ಅನ್ನದಾನ ನೀಡಿ ಬರಲು ಹೋಗಿದ್ದೆ ಎಂದು ಸಮಜಾಯಿಸಿ ಹೇಳುತ್ತಾನೆ.

ಆಗ ಮಡದಿಯರು ಗಂಡನಿಗೆ ಹರಸಿ ವೀಳ್ಯವ ಕೊಡುತ್ತಾರೆ. ನಾರಾಯಣ ನಾನು ನಿಮಗೆ ಜಾಲದ ಹೂವು, ತುರುಗು ಮಲ್ಲಿಗೆ ತರುತ್ತೇನೆ ಎಂದು ಖುಷಿ ಪಡಿಸುತ್ತಾನೆ. ಶ್ರೀ ತುಳಸಮ್ಮ ಮತ್ತು ಶ್ರೀ ಲಕ್ಷ್ಮೀದೇವಿಯರಿಗೆ ಬಹಳ ಸಂತೋಷವಾಗಿ ಗಂಡನನ್ನು ಹರಸಿ ವೀಳ್ಯವನ್ನು ಕೊಟ್ಟಾಗ ನಾರಾಯಣ ಹುಸಿನಗೆ ನಗುತ್ತಿದ್ದಾನೆ. ಏಯ್ ಮಡಿದಿಯರೇ, ಎಂದಾಗ ಏನಪ್ಪ ಯಜಮಾನರೇ ಎಂದ ಕೇಳುತ್ತಾರೆ ಹಾಲು ಕರೆಯಲು ಒಬ್ಬಳನ್ನು ತಂದೆ, ಹಾಲು ಕಾಯಿಸಲು ಇನ್ನೊಬ್ಬಳನ್ನು ತಂದೆ, ಈಗ ಬೆಣ್ಣೆಯನ್ನು ಕಡೆಯಲು ಸೋಲಿಗರ ಬೊಮ್ಮೆಗೌಡನ ಮಗಳನ್ನು ತರುತ್ತೇನೆ. ಅವಳನ್ನು ತರದೆ ಹೋದರೆ ನಾನು "ತೇರ ತಡಿಗ ತಿಮ್ಮಯ್ಯನಲ್ಲ, ಮೇಲುಗಿರಿಗೆ ರಂಗಯ್ಯನಲ್ಲ, ಜಗತ್ತಿಗೆ ದೊಡ್ಡವನು ನಾನಲ್ಲ" ಎಂದು ಶಪಥ ಮಾಡುತ್ತಾನೆ. ಮಡದಿಯರು ತುಂಬಾ ಚಿಂತಾಕ್ರಾಂತರಾಗುತ್ತಾರೆ. ಈ ಹಾಳಾದ ದಾಸಯ್ಯನಿಗೆ ಅರಿಸಿನಕೊಟ್ಟು ನಾವು ಮೋಸ ಹೋಗಿಬಿಟ್ಟೆವು ಎಂದು ತಮ್ಮ ಅದೃಷ್ಟವನ್ನು ಜರಿಯುತ್ತಾರೆ.

ಈ ವಿಚಾರವನ್ನು ಮಡಿದಿಯರಿಗೆ ತಿಳಿಸಿದ ತಕ್ಷಣ ನಾರಾಯಣ ಸೋಲಿಗರ ಬೊಮ್ಮೆ ಗೌಡನ ಪೋಡಿಗೆ ಹೊರಟು ಹೋಗುತ್ತಾನೆ. ಬೊಮ್ಮೆ ಗೌಡ ತುಂಬಾ ಹಳೆ ಮನುಷ್ಯ ಎಡಗಡೆ ಮೂಲೆ ಚೀಲ ಹಾಕಿಕೊಂಡು , ಬಲಗಡೆ ಗೆಜ್ಜೆದೊಣ್ಣೆ ಇಟ್ಟುಕೊಂಡು ತನ್ನ ಗುಡಿಸಲ ಮುಂದೆ ಕುಳಿತುಕೊಂಡಿದ್ದಾನೆ. ಅಲ್ಲಿಗೆ ಹೋದ ನಾರಾಯಣ ಜಾಗವನ್ನು ಕೇಳಿದ್ದಾನೆ. ಆತ ದಾಸಯ್ಯನ ಕುಲ, ನೆಲ, ಜಾತಿ ಎಲ್ಲವನ್ನು ವಿಚಾರಿಸುತ್ತಾನೆ. ಅದಕ್ಕೆ "ದಾಸಯ್ಯನಿಗೆ ಒಂದು ಕುಲ ಉಂಟಾ? ಮತ ಉಂಟಾ? ಕೊಕ್ಕರಗೆ ಬಂದು ಕೆರೆ ಉಂಟಾ? ದಾಸರಿಗೆ ಒಂದು ಊರುಂಟಾ? ದಾರಿ ತಪ್ಪಿ ಬಂದೀನಪ್ಪ" ಎನ್ನುತ್ತಾನೆ. ಏನು ಅರಿಯದ ಬೊಮ್ಮೆ ಗೌಡ ದಾಸಯ್ಯ ಹೇಳಿದ್ದೆಲ್ಲವನ್ನು ನಂಬಿ ದಾಸಯ್ಯನಿಗೆ ಸ್ವಲ್ಪ ಊಟ ಕೊಡಿ ಎಂದು ಹೇಳುತ್ತಾನೆ. ಊಟ ಆದ ಬಳಿಕ ಮಲಗಲು ಜಾಗ ನೋಡ್ತಾ ಇರುತ್ತಾನೆ ದಾಸಪ್ಪ. ಆಗ ಬೊಮ್ಮೆ ಗೌಡ ಕೋಳಿ ಗೂಡಿಗೆ ಹೋಗಿ ಮಲಗಲು ದಾಸಪ್ಪನಿಗೆ ಸೂಚಿಸುತ್ತಾನೆ. ದಾಸಯ್ಯ ಶಂಕು ಜಾಗಟೆಯನ್ನು ಇಟ್ಟ ತಕ್ಷಣ ಕೋಳಿಗಳಿಗೆಲ್ಲ ಕೂಗಲು ಆರಂಭಿಸುತ್ತವೆ. ಅಲ್ಲಿಂದ ಪಕ್ಕದ ಬಂಡಿಗೂಡಿನಲ್ಲಿ ಬೆಂಕಿಹಚ್ಚಿಕೊಂಡು ಮಲಗಲು ಹೇಳುತ್ತಾರೆ. ದಾಸಯ್ಯನಿಗೆ ಅಲ್ಲಿ ಮಲಗಲು ಇಷ್ಟವಿಲ್ಲ ಹೇಗಾದರೂ ಮಾಡಿ ಕುಸ್ಮದೇವಿ ಮಲಗಿರುವಲ್ಲಿ ಹೋಗಬೇಕೆಂದು ಒಂದು ಉಪಾಯ ಮಾಡುತ್ತಾನೆ. ತನ್ನ ಯೋಗ ಶಕ್ತಿಯಿಂದ ದಾಸಯ್ಯ ಮಳೆರಾಯನಿಗೆ ಸೂಚನೆ ಕೊಟ್ಟು ಎಂಟು ದಿಕ್ಕುಗಳಿಂದಲೂ ಕಾರು ಮಳೆಯನ್ನು ಕರೆಯುತ್ತಾನೆ. ಬೊಮ್ಮೆ ಗೌಡ ಈಸ್ಥಿತಿಯನ್ನು ಕಂಡು, ದಾಸಯ್ಯ ಸತ್ತೋಗುತ್ತಾನೆ ಎಂದು ಭಾವಿಸಿ ಕಕ್ಕೆಸೊಲ್ಲಿನ ಗುಳ್ಳಲ್ಲಿ ಮಲಗಿದ್ದ ಕುಸ್ಮದೇವಿಯ ಬೆಳ್ಳಿಸೊಪ್ಪಿನ ಮಂಚದ ಕೆಳಗೆ ಮಲಗಲು ಹೇಳುತ್ತಾನೆ. ಆಗ ಕುಸ್ಮದೇವಿ ದಾಸಪ್ಪನನ್ನು ನೋಡುತ್ತಾಳೆ ಚಂದ್ರ ಸೂರ್ಯರಂತೆ ಹೊಳೆಯುತ್ತಿದ್ದಾನೆ. ನಮ್ಮ ಸೋಲಿಗರ ಜಾತಿಯಲ್ಲಿ ಈ ತರದ ಹುಡುಗರು ಇಲ್ಲವಲ್ಲ ಎಂದು ಹೇಳಿ ಆತನನ್ನು ತನ್ನ ಮಂಚಕ್ಕೆ ಆಹ್ವಾನಿಸುತ್ತಾಳೆ. ಕೋಳಿಕೂಗಿ ಲೋಕವೆಲ್ಲಾ ಬೆಳಕಾಗಿರುವುದೆ ಗೊತ್ತಾಗಲಿಲ್ಲ. ಅಷ್ಟರೊಳಗೆ ದಾಸಪ್ಪ ಎದ್ದು ಹೊರಟು ಹೋಗಿರುತ್ತಾರೆ.

ಮರುದಿನ ದಾಸಯ್ಯ ಮತ್ತೊಂದು ರೂಪದಲ್ಲಿ ಕಾಣಿಸಿಕೊಂಡು ಬೊಮ್ಮೆ ಗೌಡ ಹೆಣ್ಣು ಮಕ್ಕಳನ್ನು ಕೈಬೀಸಿ ಕರೆಯುತ್ತಿದ್ದಾನೆ. ಆದರೆ ಅವರು ಯಾರೋ ಹಿಟ್ಟು ಕಾಣದೆ ಬಂದಿದ್ದಾನೆ ಎಂದು ಮುಂದೆ ಹೋಗುತ್ತಾರೆ. ಮತ್ತೆ ಮತ್ತೆ ಈ ದಾಸಪ್ಪ ಮುಂದೆ ಹೋಗುತ್ತಾನೆ. ಬೊಮ್ಮೆ ಗೌಡನ ಮಕ್ಕಳು ರಂಗಪ್ಪನ ತೇರು ಮುಗಿಸಿಕೊಂಡು ಹೋಗ್ತ ಇದ್ದಾರೆ. ಆಗ ಮೈಯಲ್ಲಾ ಕಜ್ಜಿ ಬರಿಸಿಕೊಂಡು ದಾಸಪ್ಪ

ಬರುತ್ತಾನೆ. ಕುಸ್ಮದೇವಿಯ ಅಕ್ಕಂದಿರು ಕೈಯಲ್ಲಿ ಕಾಸನ್ನು ಇಟ್ಟು ದಾಸಯ್ಯನಿಗೆ ಕೊಡಲು ಹೇಳುತ್ತಾರೆ. ಈಕೆಯಾದರೋ ಬಟ್ಟೆಯಿಂದ ಮೂಗನ್ನು ಮುಚ್ಚಿಕೊಂಡು ಬಂದಿಲ್ಲ ನಿನಗಾಗಿ ಬಂದಿದ್ದೇನೆ ಹೆಣ್ಣೆ ಎಂದು ಹೇಳುತ್ತಾನೆ. "ಏಯ್ ದಾಸಯ್ಯ ನೀನು ಯಾವ ಕುಲದವನು? ಯಾವ ಜಾತಿಯವನು? ಯಾವ ವಂಸದವನು?" ಎಂದು ಕೇಳುತ್ತಾಳೆ. "ನಾನು ಕ್ಷತ್ರಿಕುಲ, ಸೂರ್ಯವಂಸ, ನಾರಾಯಣ ಕುಲ" ಎಂದು ಉತ್ತರಿಸುತ್ತಾ ಸೋಲಿಗರ ಮಕ್ಕಳು ನನಗೆ ಬಾಮ್ಮೈಕ ಎನ್ನುತ್ತಾನೆ. ಈ ಮಾತನ್ನು ಕೇಳಿ ಬೊಮ್ಮೆ ಗೌಡನ ಮಕ್ಕಳಿಗೆ ಸಿಟ್ಟು ಬಂದು ದಾಸಯ್ಯನನ್ನು ಎಚ್ಚರಿಸುತ್ತಾರೆ. ಈ ಮಾತನ್ನ ನಮ್ಮ ಅಣ್ಣ ಕೇಳಿದರೆ ನಿನ್ನನ್ನು ಜೀವ ಸಹಿತ ಉಳಿಸುವುದಿಲ್ಲ ಎನ್ನುತ್ತಾರೆ. ನಿಮ್ಮ ಅಣ್ಣಂದಿರು ನನಗೆ ಬಾಮ್ಮೈಕ ಎಂದು ಮತ್ತೆ ಮತ್ತೆ ಹೇಳಿದಾಗ ಈ ದಾಸಯ್ಯನ ಕಾಟ ತಪ್ಪಿಸಿಕೊಳ್ಳಲು ತಮ್ಮ ಕುಲ ದೇವರಾದ ರಂಗಪ್ಪನಿಗೆ ಹರಕೆ ಮಾಡಿಕೊಂಡಾಗ ದಾಸಯ್ಯ ಕಣ್ಮರೆಯಾಗುತ್ತಾನೆ.

ಬೊಮ್ಮೆಗೌಡನ ಮಕ್ಕಳು ತಮ್ಮ ದೇವರ ಮಹಿಮೆಯನ್ನು ಹೊಗಳುತ್ತ ಮುಂದೆ ಸ್ವಲ್ಪ ದೂರ ಹೋಗುತ್ತಾರೆ. ಅಲ್ಲೊಬ್ಬ ದಾಸಯ್ಯ ಕಾಣಿಸಿಕೊಳ್ಳುತ್ತಾನೆ. ಓಹೋ ಇಲ್ಲೊಬ್ಬ ದಾಸಯ್ಯ ಸತ್ತೋಗಿದ್ದಾನೆ. ಜಾತ್ರೆಯಲ್ಲಿ ದೊಡ್ಡ ರೋಗ ಬಂದು ದಾಸಯ್ಯಗಳೆಲ್ಲ ಸತ್ತೋಗಿರಬಹುದು ಎಂದು ನೋಡುವಷ್ಟರಲ್ಲಿ ಕಾಡು ಪ್ರಾಣಿಗಳು ಬಂದುದರಿಂದ ಓಡಿ ಹೋಗುತ್ತರೆ. ಆಗ ಅಲ್ಲೊಬ್ಬ ದಾಸಯ್ಯ ಪ್ರತ್ಯಕ್ಷನಾಗಿ ಸೋಲಿಗರ ಬೊಮ್ಮೆಗೌಡನ ಮಕ್ಕಳು ಬಹಳ ಸತ್ಯವಂತರು ದರ್ಮವುಳ್ಳ ಜನ ಎಂದು ಹೇಳ್ತಾ ಇದ್ದರು ಅದಕ್ಕೆ ಬಂದೀನವ್ವ ಸ್ವಲ್ಪ ಪೋಡಿಗೆ ಸೇರಿಸಿ ಬಿಡಿರವ್ವ ಎಂದು ಬೇಡುತ್ತಾನೆ. ದಾಸಯ್ಯ ಪೋಡಿಗೆ ಬಂದಾಗ ಬೊಮ್ಮೆಗೌಡ ಈ ದಾಸಯ್ಯನಿಗೆ ಊಟ ಕೊಟ್ಟು ಕರೆದು ಕೊಂಡೋಗಿ ಕೃಷ್ಣನ ಕಟ್ಟೆಯ ಹತ್ತಿರ ಬಿಟ್ಟು ಬನ್ನಿ ಎಂದು ಹೇಳುತ್ತಾನೆ ಬೊಮ್ಮೆಗೌಡನ ಮಕ್ಕಳು ಅರಿಕೋಲನ್ನು ತೆಗೆದುಗೊಂಡು ಗೆಡ್ಡೆ ಗೆಣಸು ತರಲು ಹೊರಡುತ್ತಾರೆ. ಅಲ್ಲೊಬ್ಬ ದಾಸಯ್ಯ ಕಾಣಿಸಕೊಳ್ಳುತ್ತಾನೆ. ಇವರು ತಿರುಪತಿಯಿಂದ ಬಂದವರು, ಇವರ ಪಾದ ಹಿಡಿದು ಮುಂದೆ ಹೋದರೆ ಗೆಡ್ಡೆ ಗೆಣಸು ಸಿಗುತ್ತೆ ಎಂದು ಕೈ ಮುಗಿದರು. ದಾಸಯ್ಯನಿಗೆ ಈಶ್ವರನ ಕಟ್ಟೆಗೆ ಹೋಗಲು ಹೇಳಿದ ತಕ್ಷಣ ದಾಸಯ್ಯ ತೂರಾಡುತ್ತ ಹೋಗುತ್ತಾರೆ. ಅಷ್ಟರಲ್ಲಿ ಬೊಮ್ಮೆಗೌಡನ ಮಕ್ಕಳು ಕೋಲುಜೇನು ಕಿತ್ತರು. ಕುಸ್ಮದೇವಿ ಎಂಟು ಜೊನ್ನಿಯನ್ನು ಹೊಲಿಯಲು ಹೇಳುತ್ತಾಳೆ. ನಾವಿರುವುದು ಏಳು ಜನ ಎಂಟು ಜೊನ್ನಿ ಏಕೆ? ಎಂದು ಅಕ್ಕಂದಿರು ಪ್ರಶ್ನಿಸುತ್ತಾರೆ. ಆಗ ಕುಸ್ಮದೇವಿ ಒಂದು ಜೊನ್ನಿ ಮೀಸಲು ತೆಗೆದು ಇರಿಸಲು ಹೇಳಿದಾಗ ಕಜ್ಜನಾತದ ಒಬ್ಬ ದಾಸಯ್ಯ ನಡುಗುತ್ತ ಹಾಜರಾಗುತ್ತಾನೆ. ಏಯ್ ದಾಸಯ್ಯ ಹತ್ತಿರ ಬರಬೇಡ ಎಂದು ಯಾರು ಮುಂದೆ ಹೋಗುವುದಿಲ್ಲ. ಕೊನೆಯಲ್ಲಿ ಕುಸ್ಮದೇವಿ ಕೈಯಲ್ಲಿ ಜೇನಿನ ಜೊನ್ನಿಯನ್ನು ಕೊಟ್ಟು ದಾಸಯ್ಯನಿಗೆ ನೀಡಲು ಹೇಳುತ್ತಾರೆ. ಈಕೆಯಾದರು ಮೂಗಿಗೆ ಬಟ್ಟೆ ಮುಚ್ಚಿಕೊಂಡು ಕೊಡುತ್ತಾಳೆ.

ಪುನಃ ಬೊಮ್ಮೆಗೌಡನ ಮಕ್ಕಳು ಗೆಡ್ಡೆ ಗೆಣಸು ಕೀಳುತ್ತಾರೆ. ದಾಸಯ್ಯ ಮರದ ಮೇಲೆ ಕುಳಿತುಕೊಂಡು ಸನ್ನೆ ಮಾಡುತ್ತಿರುತ್ತಾನೆ. ಮುಳ್ಳು ಗೆಣಸು, ತಾವರೆ ಗೆಡ್ಡೆ ಸಂಗ್ರಹಿಸಿ ತಲೆ ಮೇಲೆ ಹೊತ್ತುಕೊಂಡು ಮನೆಗೆ ಹೊರಡುತ್ತಾರೆ. ಆದರೆ ಕುಸ್ಮದೇವಿ ಗೆಡ್ಡೆ ಗೆಣಸಿನ ಹೊರೆಯನ್ನು ಎತ್ತಲಾರದೆ ಪರದಾಡುತ್ತಿರುವಾಗ ದಾಸಯ್ಯನನ್ನು ಕಂಡು ಹೊರೆಯನ್ನು ತಲೆಗೆ ಎತ್ತಿಕೊಡಲು ಕೇಳುತ್ತಾಳೆ. ಆ ಕೆಲಸ ಮಾಡಿದರೆ ನೀನು ನನಗೆ ಏನಾಗುತ್ತಿಯೆ? ಎಂದು ಪ್ರಶ್ನಿಸುತ್ತಾನೆ. ಮಗಳಾಗುತ್ತೇನೆ, ತಂಗಿಯಾಗುತ್ತೇನೆ, ತಾಯಿಯಾಗುತ್ತೇನೆ ಎಂದು ಹೇಳಿದರು ಕೇಳುವುದಿಲ್ಲ. ಕೊನೆಗೆ ಪರಿಸ್ಥಿತಿಯನ್ನು ವಿಚಾರ ಮಾಡಿ ಸಧ್ಯ ಈ ತೊಂದರೆಯಿಂದ ಪಾರಾದರೆ ಸಾಕೆಂದು ಮಡದಿ ಆಗುತ್ತೆನೆ ಎಂದು ಹೇಳಿಬಿಡುತ್ತಾಳೆ. ಆಗ ಗೆಣಸಿನ ಹೊರೆಯನ್ನು ತಲೆ ಮೇಲಿರಿಸಿತ್ತಾನೆ. ನೇತ್ರ ಕಾಣುವುದಿಲ್ಲವೆಂದು ತಾನು ಹೊರೆಯ ಮೇಲೆ ಕೂರುತ್ತೆನೆ. ನನ್ನನ್ನು ಪೋಡಿಗೆ ತಲುಪಿಸಿಬಿಡು ಎಂದು ಕೇಳುತ್ತನೆ. ಅಷ್ಟರಲ್ಲಿ ಕಾರೆಂಬ ಕತ್ತಲು, ಬೋರೆಂಬ ಮಳೆ ಬಂತು 'ಕಾ' ಎಂಬ ಕಾಗೆ ಸಬ್ದವಿಲ್ಲ. 'ಗೂ' ಎಂಬ ಗೂಗೆ ಶಬ್ದವಿಲ್ಲ. ದಾಸಯ್ಯ ಕುಸ್ಮದೇವಿಯನ್ನು ಕನಕದಾಸರ ಗವಿಗೆ ಕರೆದುಕೊಂಡು ಹೋಗುತ್ತಾನೆ. ಗವಿಯಲ್ಲಿ ಕಾರಾಚಿ ಹುಲ್ಲಿನ ಹಾಸಿಗೆ ಮಾಡಿ ಶಂಕ-ಚಕ್ರವನ್ನು ಎಡಗಡೆ ಬಲಗಡೆ ಕಾವಲಿಡುತ್ತಾನೆ.

ಬೊಮ್ಮೆಗೌಡನಿಗೆ ಕುಸ್ಮ ದೇವಿ ಬಾರದೆ ಇದ್ದುದನ್ನು ನೋಡಿ ಗಾಬರಿಯಾಗಿ ಎಲ್ಲಿ ಬಿಟ್ಟು ಬಂದಿದ್ದೀರಿ ಎಂದು ಉಳಿದ ಮಕ್ಕಳನ್ನು ಕೇಳುತ್ತಾನೆ. ಆರು ಜನ ಗುಡ್ಡದಲ್ಲಿ ಬಿಟ್ಟೀವಪ್ಪ ಎನ್ನುತ್ತಾರೆ. ತಕ್ಷಣ ಕವಡೆ ಶಾಸ್ತ್ರ ಕೇಳಿದಾಗ ಕುಸ್ಮ ದೇವಿ ದಾಸಯ್ಯನ ವಶವಾಗಿದ್ದಾಳೆ. ಯಾವುದೇ ಅಪಾಯವಿಲ್ಲ ಎಂದು ಬರುತ್ತದೆ. ಬೊಮ್ಮೆಗೌಡ ಯೋಚನೆ ಮಾಡುತ್ತ ಕೃಷ್ಣನ ಕಟ್ಟೆಯ ಬಳಿ ಹೋಗುತ್ತಿದ್ದಾಗ ಆ ಕಡೆಯಿಂದ ದಾಸಯ್ಯನೇ ಕೃಷ್ಣಪ್ಪನ ರೂಪದಲ್ಲಿ ಬರುತ್ತಿರುತ್ತಾನೆ. ಆಗ ಬೊಮ್ಮೆಗೌಡ ಕೃಷ್ಣಪ್ಪನನ್ನು ಕಂಡು ಬಹಳ

ಸಂತೋಷವಾಗಿ ನಿಮ್ಮ ಹತ್ತಿರವೇ ಬರುತ್ತಿದ್ದೇ, ಅಷ್ಟರಲ್ಲಿ ನೀವೇ ಸಿಕ್ಕಿದ್ದೀರಾ! ನನ್ನ ಮಗ ಕುಸ್ಮದೇವಿ ಹೋಗಿ ಮೂರು ದಿನವಾಯ್ತು ಒಂದು ಪಗಡೆ ಶಾಸ್ತ್ರ ನೋಡಿ ಎಂದು ಕೇಳುತ್ತಾನೆ. ಈ ಶಾಸ್ತ್ರದಲ್ಲೂ ಸಹ ಅದೇ ಹೇಳಿಕೆ ಬಂತು. ಕನಕದಾಸರ ಗವಿಯಲ್ಲಿ ಇದ್ದಾಳೆ ಎಂದು ತಿಳಿದು ಅಲ್ಲಿ ಹೋಗಿ ನೋಡುತ್ತಾರೆ. ಹೊರಗೆ ಬೆಂಕಿ ಉರಿಯುತ್ತಿದೆ. ಒಳಗೆ ಹಾಸಿಗೆ ಹಾಸಿತ್ತು. ಓಹೋ ಯಾರೋ ಒಬ್ಬ ಕಳ್ಳ ಕರೆದುಕೊಂಡು ಹೋಗಿದ್ದಾನೆ ತುಂಡು ದೊಣ್ಣೆಯ ತೆಗೆದುಕೊಂಡು ಕುಸ್ಮ ದೇವಿ ಹೆಜ್ಜೆಯ ಗುರುತನ್ನು ನೋಡುತ್ತಾರೆ. ಹಜ್ಜೆ ಅಳತೆ ತೆಗೆದುಕೊಂಡು ಬರುತ್ತಾರೆ. ಮುಂದೆ ಆರುವರ ಗವಿಗೆ ಹೋದಾಗ ಕುಸ್ಮ ದೇವಿ ನಾರಾಯಣನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ಹೇನು-ಸೀರು ನೋಡುತ್ತಿದ್ದಾಳೆ. ಬೊಮ್ಮೆಗೌಡ ಅವರನ್ನು ಕಂಡುಬಿಟ್ಟ. ನೀನು ಯಾರಯ್ಯ ನನ್ನ ಮಗಳನ್ನು ತಂದದು ಯಾಕೆ? ಎಂದು ಕೇಳುತ್ತಾನೆ. ನಾನು ಬೊಮ್ಮ ಮಾವ ಎನ್ನುತ್ತಾನೆ ದಾಸಯ್ಯ. ಬೊಮ್ಮೆಗೌಡನಿಗೆ ಸಿಟ್ಟು ಬಂದು ನೀನು ಯಾರು? ಯಾವ ಕುಲದವನು? ಎಂದು ಬಯ್ಯತ್ತಾ ತನ್ನ ಮಗಳನ್ನು ಉದ್ದೇಶಿಸಿ ಈ ದಾಸಯ್ಯ ವೇಷ ನೋಡಿ ಬಂದಿಯಲ್ಲ. ಬುದ್ಧಿ ಇದೆಯಾ ಎಂದು ಕೇಳುತ್ತಾನೆ.

ಇದ್ಯಾವುದಕ್ಕೂ ಬೇಸರ ಮಾಡಿಕೊಳ್ಳದೆ ದಾಸಯ್ಯ ಹೇಳುತ್ತಾನೆ. ಬೊಮ್ಮ ಮಾವ ನಿನಗೆ ಕರುವನ್ನು ಕಟ್ಟಲು ಕೂಲಿ ಆಳನ್ನು ಇಡುತ್ತೆನೆ. ರಾಗಿ ಬೀಸಲು ಚಿನ್ನದ ಗೂಟವನ್ನು ಕೊಡುತ್ತೇನೆ. ನಿನ್ನ ಮಕ್ಕಳಿಗೆಲ್ಲ ಬೇಕಾದ ಊಟ ಕೊಡಿಸುತ್ತೇನೆ ಎಂದು ಪುಸಲಾಯಿಸುತ್ತಾನೆ. ಕುಲ, ಜಾತಿಯನ್ನು ವಿಚಾರಿಸಿ ಕೊನೆಗೆ ಹೆಣ್ಣಿನ ತೆರವನ್ನು ಕೊಟ್ಟು ಬಿಡಯ್ಯ ದಾಸಯ್ಯ ಎಂದು ಕೇಳಿದಾಗ ಹನ್ನೆರಡು ಕೊಂಗ ತುಂಬ ಚಿನ್ನದ ರೂಪಾಯಿಗಳನ್ನು ಕೊಡುತ್ತಾನೆ. ಆದರೆ ದಡ್ಡ ಬೊಮ್ಮೆಗೌಡ ಮೇಲುಗಿರಿಯಲ್ಲಿ ನಿಂತು ಕೊಂಗದ ರೂಪಾಯಿಯನ್ನು ಗಾಳಿಗೆ ತೂರಿ ಬಿಡುತ್ತಾನೆ. ಎಲ್ಲವೂ ಹೋಗಿ ಆತನ ಕೈಗೆ ಹನ್ನೆರಡುವರೆ ರೂಪಾಯಿ ಮಾತ್ರ ಸಿಗುತ್ತದೆ ದಾಸಯ್ಯ ಬೊಮ್ಮೆಗೌಡನಿಗೆ ಕೊಟ್ಟಿದ್ದ ತೆರ ಹಣದ ಬದಲು 'ಮೂರು ವರುಷಕ್ಕೊಂದು ಪೋಡಾಗಲಿ, ಮೂರು ವರ್ಷ ತುಂಬಿದ ಮೇಲೆ ದಬ್ಬೆ ಹುಲ್ಲು ಬೆಳೆಯಲಿ, ಹಿಂದೆ ಎತ್ತಾಗಿ ಗಂಡು ಬಳಿಯಾಗಿ ಅನ್ನ ಬಟ್ಟೆಗೆ ತಿರಿರಂತೆ, ಏಳು ಕೋಟೆ ಬಂಗಾರಕ್ಕೆ ನೀನೆ ಕಾವಲು, ನನ್ನ ಮೇಲುಗಿರಿಗೆ ನೀನು ಬರಬೇಕು. ನನ್ನ ಮಾವ ನೀನು, ನೀವು ಬಾವ ಬಾಮೈಕ ಎಂದು ಮಾತು ಅಂತೆ'. ಎಂದು ಶಾಪ ಕೊಡುತ್ತಾನೆ.

ಇತ್ತ ಕಡೆ ಶ್ರೀ ತುಳಸಮ್ಮ ಮತ್ತು ಶ್ರೀ ಲಕ್ಷ್ಮೀದೇವಿ ನಾರಾಯಣನ ಮಡದಿಯರು ಗಂಡ ಮೂರು ತಿಂಗಳಾದರು ಬರಲಿಲ್ಲ ಎಂದು ಹುಡುಕಾಟ ಆರಂಭಿಸುತ್ತಾರೆ. ಅವರು ಸೋಲಿಗರ ಬೊಮ್ಮೆಗೌಡನ ಮಗಳ ಹಿಂದೆ ಹೋಗಿದ್ದಾನೆ ಎಂದು ಸಂಶಯ ಪಡುತ್ತಾರೆ. ಗಂಡನನ್ನು ಉದ್ದೇಶಿಸಿ ನೀನು ಎಲ್ಲಿ ಹೋಗ್ತಿಯಾ ಎಂದು ಕೇಳುತ್ತಾರೆ. ಅದಕ್ಕೆ ನಾರಾಯಣ ನಾನು ಜಗತ್ತಿನ ಇರೊಂಬತ್ತು ಕೋಟಿ ಜೀವರಾಶಿಗೂ ಅನ್ನದಾನ ಮಾಡಲು ಹೋಗುತ್ತೇನೆ ಎಂದು ತಪ್ಪಿಸಿಕೊಳ್ಳುತ್ತಾನೆ. ಮಡದಿಯರು ಒಪ್ಪಿಗೆ ಸೂಚಿಸಿ ಹೋಗಿ ಬನ್ನಿ ಎಂದು ಕಳುಹಿಸುತ್ತಾರೆ. ಬಳಿಕ ಅಕ್ಕ-ತಂಗಿಯರು ಒಂದು ಉಪಾಯ ಮಾಡುತ್ತಾರೆ. ಒಂದೊಂದು ಸುಣ್ಣಕಾಯಿ ಡಬ್ಬಿಯನ್ನು ತೆಗೆದುಕೊಂಡು ಅದರಲ್ಲಿ ಒಂದೊಂದು ಇರುವೆಯನ್ನು ಒಳಗಿಟ್ಟು ಮುಚ್ಚುತ್ತಾರೆ. ಡಬ್ಬಗಳನ್ನು ನಡುವಿನ ಬಳಿ ಸೀರೆ ಗಂಟಿನಲ್ಲಿ ಸೇರಿಸಿಕೊಳ್ಳುತ್ತಾರೆ. ಆಗ ನಾರಾಯಣ ತನ್ನ ಕರ್ತವ್ಯವನ್ನು ಮುಗಿಸಿ ಬಂದು ಸುಸ್ತಾಗಿ ಕುಳಿತ್ತಿದ್ದಾನೆ. ಮಡದಿಯರು ಒಬ್ಬರನ್ನೊಬ್ಬರು ನೋಡಿ ಹುಸಿನಗೆ ನಗುತ್ತಿದ್ದಾರೆ. ತನ್ನ ಮಡದಿಯರ ಸಂಚನ್ನು ಮೊದಲೇ ತಿಳಿದು ಕೊಂಡಿರುತ್ತಾನೆ. ಇವರು ಸುಣ್ಣ ಕಾಯಿ ಡಬ್ಬ ತೆಗೆದುನೋಡಿದಾಗ ಆ ಇರುವೆಗಳ ಬಾಯಲ್ಲಿ ಬತ್ತ, ರಾಗಿ ಇರುವುದನ್ನು ನೋಡಿ ಪೆಚ್ಚಾಗುತ್ತಾರೆ. ತನ್ನ ಗಂಡನ ಮಹಿಮೆಯನ್ನು ಕೊಂಡಾಡುತ್ತಾರೆ. ಹಾಗೆಯೇ ಈ ದಿನ ನೀನು ಎಲ್ಲೂ ಹೋಗಬಾರದು ನಮ್ಮ ಜೊತೆಯಲ್ಲೇ ಇರಬೇಕು ಎಂದು ಹಠ ಹಿಡಿಯುತ್ತಾರೆ. ಆದರೆ ನಾರಾಯಣ ತನ್ನ ಮಡದಿಯರಿಗೆ ಮಾಯದ ನಿದ್ದೆಯನ್ನು ಕೊಟ್ಟು ತನ್ನ ಬದಲು ಕಟ್ಟಿಗೆಯಿಂದ ಮಾಡಿದ ಬೊಂಬೆಯೊಂದನ್ನು ಮಧ್ಯೆ ಮಲಗಿಸಿ ಪಾರಾಗುತ್ತಾನೆ.

ಮಡದಿಯರು ನಿದ್ದೆ ಮಾಡುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಂಡು ನಾರಾಯಣ ಬೊಮ್ಮೆಗೌಡನ ಪೋಡಿಗೆ ಬಂದಿದಾನೆ. ಕುಸ್ಮದೇವಿ ನನ್ನ ವಶ ಆಗುವಂತೆ ಮಾಡಪ್ಪ ಎಂದು ಮುಡುಕುತೊರೆ ಮಲ್ಲಪ್ಪನಿಗೆ ಕಾಣಿಕೆ ಕಟ್ಟಿದ್ದಾನೆ. ನಂಜುಂಡೇಶ್ವರ ತೇರಿಗೆ ಗಂಡನಪ್ಪ ಪಟ್ಟದ ಪಾರ್ವತಿ ಬೆಟ್ಟದ ಚಾಮುಂಡಿ ನಿನ್ನ ಕೈವಶ ಆಗಿದ್ದಾರೆ ಹಾಗೆಯೆ ಬೊಮ್ಮೆಗೌಡನ ಮಗಳು ನನ್ನ ಕೈವಶ ಆಗುವಂತೆ ಮಾಡಿಕೊಡಪ್ಪ ಎಂದು ಅಕ್ಕಿ ಕಾಣಿಕೆಯನ್ನು ಕಟ್ಟುತ್ತಾನೆ. ಬಳಿಕ ಮೂಡಲ ಮಲೆಯನ್ನು ನೋಡಿ ಮಾದಪ್ಪ ಸಾನೆ

ಮಾಯ್ಕಾರ ಇವನ ಮುಂದೆ ಯಾರು ಇಲ್ಲ. ಹಿಂದಾಗಲಿ, ಮುಂದಾಗಲಿ, ಎಂದು ಅವನಿಗೊಂದು ಕಾಣಿಕೆಯನ್ನು ಕಟ್ಟುತ್ತಾನೆ. ಮೈಸೂರು ಮಠಮನೆ ಲಿಂಗಕ್ಕೆ ಕೊಳಗ ಧರಿಸಬೇಕು ಎಂದು ಹರಕೆ ಹೊರುತ್ತಾನೆ.

ಇತ್ತ ಕಡೆ ನಾರಾಯಣನ ಮಡದಿಯರು ಬೆಳಿಗ್ಗೆ ಎದ್ದು ನೋಡಿದಾಗ ಗಂಡ ಕದ್ದು ಹೊರಟು ಹೋಗಿದ್ದಾನೆ. ಆಗ ಎಲ್ಲೋ ನಾರಾಯಣ ಸತ್ತು ಹೋಗಿರಬೇಕು ಎಂದು ಭಾವಿಸಿ ಹುಡುಕಲು ಹನುಮಂತನಿಗೆ ಹೇಳುತ್ತಾರೆ. ಪೋಡೆಲ್ಲಾ ಹುಡುಕಿಸಿದರು ನಾರಾಯಣ ಸಿಗುವುದಿಲ್ಲ. ಆದರೆ ಬೊಮ್ಮೆಗೌಡನ ಮಗಳು ಕುಸ್ಮದೇವಿಯೊಂದಿಗೆ ಹೊರಟು ಹೋಗಿದ್ದಾನೆ. ಮೇಲುಗಿರಿಗೆ (ಮೇಲುಕೋಟೆ) ಬಂದ ಭಕ್ತರು ಎಲ್ಲಿ ಹೋಗಬೆಕು? ಏನು ಮಾಡಬೇಕು? ಎಂದು ಇಬ್ಬರು ಮಡದಿಯರು ಚಿಂತೆ ಮಾಡುತ್ತಿದ್ದಾರೆ. ಹನುಮಂತ ನಾರಾಯಣ ಹೋಗುತ್ತಿದ್ದ ಎಲ್ಲಾ ಸ್ಥಳಗಳಲ್ಲೂ ಹುಡುಕುತ್ತಾನೆ. ಕೊನೆಗೆ ತೀರ್ಥಹಳ್ಳಿಯಲ್ಲಿ ನಾರಾಯಣ ಸಿಕ್ಕುತ್ತಾನೆ. ಆಗ ನಾರಾಯಣ ನನಗೆ ಹಿಂದಾ-ಮುಂದಾ (ವಾಂತಿ ಭೇದಿ) ಆಗಿದೆ ಎಂದು ಹೇಳಿ ಬಿದಿರ ಅಕ್ಕಿ ಪಾಯಸ ಮಾಡಿಕೊಂಡು ಬರುವಂತೆ ತಿಳಿಸಲು ಹನುಮಂತನಿಗೆ ಹೇಳುತ್ತಾನೆ. ಗಾಬರಿಗೊಂಡು ತಕ್ಷಣ ಬಿದಿರ ಅಕ್ಕಿ ಪಾಯಸ ಮಾಡಿಕೊಂಡು ಮಡದಿಯರು ಮೇಲುಗಿರಿಗೆ ಬಂದಾಗ ಅಲ್ಲಿ ನಾರಾಯಣ ಇರುವುದಿಲ್ಲ. ಹುಡುಕಾಡುತ್ತಾ ದೊಡ್ಡ ಸಂಪಿಗೆಗೆ ಹೋಗುತ್ತಾರೆ. ಕೊನೆಯಲ್ಲಿ ನಾರಾಯಣ ನೇರಿಕೊಡೆಯಲ್ಲಿ ಇರುತ್ತಾನೆ. ಆತನ ಮಡದಿಯರು ಗಂಡನಾದ ನಾರಾಯಣನನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ನಾನು ಬೆಳ್ಳಿ ಬೆಟ್ಟಕ್ಕೆ ಬಿಳಿ ಸೀಗೆಕಾಯಿ ತರುವ ಸಲುವಾಗಿ ಬಂದೆ. ಆದರೆ ಇಲ್ಲಿ ಸೋಲಿಗರ ಬೊಮ್ಮೆಗೌಡನ ಮಗಳ ಮುಖ ನೋಡಿ ಮರುಳಾಗಿ ಇಲ್ಲಿ ತಿಮ್ಮಯ್ಯನಾಗಿ ಮೇಲುಗಿರಿ ರಂಗಯ್ಯನಾಗಿ ಸೋಲಿಗರ ಬಂಧುಗಳಿಗೆಲ್ಲಾ ಬಾವನಾಗಿದ್ದಾನೆ ಎಂದು ಹೇಳುತ್ತಾನೆ.

ಇತ್ತ ನಾರಾಯಣ ಮಡದಿಯರು ಬೇಸರಗೊಂಡು ನಾರಾಯಣನ ಸಹವಾಸವೇ ಬೇಡ, ವೈದಿಕ ಮಾಡಬೇಕೆಂದು ದಾಸಯ್ಯಗಳನ್ನು ಹುಡುಕುತ್ತಿರುತ್ತಾರೆ. ಆಗ ಮೇಲುಗಿರಿಯ ಕೃಷ್ಣನ ಕಟ್ಟೆಯಲ್ಲಿ ನಾರಾಯಣ ದಾಸಯ್ಯನ ವೇಷದಲ್ಲಿ ಸಿಕ್ಕುತ್ತಾನೆ. ಆಗ ಆ ಹೆಣ್ಣುಮಕ್ಕಳನ್ನು ಉದ್ದೇಶಿಸಿ ನೀವು ಮುಂದೆ ನಡೆಯಿರಿ ನಾನು ಹಿಂದೆ ಬರುತ್ತೇನೆ ಎಂದು ಹೇಳುತ್ತಾನೆ. ಈ ಮುದುಕ ದಾಸಯ್ಯನನ್ನು ನಂಬಲು ಆಗುವುದಿಲ್ಲ. ಬರುತ್ತೇನೆಂದು ಹೇಳಿ ಎಲ್ಲಿಯಾದರೂ ಹೊರಟು ಹೋದರೆ ಕಷ್ಟ ಎಂದು ಭಾವಿಸಿ ಜೊತೆಯಲ್ಲಿ ಬಾ ದಾಸಯ್ಯ ಎಂದು ಹೊರಡುತ್ತಾರೆ. ಜೊತೆಗೆ ಬರುತ್ತಿರುವಾಗಲೇ ನಾರಾಯಣ ಅವರು ಕುಂಬಾರ ದೇವಪ್ಪನ ಕೊಳದ ಬಳಿ ಬಂದು ಕುಳಿತ್ತಿದ್ದಾರೆ. ಕೊನೆಗೆ ವೈರು ಮುಡಿಯಲ್ಲಿ ಅನ್ನ - ಬೇಳೆ - ಪಾಯ್ಸ ಎಲ್ಲಾ ಮಾಡಿ ದಾಸೋಹಕ್ಕೆ ಸಿದ್ದಪಡಿಸಿದ್ದಾರೆ. ದಾಸಯ್ಯನನ್ನು ಪೂಜೆಗೆ ಕರೆದರು. ನಾರಾಯಣ ದಾಸಯ್ನ ವೇಷದ ಇರೊಂಬತ್ ಕೋಟಿ ಜೀವರಾಶಿಗಳನ್ನೆಲ್ಲಾ ಕರೆಯುತ್ತಾರೆ. ಆಗ ಮಾಡಿದ್ದ ಅಡುಗೆಯಲ್ಲಾ ಮುಗಿದು ಹೋಯಿತು. ಆಗ ತನ್ನ ಮಡದಿಯರನ್ನು ಕುರಿತು ಹೇಳುತ್ತಾನೆ. ನನ್ನ ವೈದಿಕ ಮಾಡಬೇಕಾದರೆ ನೀವು ಎಂತವರಾಗಿರಬೇಕು. ಈ ರೀತಿ ನೀವು ಮಾಡಬೇಕಾದರೆ ನಾನು ಸೃಷ್ಟಿ ಮಾಡಿರುವ ಎಲ್ಲಾ ಜೀವರಾಶಿಗಳಿಗೂ ಅನ್ನದಾನ ಮಾಡಬೇಕು ಎಂದು ಹೇಳುತ್ತಾನೆ. ಅಂದಿನಿಂದ ನಾರಾಯಣ ವರ್ಷಕ್ಕೊಂದು ದಿನ ವೈಕುಂಠ ಸೇರುತ್ತಾರೆ. ಅಂದು ಸಂಕ್ರಾಂತಿ ಸ್ವರ್ಗದ ಬಾಗಿಲು ತೆರದಿರುತ್ತದೆ ಎಂದು ನಂಬುತ್ತಾರೆ.

ಇತ್ತ ದಾಸಯ್ಯ ಬೊಮ್ಮೆಗೌಡನ ಪೋಡಿಗೆ ಬಂದು ಬಹಳ ಖುಷಿಯಿಂದ ಕುಣಿಯುತ್ತಿದ್ದಾನೆ. ಬೊಮ್ಮೆಗೌಡ ಯಾಕೆ ದಾಸಯ್ಯ ಇಷ್ಟೊಂದ್ ಸಂಪತ್ತು ಪಡುತಿದ್ದಿಯಾ ಏನಾಯ್ತು ನಾನ್ ನೋಡಿದರೆ ನನ್ನ ಮಗಳನ್ನು ಕಳೆದುಕೊಂಡು ದುಃಖ ಪಡುತ್ತಿದ್ದೇನೆ ಎನ್ನುತ್ತಾನೆ. ಅಯ್ಯಯೋ ನನಗೆ ಕುಸ್ಮದೇವಿಯನ್ನೇ ಬಿಕ್ಸೇ ಕೊಡಪ್ಪಾ ನಿನಗೆ ಬಾಳ ಪುಣ್ಯ ಬರುತ್ತೆ ಎನ್ನುತ್ತಾನೆ ದಾಸಯ್ಯ. ಬೊಮ್ಮೆಗೌಡನ ಮನೆಯವರಿಗೆಲ್ಲಾ ಬಹಳ ದುಃಖವಾಗುತ್ತದೆ. ದಾಸಪ್ಪನು ಕುಸ್ಮದೇವಿಯನ್ನು ಕೇಳುತ್ತಿದ್ದಾನಲ್ಲ ಎಂದು ಚಿಂತಾಕ್ರಾಂತನಾಗುತ್ತಾರೆ. ಆಗ ಗಂಗಾಧರನ (ಈಶ್ವರನ ದೇವಸ್ಥಾನ) ಗುಡಿಗೆ ಹೋಗಿ ಕೊಳದಲ್ಲಿ ತಣ್ಣೀರು ಸ್ನಾನ ಮಾಡಿ ಮನೆದೇವರಾದ ಮಾದಪ್ಪನನ್ನು ನೆನೆದು ಅಯ್ಯೋ ಮಕ್ಕಳ ಫಲ ನೀಡೋದು ನೀನು, ಕಿತ್ತುಕೊಳ್ಳುವವನು ನೀನು, ಈಗ ನಾನೊಂದು ವರ ಕೇಳ್ತೇನೆ ನನಗೆ ಪ್ರಸಾದ ಕೊಡು ಎಂದು ಬೇಡುತ್ತಾನೆ. ಆಗ ಎಡಗಡೆಯಿಂದ ಪ್ರಸಾದ ಬರುತ್ತದೆ. ದಾಸಯ್ಯನ ವೇಷದ ನಾರಾಯಣ ಅಲ್ಲಿಯು ಬಂದು ನಿಂತು ಹೇಳುತ್ತಿದ್ದಾನೆ. ನೋಡಪ್ಪಾ ನಿನ್ನ ಮಗಳು ದಾಸಯ್ಯನ ವಶವಾಗಿದ್ದಾಳೆ. ಮೇಲುಗಿರಿಯಿಂದ ಹೋಗಬೇಕು ಎಂದಾಗ ಮಳ್ಳಿ ಒಡ್ಡಿಗೆ ಹೋದರೆ ಅಲ್ಲಿ ಇದ್ದಾರೆ ಎಂದಾಗ ಆ ಮಾತನ್ನು ಕೇಳಿ ಬೊಮ್ಮೆಗೌಡನಿಗೆ ಸಂತೋಷವಾಯಿತು. ಓಹೋ ದೇವರು ಹೇಳೋ ಮಾತು ಸತ್ಯ ಎಂದು ತನ್ನ ಗಂಡು ಮಕ್ಕಳನ್ನೆಲ್ಲಾ ಕರೆದುಕೊಂಡು ಮಳ್ಳಿ ಒಡ್ಡಿಗೆ

ಹೋಗುತ್ತಾರೆ. ಅಲ್ಲಿ ದಾಸಯ್ಯನ ಹತ್ತಿರ ಕುಸ್ಮದೇವಿ ಇರುತ್ತಾಳೆ. ಏಯ್ ದಾಸಯ್ಯ ತಿರಿದು ತಿನ್ನೋದನ್ನು ಬಿಟ್ಟು ನನ್ನ ಮಗಳನ್ನು ಕರೆದುಕೊಂಡು ಬಂದಿದ್ದೀಯಾ ಎಂದು ಹೆದರಿಸುತ್ತಾರೆ. ಆಗ ದಾಸಯ್ಯ ಇಲ್ಲ ಬೊಮ್ಮೆಗೌಡ ಕುಸ್ಮದೇವಿ ಕಾಡಿನ ಒಳಗೆ ಬರುತ್ತಿದ್ದಳು. ಕರೆದುಕೊಂಡು ಬಂದೆ. ನಿನ್ನ ಮಗಳು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾನೆ.

ಬೊಮ್ಮೆಗೌಡ ಮಗಳನ್ನು ಉದ್ದೇಶಿಸಿ ನಿನ್ನ ಮುಖ ನಾ ನೋಡುವುದಿಲ್ಲ. ನನ್ನ ಮುಖ ನೀನು ನೋಡಬೇಡ. ನೀನು ದಾಸಯ್ಯನ ವಾಸ ಆಗಿದ್ದೀಯಾ. ನೀನು ಸತ್ತರೂ, ಕೆಟ್ಟರೂ, ನಮಗೆ ಬೇಕಿಲ್ಲಾ ಎಂದು ತಿರಸ್ಕರಿಸುತ್ತಾನೆ. ಜಾತಿಯಲ್ಲಿ ನಾವು ಸೋಲಿಗರು. ಈ ಬಡ ದಾಸಯ್ಯನ ವಾಸಕ್ಕೆ ಬಂದಿದ್ದಿಯಲ್ಲಾ ಎಂದು ದೂರುತ್ತಾ ದಾಸಯ್ಯನನ್ನು ಬಯ್ಯುತ್ತಾನೆ. ಅದಕ್ಕೆ ದಾಸಯ್ಯ ಬೊಮ್ಮ ಮಾವ ಬಯ್ಯಬೇಡ ನಿನಗೆ ಬೇಕಾದ ಐಶ್ವರ್ಯ ಕೊಡುತ್ತೇನೆ ಎನ್ನುತ್ತಾನೆ. ಆದರೆ ಬೊಮ್ಮೆಗೌಡ ದಾಸಯ್ಯನನ್ನು ದೊಣ್ಣೆಯಿಂದ ಹೊಡೆಯಲು ಹೋಗುತ್ತಾನೆ. ದಾಸಯ್ಯ ಕೊಟ್ಟಿದ್ದ ಐಶ್ವರ್ಯವನ್ನೆಲ್ಲಾ ವಾಪಸ್ ಕಿತ್ತುಕೊಂಡು ಶಾಪ ಕೊಡುತ್ತಾನೆ.

ದಾಸಯ್ಯನ ವೇಷಧಾರಿ ನಾರಾಯಣ ಸೋಲಿಗರ ಬೊಮ್ಮೆಗೌಡನ ಮಗಳನ್ನು ಕರೆದುಕೊಂಡು ಮೇಲುಗಿರಿಗೆ ಹೋಗುತ್ತನೆ. ಅಲ್ಲಿ ಎಡಗಡೆ ಶ್ರೀ ತುಳಸಮ್ಮ, ಬಲಗಡೆ ಶ್ರೀ ಲಕ್ಷ್ಮೀದೇವಿ ಕುಳಿತ್ತಿದ್ದಾರೆ. ಹೀಗೆ ಮೂವರು ಮಡದಿಯರು ಒಟ್ಟಾಗಿ ಇರುವಾಗ ಕುಸ್ಮದೇವಿಗೆ ಏನೋ ಒಂದು ಮಾತು ಆಡುತ್ತಾರೆ. ಹಾಗೆ ಆಕೆ ದುಃಖ ಮಾಡುತ್ತಿರುತ್ತಾಳೆ. ಇದನ್ನು ಕಂಡ ನಾರಾಯಣ ಮಹಾನವಮಿಯ ದಿನ ಜಂಬೂ ಸವಾರಿಹೋಗುವಾಗ ನಿಮ್ಮ ಸೋಲಿಗರ ಜಾತಿಯವರು ಕುಂಬಳದನ್ನ, ಬೂದುಗುಂಬಳಕಾಯಿ ಬಾಳೆ ಎಲೆ, ಬಾಳೆ ಕಾಯಿಯನ್ನು ತಂದು ಕೊಡಬೇಕೆಂದು ಷರತ್ತು ಮಾಡುತ್ತಾನೆ. ನನ್ನ ಬೊಮ್ಮ ಮಾವನಿಗೆ ಒಂದು ಎಡೆಯನ್ನು ಕೊಡುತ್ತೇನೆ ಎಂದು ಮಾತು ಕೊಡುತ್ತಾನೆ. ಮತ್ತು ನನ್ನ ಬಾಮೈಕಗಳಲ್ಲಿ ಹಿರಿಯ ಬಾಮೈದ, ದೊಡ್ಡಮಾದ, ನೀವು ಏಳುಕೋಟಿ ಬಂಗಾರಕ್ಕೆ ಬಾಧ್ಯರು ಎಂದು ಬರೆಸುತ್ತಾನೆ. ಜೊತೆಗೆ ಸೋಲಿಗರ ಜಾತಿಯವರು ರಂಗಯ್ಯನ ಜಾತ್ರೆ ಉತ್ಸವ ಸಂದರ್ಭದಲ್ಲಿ ಯಾವ ಯಾವ ಹಕ್ಕುಗಳನ್ನು ಹೊಂದಿರುತ್ತಾರೆ ಎಂದು ನೇಮಕ ಮಾಡುತ್ತಾನೆ.

**ಉಪಸಂಹಾರ**

ಆರಂಭದಲ್ಲಿಯೇ ಹೇಳಿದಂತೆ, ಕಾರಣಾಂತರಗಳಿಂದ ಸೋಲಿಗರ ನಾಡಿಗೆ ಬಂದ ವೈಷ್ಣವ ಸಂಪ್ರದಾಯ ಪ್ರಚಾರಕರಲ್ಲಿ ಕೆಲವರು ಬಿಳಿಗಿರಿರಂಗನ ಬೆಟ್ಟ ಪ್ರದೇಶದಲ್ಲಿ ವಾಸ್ತವ್ಯ ಮಾಡಿರುವುದು ಸ್ಪಷ್ಟ, ಕ್ರಮೇಣ ಸೋಲಿಗರಲ್ಲಿದ್ದ ಶೈವ ಸಂಪ್ರದಾಯದ ಜೊತೆಗೆ ವೈಷ್ಣವ ಸಂಪ್ರದಾಯದ ಪ್ರಭಾವವನ್ನು ಬೀರಿದ್ದಾರೆ. ಮುಂದುವರಿದು ಸೋಲಿಗರ ಹೆಣ್ಣನ್ನು ಮೋಹಿಸಿ ಮದುವೆ ಆಗುವುದರೊಂದಿಗೆ ವೈಷ್ಣವ ಸಂಪ್ರದಾಯವು ಈ ನೆಲಕ್ಕೆ ಗಾಢವಾದ ಸಂಬಂಧವನ್ನು ಹೊಂದಿತು. ಕಾಡುವಾಸಿಗಳಾದ ಸೋಲಿಗರು ಹೆಣ್ಣನ್ನು ಕೊಟ್ಟ ಕಾರಣದಿಂದ ವೈಷ್ಣವ ಸಂಪ್ರದಾಯದ ದೈವವಾದ ನಾರಾಯಣ ಅಥವಾ ರಂಗಸ್ವಾಮಿಯನ್ನು ಬಾವ ಎಂದು ಸಂಭೋದಿಸುವುದು ಹಾಗೂ ಈ ಸಂಪ್ರದಾಯಕ್ಕೆ ಚಾಚುತಪ್ಪದೆ ಇಂದಿಗೂ ನಡೆದುಕೊಳ್ಳುವರು. ಆದರೆ ತಮ್ಮ ಮೂಲದೈವಗಳ ಆಚರಣೆಗಳನ್ನು ಬಿಟ್ಟಿಲ್ಲ. ಅವುಗಳ ಜೊತೆಗೆ ಬಿಳಿಗಿರಿರಂಗ ಹೊಸ ಸೇರ್ಪಡೆ ಮಾತ್ರ ಆಗಿದೆ. ಇದು ಸಹಜವಾಗಿ ಬುಡಕಟ್ಟುಗಳ ಮೂಲ ಗುಣಗಳಲ್ಲಿ ಒಂದಾಗಿದೆ. ಪ್ರಭಾವಿಯಾದುದರ ಜೊತೆ ಸಂಘರ್ಷಕ್ಕೆ ಹೋಗದೆ, 'ತಮ್ಮತನ'ಗಳನ್ನು ಬಲಿಕೊಡದೆ ಸಮನ್ವಯತೆ ಕಾಪಾಡಿಕೊಳ್ಳುವುದು ಇಲ್ಲಿ ಎದ್ದು ಕಾಣುತ್ತದೆ. ಇವರಲ್ಲಿನ ಈ ಗುಣ ಜಗತ್ತಿನ ಯಾವ ಜ್ಞಾನಿಗಳಿಗೂ ಕಡಿಮೆಯಿಲ್ಲ. ಎಂತಹುದೇ ಸಂದರ್ಭದಲ್ಲೂ ವಿವೇಕವನ್ನು ಕಳೆದುಕೊಳ್ಳದೆ ಸಮಚಿತ್ತದಿಂದ ಇರುವುದು ಇವರಿಗೆ ದತ್ತವಾದ ಗುಣವಾಗಿದೆ. ಹಾಗೆಯೇ ಮತ್ತೊಬ್ಬರ ಗಳಿಕೆಯ ಹಣದಿಂದ ನಾನು ಬದುಕಬೇಕು ಎಂಬುದು ಇವರ ಜಾಯಮಾನದಲ್ಲೇ ಇಲ್ಲ. ಆ ಕಾರಣದಿಂದಲೇ ಸೋಲಿಗರ ಬೊಮ್ಮೆಗೌಡ ತನ್ನ ಮಗಳನ್ನು ವಿವಾಹವಾಗುವ ಸಲುವಾಗಿ ವಧುದಕ್ಷಿಣೆಯೆಂದು ವೈಷ್ಣವ ಪಂಥದ ದಾಸಯ್ಯ ಹನ್ನೆರಡುವರೆ ಕೊಂಗದಷ್ಟು ಚಿನ್ನದ ನಾಣ್ಯವನ್ನು (ಭವಿಷ್ಯ ಇದು ಬೆಳ್ಳಿ ನಾಣ್ಯ ಇದ್ದಿರಬೇಕು) ಕೊಟ್ಟಾಗ ಅದನ್ನು ಬೆಟ್ಟದ ಮೇಲೆ ನಿಂತು ತೂರಿಬಿಡುತ್ತಾನೆ. ಆದ್ದರಿಂದ ಸೋಲಿಗರಿಗೆ ಜೀವನ ಮೌಲ್ಯಗಳು ಮುಖ್ಯವಾಗಿತ್ತೆ ಹೊರತು ಹಣ-ಅಂತಸ್ತುಗಳಲ್ಲ ಎಂಬುದಕ್ಕೆ ಮೇಲಿನ ಉದಾಹರಣೆಗಳೇ ಸಾಕ್ಷಿ. ಸೋಲಿಗರನ್ನು ಕಾಡುವಾಸಿಗಳು, ಅನಾಗರಿಕರು, ಗಿರಿಜನರು, ಪರಿಶಿಷ್ಟರು, ಬುಡಕಟ್ಟು ಜನರು, ಆದಿವಾಸಿಗಳು, ಮೂಢರು ಎಂಬೆಲ್ಲಾ

ಹೆಸರುಗಳಿಂದ ಕರೆಯುತ್ತರಾದರು ಇವರು ಪರಿಸರ ಪ್ರಜ್ಞೆವುಳ್ಳವರು, ನೀತಿವಂತರು, ಹಾಗೂ ವಾಸ್ತವವಾದಿಗಳು ಎಂಬುದನ್ನು ಅವರ ಒಡನಾಟದಿಂದ ಮಾತ್ರ ತಿಳಿಯಲು ಸಾಧ್ಯವಿದೆ.

ಪ್ರಸ್ತುತ ಸೋಲಿಗರು ಹಾಡಿದ ಬಿಳಿಗಿರಿರಂಗನ ಕಾವ್ಯವು ಕೆಲವು ಐತಿಹಾಸಿಕ ಸತ್ಯವನ್ನು ತಿಳಿಸುತ್ತದೆಯಲ್ಲದೆ, ಮುಂದಿನ ಅಧ್ಯಯನಕಾರರಿಗೆ ಪೂರಕ ಮಾಹಿತಿಯನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

## ೪. ಕಾವ್ಯ ಓದುವ ಮೊದಲು....

ಈಗಾಗಲೇ ಕಾವ್ಯ ಸಂಗ್ರಹವನ್ನು ಕುರಿತು ಕೆಲವು ಸೂಕ್ಷ್ಮಗಳನ್ನು ತಿಳಿಸಲಾಗಿದೆ. ಮುಂದುವರಿದು ಕಾವ್ಯ ಸಂಗ್ರಹಕ್ಕೆ ಇದ್ದ ಇತಿ ಮಿತಿಗಳನ್ನು ದಾಖಲಿಸುವ ಉದ್ದೇಶದಿಂದ ಈ ಬರಹ ಅನಿವಾರ್ಯವಾಯಿತು. ವಾಸ್ತವವಾಗಿ ಸೋಲಿಗರ ಎಲ್ಲಾ ಹೆಣ್ಣು ಗಂಡುಗಳು ಕಲಾವಿದರೆ ಆಗಿದ್ದಾರೆ. ಹಬ್ಬ ಮತ್ತು ಜಾತ್ರೆಗಳಂತಹ ಸಂದರ್ಭದಲ್ಲಿ ಒಟ್ಟಾಗಿ ಹಾಡಬಲ್ಲರು ಹಾಗೂ ಕುಣಿಯಬಲ್ಲರು. ಇವೆಲ್ಲಾ ಅವರಿಗೆ ಒಂದು ರೀತಿ ಸಹಜ ಪ್ರಕ್ರಿಯೆ ಇದ್ದ ಹಾಗೆ. ಮುಜುಗರ ಪಡುವುದಾಗಲಿ ಅಥವಾ ಹಿಂಜರಿಯುವುದಾಗಲಿ ಅವರ ಜಾಯಮಾನದಲ್ಲೇ ಇಲ್ಲ. ತಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನು ವ್ಯಕ್ತಪಡಿಸುವ ಈ ಸಂದರ್ಭಗಳು ಪರಸ್ಪರ ಹೆಣ್ಣು ಗಂಡುಗಳು ತಮ್ಮ ಭಾವಿ ಬದುಕಿಗೆ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಪೂರಕ ವೇದಿಕೆ ಆಗಿರುತ್ತದೆ. ಆದರೆ ತಮ್ಮ ದೈವ ಮತ್ತು ಬಾವ ಎಂದೇ ಕರೆದುಕೊಳ್ಳುವ ಬಿಳಿಗಿರಿರಂಗನ ಬಗ್ಗೆ ಪ್ರಚಲಿತವಿರುವ ಕಾವ್ಯವನ್ನು ಹಾಡಲು ಕಲಿತವರು ಯಾರಿಲ್ಲ. ಹೆಚ್ಚೆಂದರೆ, ಜೇನು ಬೇಟೆ, ಗಿಡ ಮರ, ಪ್ರಾಣಿ, ಪಕ್ಷಿ, ರಂಗಬಾವ, ಮಾದಪ್ಪ ಇವೆ ಮುಂತಾದ ಕೆಲವು ಹಾಡುಗಳನ್ನು ಮಾತ್ರ ಹಾಡಬಲ್ಲರು. ಸುದೀರ್ಘವಾದ ಕಾವ್ಯವನ್ನು ಹಾಡುವುದು ಹಿರಿಯ ಕಿರಿಯರಾದಯಾಗಿ ಯಾರೊಬ್ಬರಿಗೂ ತಿಳಿದಿಲ್ಲ. ಅಪರೂಪಕ್ಕೆ ಬಿಳಿಗಿರಿರಂಗನ ಬೆಟ್ಟದ ಮಂಜಿಗುಂಡಿ ಪೋಡಿನ ಶ್ರೀ ದಂಬಡಿ ಕ್ಯಾತೇಗೌಡ ಎಂಬುವರು ಹಾಡುತ್ತಾರೆ ಎಂದು ತಿಳಿದುಬಂತು. ಕಲಾವಿದರನ್ನು ಸಂದರ್ಶನದ ಒಂದು ದಿನ ರಾತ್ರಿ ಹಾಡುಗಳನ್ನು ಹಾಡಿಸಿ ಖಚಿತ ಪಡಿಸಿಕೊಳ್ಳಲಾಯಿತು.

ಅನಂತರ ಪ್ರಮುಖ ಕಲಾವಿದರ ಜೊತೆಗೆ ಮತ್ತೆ ಇಬ್ಬರನ್ನು ಜೊತೆಗೂಡಿಸುವ ಕೆಲಸ ಮುಂದುವರಿಯಿತು. ಆಗ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಕೆಲವು ಪೋಡುಗಳಿಗೆ ಹೋಗಿ, ಸಹ ಕಲಾವಿದರಾದ ಶ್ರೀ ತಂಬೂರಿ ದಾಸೇಗೌಡ ಮತ್ತು ಶ್ರೀ ಸಪ್ಪೆ ಸಿದ್ದೇಗೌಡರನ್ನು ಕೂಡಿಸಿಕೊಂಡು ದಿನಾಂಕ ೧೦.೮.೨೦೦೦ರಂದು ಮೊದಲು ಹಂತದ ಸಂಗ್ರಹಕಾರ್ಯವೂ ಮುಗಿಯಿತು. ಅಂದರೆ ಕಾವ್ಯದ ಅರ್ಧಭಾಗವನ್ನು ಮಾತ್ರ ಧ್ವನಿಮುದ್ರಣ ಮಾಡಿಕೊಳ್ಳಲಾಯಿತು. ಕಾರಣಾಂತರಗಳಿಂದ ಆರು ತಿಂಗಳುವರೆಗೆ ಕಾವ್ಯ ಸಂಗ್ರಹ ಸಾಧ್ಯವಾಗಲೇ ಇಲ್ಲ. ಎರಡನೆಯ ಹಂತದ ಕಾವ್ಯ ಸಂಗ್ರಹಕಾರ್ಯ ಬಿಳಿಗಿರಿರಂಗನ ಬೆಟ್ಟದಲ್ಲೇ ಪ್ರಧಾನ ಕಲಾವಿದರಾದ ಶ್ರೀ ದಂಬಡಿ ಕ್ಯಾತೇಗೌಡ ಒಬ್ಬರಿಂದಲೇ ಮಾಡಲಾಯಿತು. ಕಾವ್ಯವನ್ನು ಎರಡು ಹಂತದಲ್ಲಿ ಸಂಗ್ರಹ ಮಾಡಿರುವ ಕಾರಣ ಕಾವ್ಯದ ಮಧ್ಯಭಾಗದಲ್ಲಿ ಪುನರುಕ್ತಿಯಾಗಿದೆ. ಆದರೆ ಕಲಾವಿದರು ಹಾಡಿರುವುದನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಏಕೆಂದರೆ ಈ ಕಾವ್ಯ ಪ್ರಕಟವಾಗುವ ಮೊದಲೇ ಪ್ರಧಾನ ಕಲಾವಿದರು ಮರಣ ಹೊಂದಿದ ಕಾರಣ ಕಾವ್ಯವನ್ನು ಮತ್ತೊಮ್ಮೆ ಹಾಡಿಸಿ ಇದರಲ್ಲಿ ಕಂಡುಬರುವ ಪುರುಕ್ತಿ ಬಗ್ಗೆ ಆಗಲಿ ಅಥವಾ ಕಾವ್ಯದ ಬಗ್ಗೆ ಇನ್ನಷ್ಟು ಮಾಹಿತಿಯನ್ನು ಪಡೆದುಕೊಂಡು ಪ್ರಕಟಣೆ ಸಂದರ್ಭದಲ್ಲಿ ತಿದ್ದುಪಡಿ ಮಾಡಿಕೊಳ್ಳುವ ಅವಕಾಶ ದೊರೆಯಲಿಲ್ಲ. ಈ ಎಲ್ಲಾ ಮಿತಿಗಳೊಂದಿಗೆ ಸೋಲಿಗರೇ ಹಾಡಿದ ಬಿಳಿಗಿರಿರಂಗಯ್ಯನ ಕಾವ್ಯವನ್ನು ಮೊದಲ ಬಾರಿಗೆ ಪ್ರಕಟಿಸಲಾಗುತ್ತಿದೆ ಹಾಗೂ ಸೋಲಿಗ ಬುಡಕಟ್ಟು ಸಮುದಾಯದ ಪರಿಚಯವನ್ನು ಓದುಗರ ಮಾಹಿತಿಗಾಗಿ ನೀಡಲಾಗಿದೆ. ಬಿಳಿಗಿರಿರಂಗಯ್ಯನ ಬಗ್ಗೆ ನಾಡಿನ ಕಲಾವಿದರು ಸುದೀರ್ಘವಾಗಿ ಹಾಡುತ್ತಾರೆ. ಅದನ್ನು 'ಸೋಲುಗ್ರ ಕುಸ್ಮಾಲೆ ಕತೆ' ಎನ್ನುವರು ಮೌಖಿಕ ಕಾವ್ಯಗಳು ಸಮುದಾಯದ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಆದ್ದರಿಂದ ಆಯಾ ಸಮುದಾಯದ ಗಾಯಕರಿಂದಲೇ ಕಾವ್ಯವನ್ನು ಹಾಡಿಸಿ ಸಂಗ್ರಹಿಸುವುದರಿಮದ ಹಲವಾರು ಚಾರಿತ್ರಿಕ ಘಟನೆಗಳು ಪ್ರಥಮ ಮಾಹಿತಿಯಾಗಿ ದೊರೆಯುತ್ತವೆ. ಅಲ್ಲದೆ ಆ ಸಮುದಾಯದ ಧಾರ್ಮಿಕ, ಸಾಮಾಜಿಕ, ಹಾಗೂ ಹುಟ್ಟಿನಿಂದ ಸಾವಿನವರೆಗಿನ ಹಲವಾರು ಆಚರಣೆಗಳು ದಾಖಲಾಗುತ್ತವೆ. ಜೊತೆಗೆ ಅವರಲ್ಲಿರುವ ಸಾಂಸ್ಕೃತಿಕ ಅನನ್ಯತೆಯನ್ನು ತಿಳಿದುಕೊಳ್ಳುವುದು ಸಾಧ್ಯವಿದೆ. ಒಟ್ಟಾರೆ ಭಾರತದ

ಪ್ರತಿಯೊಂದು ಬುಡಕಟ್ಟು ಸಮುದಾಯಗಳ ಚರಿತ್ರೆಯ ಪುನರ್ ರಚನೆಯ ದೃಷ್ಟಿಯಿಂದ ಇಂತಹ ಮೌಖಿಕ ಮಾಹಾಕಾವ್ಯಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಆದ್ದರಿಂದಲೇ ಆಧುನಿಕ ಇತಿಹಾಸತಜ್ಞರು ಇಂದು ಒಂದೊಂದು ಸಮುದಾಯಗಳ ಬಗ್ಗೆ ಪ್ರಕಟವಾಗಿರುವ ಮೌಖಿಕ ಕಾವ್ಯ ಮತ್ತು ಸಾಹಿತ್ಯವನ್ನು ಪರಿಗಣಿಸುವ ಮನಸ್ಸು ಮಾಡಿದ್ದಾರೆ. ಹಾಗೂ ಅವುಗಳ ಅಧ್ಯಯನದಲ್ಲಿ ತೊಡಗಿರುವುದು ಭಾರತದ ಇತಿಹಾಸವನ್ನು ಪುನರ್ ರಚಿಸಲು ನಾಂದಿ ಎಂದರೆ ತಪ್ಪಲ್ಲ.

ಪ್ರತಿಯೊಂದು ಕೆಲಸವೂ ಪರಿಪೂರ್ಣ ಆಗಿರಬೇಕೆಂಬುದು ಎಲ್ಲರ ಬಯಕೆ. ಆದರೆ ಅನೇಕ ಮಿತಿಗಳಿಗೆ ಒಳಗಾಗಿ ದೋಷಗಳು ಉಳಿದುಕೊಳ್ಳುವುದುಂಟು. ಹಾಗೆಯೇ ಈ ಕಾವ್ಯದಲ್ಲಿ ಅರ್ಥಸೂಚಿಯ ಅನಿವಾರ್ಯತೆಯನ್ನು ಅರಿತು ನೀಡಿದೆಯಾದರೂ ಅಕಾರಾದಿ ಮಾಡಲು ಸಾಧ್ಯವಾಗಿರುವುದಿಲ್ಲ.

## ೫. ನೆನೆವಾರ್ತೆ

ಲಕ್ಷ್ಮಿ ನಾರಾಯ್ಣ ಗೋವಿಂದsss || ಗೋವಿಂದೋ ||
ಲಕ್ಷ್ಮಿ ರಮಣ ಗೋವಿಂದsss || ಗೋವಿಂದೋ ||
ಸ್ರೀಮನ್ನಾರಾಯ್ಣ ಪಾದಕ್ಕೆ ಗೋವಿಂದsss || ಗೋವಿಂದೋ ||
ಬಾಗ್ಯಕೊಟ್ಟಂತ ಬಿಳಿಗಿರಿರಂಗನ ಪಾದಕ್ಕೆ ಗೋವಿಂದsss || ಗೋವಿಂದೋ ||

ಗೋವಿಂದ ಅನ್ನೋವರ ಮನೆಯೊಳಗೆಲ್ಲ ಭಾಗ್ಯ

ಕೊಟ್ಟಂತ ನಾರಾಯ್ಣ ಪಾದಕ್ಕೆ ಗೋವಿಂದsss || ಗೋವಿಂದೋ ||
ಅರಿನಾರಾಯ್ಣ ಪಾದಕ್ಕೆ ಗೋವಿಂದsss || ಗೋವಿಂದೋ ||

## ೬. ಬಿಳಿಗಿರಿ ರಂಗನ ಕಾವ್ಯ (೧)

ಗೋವಿಂದsss ಗೋವಿಂದsss ಗೋಪಾಲsss ಗೋವಿಂದsss
ಅವ್ರು ಬೂದುಬಾಳಿಗೆ ಬಂದಿದ್ದಾರೆsss **|| ತಂದಾನ ||**
ತಿರ್ಪತಿ ಬಿಟ್ಟವರೆ ವನ್ನಾಳಿ ಬಂದಾರೆsss
ವನ್ನಾಳಿ ನಾರಾಯ್ಣ ಆಗಿದ್ದಾರೆsss **|| ತಂದಾನ ||**

ಸ್ವಾಮಿಯವ್ರು ತಿರ್ಪತಿ ಬಿಟ್ ಬಿಟ್ಟಿದ್ದಾರೆ
ಪೊಡ್ನಾಡಿಗೆ ಬಂದ್ಬುಟ್ಟು ಗೋಕುಲಾಗೆ ಬಂದಿದ್ದಾರೆ
ಪೊಡ್ನಾಡಿಗೆ ಬಂದು ಪೋಡು ದೇಸಕೆ ಬಂದು
ನಾರಾಯ್ಣ ಮೂರ್ತಿಯವ್ರು ಎಲ್ಲಿಗೆ ಬಂದಿದ್ದಾರೆ?
ತಿರ್ಪತಿಗೆ ಬಂದು ದಾಸ್ಗೋಳ್ಗೆಲ್ಲ ನಾಮ್ಕರ್ಣ ಮಾಡ್ಬುಟ್ಟು,
ದಾಸ್ಗೋಳ್ ಮಾಡ್ಬುಟ್ಟು ಎಲ್ಲಿಗ್ ಬಂದಿದ್ದಾರೆ?

ಅವ್ರು ಸಿವ್ನಸಮುದ್ರಕ್ಕೆ ಬಂದಿದ್ದಾರೆsss || **ತಂದಾನ** ||
ಸ್ವಾಮಿಯವ್ರು ಸಿವ್ನಸಮುದ್ರಕ್ಕೆ ಬಂದು ತುಂಬಾ ಸಾಕಾಗೋಗ್ ಬುಡ್ತು.
ಸ್ವಾಮಿಯವ್ರಿಗೆ ಸಾಕಾಗೊತ್ತಿಗೆ ಮನಗ್ ಬುಟ್ರು
ಆ ಬೂತಾಯಿ ತಗುದ್ನು ಲಕ್ಷ್ಮಿ ದೇವಿ ತುಳ್ಸಮ್ನ ಮಾಡ್ಕಂಡು
ಮೈ- ಕೈ ನೋಯ್ಸಿಕೊಂಡು. . . .

ಅಲ್ಲಿ ತಳ್ಕಾರ್ ರಂಗಪ್ಪಸ್ವಾಮಿ ನಾಮಕರಣsss || **ತಂದಾನ** ||
ಅಲ್ಲಿ ಪಟ್ಟದ ರಂಗ್ಸೋಮಿ ನಾಮ್ಕರ್ಣ ಮಾಡ್ಬುಟ್ರು
ಆಗ ಎಲ್ಲಿ ಹೋಗಿದ್ದಾರೆ? ಸ್ರಿರಂಗಪಟ್ನ ಹೋಗಿದ್ದಾರೆ.
ಸ್ರಿರಂಗಪಟ್ನ ಹೋಗಿ, ಅಲ್ಲೋಗಿ ಏನ್ಮಾಡಿದ್ದಾರೆ?
ಸ್ರೀರಂಗಪ್ಪ ಅಂದ್ಬುಟ್ಟು ನಾಮ್ಕರ್ಣ ಮಾಡ್ಬುಟ್ರು

ಅಪ್ಪಾsss ಸ್ರೀರಂಗಪ್ಪ ಎಂದು ನಾಮಕರಣsss || **ತಂದಾನ** ||
ಸ್ರೀರಂಗಪಟ್ಣಕ್ಕೆ ಬಂದು ಸ್ರೀರಂಗಪ್ಪ ಎಂದು ನಾಮ್ಕರ್ಣ ಮಾಡ್ಬುಟ್ರು. . . . .

ಅವ್ರು ಗೋಕುನಾಡಿಗೆ ಸ್ವಾಮಿ ಓಗಿದ್ದಾರೆsss || **ತಂದಾನ** ||
ಸ್ವಾಮಿಯವ್ರು ಗೋಕುನಾಡಿಗೆ ಒಟ್ರೋಗ್ ಬುಟ್ರು
ಆಗ್ಲ್ ಗಾತ್ರ ಸಂಕು ಮುಗಲ್ ಗಾತ್ರ ಜಗ್ಟೆ ಒತ್ಗಂಡು ಅವ್ರು
ಗೋಕುಲ್ ನಾರಯ್ನ ರಂಗಪ್ಪ ಈವೊತ್ತು ಬಂದಿದ್ದಾನೆ ಅಂದ್ಬುಟ್ಟು . . . .

ಅಂವ ಕರಿಯಕಲ್ಲ ಬೆಟ್ಟಕ್ಕೆ ವೋಗಿದ್ದಾರೆsss || **ತಂದಾನ** ||
ಕರಿಯಕಲ್ಲ ಬೆಟ್ಟಕೋದ್ರು ನಾರಾಯ್ನ ಮೂರ್ತಿಯವ್ರು. . . .
ಕರಿಕಲ್ಲ ಬೆಟ್ಟ ಅಂದ್ರೆ ದೂರ ಅಲ್ಲ
ಇಲ್ಲಿ ನೋಡು ಯಾವ್ ಕಡೆ ಪಕ್ಕ ಇದ್ದಾರೆ
ಕಲ್ಕುಣಿ, ಕಲ್ಕುಣಿ ಕರಿಕಲ್ಲ ಬೆಟ್ಟ ಅನ್ನುವಂತದಿದೆ.

ಅಲ್ಲಿ ಕರಿರಂಗಪ್ಪನವ್ರು ಆಗಿದ್ದಾರೆsss || **ತಂದಾನ** ||
ಕರಿರಂಗಪ್ಪ ನಾಮ್ಕರ್ಣ ಮಾಡ್ಬುಟ್ಟು ನಾರಾಯ್ನ ಮೂರ್ತಿ ಎಲ್ಲಿ ಬಂದಿದ್ದಾರೆ ಅಂದ್ರೆ. . . .

ತಲ್ಕಾಡಿಗೆ ಸ್ವಾಮಿ ಬಂದಿದ್ದಾರೆsss || **ತಂದಾನ** ||
ತಲ್ಕಾಡಿಗೆ ಬಂದಿದ್ದಾರೆ ರಂಗಪ್ಪೋರು ಅಣ್ಣ -ತಮ್ಮ ಇಬ್ರು ಸೇರ್ಕೋಂಡು . . . .
ಆಹಾ ರಂಗ !
ಏನಣ್ಣ ಸಿಂಗ?
ಓಹೋ ರಂಗ!
ಏನಣ್ಣ ಸಿಂಗ?
ಅಯ್ಯೋ ಈಗ ನಾನು ತಾನ ಮಾಡ್ಬೇಕು ಸೀಗಕಾಯಿ ಬೇಕು.
ಅಣ್ಣಾ ನಾವು ತರ್ಬೇಕಾದ್ರೆ ಬಿಳಿಕಲ್ಲ ಬೆಟ್ಟಕ್ಕೋಗ್ ಬೇಕು.

ಬೆಳ್ಳಿ ಬೆಟ್ಟಕೋದ್ರೆ ಬಿಳಿ ಸೀಗೆಕಾಯಿ ತರ್ತೀನಿ ಅಂದ್ರು.
ಹೋಗಪ್ಪಾ ಅಂದ್ರು.

ಏನ್ಮಾಡ್ತಾ ಇದ್ದಾನೆ ತಿರ್ಪತಿ . . . . ತಿಮ್ಮಪ್ಪ,
ಮೇಲ್ ಗಿರಿ ಕೈಲಾಸ್ದ ರಂಗಪ್ಪ ಕಳ್ಳ ಹುಳಿ ಕಳ್ ರಂಗಪ್ಪ,
ಇವ್ರು ಏನ್ಮಾಡ್ತ ಇದ್ದರೆ ಅಂದ್ರೆ ನನ್ ತಮ್ಮ ತಂದ್ಬುಡ್ತಾರೆ.
ಆಗೆಂದ್ಬುಟ್ಟು ನಾರಾಯ್ಣ ಮೂರ್ತಿ ತಳ್ಳಾರ್ ರಂಗಪ್ಪೋರು
ತಾನ ಮಾಡ್ದೆ ಸಣ್ಣ ಮರ್ಳ ಮೇಲೆ ಆನಂದ್ವಾಗಿ ಮಲ್ಗಿದ್ದಾರೆ.
ಆಗ ನಾರಾಯ್ಣ ಮೂರ್ತಿಯವ್ರು ಪಿರಿಯಾಪಟ್ಣ, ಸಂತೆ ಸರ್ಗೂರು,
ಮರಳ್ಳಿ, ಮಗಡಳ್ಳಿ, ಆರ್ದಳ್ಳಿ, ಗುಂಡ್ಲುಪೇಟೆ, ಹೂಡ್ನೂರು ಕಪ್ಪ
ಎಲ್ಲಾ ದಾಸ್ಗೋಳ ಮಾಡ್ಕಂಡು ನೀಲ್ಗಿರಿ, ಕೋತ್‌ಗಿರಿ

ಅವ್ರು ದಾಸಯ್ನ ಉಂಡಿಗೆ ಬಂದಿದ್ದಾರೆsss **|| ತಂದಾನ ||**
ಅಪ್ಪಾ ದಾಸಯ್ಯ ಉಂಡಿಗೆ ಬಂದವ್ರೆ ದಾಸಯ್ಯsss
ಬುಗುಬುಗ್ನೆ ಸಂಕ ಊದುತ್ತಾರೆsss **|| ತಂದಾನ ||**

ಆಗ ಒಕ್ಲಾದ ಗಂಗಡಿಕಾರ ಗೌಡ ಗೊತ್ತು ತಾನೆ?
ಗಂಗಡಕಾರ ಗೌಡ ಅಂದ್ರೆ ಗೊತ್ತಿಲ್ವಲ?

ಏಯ್ ತಿಂಡಿ ಊಟ ಆಗದೆ. ತಿಂಡಿ ಊಟ ಮಾಡ್ಕಂಡ್ ಹೋಗಪ್ಪ ಅಂದ್ರು.
ಯಾರು ಈ ಗಂಗಡಿಕಾರ ಗೌಡ್ರು
ದಾಸಪ್ಪ ಏನ್ಮಾಡ್ತ ಇದ್ದ, ಸುಮ್ ಸುಮ್ನೆ ನುಗ್ತಾ ಇದ್ದ
ಅರೆ ಹೆಂಗ್ಸರ ಊಟ ಆಗಿಲ್ಲ ಯಾವ್ ದಾಸಯ್ಯ?
ಯಾವ್ ಕೇರಿಯವ್ನಯ್ಯ?
ನಾವು ಒಕ್ಲಾದವ್ರು ಇಡ್ಕಳ್ರಯ್ಯ ಆ ದಾಸಪ್ನ.

ಅಲ್ಲಿ .... ಹುಟ್ಟುತ್ತಾರೆsss **|| ತಂದಾನ ||**
ಒಕ ....
ಆಗೆನ್ಮಾಡ್ತ ಇದ್ದಾನೆ “ದಾಸಯ್ನುಂಡಿ ಹಾಳಾಗ್ಲಿ,
ಗಂಗವಾಡಿ ಉದ್ದಾರವಾಗ್ಲಿ”
ದಾಸಯ್ನುಂಡಿ ಮುಂದೆ ತೋಪಾಗ್ಲಿ.

ಅಯ್ಯ ದಾಸಯ್ನ ಮಂಟಪ ಆಗುತ್ತದೆsss **|| ತಂದಾನ ||**
ದಾಸಯ್ನ ಮಂಟಪ ಅಂದುಬುಟ್ಟು ನಾಮ್ಕರ್ಣ ಮಾಡ್ಬುಟ್ಟು
ನಾರಾಯ್ಣ ಎಲ್ಲಿಗ್ ಬಂದಿದ್ದಾರೆ?

ಉನಗನ ಮುಂಟಿಗೆ ಬಂದಿದ್ದಾರೆ.
ಆಗ್ಲ ಗಾತ್ರ ಸಂಕು ಮುಗಲ ಗಾತ್ರ ಜಗ್ಟೆ
ಒತ್ಕೊಂಡು ಎಲ್ಲಿಗ್ ಬಂದಿದ್ದಾರೆ?
ಉನಗನ ಮುಂಟಿಗೆ ಬಂದಿದ್ದಾರೆsss **|| ತಂದಾನ ||**
ಉನಗನ ಮುಂಟಿಗೆ ಬಂದವರೆ ನಾರಾಯ್ಣsss
ಎಡಗಡೆ ಸಂಕ ಇಡುತ್ತಾರೆsss **|| ತಂದಾನ ||**

ಎಡ್ಗಡೆ ಸಂಕ ಇಟ್ಬುಟ್ಟು ಬಲ್ಗಡೆ ಜಗ್ಟ ಇಟ್ಬುಟ್ಟು ನೋಡುದ್ರು
ಆ ಉನ್ಗನ ಮುಂಟಿ ಆಗೆ ಉರಿ ಕಂಡೋಗ್ತಿದೆ.
ಅಯ್ಯಯ್ಯೊ ನಮ್ಮಪ್ಪ ಉನ್ಗನ ಮುಂಟಿಯಾ ಬಾಗ್ಯ ಸರ್ನೋಗ್ಬುಡ್ತದ ಅಂದ್ಬುಟ್ಟು
ನಾರಾಯ್ಣ ಮೂರ್ತಿಯವ್ರು ಬೊಳ್ಳ ಬೊಳ್ಳಗೆ ಮೆಲ್ ಮೆಲ್ಗೆ ಇಳಿದ್ಬುಟ್ರು.
ಇಳಿದ್ಬುಟ್ಟು ಎಲ್ಲಿಗ್ ಬಂದಿದ್ದಾರೆ?

ಅವರು ಕೋಳಿ ಗುಂಡಾಡಿ ಬಂದಿದ್ದಾರೆsss **|| ತಂದಾನ ||**
ಕೋಳಿ ಗುಂಡಾ ಆದಿ ಒಳಗೆ ಬಂದು ನಾರಾಯ್ಣ ಮೂರ್ತಿಯವ್ರು ಎಲ್ಲಿಗ್ ಬಂದಿದ್ದಾರೆ?
ಮಲ್ಕಿ ಬೆಟ್ಟಕ್ ಒಂಟೋಗ್ ಬುಟ್ರು
ಮಲ್ಕಿ ಬೆಟ್ಟ ಅಂದ್ರೆ ದೊಡ್ಡಬೆಟ್ಟ.
ದೊಡ್ಡ ಬೆಟ್ಟಕ್ಕೆ ಬಂದು ಅಲ್ಲೊಬ್ಬ ಹೆಣ್ ದೇವ್ತೆ ಇತ್ತು.
ನೋಡುದ್ರ ನನ್ನಾಗೆ ರೂಪು ರೇಸ
ಅಪ್ಪಪ್ಪೈ ನನ್ ಬುಟ್ಟರ ಅಂದ್ಬುಟ್ಟು
ನಾರಾಯ್ಣ ಮೂರ್ತಿ ಹೋಗುವಾಗ
ಆ ಮಲ್ಕಮ್ಮನವ್ರು ಏನ್ಮಾಡ್ತ ಇದ್ದಾರೆ ಅಂದ್ರೆ.
ಆರಪ್ಪ ಇಂವ ಅಗಲಗಾತ್ರ ಸಂಕು ಮುಗಲ್ ಗಾತ್ರ ಜಗ್ಟೆ ಒತ್ಕೊಂಡು
ಎಡ್ಗಡೆ ಎರಡ್ ನಾಮ ಬಲ್ಗಡೆ ಬಿಳಿನಾಮ ಇಟ್ಕೊಂಡು ಬಂದಿದ್ದಾರೆ
ಇವರ್ಯಾರಯ್ಯ ನನ್ ಬುಟ್ಬಾರ?
ಈ ಮಲ್ಕಿ ಬೆಟ್ಟ ಸ್ವಲ್ಪ ಮಲ್ಕಸ್ ಬುಟ್ರೆ
ಮಲ್ಕಮ್ಮ ಅಂತ ನಾಮ್ಕರ್ಣ ಆಗ್ಬುಡ್ತದೆ
ಈ ದಾಸಪ್ನ ಓಡಿಸ್ ಬೌದು
ಮಲ್ಕಮ್ಮ ಅಂದ್ರೆ ಎಣ್ಣುಡ್ಗಿ ನನ್ಕಂಡ್ರೆ ಬಯ ಅಲ್ವಾ
ಅಯ್ಯೋ ನಮ್ಮಪ್ಪ ಇಂವ ನನ್ನ ಆಂಗೆಂದ್ಬುಟ್ಟು ….

ಅಯ್ಯ ಮಲ್ಕಿ ಬೆಟ್ಟಾವ ಮಂಟುತ್ತಾರೆsss **|| ತಂದಾನ ||**
ಮಲ್ಕಿ ಬೆಟ್ಟ ಮಂಟವಾಗ ನಾರಾಯ್ಣ ಮೂರ್ತಿಯವ್ರು ನೋಡುದ್ರು
ಅಯ್ಯಯ್ಯೋ ಇದೊಳ್ಳಿ ಕತೆಯಾಯ್ತಲ್ಲಪ್ಪ ಅಂದ್ಬುಟ್ಟು
ಸಿದ್ದನಕೆರೆ ಅತ್ರ ಬಂದ್ರು
ಸಿದ್ದಕೆರೆ ಅತ್ರ ಬಂದು ತಾನ ಜಪಮಾಡ್ಕೊಂಡು ….

ಅವ್ರು ಜಗ್ಟೇ ಕಲ್ಲಿಗೆ ಬಂದಿದ್ದಾರೆsss **|| ತಂದಾನ ||**
ಜಗ್ಟೆ ಕಲ್ಲಿಗೆ ಬಂದ್ಬುಟ್ಟಿದ್ದಾರೆ ನಾರಾಯ್ಣ ಮೂರ್ತಿಯವ್ರು
ಅಗಲಗಾತ್ರ ಸಂಕು ಮುಗಿಲಗಾತ್ರ ಜಗ್ಟೆ ಇಟ್ಬುಟ್ಟು
ನಾರಾಯ್ಣ ಮೂರ್ತಿಯವ್ರು ಏನು ಅಂದ್ರೆ ಬರೀ ನಾಮ್ ಜೇನೆ
ಅಪ್ಪ ಎಡ್ಗಡೆ ನೋಡು ಸೂಳೆಗ್ಯಾನುಂಟು
ಬಲ್ಗಡೆ ನೋಡು ನಾರಿಗ್ಯಾನುಂಟು.

ನಾರಾಯಣ್ಗೆ ಸುದ್ದಿ ತರಬೇಕುsss **|| ತಂದಾನ ||**
ಎಡ್ಗಡೆ ಸೂಳೆರಗ್ಯಾನ ಬಲ್ಗಡೆ ನಾರಿರಗ್ಯಾನ
ಮದ್ಯೆದಲ್ಲಿ ನಾರೀರ್ ಸೂಳೆರು ಏಡುಬೇಕು.
ಜಗ್ಟೆ ಕಲ್ಲ ಮೇಲೆ ಕೂತ್ಕೊಂಡು ನಾರಾಯ್ಣ ಮೂರ್ತಿಯವ್ರು
ಎಡ್ಕ ಬಲ್ಕೆಲ್ಲಾ ಸುತ್ತ ನೋಡುದ್ರು ನನ್ಗೆ ಕೂತ್ಕಳಕೆ ತಳ್ವಿಲ್ಲ
ನಾನು ಎಲ್ಲೋಗ್ ಬೇಕು?
ಅತ್ತಿಮರದ್ ಕಾಡ್ಗೆ ಗೊತ್ತಾಗದಂತೆ ಓಗ್ ಬುಟ್ರೆ
ನೀಲ್ಗಿರಿ ಕೈಲಾಸ ಎಲ್ಲಾ ಸಿಗುತ್ತೆ
ಅಯ್ಯಯ್ಯೋ ಮಗ್ಗ ಮರಳ್ಳಿ ಎಗ್ದದ್ಯಾವ್ನ್ ಕ್ವಾಟೆ
ರಂಜಕಲ್ಲು, ಪಿರಿಯಾಪಟ್ಣ, ಸಂತೆಸರ್ಗೂರು, ಗುಂಡ್ಲುಪೇಟೆ,
ಗೂಡ್ಲೂರು, ಅರ್ದನಳ್ಳಿ, ಚತ್ರ, ಯಳಂದೂರು, ಮಸ್ಣಾಪುರ
ವಂಗ್ನೂರೆಲ್ಲಾ ದಾಸ್ಗೋಳ್ ಮಾಡ್ಕ ಬಂದಿದ್ದೀನಿ
ಅತ್ತಿ ಮರತ್ತಕೆ ಓಗ್ ಬುಟ್ರೆ
ನಂಗೆ ನಿಂತ್ಕೊಳ್ಳಕಾದ್ರು ಜಾಗ ಸಿಗುತ್ತೆ
ಮದ್ಯ ಇವ್ರು ನಾರಾಯ್ಣ ಮೂರ್ತಿಯವ್ರು
ಏನ್ಮಾಡ್ತ ಅವ್ರೆ?
ತಿರ್ಪತಿ ಬುಟ್ಬುಟ್ಟಿದ್ದಾರೆ.
ಆಗ ನಾರಾಯ್ಣ ಮೂರ್ತಿಯವ್ರು ಎಲ್ಲಿಗ್ ಬಂದಿದಾರೆ?

ಮೇಲುಗಿರಿಗೆ ಅವ್ರು ಬಂದಿದ್ದಾರೆsss **|| ತಂದಾನ ||**
ಅಯ್ಯ ಮೇಲುಗಿರಿ ಚಂದsss
ನುರಿಯ ಮಂಟಪ ಚಂದsss
ಅಯ್ಯ ಆಣೆಯ ಮೇಗೊಂದು ಎಳೆಯನಾಮ ಬಲುಚಂದsss
ಮೇಲುಗಿರಿಯಂತೆ ಬಲು ಚಂದsss **|| ತಂದಾನ ||**

ಆಗ ನಾರಾಯ್ಣ ಮೂರ್ತಿಯವ್ರು ಹೋಗಿ
ಮೇಲುಗಿರಿ ಕೈಲಾಸ್ದಲ್ಲಿ ನಿಂತ್ಗಂಡು
ಅಗಲಗಾತ್ರ ಸಂಕು, ಮುಗಿಲಗಾತ್ರ ಜಗ್ಟೆ
ಆಹಾ ನಿಂತ್ಗಂಡ್ರು. ಇವ್ರು ಇದ್ರು ಇಲ್ಲ ಈಸ್ಪುರ

ಆ ನೀನು ಆರಪ್ಪ?
ನಾವು ಈಸ್ವುರಪ್ಪ
ಈ ಬೆಟ್ಟ ಉಟ್ವಾಗ ಉಟ್ಟಿದ್ದೀಮಿ
ಈ ಅತ್ತಿಮರಾದೊಳ್ಗೆ ಗೊತ್ತಾಗಿದ್ದೀಮಿ
ನಾವು ಎಲ್ಲಪ್ಪ, ನಾವು
ಸ್ವಾಮಿ ನೀವು ಏನ್ ಕೆಲ್ಸ ಮಾಡ್ತಿರಿ ಸ್ವಾಮಿ?
ನಮ್ಗೆನಪ್ಪ ಉಲಿ ಸರ್ಮ ಅಸ್ಗೊಂಡಿದ್ದಿಮಿ
ಉಲ್ಲೆಸರ್ಮ ಉಟ್ಕೊಂಡಿದ್ದಿಮಿ
ತ್ರಿಸೂಲ ಮಡ್ಗಿದ್ದಿಮಿ ಅಗಲ್ ಗಾತ್ರ ಸಂಕು
ಮುಗಲ್ ಗಾತ್ರ ಜಗ್ವೇ ಮಂಜು ಮನೇ ಒಳ್ಗೆ
ಅಕ್ಕಿ ಸಬ್ದ ಇಲ್ಲ ಪಕ್ಷಿ ಸಬ್ಧ ಇಲ್ಲ
ಕಾ ಎಂಬ ಕಾಗೆ ಸಬ್ಧಿಲ್ಲ ಗೂ ಎಂಬ ಗೂಗೆ ಸಬ್ಧಿಲ್ಲ
ಅಲ್ಲಿ ನಾನಿದ್ದಿನಪ್ಪ
ಅಪ್ಪ ಈಸ್ವರ ನನ್ಗೆ ಸ್ವಲ್ಪ ಜಾಗ ಕೊಡಪ್ಪ ಅಂದ್ರು
ಅಯ್ಯೊಯೋ ನಾನಿರದು ಉಟ್ ಬಂಡೆ ಮೇಲೆ
ಉಟ್ ಬಂಡೆ ಮೇಲೆ ನಾನು ಕೂತ್ಕಂಡು
ನಿನಗೆಲ್ಲಿ ಜಾಗ ಕೊಡ್ಲಿ ದಾಸಯ್ಯ
ಅಪ್ಪ ನಾನು ನಿಂತ್ಗೋಂಡಿದಿನಿ ಈಸ್ವರ
ಜಗ್ವೆ ಮಡಿಕೊಳ್ಳಾಕೆ ಸ್ವಲ್ಪ ಜಾಗ ಕೊಡರ ಅಂದ್ರು
ಎಡಕ್ಕ ನೋಡುದ್ರು ಇವನಂಗೆ ಈಸ್ವರ ದಡ್ಡ
ಇಂವ ಮಾವಿಸ್ನು ಮಡಿಕಪ್ಪ ಅಂದ್ಬುಟ್ರು
ಅಗಲ್ ಗಾತ್ರ ಸಂಕ ತಗ್ದು ಮಢ್ಗವೊತ್ಗೆ
ಬಾನಗ್ಲ ಸಂಕು, ಬೂಮಿಗಾತ್ರ ಜಗ್ವೆಲ್ಲಾ ಬುಗುಬುಗ್ನ ತಿರುಗ್ಬುಡ್ತು

ಅಲ್ಲೆ ಕಂತೆ ಬೊಂತೆ ಸ್ವಾಮಿ ಎತ್ತುತ್ತಾರೆsss **|| ತಂದಾನ ||**
ಕಂತೆ ಬೊಂತೆಯ ಎತ್ತಿ ಮಾವಿಸ್ನು ಈಸ್ವುರsss
ಬಂದಂತ ಬಿರ್ದುಗಳ್ಗೆ ಅಯ್ಯ ಇಟ್ಟುಕೊಳ್ಳಾಕ ತಳವಿಲ್ಲsss **|| ತಂದಾನ ||**

ಇಟ್ಟುಕೊಳ್ಳಾಕೆ ತಳವಿಲ್ಲ
ಇಂಗ್ ಮಾಡ್ಬುಟ್ರೆಲ್ಲಪ್ಪ ಮಾವಿಸ್ನು
ಇನ್ನು ನಾನ್ ಎಲ್ಲೋಗ್ ಬೇಕು?
ಅಪ್ಪ ಈಸ್ವುರ ಕಡೆ ಕೋಡಿಗೊಂಟೋಗ್ ಬುಡು
ಕಡೆ ಕೋಡಿಗೋಗ್ ಬುಡು ನೀನು

ನಿನಗೊಂದು ಪೂಜೆ ಕೊಡುತ್ತೀನಿsss **|| ತಂದಾನ ||**
ನಿಂಗೊಂದು ಪೂಜೆ ಕೊಡ್ತೀನಿ ಗಂಗದರsss
ಗಂಗದರ ಎಂದು ನಾಮಕರಣsss **|| ತಂದಾನ ||**

ಸ್ವಾಮಿಯವ್ರು ಈಸ್ಪುರ ಅಂದ್ರೆ ಬಾಳ ಯೋಗವಾದವ್ರು
ಕಂತೆ ಬೊಂತೆ ತಕ್ಕಂಡು ಕಡೆ ಕೋಡಿಹೋಗಿ ಕಣ್ಣೆಲ್ಲಾ ಉರಿ ಬಂದ್ಬುಡ್ತು
ಅಗ ಹೋಗಿ ಕಡೆ ಕೋಡಿ ಒಳ್ಗೆ ಕರಿ ಅಂಗಿ ದರಿಸ್ಬುಟ್ಟು
ಕಡೆ ಕೋಡಿಲಿ ಮೂರ್ತವಾಗ್ಬುಟ್ರು
ನಾರಾಯಣ ಮೂರ್ತಿಯವ್ರು ಹೇಳ್ದ ವಾಕ್ಸದಂತೆ
ನಾರಾಯ್ಣ ಮೂರ್ತಿಯವ್ರು ಮೇಲುಗಿರಿ ಒಳ್ಗೆ ನಿಂತ್ಗಂಡ್ರು

ಮೂಡಲು ನೋಡುತವರೆsss
ಪಡುವಲು ನೋಡುತವರೆsss
ಮೂಡ ದಿಕ್ಕಲ್ಲಿ ಕಾಣುತ್ತಾರೆsss **|| ತಂದಾನ ||**

ಮೂಡ ದಿಕ್ಕ ನೋಡ್ಬುಟ್ಟು
ಬಿಂಕಿ ಬಡ್ಕನೆಯ ಬಗ ಬಗ ಅಂತದೆ
ಕಾ ಎಂಬ ಕಾಗೆ ಸಬ್ಧವಿಲ್ಲ
ಗೂ ಎಂಬ ಗೂಗೆ ಸಬ್ದವಿಲ್ಲ
ಈ ಬಿಂಕಿ ಬುಡ್ಕ ಎಂಗಿದ್ದನು? ಅಂದ್ಬುಟ್ಟು
ಕಾಡನ್ನ ಕಡ್ದುಬುಟ್ಟು ಪೋಡನ್ನ ಮಾಡ್ಬುಟ್ಟರೆ
ಯಾರಿದ್ದರು ಇಲ್ಲಿ
ಕಾ ಎಂಬ ಕಾಗೆ ಸಬ್ಧವಿಲ್ಲ
ಗೂ ಎಂಬ ಗೂಗೆ ಸಬ್ದವಿಲ್ಲ
ಅಕ್ಕಿ ಸಬ್ದವಿಲ್ಲ ಯಾರಯ್ಯ ಈ ಸಂಪತ್ತುಗಾರ? ಅಂದ್ಬುಟ್ಟು
ಈ ದಾಸಪ್ಪ ಏನ್ಮಾಡಿದ್ರು
ಈ ಐಕ ಇದ್ದರಲ್ಲ ಸೋಲಿಗ್ರ ಬೊಮ್ಮೆಗೌಡ್ನ ಮಕ್ಕ
ಕಾಡಿನಲ್ಲಿ ಎಬ್ಬಿದರನ್ನು ಕಡ್ದು ಬೊಂಬುಗಳ್ನ ಮಾಡ್ಕಂಡು
ನೀಗೋರ್ಗೊ ಸಮಯ ಕಾಯ್ಕಂಡ
ಈ ಉಡ್ಗಿರೆಲ್ಲಾ ಬರ್ತಾ ಇದ್ರು
ಕಾಯ್ಕೊಂಡ್ ಆಗೇನ್ ಮಾಡ್ತ ಇದ್ದಾನೆ?
ಬೊಳ್ಳಬೊಳ್ಳಗೆ, ಮೆಲ್ಲಮೆಲ್ಲಗೆ ಒಯ್ತಾ ಇದ್ದಾರೆ
ಸೋಲಿಗ್ರ ಬೊಮ್ಮೆಗೌಡ್ನ ಮಕ್ಕ ಅಂದ್ರೆ
ಚಿಕ್ಕಕಾಡಿ, ದೊಡ್ಡಕಾಡಿ, ಚಿಕ್ಕರಂಗಿ, ದೊಡ್ಡರಂಗಿ,
ಕ್ಯಾತಿ, ಕ್ಯಾತಿ ದಂಡೆಲಿ ಮಾದಿ, ಮಾದಿ ದಂಡೆಲಿ ಕುಸ್ಮ ದೇವಿ

ಅವ್ರು ಮೆಲ್ಲಮೆಲ್ಲಗೆ ನೀರಿಗೆ ಹೋಗುತ್ತಾರೆsss || **ತಂದಾನ** ||
ಬೆಳ್ಳಿ ಕೆರೆಗೆ ಓಗ್ವಾಗ ದಾಸಪ್ಪೋರ ವೇಸ ನೋಡಕಾಗ್ನಿಲ್ಲ
ಗಕ್ಕನ್ ನೋಡುತ್ತಾರೆ. ಇವ್ರೆ ನೋಡಪ್ಪ
ಸೋಲಿಗ್ರ ಬೊಮ್ಮೆಗೌಡ್ನ ಮಕ್ಕ ಅಂದ್ರೆ
ಪಂಡರಗಾಳಿ ಗುಂಡರ ನಾಮ ….

ಗುರುಗುಂಜಿ ನರಿಯವ್ಳೆ ಗುರುಗಂಜಿ ತುರ್ಬಿನವ್ಳೆsss
ಇಕ್ಕಾಲು ಬಟ್ಟೆsss ಸೋಲಗಿತ್ತಿsss || **ತಂದಾನ** ||

ಆಗ ನೋಡ್ಬುಟ್ಟ ನಾರಾಯ್ಣ ಇನ್ಯಾಕಯ್ಯ
ಪಡುಗ ದಿಕ್ಕಿನ ನಾರಾಯ್ಣ ಮೂರ್ತಿ ಪಸ್ಚಿಮಕ್ಕೆ ಬಂದ್ರು
ದೊಡ್ರಂಗಿ ಕಂಡ್ಬುಟ್ಟ. ಅಕ್ಕ ! …. ಅಕ್ಕ! ….

ಅಲ್ಲಿ ನಾಡಿನ ದಾಸಯ್ಯ ಪೋಡಿಗೆ ಬಂದವ್ನೆsss
ತೇರು ಯಾವತ್ತ ಕೇಳಿರವ್ವsss || **ತಂದಾನ** ||
ಏಯ್ ನಾಡಿನ ದಾಸಯ್ಯ ಪೋಡಿಗೆ ಬಂದವ್ನೆsss
ತೇರು ಯಾವತ್ತ ಕೇಳಿರವ್ವsss || **ತಂದಾನ** ||

ಅಪ್ಪ ನಾಡಿನ ದಾಸಪ್ಪ ಪೋಡಿಗೆ ಬಂದ್ಬುಟ್ಟಿದ್ದೀರಲ್ಲ
ತೇರು ಯಾವತ್ತ?
ತೆಪ್ಪ ಯಾವತ್ತ?
ಅರ್ಸೇವೆ ಯಾವತಪ್ಪಾ?
ಏಯ್ ಚಿಕ್ಕರಂಗಿ, ದೊಡ್ಡರಂಗಿ
ಚಿಕ್ಕಕಾಡಿ, ದೊಡ್ಡಕಾಡಿ ….
ದೊಡ್ರಂಗಿ ಬಂದು ಎಡಬುಜ ಇಡ್ಕಳ್ ಬೇಕು
ಚಿಕ್ರಂಗಿ ಬಂದು ಬಲಬುಜ ಇಡ್ಕಂಡು
ನನ್ನ ಗಡ್ಡ ನಿನ್ನ ಗಡ್ಡ ದಾಗದಲ್ಲ ಅಂತ
ಈ ಗಡ್ಡ ಇಡ್ಕಂದು ಕುಸ್ಮದೇವಿ ಬಂದು

ತೇರು ಯಾವತ್ತ ರಂಗಬಾವsss || **ತಂದಾನ** ||
ಅಯ್ಯ ತೇರು ಯಾವತ್ತ ರಂಗ ಬಾವ ಅಂದರೆsss
ತೇರು ತೆಪ್ಪವ ಯೇಳುತ್ತಿನಿsss || **ತಂದಾನ** ||

ಅಕ್ಕ …. ಅಕ್ಕ …. ಚಿಕ್ರಂಗಿ, ಅಕ್ಕ ದೊಡ್ರಂಗಿ
ಚಿಕ್ಕಾಡಿ, ದೊಡ್ಯಾಡಿ ನಮ್ ತಾತನ್ ಜೊತೆ ಇದ್ದಾನೆ
ಇವ್ನ ಗಡ್ಡ ಇಡ್ಕಂಡ್ರೆ ನಮ್ ಮಾನ ಓಗಲ್ಲ
ಇವ್ನ ಬುಜ ಇಡ್ಕಂಡ್ರೆ ನಮ್ಮ ಮಾನ ಓಗಲ್ಲ

ಇವ್ನ ಮೀಸೆ ಇಡ್ಕಂಡ್ರೆ ನಮ್ ಮಾನ ಓಗಲ್ಲ
ಇಡ್ಕೊಳ್ಳಿ ಅಂದ್ಬುಟ್ಟು ….

ತಲ್ಲೊಂದು ಕೈಯ ಆಕುತ್ತಾರೆsss **|| ತಂದಾನ ||**
ತಲ್ಲೊಂದು ಕೈಯ ಹಾಕಿ ಇಡ್ಡ್ ಬುಟ್ರು
ಇನ್ಯಾಕಪ್ಪ ರಂಗಪ್ನ ನೋಡಕಾಯ್ತದ
ಅಯ್ಯಯ್ಯೋ ನಮ್ಮಪ್ಪ ನೋಡ್ದ

ಅಯ್ಯ ಟಮ್ಮಟು ಮ್ಮನೆ ಸ್ವಾಮಿ ಕುಣಿಯುತ್ತಾನೆsss **|| ತಂದಾನ ||**
ಸ್ವಾಮಿ ಟಮ್ಮಟುಮ್ಮನೆ ಕುಣಿತವ್ನೆ ರಂಗಪ್ಪ
ಅವ್ರು ಮೇಲುಗಿರಿಗೆ ಮೆರಿತಾರೆsss **|| ತಂದಾನ ||**

ಮೇಲುಗಿರಿ ಮೇರ್ದುಬುಟ್ಟು
ಟಮ್ಮಟುಮ್ಮನೆ ಕುಣದ್ಬುಟ್ಟು ನಾರಾಯ್ಣ ಮೂರ್ತಿ
ಏಯ್ ಸೋಲಿಗ್ರ ಬೊಮ್ಮೆಗೌಡ್ನ ಮಕ್ಳೆ
ತೇರು ತೆಪ್ಪ ಯೇಳ್ಬೇಕಾದ್ರೆ ಬಾವ ಅಂತ ಬಾಯ್ ಬುಟ್ಟುಟ್ಟಿದ್ದೀರಿ
ಈವೊತ್ತಿನ್ ದಿವ್ಸದಲ್ಲಿ ನೋಡು
ತೇರು ತೆಪ್ಪ ಒಪ್ಪಾಗಿ ಯೇಳ್ಕೊಟ್ ಬುಡ್ತಿನಿ

ತೇರು ಸನ್ವಾರ ಚಿಕ್ಕರಂಗಿsss **|| ತಂದಾನ ||**
ಅಯ್ಯ ತೇರು ಸನ್ವಾರ, ತೆಪ್ಪ ಮಂಗ್ಳೋರsss
ಬೂತ ಅರ್ಸೇವೆ ಬುದವಾರsss **|| ತಂದಾನ ||**
ಏಯ್ ಬೂತ ಅರ್ಸೇವೆsss ಬುದವಾರ ಚಿಕ್ರಂಗಿsss
ಆರು ಸೇರಕ್ಕಿ ಅರ್ಸೇವೆsss **|| ತಂದಾನ ||**

ಆರು ಸೇರಕ್ಕಿ ಒಡೆಯ ತೆಂಗಿನಕಾಯಿ
ಒಡೆಯ ರಂಗಪ್ಪನ ಸೇವೆ ಮೇಲುಗಿರಿಯಲ್ಲಿ ಮಾಡ್ತಾ ಇದ್ದಾರೆ
ನಾಳೆ ಸನ್ವಾರ ಅನ್ನೊಂದು ಗಂಟೆಗ ಬನ್ಯಮ್ಮ ಅಂದ್ಬುಟ್ಟು
ನಾರಾಯ್ಣ ಮೂರ್ತಿಯವ್ರು ಯೇಳ್ಬುಟ್ರು
ಅಗ್ಲೆಪ್ಪ ದಾಸಪ್ಪ ನೀವು ಬಂದು ಕಂಡು
ಪೋಡ್ನ ಸೋಲುಗ್ರೆಲ್ಲಾ ಗೊತ್ತಾಯ್ತು
ಆಗೆಂದ್ಬುಟ್ಟು ನಾರಾಯ್ಣ ಮೂರ್ತಿಯವ್ರು
ಯೇಳ್ಬುಟ್ಟು ಒಂಟೋಗಿದ್ದಾರೆ
ನಾಳೆ ಅನ್ನೇಡು ಗಂಟೆಗೆ ಬಂದ್ಬುಡ್ರಮ್ಮ ನೀವು
ತೇರು ತೆಪ್ಪ ಅರ್ಸೇವೆ - ಗುರ್ಸೇವೆ ಎಲ್ಲಾ ಆಗ್ತದೆ

ನಿಮ್ಗೆ ತೇರು ತೆಪ್ಪವ ನಾನು ತೋರುತಿನಿsss || **ತಂದಾನ** ||
ತೇರು ತೆಪ್ಪವ ಎಳ್ತೀನಿ ಬೊಮ್ಮೆಗೌಡ್ನ ಮಕ್ಕೆsss
ನೀವು ನಾಳೆ ಸನ್ನಾರ ಬರಬೇಕುsss || **ತಂದಾನ** ||

ಸ್ವಾಮಿಯವ್ರು ಯೇಳ್ಬುಟ್ಟು ಏನ್ಮಾಡ್ತ ಇದ್ದಾರೆ
ನಾಳೆ ಸನ್ನಾರ ತುರ್ತಾಗಿ ಬಂದ್ಬುಡ್ರಮ್ಮ ಅಂದ್ಬುಟ್ಟು
ಸೋಲಿಗ್ರ ಬೊಮ್ಮೆಗೌಡ ಮಕ್ಳು ಅಂದ್ರೆ
ಚಿಕ್ಕಕಾಡಿ, ದೊಡ್ಡಕಾಡಿ, ಚಿಕ್ಕರಂಗಿ, ದೊಡ್ಡರಂಗಿ,
ಕ್ಯಾತಿ, ಕ್ಯಾತಿದಂಡೆ ಮಾದ್ರಿ, ಮಾದಿ ದಂಡೆ ಕುಸ್ಮದೇವಿಯರಿಗೆ
ಯೇಳ್ಬುಟ್ಟು ಎಲ್ಲೋಗ್ತಾರೆ
ಆಹಾ ದಾಸಪ್ಪ ಅಂದ್ರೆ ಇಂತ ದಾಸಪ್ಪ ನಮ್ಗೆ ಎಲ್ಲೂ ಸಿಕ್ಕಿಲ್ಲ
ಅಯ್ಯಯ್ಯೋ ನಮ್ಮಪ್ಪ ನಮ್ಮಪ್ಪ ಮನೆ ದೇವ್ರು
ಒತ್ಕಂದ್ ಬಂದಿದ್ದ ನರ ನರ ಅಂದ್ಬುಟ್ಟು ....

ಅಯ್ಯ ಅಪ್ಪಗೆ ಸರದವಳೆ ಅರಮನೆ ಜೀನಿಯವಳೆsss
ಸೋಲಿಗ್ರೆ ಸಕುನ ನೋಡಿರಣ್ಣsss || **ತಂದಾನ** ||

ಅಯ್ಯ ಕಾಡ ಕೊಳಗ ಹೂವು ಕಾಡರ್ದ ಹೂ ಮುಡ್ಕಂಡು ಸೋಲ್ಗಿತ್ತಿ

ಅವ ಗಂಗಾದರನ ಗುಡಿಯಲಿsss || **ತಂದಾನ** ||

ಅಲ್ಲಾಣಿ ಇಲ್ಲಾಣಿ ಕಡ್ದು ಗಂಗಾದರ್ನ ಗುಡಿಯಾಣಿ ಸುಳಿ ಹೂ ಮುಡ್ಕಂಡು
ಸೋಲುಗ್ರು ಐಕ ಪಾಪ ದಡ್ಡು ಈ ಐಕಳ್ಗೆ ಗೊತ್ತಾಗ್ತದೆ

ಕಕ್ಕೆಯ ಜೊನ್ನಿ ಕೈಯಲ್ಲಿ ಇಡುಕೊಂಡುsss
ತುರಾಡಿ ತುಂಟಾಡಿ ಬರುತ್ತಾರೆsss || **ತಂದಾನ** ||

ಅಕ್ಕ .... ಅಕ್ಕಾ .... ಅಕ್ಕ .... ದಾಸಪ್ಪ ಬರ್ತಾನ ನೋಡಿ. ವೇಸದ ಮೇಲ್ ಬರ್ತಾ ಇದ್ದಾನೆ.
ದಾಸಪ್ನ ಸುಮ್ಮೆ ಅಂತ ತಿಳ್ಕೊಬೇಕಂತೇಳಿ, ಅಪ್ಪೋ ದಾಸಪ್ಪ ಸದ್ದು ಸದ್ದು ಉಸ್ರು ಮಾತಾಡ್ನಿಲ್ಲ. ದಾಸಪ್ಪ ಅಂದ್ರ್ ಯಾಕೋ ಮಾತೆ ಇಲ್ಲ
ಅಕ್ಕ ಇವ್ನಿಗೆ ಕಿಮಿ ಕೇಳಲ್ಲ
ನೆನ್ನೆ ದಿವ್ಸ ನಮ್ಮ ಪೋಡಿಗ್ ಬಂದ ದಾಸಪ್ನಲ್ಲ ಇಮ ಇವ್ರು ಬೇರೆ

ಇವ್ನ ಮೊರೆಯ ಮೇಲೆ ತಿಮಿರವ್ವsss || **ತಂದಾನ** ||
ಅಕ್ಕ ಮೋರೆಯ ಮೇಗೆ ತಿಮಿರವ್ವ ಅಂದ್ಬುಟ್ಟುsss
ಗಡ್ಡವ ಇಡ್ದು ಜಡಿತ್ತಾರೆsss || **ತಂದಾನ** ||

ಅಯ್ಯೋ ಇವ್ಯಾವುರಪ್ಪ ಅಂದ್ರು
ಅಪ್ಪ, ನಮ್ಮ ಸೋಲಿಗರ ಬೊಮ್ಮೇಗೌಡ್ನ ಮಕ್ಳೆ
ಚಿಕ್ಕಾಡಿ, ದೊಡ್ಕಾಡಿ, ಚಿಕ್ರಂಗಿ, ದೊಡ್ರಂಗಿ,
ಕ್ಯಾತಿ, ಕ್ಯಾತಿ ದಂಡೆ ಮಾದಿ, ಮಾದಿ ದಂಡೆ ಕುಸ್ಮದೇವಿ
ನನ್ಗೆ ಕೊಕ್ರಗೆ ಬಂದು ಕರೆಯುಂಟಾ?
ದಾಸರಿಗೊಂದು ಊರುಂಟಾ?
ಗಿರಿತವ್ಕೆ ಹೋದ್ರೆ ಎಷ್ಟೋ ಪ್ರಾಣಿಗಳು ಬರ್ತವೆ ನೀರ್ ಕುಡಿಯಾಕೆ
ಅಂಗೆ ನಾನು ಬಂದ್ ಬುಟ್ಟಿರಿನವ್ವ
ಈ ಬೆಳ್ಳಿ ಬೆಟ್ಟ ಅಂದ್ರೆಯಾವ್ ದಿಕ್ಕೂ?
ಏಯ್ ಇವ್ನಲ್ಲ ಇವ್ನಲ್ಲಾ
ನೆನ್ನೆ ಬಂದವ ಬೇರೆ ದಾಸಯ್ಯ
ಬೆಳ್ಳಿ ಬೆಟ್ಟ ನಮ್ಮನ್ನೆ ಕೇಳ್ತಾನೆ
ಅಯ್ಯ ದಾಸಯ್ಯ ನೀನು ಗೊತ್ತಿಲ್ಲ ದಾಸಯ್ಯ

ಯಾವಗೆಪ್ಪ ನೀನು ಬಂದೇsss || **ತಂದಾನ** ||

ಅಮ್ಮ ಅನುಮಂತ್ರಾಯನ ಗುಡಿಯೊಳಗೆ,
ಪೂರ್ವದ ಅದಿಯೊಳ್ಗೆ ಬಂದ್ಬುಟ್ಟೆ ಬೆಟ್ಟಾನು ನೋಡಿಲ್ಲ

ಅತ್ತಿ ಕಣಿವೇರಿ ಬಂದಿದ್ದೇನಿsss || **ತಂದಾನ** ||

## ೬. ಬಿಳಿಗಿರಿ ರಂಗನ ಕಾವ್ಯ (೧)

ಅತ್ತಿ ಕಣಿವೆ ಆದಿಲಿ ಬಂದ್ಬುಟ್ಟೆವ್ವ
ಪಾಪ ಇವ್ನ ಗಡ್ಡ ನೋಡು ಎಂಗಿದ್ದದು
ಅಕ್ಕ ಚಿಕ್ರಂಗಿ ಇವ್ನ ಗಡ್ಡ ನೋಡಕ್ಕ,
ಇವ್ನ ತಲೆ ನೋಡಕ್ಕ ಇವ್ನ ಗೊಡ್ಡು ಮೀಸೆ ನೋಡಕ್ಕ
ನೆನ್ನೆ ಬಂದ ದಾಸಪ್ನಲ್ಲಕ್ಕ ಇನ್ನೊಬ್ಬ ದಾಸಪ್ಪ
ಈ ದಾಸಪ್ಪ ಅಲ್ಲ ನೆನ್ನೆ ಬಂದ ದಾಸಪ್ಪ
ಬಾಳ ಉಸಾರಾಗಿ ಮಾತಾಡ್ತ ಇದ್ದ
ಇಂವ ಊಸಾರ್ ದಾಸಪ್ನಲ್ಲ
ದಡ್ಡ-ದಡ್ಡ ನನ್ನಂಗೆ

ಅಯ್ಯ ಬೆಳ್ಳಿ ಬೆಟ್ಟವೆ ಗೊತ್ತೆ ಇಲ್ಲsss || **ತಂದಾನ** ||

ಕೇಡಿ ಕೇಡಿ ನಿನ್ನಂಗೆ ಯಾರು? ಚಿಕ್ರಂಗಿ
ಈ ಉಡ್ಗಿ ಅಂಗೆ ಅಯ್ಯಯ್ಯೋ ನಮ್ಮಪ್ಪ

ನಾ ಮುಂದೆ ಹೋಗುತ್ತಿನಿ ನೀ ಮುಂದೆ ಬರುತ್ತಿsss
ನನ್ನ ಒಂದಿಗೆ ಬರುತಿಯಾsss **|| ತಂದಾನ ||**

ನಂನ್ನೊಂದಿಗೆ ಬತ್ತಿಯಾ ಅಂದೊತ್ತಿಗೆ
ರಂಗಪ್ಪ ಮೀಸೆ ನುಲಿತಾ ಇದ್ದ ಅಪ್ಪಪ್ಪ
ಸೋಲಿಗ್ರೈಕ ನನ್ನೊಂದ್ಗೆ ಬತ್ತಿನಿ ಆಂದದಕ್ಕೆ

ಅಮ ಕೊನೆ ಮೀಸೆಯ ಸ್ವಾಮಿ ಉರಿ ಮಾಡಿsss **|| ತಂದಾನ ||**

ಕೊನೆ ಮೀಸೆ ಉರಿ ಮಾಡಿಬಿಟ್ಟು ನಾರಾಯ್ಣ ಮೂರ್ತಿ
ಎಡಕ್ಕೆ ನೋಡುದ್ರೆ ಸೋಲುಗ್ರಬೊಮ್ಮೆ ಗೌಡ್ನ ಮಕ್ಳು
ಏನಯ್ಯ ನಮ್ ನೋಡ್ಬುಟ್ಟು ಮುಸಿ ಮುಸಿ ನಗ್ತನ ಮುದ್ಕಪ್ಪ
ಈ ಮುದ್ಕಪ್ಪ ನೋಡುದ್ರೆ ಇಂದ್ಗೆ ಸತ್ತನೋ ನಾಳ್ಗೆ ಸತ್ತನೋ
ಅದ್ ಗೊತ್ತಿಲ್ಲ ನಮ್ ನೋಡ್ಕಂಡು ನಗ್‌ನಾಡ್ತಾನೆ
ನೋಡ್ರಕ್ಕ ನೋಡ್ರಕ್ಕ ಚಿಕ್ರಂಗಿ, ದೊಡ್ರಂಗಿ,
ಚಿಕ್ಕಾಡಿ, ದೊಡ್ಕಾಡಿ ಸೋಲುಗ್ರ ಬೊಮ್ಮ್ರಗೌಡ್ನ
ಮಕ್ಕಳ್ ನೋಡಿ ಸಂತೋಷ ಪಡ್ತನೆ ದಾಸಪ್ಪ
ಏನಯ್ಯ ದಾಸಪ್ಪ ನಗ್‌ನಾಡ್ತಿಯೇ....

ಅಯ್ಯ ಗೊಡ್ಡು ಕೊನೆ ಮೀಸೆಯ ಉರಿಮಾಡಿsss **|| ತಂದಾನ ||**
ಅಯ್ಯ ನೋಡ್ರಕ್ಕ ನೋಡ್ರಕ್ಕ ದಾಸಯ್ನ ವೇಸವsss
ಅಕ್ಕ ನಮ್ಮನ್ ನೋಡ್ಕಂದಕ್ಕ ಕೊನೆ ಮೀಸೆ ಉರಿಮಾಡಿ
ಯಾವೂರ ಕಾಣಕ್ಕ ಕೇಳಿರವ್ವsss **|| ತಂದಾನ ||**

ಏಯ್ ಬೆಳ್ಳಿ ಬೆಟ್ಟಕ್ಕ ಬಂದಿದ್ದಿಯಲ್ಲ...
ನಾನು ಮುಂದ್ ಮುಂದೆ ಹೊಯ್ತಿನಿ
ಅಂದ್ಲು ಯಾರು ನಿನ್ನಾಗೆ ಕಿಲಾಡಿ
ಚಾರಿ ಕಿಲಾಡಿ ಆ ಉಡ್ಗಿ ಆಗೆ ಬಾರಿ ಕಿಲಾಡಿ
ಏಯ್ ದಾಸಪ್ಪ ನಾನು ಮುಂದ ಹೋಗ್ತಿನಿ ಬಯ್ಯ ಅಂದ್ಳು
ದಾಸಪ್ಪನ್ಗ ಆ ಉಡ್ಗಿ ನೋಡ್ಬುಟ್ಟು
ಇನ್ನ್ಯಾಕಯ್ಯ ಗಡ್ಡ ಮೀಸೆಯಲ್ಲ
ಇನ್ನೂ ಬೆಳ್ದು ಬುಡ್ತು ಇಸ್ಸು
ತೂರು ಆಡುತ್ತಾ ತಾರು ಆಡುತ್ತಾ

ಆಕಯ್ಯ ದೊಣ್ಣೆ ಕೈಯೊಳಗೆsss **|| ತಂದಾನ ||**

ಕಕ್ಕೆ ದೊಣ್ಣೆ ಕೈಲಿಡ್ಕಂಡು ನಾರಾಯ್ಣ ಮೂರ್ತಿ ಏನ್ ಮಾಡ್ತಾಯಿದ್ದಾನೆ?
ಬೊಳ್ಳಬೊಳ್ಗ, ಮೆಲ್ ಮೆಲ್ಗಾ ಓಗ್ತಾ ಇದ್ದಾರೆ
ಗಕ್ಕನ್ ತಿರ್ಗ ನೋಡ್ಬುಟ್ಟ ಡೊಡ್ರಂಗಿ ನಿನ್ನಾಗೆ ಬಾಳ ಯುಕ್ತಿವಂತೆ
ಇವ ಕೇಡಿ ಚಿಕ್ರಂಗಿ, ಇವ ಬುದ್ಧಿವಂತೆ ಡೊಡ್ರಂಗಿ
ಅಕ್ಕ ಮೇಲುಗಿರಿ ಕೈಲಾಸ ಅಂದ್ರೆ ನಮ್ಮಪ್ಪನ್ ಮನೆ ಮನೆದೇವ್ರು
ತಿರ್ಪತಿ ಬಿಟ್ಟು ಅನ್ನೇಡ್ ವರ್ಸ ಆಯ್ತು
ಈ ಉರ್ ನಾಡಿಗೆ ಬಂದಿದ್ದಾರೆ
ಓಕಳಿ ರಂಗಪ್ಪ ನಮ್ ನಾಡಿಗೆ ಬಂದು
ಬೂದುಬಾಳಿಗೆ ಬಂದ್ಬುಟ್ಟಿದ್ದಾರೆ
ಅಲ್ಲಿ ಬಂದು ತಿರ್ಪತಿ ವೆಂಟ್ರಮಣಸ್ವಾಮಿ
ನಾಮಕ್ಕರ್ಣ ಮಾಡ್ಕಂಡು ಮಗ್ಗ-ಮರಳ್ಳಿ,
ರಂಜಕಲ್ಲು, ಎಗ್ಗದೇವನಕೋಟೆ,
ಪಿರಿಯಾಪಟ್ಣ, ಸಂತೆ -ಸರ್ಗೂರು
ನಮ್ಮ ಕರ್ನಾಟಕದಲ್ಲೆಲ್ಲಾ ದಾಸೋಹ ಮಾಡ್ಕಂಡು
ಬೆಂಗಳೂರು, ಬೀರಳ್ಳಿ ಎಲ್ಲಾ ದಾಸೋಹ ಮಾಡ್ಕಂಡು ….
ನಮ್ಮಪ್ಪನ್ ಮನೆ ದೇವ್ರಾಗ್ ಬೇಕಾದ್ರೆ ಸುಲಬ್ ವಲ್ಲ
ಈವೋತ್ತಿನ್ ದಿವ್ಸ ನೋಡಕ್ಕ ಆ ದಾಸಪ್ನೋರು
ನಮ್ ಮೇಲುಗಿರಿಕೆ ತಕ್ಕಂಡೋಗಿ ಬಿಟ್ಬುಟ್ರೆ
ಕಜ್ಜಿ ನೋಡಿ ಇದ್ಯಾವ್ ದಾಸಪ್ಪ ಅಂತ ಬಯ್ ಬೇಡಿ
ಅದೇ ರೀತಿ ಬಂದ್ಬುಟ್ರೆ ಏನ್ಮಾಡ್ತಿಯೇ ಆಗೆಂದ್ಬುಟ್ಟು
ದೊಡ್ರಂಗಿ ಬಾಳ ಬುದ್ದಿವಂತೆ
ಚಿಕ್ರಂಗಿ ಈ ಉಡ್ಗಿಯಾಗೆ ಕಿಲಾಡಿ

ಟಮ್ಮಟಮ್ಮನೆ ತಾಯಿ ಕುಣಿಯುತ್ತಾರೆsss || **ತಂದಾನ** ||
ಅಲ್ಲಿ ಮುಂದ್ಕೆ ಮೂರೆಜ್ಜೆ ಒಯ್ತಾನೆ ನಾರಾಯ್ಣಾsss
ಜಗ್ಗಿ ಕುಣ್ತಾವ ಮಾಡುತ್ತಾನೆsss || **ತಂದಾನ** ||

ಜಗ್ಗಿ ಕುಣ್ತಾವ ಮಾಡೊವತ್ಗೆ
ಆ ಸೋಲಿಗ್ರ ಬೊಮ್ಮಗೌಡ್ನ ಮಕ್ಳು
ಅಕ್ಕಕ್ಕ ನೀಡ್ರಕ್ಕ ನೋಡ್ರಕ್ಕ

ಅಕ್ಕ ದಾಸಯ್ಯ ವೇಸವ ನೋಡ್ರಕ್ಕ ವೇಸವಾದಂತೆ ದಾಸಯ್ಯsss || **ತಂದಾನ** ||
ಅಯ್ಯೋ ದಾಸಯ್ಯ ವೇಸ ನೋಡ್ಕೊಂಡು ಕುಣಿತವ್ರೆsss
ನೋಡಿರಲಕ್ಕ ದಾಸಯ್ಯsss || **ತಂದಾನ** ||
ಕಾರ್ಯ ಹೋದೆಲ್ಲಾ ಮೋರೆಲ್ಲಾ ಬತ್ತೋಯ್ತುsss || **ತಂದಾನ** ||
ಕೂರೀರ ಗ್ಯಾನ ನಿನುಗ್ಯಾಕsss || **ತಂದಾನ** ||

ಏಯ್ ಅಣ್ಣೇ ಊವ್ನಾಗೆಲ್ಲಾ ತಲೆಯಲ್ಲಬೆಳ್ಗಾಗಿsss
ಕನ್ನುಡ್ಗಿಯೆರ ಸುದ್ದಿ ನಿನಗ್ಯಾಕsss **|| ತಂದಾನ ||**

ಅಯ್ಯೋ ಅಣ್ಣೆ ಉವ್ನಾಗ ತಲೆಯೆಲ್ಲಾ ಬೆಳ್ಳಗಾಗ್ ಬುಡ್ತು,
ಕನ್ನೆ ಉಡ್ಗೀರ ಸುದ್ದಿ ನಿನಗೇನು
ಅತ್ತಿ ಊವ್ನಾಗೆ ನೆತ್ತೆಲ್ಲಾ ಬತ್ತೋಗ್ ಬುಡ್ತು
ಕೋರಿ ಉಡ್ಗೀರ ಸುದ್ದಿ ನಿನ್ಗೇನು ದಾಸಯ್ಯ

ಕೇರಿಗೆ ನಡಿಯೇ ಮುದುಕಯ್ಯsss **|| ತಂದಾನ ||**

ಕೇರಿಗೆ ನಡಿ ಅಂದ್ರೆ ದಾಸಪ್ಪ ಏನ್ಮಾಡ್ತ ಇದ್ದಾನೆ
ಏಯ್ ಸೋಲಿಗ್ರ ಬೊಮ್ಮೆಗೌಡ್ನ ಮಕ್ಳ ನೋಡ್ತಾ ….

ಬಡಗಾಲು ನೋಡುತಿನಿ ತೆಂಕಾಲು ನೋಡುತಿನಿsss
ಮುತ್ತಾಗದುವ್ವ ಮುಡಿತೀರಿsss
ಮುತ್ತಾಗದುವ್ವ ಮುಡಿತೀರಿsss **|| ತಂದಾನ ||**

ಮುತ್ತುಗದುವ್ವ ಮುಡುಕೊಂಡು
ನಾರಾಯ್ಣ ಮೂರ್ತಿಯವ್ರು ಬರ್ವಾಗ
ಟಮ್ಮಟಮ್ಮನೆ ಕುಣ್ತಾ ಮಾಡ್ಬುಟ್ಟು ….
ಯಾವುರವ್ರಯ್ಯ?
ಅಯ್ಯ ಕೊಕ್ಕರೆಗೊಂಡು ಕೆರೆಯುಂಟಾ?
ದಾಸಯ್ಯಾನಿಗೊಂದು ಊರುಂಟಾ?
ಮೇಲುಸೀಮೆಯಿಂದ ಬಂದನಮ್ಮ ಉಟ್ಟಿದ್ದು ತಿರ್ಪತಿ
ಬೆಳದದ್ದು ಯರಕ್ ನಾಡು .
ಬಂದಿರೋದು ಗೋಕುಲದೇಸ
ನಾನು ಬಂದ ತಳವೇ ಗೊತಿಲ್ಲಮ್ಮ
ಮನೆ ಮನೆ ನಿದ್ದೆ ಮಾರಿ ಗುಡಿನಿದ್ದೆ ಅಂದ್ರು
ಅಯ್ಯಯೋ ನಮ್ಮಪ್ಪನ್ ಮನೆದೇವ್ರು ಬಿಟ್ಕೋಗ್ತಿರಲ್ಲ
ಅದಕ್ಕೊಂದಕ್ಕೆ ಸಂತೋಷ ಪಡ್ಬೇಕು ಅಂದ್ರು
ಸೋಲಿಗ್ರ ಬೊಮ್ಮೆಗೌಡ್ನ ಮಕ್ಕ
ಆವಾಗ ಬಂದ್ಬುಟ್ರು ಎಲ್ಲಾ

ಬೆಳ್ಳಿ ಬೆಟ್ಟಕ್ಕೆ ಬರುತ್ತಾರೆsss **|| ತಂದಾನ ||**
ಮೇಲುಗಿರಿ ಚಂದ ಮೆರೆಯೊ ಮಂಟಪ ಚಂದsss
ಆಣೆಯ ಮೇಲೊಂದು ಅರಿನಾಮ ಬಲುಚಂದ **|| ಅಡಿರಿ ರಾಗಗಳ ||**
ರಂಗಯ್ನ ಮಡದಿರುsss ರಂಬೆಯ ಚೆಲುವಿರುsss

ಬಂಗಾರದ ಕೈಯ ಬಳೆಯವರುsss **|| ಅಡಿರಿ ರಾಗಗಳ ||**
ರಂಬೆಯ ಚೆಲುವೆರು ಲಕ್ಷ್ಮಿಯ ದೇವಿಯಂತೆsss
ಅಯ್ಯ ಮಂಗಳಾರ್ತಿಸ್ವಾಮಿ ಮಾಡುತ್ತಾರೆsss **|| ಅಡಿರಿ ರಾಗಗಳ ||**

ಸ್ವಾಮಿ ನಾರಾಯ್ಣ ಮೂರ್ತಿಯವ್ರು
ಬಂದು ಪಟ್ಟೆ ಮಂಚದ ಮೇಗೆ ಕೂತುಕೊಂಡು
ನಾಚನೆಯಿತ್ತು ಕೋಟೆಗೆ ಬಡತನವನ್ನು ತಿದ್ದುಬುಟ್ಟು
ಮಾವಿಸ್ಣು ಬಂದು ಕೂತುಕೊಂಡು ಹಿಂದೆ ಮಾಡಿಲ್ಲ
ನನಗೆ ಮಂಗಳಾರ್ತಿ ಮುಂದೆ ಮಾಡಲ್ಲ
ಕಂದ ನನ್ನ ಮಡದಿಯಾಗಿರವ್ವ ಈ ಪೊತ್ಯಾಕ್ ಮಾಡಿದ್ರಿ
ಏಯ್ ದಾಸಪ್ಪ ಅಂದ್ರೆ ದೇಸ ಕೆಡ್ಸಿದವ ನೀನು
ದಾಸ ಅಂದ್ರೆ ಯಾವತ್ತೊ ನೀನು ದೇಸ ಕೆಡ್ಸಿದಿಯೇ
ಈವೊತ್ತು ನಾಳೆಯಾರ್ ಬರ್ತಾರೆ
ಸನ್ವಾರ ದಿವ್ಸ ಅಂದೆ ಪಟ್ಟದ ಪಾರ್ವತಿ
ಬೆಟ್ಟದ ಚಾಮುಂಡಿ ತಾಯಿ ಸೋಸಲೆ ವನ್ನಾದೇವಿ
ಮುಡ್ಕುತೊರೆ ಮಲ್ಲಪ್ನ ಮಡ್ಡಿ ಗಂಗಾದೇವಿ
ಕೂಡ ಬರ್ತಾ ಇದ್ದಾರೆ
ನೀಲಗಿರಿ ಕೈಲಾಸಕ್ಕೆ

ಅವ್ರು ಅಂದ್ಕೊಂಡು ಊವ ಮುಡಕೊಂಡುsss **|| ತಂದಾನ ||**
ಓ ಅಂದ್ಕೊಂಡು ಊವ ಅವ್ರು ಮುಡ್ಕೊಂಡು ಬರ್ವಾಗsss
ಮಂಡ್ಕ ಮಲ್ಲಿಗೂವ ತರಬೇಕುsss **|| ತಂದಾನ ||**

ಎಣ್ಣೆಂಬ ಜಾತಿ ಅಂದ್ರ ಊ ಕಂಡ್ರೆ ಬೌ ಆಸೆ ಬೌ ಆಸೆ ಮಾಡ್ಕಂಡು
ಏಯ್ …. ಮಡ್ಡಿರೆ …. ಬರ್ತಾ ಇದ್ದಾರೆ
ಪಟ್ಟದ ಪಾರ್ವತಿ, ಬೆಟ್ಟದ ಚಾಮುಂಡಿ ತಾಯಿ
ಸೋಸ್ಲೆ ವನ್ನಾದೇವಿ, ಮುಡ್ಕುತೊರೆ ಮಲ್ಲಪ್ಪ
ಮಲ್ಲಪ್ನ ಮಡ್ಡಿ ಗಂಗಾದೇವಿ ಕೂಡ ಬರ್ತಾ ಇದ್ದಾರೆ
ಅಯ್ಯೋ ಆ ಮುಡ್ಕುತೊರೆ ಮಲ್ಲಪ್ಪನವ್ರು
ಮಲ್ಲಪ್ನ ಮಡ್ಡಿ ಗಂಗಾದೇವಿ ಕೂಡ
ಪಟ್ಟದ ಪಾರ್ವತಿ ಕೂಡ ಬರ್ತಾ ಇದ್ದಾರೆ
ಅಂದ್ಕೊಂಡು ಚಂದಕೊಂಡು ಊವ ಮುಡ್ಕೊಂಡು ಬರ್ತಾರೆ
ಎಂಡಂದಿರು ಬೇರೆ ಕೂತ್ಗೋಳ್ ಬೇಕು ಗಂಡಂದೀರು ಬೇರೆ ಕೂತ್ಗೊಳಬೇಕು

ಅಯ್ಯೋ ಮಂಟ್ಟಕ್ಕೆ ತಕ್ಕಂತ ಮರುಗು ಮಲ್ಲಿಗೆ ತರಬೇಕುsss **|| ತಂದಾನ ||**
ಮಂಟ್ಟಕ್ಕೆ ಬೇಕಾದ ಮರುಗು ಮಲ್ಲಿಗೆ ತರಬೇಕಾದ್ರ
ಎಣ್ಣೇ ಸ್ವಾಮಿನಾರಾಯ್ಣವ್ರು ಪಟ್ಟ ಉತ್ಸವ ಮಾಡ್ಕೊಂಡು

ಪಟ್ಟದ ಮೇಲೆ ಬಂದು ಕುಂತ್ಕೊಂಡು
ಜಗತ್ತಿಗೆ ಅಟ್ಟ ತಿದ್ದುಕೊಂಡು ಉಸ್ಸೋ ಅಂತ ಕುಂತ್ಗೊಂಡ್ರು
ಆಹಾ ಇನ್ನಾಕಯ್ಯ ನಮ್ಮ ದಾಸಪ್ಪ ಉಸ್ಸೋ ಅಂತ ಕುಂತ್ಬುಟ್ಟ
ಏನಯ್ಯ ಉಸ್ಸೋ ಅಂತ ಕೂತ್ಬುಟ್ಟಿದ್ದಾರೆ ಏನಯ್ಯ ಅಂದ್ರು
ಅಯ್ಯಯೋ ನಾಚನಟ್ಟಿ ಎರೊಂಬತ್ತು ಕೋಟೆಗೆ ಪಟ್ಟ ತಿದ್ದಬೇಕು
ಎಣ್ಣೆ, ಉಚ್ಚೆಣ್ಣೆ, ಬೆಪ್ಪೆಣ್ಣೆ, ಮಂಕೆಣ್ಣೆ
ನನ್ ಕೆಲ್ಸ ನಿಂಗೊತ್ತ ಅಂದ್ರು
ಆಹಾ ನಿನ್ ಕೆಲ್ಸ ನನ್ಗೆ ಚೆನ್ನಾಗೊತ್ತು
ಸ್ವಾಮಿ ಮುದ್ಕುತೊರೆ ಮಲ್ಲಪ್ಪಾವ್ರು ಬತ್ತಾರೆ
ಅವರ ಮಡ್ದೀರು ಬತ್ತಾರೆ, ನಂಜಪ್ಪ ಬತ್ತಾರೆ
ನಮ್ಗೇನ್ ಬೆಲೆ ಕೊಡ್ತಾ ಇದ್ದೀಯೇ

ಅರ್ಸಿ ಇಳ್ಯಾವ ಕೊಡಬೇಕುsss **|| ತಂದಾನ ||**
ಅಯ್ಯ ಆರಿಸಿ ಇಳ್ಯಾವ ಕೊಟ್ಟಾರೆ ನೋಡೆಣ್ಣೇsss
ನಾನು ಜಾಲದ ಊವ ತರುತ್ತೀನಿsss **|| ತಂದಾನ ||**
ಅಯ್ಯ ಜಾಲದ ಊವ ತರ್ತೀನಿ ತೊಳ್ಸಮ್ಮsss
ಮಂಟ್ಟಕ್ಕೆ ತಕ್ಕಂತ ತುರುಗು ಮಲ್ಲಿಗೆ ತರುತ್ತೀನಿsss **|| ತಂದಾನ ||**

ಎಣ್ಣೆಂಬ ಜಾತಿ ಏನೆಂದ್ರೆ ಊವಂದ್ರೆ ಬೌ ಆಸೆ
ಅಯ್ಯಯೋ ನಮ್ಮಪ್ಪ ಇನ್ಯಾಕ ಅಕ್ಕಕ್ಕ ತೊಳ್ಸಮ್ಮ
ಲಕ್ಷ್ಮಿದೇವಿ ಸ್ವಲ್ಪ ಈ ನನ್ನ ಯಜಮಾನ ಆಗಿರೋ ....
ಈ ವೋತ್ತಿನ್ ದಿವ್ಸ ನೋಡು ....

ಅರ್ಸಿ ಇಳ್ಯಾವ ಕೊಡಿರವ್ವsss **|| ತಂದಾನ ||**

ಅರ್ಸಿ ಇಳ್ಯಾವ ಕೊಟ್ಬುಟ್ಟಿದ್ದಾರೆ
ನಾರಾಯ್ಣ ಮೂರ್ತಿಯವ್ರು ಏನ್ ಮಾಡ್ತ ಇದ್ದಾರೆ
ಉಸಿನಗೆ ನೆಗ್ ನಾದ್ತ ನಿತ್ಕೊಂಡ
ಆಹಾ ಏಯ್ ಮಡ್ಡಿ ....
ಏನ್ರಿ ಅಂದ ಏನ್ರಪ್ಪ ನಮ್ಮೆಜ್ಮಾನ್ರೆ ಅಂದ್ರು
ಆಲ್ ಕರಿಯಾಕೆ ನಿನ್ ತಂದೆ ಆಲು ಕಾಯ್ಸಕೆ ನಿನ್ನ ತಂದೆ

ಬೆಣ್ಣೆ ಕಡೆಯೋಕೆ ತರಬೇಕುsss **|| ತಂದಾನ ||**
ಅಯ್ಯ ಬೆಣ್ಣೆ ಕಡೆಯಾಕೆ ಆರಾರ ತರಬೇಕುsss
ಸೋಲಿಗ್ರ ಬೊಮ್ಮನ ಮಗಳಂತೆsss
ನಾನು ಸೋಲಿಗ್ರ ಬೊಮ್ಮೆಗೌಡ್ನ ಮಗಳ ತರ್ದಿದ್ದ ಮೇಗೆಯsss
ನಾನು ತೇರ ತಡಿಗ ತಿಮ್ಮಯ್ಯನಲ್ಲsss **|| ತಂದಾನ ||**

ತೇರ ತಡಿಗ ತಿಮ್ಮಯ್ನು ನಾನಲ್ಲsss
ಮೇಲುಗಿರಿಕೆ ರಂಗಯ್ನುಲ್ಲsss
ಏಯ್ ಮೇಲುಗಿರಿಕೆ ರಂಗಯ್ಯನು ನಾನಲ್ಲsss
ಜಗತ್ತಿಗೆ ದೊಡ್ಡವನು ನಾನಲ್ಲsss **|| ತಂದಾನ ||**

ತಾಯವರಿಗೆ ತುಂಬಾ ಚಿಂತೆ ಬಂದ್ಬುಡ್ತು
ಅಯಯ್ಯೋ ನಮ್ಮಪ್ಪ ಈ ಆಳಾದ್ ದಾಸಯ್ನಿಗೆ
ಅರಿಸಿನ ಕೊಟ್ಬುಟ್ಟು ನಾವು ಎಂತ ಕೆಲ್ಸ ಆಗೋಗ್ ಬುಡ್ತು
ಕೊಟ್ಬುಟ್ಟು ನಾವು ಕೆಟ್ವೊ ಅಂದ್ಬುಟ್ಟು
ಸೋಲಿಗ್ರ ಬೊಮ್ಮೆಗೌಡ್ನ ಪೋಡಿಗೋಗ್ತಾನೆ
ಸೋಲಿಗ್ರ ಬೊಮ್ಮೆಗೌಡ ಪೋಡು ಅಂದ್ರೆ
ಗುರುವಿನ ಗದ್ದೆ ಅತ್ರ ಓಗ್ತಾನೆ
ಆಹಾ ಸೋಲಿಗ್ರ ಬೊಮ್ಮೆಗೌಡ ಅಂದ್ರೆ ಏನ್ಮಾಡ್ತ ಇದ್ದಾನೆ
ಎಡಗಡೆ ಮೂಚೇಲ ಆಸ್ಗಂಡು
ಬಲಗಡೆ ಗೆಜ್ಜೆದೊಣ್ಣೆ ಇಟ್ಕಂಡು ಕೂತ್ಬುಟ್ಟಿದ್ದಾನೆ

ಅಯ್ಯ ಜಾಗ ಕೊಡಯ್ಯ ಬೊಮ್ಮೇಗೌಡ sss **|| ತಂದಾನ ||**
ಅಯ್ಯ ಯಾವೂರ ದಾಸಯ್ಯ, ಯಾವೂರ ಕೇರಿಯವ್ನsss
ಮತ, ಕುಲವ ಹೇಳು ದಾಸsss **|| ತಂದಾನ ||**

ಅಪ್ಪ ಬೊಮ್ಮೆಗೌಡ್ರೆ ನಮ್ಗೆ ಯಾವ ಕುಲವುಂಟು?
ಮತ ಉಂಟಾ?
ಕೊಕ್ಕರೆಗೆ ಒಂದು ಕೆರೆ ಉಂಟಾ?
ದಾಸರಿಗೆ ಒಂದು ಊರುಂಟಾ?
ದಾರಿತಪ್ಪಿ ಬಂದ್ಬುಟ್ಯಪ್ಪ

ಸ್ವಲ್ಪ ಜಾಗ ಕೊಡಯ್ಯ ಬೊಮ್ಮೆಗೌಡsss **|| ತಂದಾನ ||**

ನೋಡಪ್ಪ ಈವೊತ್ತಿನ್ ದಿವ್ಸದಲ್ಲಿ... ಅವ್ವ ಚಿಕ್ರಂಗಿ
ಏನಪ್ಪ...? ಏಪ್ಪಾ...? ಅಪ್ಪನಾ ಕೂಗ್ತಾರೆ.
ಬೊಮ್ಮೆಗೌಡ್ನ ಕೂಗುವಾಗ...
ಅವ ಸೋಲುಗ್ರ ಬೊಮ್ಮೆಗೌಡ ಅಂದ್ರೆ
ಪಗಡೆ ಒಂದ್ಕಡೆ, ಚಿಕಾಣಿ ಮೂಲೆ ಚೀಲ ಒಂದ್ಕಡೆ ಇಟ್ಬುಟ್ಟಿದ್ದಾರೆ
ಅಡ್ಗೇನಮ್ಮ ಮಾಡಿದ್ದೀರಿ?
ಅಪ್ಪ ಈವೊತ್ತು ಏನು ಊಟ ಇಲ್ಲಪ್ಪ
ಅಣ್ಣೆ ಸೊಪ್ಪು ಆರ್ಕಿನ ಅಂಬಿಲಿ ಕಾಯ್ಸಿದ್ದೀವಿ

ದಾಸಯ್ನಗೆ ಸ್ವಲ್ಪ ಕೊಡಿರವ್ವsss || **ತಂದಾನ** ||
ಅಯ್ಯ ದಾಸಯ್ನಿಗೆ ಸ್ವಲ್ಪ ಕೊಡರ್ವ್ವ ಎನುವಾಗsss
ಬೊಳ್ ಬೊಳ್ಗೆ ಅಡ್ಡ ಎತ್ತುತ್ತಾರೆsss || **ತಂದಾನ** ||

ಬೊಳ್ ಬೊಳ್ಗೆ ಅಡ್ಡ ತೆಕ್ಕೊಂಡು
ಏನ್ಮಾಡ್ತಾನೆ ನಾಲ್ಕು ದಿಕ್ಕೂವೆ ನೋಡ್ತಾನೆ
ಆರು? ನಾರಾಯಣ
ಏಯ್ ದಾಸಯ್ಯ
ಏನ್ರಪ್ಪ ಬೊಮ್ಮೆಗೌಡ
ಕೋಲ್ಗುಳೀಕೋಗಪ್ಪ, ಅಲ್ಲಿ ಸ್ವಲ್ಪ ಊಟ ಮಾಡ್ಕಂದು ಮನಿಕೋಗಪ್ಪ ಅಂದ್ರು

ಅಂವ ಮೆಲ್‌ಮೆಲ್ಗೆ ಸ್ವಾಮಿ ವೋಗುತ್ತಾರೆsss || **ತಂದಾನ** ||

ಮೆಲ್ ಮೆಲ್ಗೋಗಿ ನಾರಾಯ್ಣಮೂರ್ತಿಯವ್ರು
ಸಂಕು ಜಾಗ್ಟ ಮಡ್ಗದ್ರು ಜಾಗ ಚಿಕ್‌ದಾಗ್ಬುಡ್ತು

ಅಯ್ಯೋ ಜಾಗ ಕೊಡಯ್ಯ ಬೊಮ್ಮೆಗೌಡ || **ತಂದಾನ** ||
ಜಾಗ ಕೊಡಪ್ಪ ಬೊಮ್ಮೆಗೌಡ ಅಂತೇಳುವಾಗsss

ಕೋಳಿಗಳೆಲ್ಲ ಚಿಂಯ್ಯೋ ಪಂಯ್ಯ ಅಂತ ಸಾಯ್ತ ಇದ್ದವಲ್ಲ
ಅಮ್ಮ ದೊಡ್ರಂಗಿ ಇದ್ಯಾಕೊ ದಾಸಪ್ನ ಗಿಲ್ಮೇಲಿ
ಕೋಳಿಯಲ್ಲ ಪತ್ರಗಟ್ಟವೆ ನೋಡ್ರಮ್ಮ ಅಂದ್ರು
ಅಪ್ಪಪ್ಪ ಈ ದಾಸಪ್ಪ ಏನ್ಮಾಡ್ತ ಇದ್ದಾನೆ

ಅವ್ರು ಕುಕ್ರಗಾಲ್ನಲ್ಲಿ ಕೂತಿದ್ದಾರೆsss || **ತಂದಾನ** ||

ಕುಕ್ಕರ ಗಾಲ್ನಲ್ಲಿ ಕೂತ್ಬುಟ್ಟಿದ್ದಾರೆ ನಾರಾಯ್ಣ ಮೂರ್ತಿಯವ್ರು
ಅಪ್ಪಪ್ಪ ನೋಡಪ್ಪ ನೋಡಪ್ಪ ಕೋಳಿಗಳೆಲ್ಲಾ ಸತ್ತೋಯ್ತಿದ್ದವೆ
ದಾಸಪ್ನ ಬೇಗ ಕಡಸ್ಸೈಪ್ಪ

ಅಲ್ಲಿ ಬಿರ್ರನೆ ಬೆಂಕಿಯ ಆಕಿರಯ್ಯsss || **ತಂದಾನ** ||

ಆಗನೋ ದೊಡ್ರಂಗಿ ವೋಗಿ
ಬಂಡಿಗೂಡು ಗೊತ್ತುತಾನೆ?
ಬಂಡಿಗೂಡು ತೆಕ್ಕೊಂಡೋಗಿ
ಕಾರೆ ಅಂಬ ಬಂಡಿ ಗೂಡ್ಗೆ ಚೆನ್ನಾಗಿ ಬೆಂಕಿ ಆಕ್ಬುಟ್ಟು
ಮನಿಕೊ ದಾಸಪ್ಪ ಅಂದ
ದಾಸಪ್ಪ ಆಗ ಸನ್ನೆ ಮಾಡ್ತಾನೆ

ಮೂಡಲ ನೋಡುತವ್ರೆ ಬಡಗಲು ನೋಡುತವ್ರೆsss
ತೆಂಕ ದಿಕ್ಕಲು ನೋಡುತ್ತಾರೆsss **|| ತಂದಾನ ||**

ತೆಂಕ್ಕ ದಿಕ್ಕ ನೋಡ್ಬುಟ್ಟು ನಾರಾಯಣವ್ರು
ಮೂರು ದಿಕ್ಕು ನೋಡುದ್ರು
ಆಗ ದೇವೇಂದ್ರನಿಗೆ ಐಕ್ಯ ಕೊಟ್ರು
ಮೂಡಲ ಬರ ಆಕ್ರ ಮಳೆ
ಬಡಗಲು ದಿಕ್ಕು ಬಲಾಗ್ರ
ಎಂಟು ದಿಕ್ಕು ಬಲಾಗ್ರ
ಎಂಟು ದಿಕ್ಕು ನಾಲ್ಕು ದಿಕ್ಕೂ ಬಲಾಗ್ರ
ಸೋಲುಗ್ರ ಬೊಮ್ಮೆಗೌಡ್ನ ಪೋಡ್ನೊಳ್ಗೆ

ಅಯ್ಯ ಕಾರ ಮಳೆಯಂತೆ ಕರೆಬೇಕುsss **|| ತಂದಾನ ||**
ಕಾರ ಮಳೆಯಂತೆ ಕರಿಬೇಕು ಅಂತ ಕೂತ್ಬುಟ್ಟsss
ವಿಷಗಾಳಿ ಬೀಸ್ತು ಕಾರ್ ಮಳೆ ಬಂದಾಯ್ತುsss
ಗಡಗಡ್ನೆ ದಾಸಯ್ಯ ಒದ್ರುತ್ತಾರೆsss **|| ತಂದಾನ ||**

ಏಯ್ ಚಿಕ್ರಂಗಿ ದಾಸಪ್ಪ ಸತ್ಯೋಗ್ ಬುಡ್ತಾನೆ
ಆ ದಾಸಪ್ನ ಸ್ವಲ್ಪ ಕುಸ್ಮದೇವಿ ಮಲ್ಗಾಳಲ್ಲ
ಆ ಮಂಚದ ಕೆಳ್ಗಾದ್ರು ಬುಡುವ್ವ ಅಂದ್ರು
ಅಯ್ಯೋ ದಾಸಪ್ಪ ಮರಿಯೊಂದ್ಗು ಬೇಡ
ಕೋಳಿಯೊಂದ್ಗು ಬೇಡ ಅಂದ್ಬುಟ್ಟು
ಕಕ್ಕೆಸೊಪ್ಪಿನ ಗುಳ್ಳೊಳಗೆ ಬೆಳ್ಳಿಸೊಪ್ಪಿನ ಮಂಚದ ಮೇಲೆ
ಮಲ್ಗಿದ್ದಾಳೆ ಕುಸ್ಮದೇವಿ
ಅಯ್ಯೋ ದಾಸಪ್ಪ ಬನ್ನಿ ಬನ್ನಿ ನಮ್ ಕುಸ್ಮದೇವಿ ಮಲ್ಗಿದ್ದಾಳೆ
ಆ ಮಂಚದ ಕೇಳ್ಗಾದ್ರು ಮನಿಕಪ್ಪ ಅಂದ್ರು
ಏನ್ ದಾಸಪ್ಪ ಗಡ ಗಡ ಗಡ್ನೆ ನಡಿಕೊಂಡು

ಮೇಲು ಮುಸ್ಕಂತೆ ತೆಗಿತ್ತಾರೆsss **|| ತಂದಾನ ||**

ಮೇಲು ಮುಸ್ಕ ತೆಗ್ದು ನೋಡ್ತಾರೆ
ನಾರಾಯ್ಣ! ಸೂರ್ಯ ಆತರ ಇಲ್ಲ
ಚಂದ್ರನೂ ಆತರ ಇಲ್ಲ
ಲಕ್ಸದ ಗೊಂಬೆಯು ಆ ತರ ಇಲ್ಲ
ಅಯ್ಯಯೊ, ನಮ್ಮ ಜಾತಿಲಿ ಇಂತವ್ರು ಇಲ್ವಲ್ಲ
ನಮ್ಮ ಕುಲ್ದಲ್ಲಿ ಇಂತ ತರವಾದ ಉಡುಗ್ರು ಇಲ್ಲ

ಅಯ್ಯೋ ಪಟ್ಟೆ ಮಂಚಕೆ ನೀನು ಬರಬೇಕುsss || **ತಂದಾನ** ||

ಪಟ್ಟ ಮಂಚಕ್ಕೆ ಕಕ್ಕೆ ಸೊಪ್ಪಿನ ಮಂಚಕೆ ಕರಕೊಂಡು
ಕುಸ್ಮದೇವಿ ಮಲ್ಗಸ್ ಕೊಂಡು
ಏನಯ್ಯ ಗಿಣಿಮರಿ ಗಿಣಿಮರಿ
ನಾರಾಯಣಮೂರ್ತಿಯವ್ರು ಮನಿಕೊಂಡ್ರು
ಅಯ್ಯೋ ನೀನು ಮನಿಕೊಂಡ್ರೆ ಕೋಲಿಕೂಗ್ತಾ ಇದೆ
ಲೋಕ್ವೆಲ್ಲಾ ಬೆಳಗಾಗ್ತ ಇದೆ

ಎದ್ರು ನಾರಾಯ್ಣ ಬೆಳಗಾಯ್ತುsss || **ತಂದಾನ** ||
ಚೆಲ್ಲಿದರು ಮಲ್ಲಿಗೆಯ ಬೇಳ್ಗಿ ಬೆಟ್ಟಾದ ಮ್ಯಾಗೆsss
ಅಂದಾ ಚೆಂದಾದ ಮಾಯ್ಕಾರ ರಂಗಪ್ಪನಿಗೆ sss || **ಚೆಲ್ಲಿದರು** ||
ಬೆಳ್ಳಿ ಬೆಟ್ಟಾದ ಮ್ಯಾಗೆ ಚೆಲ್ಲಿದರು ಮಲ್ಲಿಗೆಯsss
ಅಂದಾದ ಚೆಂದಾದ ಮಾಯ್ಕಾರ ರಂಗಪ್ಪನಿಗೆ sss || **ಚೆಲ್ಲಿದರು** ||
ಕಾಡ ಸೋಲಗಿತ್ತಿ ಕಾಡಿಗೆ ಒಂಟವಳೆsss
ಚಿಗ್ರು ತತ್ತವಳೆ ಸಿರುಗಂದ ರಂಗಯ್ಯಾ sss || **ಚೆಲ್ಲಿದರು** ||
ಅವ ಚಿಗ್ರು ತತ್ತವಳೆ ಸಿರುಗಂದ ರಂಗಯ್ಯಾ sss
ಅಯ್ಯ ಒಡ್ಡು ನೋಡಯ್ಯ ಮಯಿಮೆಯsss || **ಚೆಲ್ಲಿದರು** ||
ನೀವು ಎಲ್ಲಿಂದ ಬಂದಿದ್ದೀರಿ ತಳ್ಕಾಡ ತವರಿಂದsss
ತಿರ್ಪತಿ ಬಿಟ್ಟು ಎಸ್ತೋತ್ತಲಾಯ್ತು sss || **ಚೆಲ್ಲಿದರು** ||
ತಿರ್ಪತಿ ಬಿಟ್ಟೆವಿರಿ ರಂಗಯ್ಯ ಸನ್ವಾರ ದಿವ್ಸಯ್ಯsss
ತಳ್ಕಾಡಿಗಂತೆ ಬಂದೀವಿ ರಂಗಯ್ಯ sss || **ಚೆಲ್ಲಿದರು** ||

ಯಳಂದರೂ ತಾಲ್ಲೂಕು, ಬಿಳಿಗಿರಿರಂಗಪ್ನ ಬೆಟ್ಟ
ಸ್ವಾಮಿಯವ್ರು ಸಿವಪೂಜೆ ಅನ್ನೇಡ್ ಗಂಟೆಗೆ ಕರೆಂಟಾಗಿ ಆಗ್ಬೇಕು
ಬಕ್ತಾದಿಗಳೆಲ್ಲ ಬರ್ತಾ ಇದ್ದಾರೆ
ದೊಡ್ಡ ಜಾತ್ರೆ , ಸಂಕ್ರಾಂತಿ, ತೆಪ್ಪ
ಸೋಲುಗ್ರ ಬೊಮ್ಮೆಗೌಡ್ನ ಮಕ್ಳು ಅಂದ್ರೆ ಐದ್ ಕುಲ್ದವ್ರು
ಕುಲ ಅಂದ್ರೆ ಯಾವ್ದು?
ಬೆಳ್ಳಿಕುಲ, ತನಿರ್ ಕುಲ. ಆಲ್ ಕುಲ, ಪಣಿರ್ ಕುಲ
ಆ ಕುಲ್ದವ್ರಿಗೆಲ್ಲ ಮದ್ಯೆ ಯಾರು ಅಂದ್ರೆ
ಬೆಳ್ಳಿ ಕುಲ್ದವ ಕೋಲ್ಕಾರನ ಕೆಲ್ಸ
ಆಲ್ರ ಕುಲ್ದವ ಪಟ್ಗಾರ
ಆಹಾ ಯಾರು ನೀವು?
ನಾನು ಪಟ್ಟಗಾರ
ಏಯ್ ನನ್ ದೇವ್ರಿಗೆ ಬರ್ದವನ್ಗೆ ಆಣೆಸರ

ಆರ್ಯಾರು ಯೇಳವ?
ಕೋಲ್ಕಾರ
ದಾಸೇಗೌಡ
ದಾಸೆಗೌಡ....
ದಾಸೆಗೌಡ ಅಂದ್ರೆ ಬೆಳ್ರ ಕುಲ್ದ ವಂಸ
ಬೆಳ್ಳಿ ಕುಲ ಆ ವಂಸದವ್ರು ಅಂದ್ರೆ ಐದುಕುಲ

ಬೆಳ್ಳಿ ಬೆಟ್ಟಾದಲ್ಲವ್ನೆ ಬಿಳಿಗಿರಿ ರಂಗಪ್ಪಸ್ವಾಮಿsss
ಐದು ಕುಲ್ದ ಯೆಣ್ಣ ತಂದಿದ್ದೀರಿsss
ಐದು ಕುಲಕೆ ದಾಸನಾದ ಬಾವಯ್ಯsss
ಬಾವ ರಂಗಯ್ಯ ತೇರಿಗೆ, ಬಾವ ರಂಗಯ್ಯ ತೇರಿಗೆsss
ಆಕಯ್ಯ ಬಾವ ಅಂದ್ರು
ಕಗ್ಗಲು ಬಟ್ಟೆಯವ್ಳೆ ಮುಗ್ಗಲು ತುರ್ಬಿನವಳೆsss
ಕುರುಗುಂಜಿ ರೂಪ ತಾಳುತ್ತಾರೆsss
ಕಗ್ಗಲು ಬಟ್ಟೆಯವ್ಳೆ ಮುಗ್ಗಲು ತುರ್ಬಿನವಳೆsss
ಕುರುಗುಂಜಿ ರೂಪ ತಾಳುತ್ತಾರೆsss
ಕಗ್ಗಲು ಬಟ್ಟೆ ಸೋಲುಗಿತ್ತಿsss

ನೋಡ್ಬುಟ್ಟ ರಂಗನ ಇನ್ನ್ಯಾಕಪ್ಪ,
ಇನಾಕಯ್ಯ, ಕಗ್ಗಲು ಬಟ್ಟೆ,
ಮುಗ್ಗಲು ಕುರವಂಜಿ
ಯೆಣ ಗಂಟಾ ಕಂಡು ಬತ್ತಾ ಇದ್ದಾರೆ
ನೋಡ್ದ ರಂಗಪ್ಪ ನಿಂಗ ತಕ್ಕಂತ ರೂಪ ನಾನ್ ತಾಳ್ಬೇಕು

## ೬. ಬಿಳಿಗಿರಿ ರಂಗನ ಕಾವ್ಯ (೩)

ರಂಗಯ್ಯ ತೇರು ಸನ್ವಾರ ಬರತ್ತದೆsss
ತೇರಿಗೆ ನಡಿಯೋ ರಂಗಿ ಅಕ್ಕsss
ತೇರಿಗೆ ನಡಿಯೋ ರಂಗ ಬಾವsss

ಅಪ್ಪಪ್ಪ ಅಂದ್ಬುಟ್ಟು ಇನ್ನ್ಯಾಕಯ್ಯ
ಈ ಮಾಯದ ಸಂಕುದಾರಿ ಅಂದ್ರೆ
ಸೋಲುಗ್ರ ಬೊಮ್ಮೆಗೌಡ್ನ ಮಕ್ಳ ನೋಡ್ಬುಟ್ಟು
ಇಂತ ಉಡ್ಗಿ ಇನ್ನಿದ್ದದ

ಕಣ್ಣುಬ್ಬ ವಡೆಯುತವ್ನೆ, ಮೇಲಣ್ಣ ತಿರುಗ್ಸಸ್ತವ್ನೆsss
ಕಯ್ ಬೀಸಿ ಸನ್ನೆ ಮಾಡುತ್ತಾರೆsss

ಅಕ್ಕ ಆವೂರ್ ದಾಸಯ್ಯ ನೋಡಕ್ಕ
ಕಯ ಬೀಸಿ ಸನ್ನೆ ಮಾಡ್ತವನಲ್ಲ
ನೋಡ್ರಕ್ಕ ನೋಡ್ರಕ್ಕ ಆ ದಾಸಪ್ಪ ಯೇಳಿದ್ದು
ಅಯ್ಯೋ ಪಾಪ!
ಅಯ್ಯೋ ಪಾಪ! ಇಟ್ ಕಾಣ್ದೆ ಬಂದಿದ್ದಾನೆ
ಊಟ ಕಾಣ್ದೆ ಬಂದಿದ್ದಾನೆ
ಅದ್ಕೆ ನಿಂಗೆ ಕಯ್ಯ ಬೀಸಿ ಸನ್ನೆ ಮಾಡ್ಬುಟ್ರಲ್ಲ
ಅದ್ಕೆ ಕೋಪ ಬಂತ?
ಅದ್ಕೆ ಬೊಳ್ಳ ಬೊಳ್ಳಗೆ ಬಂದ
ಎಲ್ಲಿಗೆ ಬಂದ?
ಬೇರ್ ತಾಳಿಗೆ ಬಂದ
ಸೋಲಿಗ್ರ ಬೊಮ್ಮೆಗೌಡ್ನ ಮಕ್ಳು ಏನ್ಮಾಡ್ತ ಇದ್ದಾರೆ?
ಎಲ್ಲಾ ಸೇರ್ಕಂಡ್ರು
ಇವ್ರಂಗೆ
ಕೋರಿರ್ ಮಕ್ಕ ಎಲ್ಲಾ ಸೇರ್ಕೊಂಡು

ಕಗ್ಗಲು ಬಟ್ಟೆಯವಳೆ, ಮುಗ್ಗಲು ದೂಪದವಳೆsss
ಕುರಗುನ್ಜಿ ರೂಪನ ತುರುಬಿನವಳೆ sss **|| ತಂದಾನ ||**
ಅಯ್ಯ ಕುರಗುಂಜಿ ರೂಪನ ತುರ್ಬ ಕಟ್ಕೊಂಡಂತೆsss
ರಂಗಯ್ಯನ ತೇರು ಸನುವಾರsss **|| ತಂದಾನ ||**

ರಂಗಪ್ಪನ ತೇರು ಎಲ್ಲಾ ಮಡ್ಬುಟ್ರು
ಸೋಲುಗ್ರ ಬೊಮ್ಮೆಗೌಡ್ನ ಮಕ್ಕ
ಪಾಪ ನೋಡ್ದ
ಏನಯ್ಯ ಒಂದ್ಸಾರಿ ಕಣ್ ಬಡ್ಡ್ ಬುಟ್ರೆ
ಇಂತ ಉಡ್ಗೀರು ಕಾಡಿನಲ್ಲಿ ಉಟ್ಬೇಕು
ಪೋಡಲ್ಲಿ ಬೆಳಿಬೇಕು
ಈ ಪೋಡಲ್ಲಿ ಉಡ್ಗಿ ತಂದ್ಬುಟ್ರೆ ನಾನು
ಇನ್ ಮಾತ್ರ ಯಿಂದ ಮುಂದೆ ಯಾರೂ ಇಲ್ಲ
ಈ ಉಡ್ಗಿ ಇಡ್ಕೊಂಡ್ರೆ ಸೋಲುಗ್ರ ಬೊಮ್ಮೆಗೌಡ್ನ ಮಕ್ಕೆಲ್ಲಾ
ಬಾವ ಅಂದ್ಬುಟ್ರೆ ಸಾಕು ಅಯ್ಯೋ ನಮ್ಮಪ್ಪ

ನನ್ನ ಬಂಗಾರ್ಕೆ ಇವರು ಕಾಮುಂದರಂತೆsss **|| ತಂದಾನ ||**

ರೂಪು ಕೊಟ್ಬುಟ್ಟ ನಾರಾಯ್ಣ
ಚಿಕ್ಕಾಡಿ, ದೊಡ್ಕಾಡಿ, ಚಿಕ್ರಂಗಿ, ದೊಡ್ರಂಗಿ
ಕೇತಿ, ಕೇತಿ ದಂಡೆ ಮಾದಿ, ಮಾದಿ ದಂಡೆ ಕುಸ್ಮದೇವಿ

ಎಲ್ಲಾ ತೇರಿಗೆ ಬಂದ್ಬುಟ್ರು
ತೇರಿಗೆ ಬರ್ವಾಗ ಏನ್ಮಾಡ್ತ ಇದ್ರು
ಆಗಲ್ ಗಾತ್ರ ಸಂಕು ಮುಗಲ್ ಗಾತ್ರ ಜಗ್ಟೆ ವೊತ್ಗಂಡೂ
ಯೆಗ್ಗಜ್ಜಿ ಮೂರ್ ಕಂಡ್ಗ
ತುರ್ಗಜ್ಜಿ ಮೂಗಂಡ್ಗ ಕೋಟಾ ಸೆರ್ಗ ಒದ್ಕಂಡು

ಅವ್ರು ಮೇಲ್ ಮೆಲ್ಗ ಸ್ವಾಮಿ ಬರುತ್ತಾರೆsss || **ತಂದಾನ** ||

ಮೆಲ್ ಮೆಲ್ಗೆ ಬರ್ವಾಗ ಅಪ್ಪ ದಾಸಪ್ನೋರು
ಯಾವ್ ಕಡೆ ಬಂದುಟ್ರು?
ಪಡುದಿಕ್ಕು ಗಾಳಿ ಅಲ್ವಾ
ಈ ದೊಡ್ ತೇರಿನ್ ತಿಂಗ ಗಾಳಿ ಬೀಸ್ಬುಡ್ತು
ಪಡುದಿಕ್ಕಿಂದ ಬಂದ್ಬುಟ್ರು

ಅಪ್ಪ ಮೂಡಲು ಬರಬೇಡ ಬಡಗಲು ಬರಬೇಡsss
ಗಾಳಿ ತಪ್ಪಿತೆ ಬರುದಾಸsss || **ತಂದಾನ** ||
ಯಾವೂರ ದಾಸಯ್ಯ ಯಾವೂರ ದಾಸಯ್ಯ
ಯಾಕಯ್ಯ ಬಂದೆ ಕಜ್ಜಿ ಕಾಟ || **ತಂದಾನ** ||

ಯಾಕಯ್ಯ ಬಂದೆ ಕಜ್ಜಿಕಾಟದಲಿ ನೀನು
ಅಮ್ಮ ಸ್ರೀನಾರಾಯಣ್ ವಾಸ್ತವ್ವ ನಾನು ಬಂದ್ಬುಟ್ಟೆ
ಸೋಲುಗ್ರ ಬೊಮ್ಮ.... ಕೇಳುದ್ರು
ಚಿಕ್ಕಾಡಿ, ದೊಡ್ಡಾಡಿ, ಚಿಕ್ರಂಗಿ, ದೊಡ್ರಂಗಿ
ಇಂತವರೆಲ್ಲಾ ಪೂರ ತೆಕ್ಕೊಂಡೋಗಿ
ಇವರ ಕಯ್ಲಿ ಕೊಟ್ರು
ಯಾರ ಕಯ್ಲಿ?
ಕುಸ್ಮದೇವಿ ಕಯ್ಲಿ ಕೊಟ್ರು
ಇಂವ ಕಜ್ಜಿನಾತ ಬೌನಾತ
ಏಯ್ ಕುಸ್ಮಾಲಿ ಕಯ್ಲಿ ಕೊಟ್ಬುಡವ್ವ
ಆ ಮುದ್ಕಪ್ನಿಗೆ ತೆಕ್ಕೊಂಡೋಗಿ ಕೊಟ್ಬುಡ್ಲಿ
ನೀನೇ ಕೊಟ್ಬುಡವ್ವ ಅಂತ ಹೇಳಿದ್ರು
ಆಗೇನೆಳ್ತಾ ಇದ್ದಾರೆ……?

ಆವ ಮೂಗಿಗೆ ಬಟ್ಟೆಯ ಮುಚ್ಚುತ್ತಾರೆsss || **ತಂದಾನ** ||

ಮೂಗಿಗೆ ಬಟ್ಟೆ ಮುಚ್ಕೊಂಡು ತೆಕ್ಕೋ ದಾಸಪ್ಪ ಅಂದ್ಮ
ಏಯ್ ಆರೋ? ನೀನು ಆರ್ ನೀನು?

ಸೋಲುಗ್ರ ಬೊಮ್ಮೆಗೌಡ್ನ ಮಗ ಕುಸ್ಮದೇವಿ ನಾನೇ ದಾಸಪ್ಪ
ಯೆಣ್ಣೇ.... ದುಡ್ಡಿಗೆ ಬಂದಿಲ್ಲ
ಕಾಸಿಗೆ ಬಂದಿಲ್ಲ ಯೆಣ್ಣೆ ನಿಗ್ಗಾಗಿ ನಾನು ಬಂದಿದ್ದೀನಿ
ನಿನ್ನಾಗಿ ನಾನು ಬಂದಿನಿ ಕುಸ್ಮಾಲಿ

ಸೋಲಿಗರ ಬೊಮ್ಮನ ಮಗಳಿಗೆsss **|| ತಂದಾನ ||**

ಅಕ್ಕ ಅವರ್ಯಾವ ದಾಸಯ್ಯ ಮುಳುವಾದ ದಾಸಯ್ಯ

ಮೋರೆಯ ಮ್ಯಾಗೆ ತಿಮಿರವ್ವsss **|| ತಂದಾನ ||**
ನೀನು ಯಾವೂರ ದಾಸಯ್ಯ ಯಾವ್ ಮತವ ದಾಸಯ್ಯ
ಕುಲವೇನು ಮುದುಕಯ್ಯsss **|| ತಂದಾನ ||**

ಅಪ್ಪ ದಾಸಪ್ಪ ಯಾವೂರ ನೀನು?
ಯಾವ್ ಕೇರಿ?
ಕುಲಯಾವ್ದು?
ನಿನ್ ಮತ ಯವ್ದು ಅಂದ್ರು
ಏಯ್ ಸೋಲುಗ್ರ ಬೊಮ್ಮೆಗೌಡ್ನ ಮಕ್ಳೆ
ನಾನು ಕ್ಸತ್ರಿ ಕುಲ್ದವ್ನು
ಸೂರ್ಯ ವಂಸ ನಾಮದ ಕುಲ್ದ ನಾರಾಯ್ಣ

ಈ ಸೋಲುಗ್ರ ಐಕೆಲ್ಲಾ ನನ್ಗೆ ಬಾಮೈಕsss **|| ತಂದಾನ ||**
ಏಯ್ ಸೋಲುಗ್ರ ಐಕ ನನ್ಗೆ ಬಾಮೈಕ ಅಂದರೆsss
ನಾಳೆ ಮೇಲುಗಿರಿಯಲ್ಲಿ ಮೆರಿಬೇಕುsss **|| ತಂದಾನ ||**
ನಾನು ಮೇಲುಗಿರಿಯಲ್ಲಿ ಮೆರಿಯದಿದ್ದ ಮೇಗೆsss
ತೇರ ತಡಿನ ತಿಮ್ಮಯ್ಯsss **|| ತಂದಾನ ||**
ಅಯ್ಯ ತೇರ ತಡಿನ ತಿಮ್ಮಯ್ಯ ನಾನಲ್ಲsss
ಮೇಲುಗಿರಿಗೆ ರಂಗಯ್ನಲ್ಲ sss **|| ತಂದಾನ ||**

ಅಕ್ಕ ಇಂವ ಯೇನೇಳ್ತಾನ ಕ್ಸತ್ರಿ ಕುಲ್ದವ
ಸೂರ್ಯ ವಂಸದವ
ನಾಮ್ದ ಕುಲ್ದ ನಾರಾಯ್ಣ ಅಂತಾನೆ
ದುಡ್ಡಿಗೆ ಬಂದಿಲ್ಲ ಕಾಸಿಗೆ ಬಂದಿಲ್ಲ
ನಿನ್ನಾಗಿ ಬಂದಿವ್ನಿ ಅಂದನಕ್ಕ
ಅವ್ನ ಕಸ ಕಿತ್ಬುಡಿ
ಕಿತ್ತಾಕ್ಬುಡಿ ಅವ್ನ ಜಡೆಯ
ಯೇನೋ ಪಾಪ ನೋಡುದ್ರು

ಏನಯ್ಯ ಏನಯ್ಯ ದಾಸಪ್ನೋರ ವೇಸ ನೋಡಿದ್ರೆ….
ಅಯ್ಯ ದಾಸಯ್ಯ ವೇಸ ನೋಡ್ರಕ್ಕ

ನೋಡ್ರಕ್ಕ ಸ್ರೀಸಕ್ತಿ ಬಣ್ಣ ಕಾಣುತದೆsss || **ತಂದಾನ** ||

ಅಯ್ಯ ಸ್ರೀಸಕ್ತಿ ಕಾಣ್ತಾನೆ ನಾರಾಯ್ಣ

ಮೊರೆಯ ಮ್ಯಾಗೆ ತಿಮಿರವ್ವsss || **ತಂದಾನ** ||
ಏಯ್ ಮೋರೆಯ ಮ್ಯಾಗೆ ತಿಮಿರವ್ವ ಅಂತವರೆsss
ಬಾವ ಬಾವ ಅಂದು ಕರಿತಾರೆsss || **ತಂದಾನ** ||

ಏಯ್ ದಾಸಪ್ಪ ಬಾವ ಅಂದ್ಬುಟ್ಟೆ ಬಾವ ಬಾವ ಅಂತ ಕರ್ದೆಬುಟ್ಟಿಲ್ಲಾ
ನೀನು ದೊಡ್ಡಣ್ಣ ಮಾದಣ್ಣನಿಗೇನಾದ್ರು ಯೇಳ್ಬುಟ್ರೆ

ನಿಂಗೆ ತುಂಡು ದೊಣ್ಣೆಯ ತರುತಾರೆsss || **ತಂದಾನ** ||
ನಿಂಗೆ ತುಂಡು ದೊಣ್ಣೆಯ ತಂದುsss
ಕಲ್ಲಿನ ಮೇಲೆ ಡಬ್ಬುಡುಬ್ಬನೆ ಪೊಡಿತಾರೆsss || **ತಂದಾನ** ||
ನಿನ್ನ ದೊಡ್ಡ ಮಾದಣ್ಣ ನನ್ಗೆ ಯಿರಿಬಾವ ಕಣೆsss
ನಿಮ್ಮ ಚಿಕ್ಕ ಕಾಳಣ್ಣ ಬಾಮೈದsss || **ತಂದಾನ** ||

ನೋಡು ಚಿಕ್ರಂಗಿ ಮಾತಿಗೆ ಮಾತು ಸೇರ್ಸಬ್ಯಾಡ
ಕಟಕಟ ಮಾಡ್ಬೇಡ ನೀನು
ದೊಡ್ಡ ಮಾದಣ್ಣ ನಂಗೆ ಬಾವ
ಚಿಕ್ಕಗೋಳಿ ತರ್ತಾರೆ
ಚಿಕ್ಕಣ್ಣ ಯೇಳ್ದಿಲ್ಲ ನನ್ನ ಬಾಮೈದ ಕನ್ರಿ

ನಂಗೆ ಚಿಕ್ಕ ಕಾಳಣ್ಣ ನಂಗೆ ಬಾಮೈದ sss || **ತಂದಾನ** ||
ಓಯ್ ಚಿಕ್ಕ ಕಾಳಣ್ಣ ಬಾಮೈದ ಆದರೆsss
ನಾನು ಕಾಡಲ್ಲಿ ಮನೆಯ ಮಾಡಬೇಕುsss || **ತಂದಾನ** ||
ಅಲ್ಲಿ ಕಾಡಲ್ಲಿ ನಾವು ಮನೆಯ ಮಾಡ್ಕಂಡು ನಾ ನೆಲ್ಗೊಂಡುsss
ಮೇಲು ಬೀದಿಲಿ ಮೆರಿಬೇಕುsss || **ತಂದಾನ** ||

ಅಕ್ಕ ನೋಡು ರಂಗಪ್ಪ ಯೇನೆಳ್ತಾ ಇದ್ದಾರೆ
ಆಹಾ ಅಂತ ಮಾತಾಡ್ತನಕ್ಕ
ದೊಡ್ಡ ಮಾದ ನಂಗೆ ಬಾವ ಆಗ್ಬೇಕು
ಚಿಕ್ಕಾಡ ನಂಗೆ ಬಾಮೈದ ಆಗ್ಬೇಕು
ಚಿಕ್ರಂಗಿ ನಂಗೆ ನಾದಿನಿ ಆಗ್ಬೇಕು
ಆ ದೊಡ್ರಂಗಿ ಇವ ಎಂತಾ ದಾಸಪ್ಪ ಇವ್ರು

ಅಕ್ಕ ಈ ದಾಸಪ್ಪ ನಮ್ ಬುಡ್ಲಾರ
ನಾವ್ ಒಂಟ್ಹೋಗ್ಬೇಕು
ನಾವು ರಂಗಪ್ನಿಗೆ ಒಂದ್ ಕಾಣ್ಕೆ ಕಟ್ಬುಡಾನ
ಏಯ್ ಇನ್ನೆಂತ ಕಾಣ್ಕೆ ಕಟ್ತೆಯ
ಅಯ್ಯ ಆಸ್ಬುರಕ ದಾಸಪ್ಪ ನಮ್ ಬುಡ್ತಾರ
ಉಡ್ಗಿ ನೋಡುದ್ರ ಇಂವ ನೋಡ್ಕೊಂದ್ ಬರ್ತಾ ಇದ್ದಾನೆ
ತೂರಾಡ್ಕ ತುಂಟಾಡ್ಕ ಬರ್ತಾ ಇದ್ದಾನೆ
ಅಂದ್ಬುಟ್ಟು ಚಿಕ್ರಂಗಿ ನಿನ್ನಂಗೆ ತಲುಳ್ಳವ
ಆಗ ಆಹಹಾ ತಂಗಿರೆ ನಾನ್ ಹೋಗಿ ಅವ್ನಿಗೆ ವನ್ನೇಟ್ ಕಟ್ಬುಡ್ತಿನಿ
ದಾಸಪ್ಪ ಮಾಯ ಆಗ್ಬುಡ್ತಾನೆ
ನಾಳೆ ವರ್ಸ ಬಂದು ಕಾಸಿನ್ ದೂಪ ಕಣ್ಮಣಿ ಸೇವಾ ಮಾಡ್ಬುಟ್ಟು....
ಒಂದು ಆರ್ಕೆ ಮಾಡ್ಬುಡಪ್ಪ ಅಂತಿನಿ......
ಅದಕ್ಕೆ ದಾಸಪ್ಪ ಕೊಡದುಂಟಾ
ನಾವ್ ಕೊಡದಿಲ್ಲ ಆಗೆಂದ್ಬುಟ್ಟು
ತೀರ್ತದಿಂದ ಬಂದು ಸ್ವಾಮಿಯವ್ರು ಪೂಜ ಮಾಡ್ಬುಟ್ಟು

ವೊನ್ನುಗಾಣಿಕೆಯ ಕಟ್ಟುತ್ತಾರೆsss || **ತಂದಾನ** ||

ವೊನ್ನುಗಾಣಿಕೆ ಕಟ್ಬುಡ್ತಲೆ ದಾಸಪ್ಪ ಮಾಯ ಆಗ್ಬುಟ್ಟ
ಅಕ್ಕಕ್ಕ ನೋಡ್ಬಕ್ಕ ನಮ್ಮ ಮನೆ ದೇವ್ರು ಎಂತಾ ದೇವ್ರಕ್ಕ?
ಸ್ವಾಮಿ ನಮ್ಮಪ್ಪ ನಮ್ ದೇವ್ರ ಬುಟ್ರೆ ಇನ್ಯಾವಾ ದೇವ್ರು ಇಲ್ಲ
ಅಲ್ಲಾಣಿ ಇಲ್ಲಾಣಿ ಕಲ್ಯಾಣಿ ಕೊಳ ಕಡ್ಡ್ ಬುಟ್ರು
ದೊಡ್ಸಂಪ್ಗೆ ಆದಿ ಒಳ್ಗೆ ತೋಪಿನ ತಿರ್ಗ ಆದಿವಳ್ಗೆ ವೋಗ್ತಾಗ

ಅಲ್ಲೊಬ್ಬ ದಾಸಪ್ಪ ಕಂಡಿದ್ದಾರೆ sss || **ತಂದಾನ** ||
ಅಕ್ಕ ನೋಡ್ರಕ್ಕ ನೋಡ್ರಕ್ಕ ದಾಸಪ್ಪ ಸತ್ತವ್ನsss
ಇವ್ನ ಬಾನೆ ಉಲ್ಲಿಗೆ ಇಡಿರಕ್ಕ sss || **ತಂದಾನ** ||

ಮುಂದುಕೋದ್ರು ಅಲ್ಲೊಬ್ಬ ದಾಸಯ್ಯ ಬಂದ್ಬುಟ್ರು
ಅಪ್ಪೊಯ್ ತೆಂಕ್ಲಾಗಿ ತಲೆ ಬಡಲಾಗಿ ಕಾಲಿಟ್ಬುಟ್ಟು
ಸಂಕು ಜಾಗ್ಟ ಇಟ್ಬುಟ್ಟು ಇಲ್ ಮಲಗವ್ನೆ
ಅಪ್ಪಪ್ಪ ಇಲ್ಲೊಬ್ಬ ದಾಸಪ್ಪ ನಿಗ್ರೋಗ್ ಬುಟ್ಟಿದ್ದಾನೆ

ಇವ್ನಿಗೆ ಮುತ್ತುಗದ ಸೊಪ್ಪ ಮುಚ್ಚಿರವ್ವsss || **ತಂದಾನ** ||
ಅಯ್ಯ ಮುತ್ತುಗದ ಸೊಪ್ಪ ಮುಚ್ಬುಟ್ಟು ನಾರಾಯ್ಣsss
ಅವ್ರು ಮುಂದ್ಕೆ ಮೂರೆಜ್ಜೆ ವೋಗ್ವಂತ ಕಾಲ್ದಲ್ಲಿsss
ಅಲ್ಲೊಬ್ಬ ದಾಸಯ್ಯ ಸತ್ತಿದ್ದಾನೆsss || **ತಂದಾನ** ||

ಅಲ್ಲೊಬ್ಬ ದಾಸಯ್ಯ ಸತ್ತೋಗ್ ಬುಟ್ಟಿದ್ದಾನೆ
ದೊಡ್ರಂಗಿ ಕಂಡ್ಬುಟ್ಟ
ಆಹಾ ಎಲ್ಲೋ ನಮ್ಮ ಬೆಟ್ಟದಲ್ಲಿ
ಬಿಳಿಗಿರಿರಂಗನ ಬೆಟ್ಟದೊಳ್ಗೆ ಜಾತ್ರೆಯೊಳ್ಗೆ
ದೊಡ್ರೋಗ ಬಂದು ಅಕ್ಕ ಎಲ್ಲಾ ದಾಸ್ಗೊಳು ಸತ್ತೋಗ್ ಬುಟ್ಟಿದ್ದಾರೆ
ದಾಸ್ಗೊಳ್ಗೆ ರೋಗ ಬೀಸ್ಬುಡ್ತು
ತಂಗ್ಳ ಅನ್ನ ಉಂಡ್ಬುಟ್ಟು ತಣ್ಣೀರ್ ಕುಡುದ್ ಬುಟ್ರು
ಅಂದ್ಬುಟ್ಟು ಮುಂದಕ್ಕ ಮೂರೆಜ್ಜ ಇಟ್ರು
ಕರ್ಡಿ ಕಕ್ಕರ್ದಬುಡ್ತು
ವುಲಿ ಅಮ್ಮರ್ದ್ಬುಡ್ತು ಯೆದರ್ಲಿಲ್ಲ
ಸೋಲುಗ್ರ ಬೊಮ್ಮೆಗೌಡ್ನ ಮಕ್ಳು ಅಂದ್ರೆ
ಕಾಡು ಸೋಲುಗ್ರ ಐಕ ಸಿಕ್ಕದುಂಟಾ? ಎದ್ಬುಡ್ತಾರೆ
ಇಬ್ರು ಓಟಾ ಓಡುದ್ರು

ಅಂವ ದಾಸಪ್ಪ ಅವ್ರು ಓಡುತ್ತಾರೆsss **|| ತಂದಾನ ||**

ದಾಸಪ್ನು ಓಡಿ ಓಡಿ ವೋಗ್ತಾ ಇದ್ದಾನಲ್ಲ
ಗಕ್ನ್ ಚಿಕ್ರಂಗಿ ನೋಡ್ಬುಟ್ಟ
ಇವ್ರಾಗೆ ಗಕ್ನ್ ತಿರ್ಗಿ ನೋಡ್ದ
ಅಲ್ಲ ದಾಸಪ್ಪ ಸತ್ತು ಮನ್ಗಿದ್ದೆ ಎದ್ದು ಬಂದಿದ್ದಿಯಾ?
ಅಮ್ಮ ದೊಡ್ರಂಗಿ ನಾನು ಬಂದುದು ಯಾಗೆಂದ್ರೆ ಕರ್ದಿ ಕಕ್ಕರ್ದಬುಡ್ತು
ಉಲಿ ಅಮ್ಮರ್ದ ಬುಡ್ತು
ಆನೆ ಅಬ್ಬರ್ಸಕ ಬಂದ್ಬುಡ್ತು
ಓಡಿ ಓಡಿ ಉಬ್ಸ ಬಂದ್ಬುಡ್ತು
ಅದಕ್ಕೋಸ್ಕರ ಬಂದೆ ಓಡೋಡಿ ಬಂದೆವ್ವ
ನನ್ಗೆ ನೇತ್ರ ಕಾಣಲ್ಲ
ನಡ್ಗೆ ಬರಲ್ಲ
ಅಯ್ಯೋ ಪಾಪ
ಸೋಲಿಗರ ಬೊಮ್ಮೆಗೌಡ್ನ ಮಕ್ಕ ಅಂದ್ರೆ ಬಾಳ ಸತ್ಯ
ಬಾಳ ದರ್ಮಾಂತ
ಸುತ್ತುಳ್ಳ ಜನ ಅಂತಾರೆ
ಸ್ವಲ್ಪ ಪೋಡಿಗೆ ಸೇರ್ಸಿ ಬುಡವ್ವ
ಅಯ್ಯೋಯ್ಯೋ ನಾವೇನೋ ಸೇರ್ಸಿಬುಡ್ತಿವಿ ದಾಸಪ್ಪ
ನಮ್ಮಪ್ಪ ಕೇಡಿ
ನಾಮ್ತಾಯಿ ಕೇಡಿ
ನಾವು ಬೇಲಿಯಿಂದಾಚೆ, ಕಟ್ಟೆಯಿಂದಾಚೆ ಇರ್ತಿ ದಾಸಪ್ಪ

ಬತ್ತಿಯ ದಾಸಪ್ಪ ಅಂದ್ರು
ಅಮ್ಮ ಬತ್ತಿನಿ

ಅವ್ರು ಮೆಲ್ ಮೆಲ್ಗೆ ಸ್ವಾಮಿ ಬರುತ್ತಾರೆsss **|| ತಂದಾನ ||**
ಕೊಟ್ಟು ನೋಡಿ ಸ್ವಾಮಿ ಕೀಳುತ್ತಾರೆsss **|| ತಂದಾನ ||**
ಓಯ್ ಕೊಟ್ಟು ನೋಡಿ ಸ್ವಾಮಿ ಕಿಳ್ತಾವ್ನೆ ನಾರಾಯ್ನಾsss
ಎತ್ತಿ ನೋಡಯ್ಯ ಅರಿನಾಡsss **|| ತಂದಾನ ||**

ಸ್ವಾಮಿಯವ್ರು ಅರಿನಾಡು ನೋಡ್ಕಂಡು
ಎಡಗಡೆ ನೋಡುದ್ರ ಸೋಲುಗ್ರ ಬೊಮ್ಮೆಗೌಡ್ನ ಮಗಳ ಗ್ಯಾನ
ಏನವ್ವ ಮಾಡ್ಲಿ ಅಂದ್ಬುಟ್ಟು ಏಡ್ ನೇತ್ರ ಕಾಣ್ಣಿಲ್ಲ ನೆಡ್ಗಬರ್ದಾಗೆ

ತೂರು ತುಂಟಾಡಿ ಹೋಗುತ್ತಾರೆsss **|| ತಂದಾನ ||**

ತೂರಿ ತುಂಟಾಡ್ಕೊಂಡು ನಾರಾಯ್ಣ ಮೂರ್ತಿಯವ್ರು ವೋಗಿ
ಸೋಲಿಗ್ರು ಬೊಮ್ಮೆಗೌಡ್ನ ಪೋಡಿಗೆ ವೋಗಿದ್ದಾನೆ
ಸೋಲಿಗ್ರ ಬೊಮ್ಮೆಗೌಡ್ನ ಪೋಡ್ನಲ್ಲಿ
ಆ ಬಿದ್ರ ಬಿಂಕಿ ಅಕ್ಬುಟ್ಟು ಮನ್ಗಿರುವಾಗ
ಕಾರೆಂಬ ಕತ್ಲು ಬೋರೆಂಬ ಮಳೆ ಬಂದ್ಬುಡ್ತು
ಕಾ ಕೋಲಿ ಕೂಗ್ ಬುಡ್ತು

ಲೋಕ್ವೆಲ್ಲಾ ಬೆಳಗಾಗ್ ಬುಡ್ತುsss **|| ತಂದಾನ ||**
ಅಯ್ಯ ದಾಸಯ್ಯ ತಕ್ಕಂಡೋಗಿ ಬುಡಿರವ್ವಾsss **|| ತಂದಾನ ||**
ತೂರು ಆಡುತ್ತಾ ತುಂಟಾಡಿ ಬರುತವ್ನೆsss
ಮೇಲುಗಿರಿಕೆ ಸ್ವಾಮಿ ಇಳಿತಾರೆsss **|| ತಂದಾನ ||**
ಅಯ್ಯೋ ಮೇಲುಗಿರಿಂದ ದಾಸಪ್ಪ ಬತ್ತವ್ನೆsss
ಬೊಮ್ಮೆಗೌಡ್ನ ಪೋಡಿಗೆ ವೋಗುತ್ತಾರೆsss **|| ತಂದಾನ ||**

ಬೊಮ್ಮೆಗೌಡ್ನ ಪೋಡಿಗೆ ವೋಗುವಾಗ
ಆಹಾ ಅಣ್ಣ ಸೊಪ್ಪಿನ ಊಟ
ಅರೆಗೆಣ್ಣಿನ ಅಂಬ್ಲಿ ಕೂಳುಗೀಳು ಕೊಡ್ರಪ್ಪ
ಈ ದಾಸಪ್ಪ ತೆಕ್ಕಂಡೋಗಿ ಕೃಷ್ಣನ ಕಟ್ಟೇಲಿ ಬಿಟ್ಬುಡವ್ವ ಅಂತೇಳುವಾಗ
ಅಪ್ಪಪ್ಪ ಇನ್ಯಾಕಪ್ಪ
ಅಪ್ಪ.... ಅಪ್ಪ.... ಬೆಳ್ಗಿಂದ ಊಟಿಲ್ಲ
ಅರಿಕೋಲ್ ತೆಕ್ಕೊಡ್ ಗೆಡ್ಡ ಗೆಣ್ಸು ತರ್ತಿವಿ ಅಂದ್ಬುಟ್ಟು

ಅವ್ರು ಕೋಳಿ ಗುಳ್ಳಾರಕ್ಕೆ ವೋಗಿದ್ದಾರೇsss || **ತಂದಾನ** ||
ಕೋಳಿ ಗುಳ್ಳಾರಕ್ಕೆ ವೋಗ್ತಾರ ನಾರಾಯ್ಣsss
ಬಾಜರ್ ಕೆಂತಿ ದಯಮಾಡಿ sss || **ತಂದಾನ** ||

ಬಾಜರ್ಕಿಂದ ದಯಮಾಡುವಾಗ
ಸೋಲಿಗ್ರ ಬೊಮ್ಮೆಗೌಡ್ನ ಮಕ್ಕ
ಚಿಕ್ಕಾಡಿ ದೊಡ್ಡಾಡಿ, ಚಿಕ್ರಂಗಿ, ದೊಡ್ರಂಗಿ
ಎಲ್ಲಾ ಕೂಡ್ಕಂಡು ಸ್ವಾಮಿ ಪಾದ ಇಡಿತಾಯಿದ್ರು
ದಾಸಪ್ಪ ಇವ್ರ ನೋಡವ್ವ ತಿರ್ಪತಿಯಿಂದ ಬಂದವ್ರು
ಇವ್ರ ಪಾದ ಇಡ್ದು ಮುಂದಕೊದ್ರೆ ನಮ್ಗೆ ಗೆಡ್ಡ ಗೆಣ್ಸು ಸಿಕ್ತದೆ
ನಾರಾಯ್ಣ ಮೂರ್ತಿಯವ್ರು ಆಗ ಉಸ್ನಗೆ ನಗ್ತಾ ಇದ್ರು
ಆಗನು ನಮ್ಮ ದೇವ್ರ ಪಾದ ಯಿಡುದ್ರ
ಉಸಗ್ನ ನಗ್ ನಾಡ್ತಯಿದ್ದಿಯಲ್ಲ ಅಂದ್ರು
ಅಮ್ಮ ಅದು ನಾವು ಮುಟ್ಟುದ್ರೆ ಆಗಲ್ಲ
ಅದು ನೀವು ಪೂಜೆ ಮಾಡ್ಕಳ್ಳಿ ಅಂದ್ರು

ಕನಕದಾಸರ ಗವಿಗೆ ಹೋಗುತ್ತಾರೆsss || **ತಂದಾನ** ||

ಕನಕದಾಸರ ಗವಿಯೊಳ್ಗೆ ಕಾಡುದಾಸರ ಗವಿಯೊಳ್ಗೆ
ನಾರಾಯ್ಣಮೂರ್ತಿಯವ್ರು ಒಡೆದುಮೂಡಿ
ವೈರು ಮುಡಿಯೊಳ್ಗ ಒರಗಿ ನಿಂತಿದ್ದಾರೆ
ಇದೆ ಆದಿ ಒಂಟೋಗಪ್ಪ
ಈ ಆದಿ ಎಲ್ಲಿಗೋಗ್ತಾದಮ್ಮ
ದೊಡ್ರಂಗಿ ಎಲ್ಲೋಗ್‌ತದ ಅಂತ ಕೇಳುದ್ರೆ
ಇದೇ ನೋಡಪ್ಪ ವೈರುಮುಡಿ
ಅದು ಅನುಮಂತ್ರಾಯ್ನ ಕಣ್ವೆ
ಇದು ಸೋಮಾದಿಯಪ್ಪನ ಕೊಳ
ಅದು ಬೊಮ್ಮನ ಕೊಳ
ಯಿಸ್ಪುರನ ಕಟ್ಟೆಗೆ ಒಂಟೋಗ್ಬುಡು
ಈವೊತ್ತು ಮರಿಮಾವ್ಸ ಅನ್ನ
ನಿಂಗೆ ವೊಟ್ಟೆ ತುಂಬಾ ಊಟ
ನಿಂಗೆ ಊಟ ಕೊಡ್ತಾರೆ ವೋಗಪ್ಪ ಅನ್ನೊತ್ತಿಗೆ …. .

ಅಪ್ಪ ತೂರಿ ಆಡುತ್ತಾ ಹೋಗುತ್ತಾನೆsss || **ತಂದಾನ** ||
ತಿಂಗಾಳು ಮುಣುಗಿದವೋ || **ರಂಗೋಲಿ ಬೆಳಗಿದವೋsss** ||
ಸ್ವಾಮಿ ರಂಗಯ್ನ ಪೂಜೆಗೆಂದು ಬಾಳೆ ಬಾಗಿದವುsss
ಎಡ್ಚರಿ ತೊಳಸಮ್ಮ ಬಲ್ಚರಿ ಲಕ್ಸ್ಮಿದೇವಿsss

ನೆಟ್ಟ ನಡುವೆ ನಾರಾಯ್ಣ ಕೂತುಕೊಂಡುsss || **ತಿಂಗಳು** ||
ಅಳ್ಳ ಕೊಳ್ಳಿಯ ನೀರು ಬೆಳ್ಳಿಲಿ ಕಯ್ಯಚಂಬುsss
ಇಲ್ಲಿ ರಂಗಯ್ನ ಸಿವಪೂಜೆ ಮಾಡುವಾಗsss
ಆಕಾಸ ಗಂಗೆ ಗಣಿರೆಂದೋsss || **ತಿಂಗಳು** ||
ಕಾಡು ಸೋಲಿಗರೈಕsss
ಇಲ್ಲಿ ಕಾಡಿಂದ ಬಂದವರೆsss
ಅರ್ಸಿ ಪೂಜೆಯ ಮಾಡುತ್ತಾರೆsss || **ತಿಂಗಳು** ||
ಊಟ ಮಾಡೋದಕ್ಕೆsss
ಗೆಡ್ಡ ಗೆಣ್ಸು ಅಯ್ಯsss
ಎದ್ದು ನೋಡ ನಾರಾಯ್ಣಮೂರ್ತಿsss || **ತಿಂಗಳು** ||

ರಂಗಯ್ಯನವ್ರು ಅಂದ್ರೆ ಬಕ್ತಾದಿಗಳ್ಗೆ ಸ್ವಾಮಿ ರಂಗಯ್ಯ
ನಾವು ನೋಡುದ್ರೆ ಕಾಡ್ ಸೋಲುಗ್ರುಗೆ ಬಾವ ರಂಗಪ್ಪ ಆದ್ರು

ಅವ್ವ ಬಳ್ಸಿ ಬುಡಿರವ್ವ ಬಾಳೆ ಅಣ್ಣsss || **ತಂದಾನ** ||
ಆಡಿ ಬನ್ನಿರೋ ರಂಗಯ್ಯ ಚೆಂದ ನೋಡಿ ಆಡಿ ಬನ್ನಿರೋsss
ನೋಡಿ ಬನ್ನಿರೋ, ಸ್ವಾಮಿ ನೋಡಿ ಬನ್ನಿರೋsss
ರಂಗಯ್ನ ಚೆಂದಾನೋಡಿ ಆಡಿಬನ್ನಿರೋsss
ಸೋಲಗಿತ್ತಿಗೆ ಸಗುತ ನೋಡಿರೋsss
ರಂಗಯ್ನsss ಮಡದಿ ನೋಡಿರೋsss
ರಂಗಯ್ನ ಸಗುತ ನೋಡಿ ಬನ್ನಿರೋsss
ಅಲ್ಲಿ ಇಲ್ಲಿ ಬರುತಾರೆ ನೋಡಿ ಬನ್ನಿರೋsss
ಅಂದದಲ್ಲಿ ಕುಣ್ತ ಕುಣಿಯೋ ಚಂದ ನೋಡಿರೋsss || **ನೋಡಿ** ||
ಸೋಲಗಿತ್ತಿ ಸಗುತ ನೋಡಿsss
ಮೇಲುಗಿರಿಲಿ ಮೆರೆಯ ನೋಡಿರೋsss || **ನೋಡಿ** ||
ನೋಡಿ ಬನ್ನಿರೋ ನೀವು ನೋಡಿ ಬನ್ನಿರೋsss
ಸೋಲಗಿತ್ತಿ ಸಗುತ ನೋಡಿ ನೀವು ಓಡಿ ಬನ್ನಿರೋsss || **ನೋಡಿ** ||
ಓಡಿ ಬನ್ನಿರೋ ರಂಗಯ್ನ ನೋಡಿ ಬನ್ನಿರೋsss
ಕಾಡಿನಲ್ಲಿ ಸೋಲುಗಿತ್ತಿ ನೋಡಿ ಬನ್ನಿರೋsss
……………. ತರಬೇಕು ನೋಡಿ ಬನ್ನಿರೋ || **ನೋಡಿ….** ||
ಕಮ್ಮತಿಯ ಮರದಲ್ಲಿsss
ಸಣ್ಣ ಗೊಂಬಿನ ಆನೆಯಂತೆsss || **ನೋಡಿ** ||
ಆನೆ ಬರುವ ಚಂದನೋಡುsss
ದಾಸಯ್ನ ಅಂದ ನೋಡೊsss || **ನೋಡಿ** ||
ಕೃಸ್ಣನ ಕಟ್ಟೆಗೆ ಬರುತಾರೆsss || **ತಂದಾನ** ||

ಸ್ವಾಮಿ ಕೃಷ್ಣನ ಕಟ್ಟೆಗೆ ವೋದಯ ದಾಸಯ್ಯsss
ಮರಿಯೊ ಕುರಿಯನ್ನೆ ಕುಯ್ಯುತ್ತಾರೆsss || **ತಂದಾನ** ||

ಸ್ವಾಮಿ ದಾಸಪ್ಪ ಮರಿ ಕುಯ್ತಾರೆ
ಕೋಳಿ ಕುಯ್ತಾರೆ
ಅಕ್ಕಿ ಆಕ್ತಾರೆ
ಬೇಳೆ ಆಕ್ತಾರೆ ದಾಸಪ್ಪ ಈವೊತ್ತು ....
ಅನಮಂತ್ರಯ್ನ ದೇವಸ್ತಾನ ....
ಗೊತ್ತಿಲ್ಲ ದಾಸಪ್ಪ ಅಂದ್ರು
ಅಯ್ಯಯ್ಯೋ ಗೊತ್ತಿಲ್ಲಮ್ಮ ಅಂದ್ರು
ಆರ್ಗೆ ಚಿಕ್ರಂಗಿಗೆ
ಇದೆ ಆದಿ ಒಂಟೋಗಪ್ಪ ಅಂತ ಯೇಳುವಾಗ ....
ಈ ದಾಸಪ್ಪೋರು ಏನ್ಮಾಡ್ತಾರೆ
ತೂರಾಡ್ತ ವುಂಟಾಡ್ತಾರೆ
ಈ ಸೋಲಿಗರ ಬೊಮ್ಮೆಗೌಡ್ನ ಮಕ್ಳು ಉಡ್ಗಿರಿದ್ರಲ್ಲ
ಇವ್ರೇನೆಂದ್ರೆ ಕಂಬ್ರಿಪುರ ಕಡೆಗೊಂಟೋದ್ರು

ಆರೆಯ ಕೋಲ ತೆಕ್ಕೊಂಡು ಸೋಲಗಿತ್ತಿsss
ನೊರೆಯ ಗೆಣ್ಣ ಕೀಳುತಾರೆsss || **ತಂದಾನ** ||
ಏಯ್ ನೂರೆಯ ಗೆಣ್ಣ ಕಿಳ್ವಾಗ ಸೋಲಗಿತ್ತಿsss
ಕೋಲ್ ಜೇನ ಕಾಣುತಾರೆsss || **ತಂದಾನ** ||

## ೬. ಬಿಳಿಗಿರಿ ರಂಗನ ಕಾವ್ಯ (೪)

ಕೋಲ್ ಜೇನ್ ಕಂಡ್ಬುಟ್ಟು ಅಕ್ಕ ಚಿಕ್ರಂಗಿ ದೊಡ್ರಂಗಿ,
ಚಿಕ್ಕಾಡಿ, ದೊಡ್ಡಾಡಿ ನೋಡಕ್ಕ ಬೆಳ್ಗಿಂದ ಊಟವಿಲ್ಲ
ರಾತ್ರಿ ಊಟವಿಲ್ಲ
ಅಕ್ಕ ಅಲ್ಲೊಂದ್ ಕೋಲ್ ಜೇನ್ ಕೂತದೆ
ಆ ಕೋಲ್ ಜೇನ್ ಕೀಳ್ರಕ್ಕ ಅಂದ್ಬುಟ್ಟು

ಅಯ್ಯ ಎಂಟು ಜೊನ್ನೆಯ ವಲಿರವ್ವ sss || **ತಂದಾನ** ||
ಅಯ್ಯ ಬಂದಿರೋದು ಏಳು ಜನsss
ವೋಳ್ವಾದು ಏಳುಜನ
ಎಂಟು ಜೊನ್ನೆ ಕಟ್ಟಿರವ್ವ sss || **ತಂದಾನ** ||
ಬಂದಿರೋದು ಏಳುಜನsss

ನಿಂತಿರೋದು ಏಳುಜನsss
ಮತ್ತೊಂದು ಜೊನ್ನೆ ಯಾಕವ್ವ || **ತಂದಾನ** ||

ಅಲ್ಲಮ್ಮ ಬಂದಿರೋದು ನಾವು ಆರ್ ಜನ
ನಿನ್ ಸೇರಿ ಏಳ್ ಜನ ಆಯ್ತಲ್ಲ
ಮತ್ತೊಂದು ಜೊನ್ನೆ ಯಾಕವ್ವ ಅಂತ ಕೇಳ್ತಾರೆ ಕುಸ್ಮದೇವಿಯ
ಮೀಸಲ್ ತಗುದ್ಬುಡಮ್ಮ
ಮೀಸಲು ತದ್ಬುಡಕ್ಕ ಅಂದರು

ಸ್ವಲ್ಪ ಎಂಜುಲು ಇಲ್ಲದೆ ತೆಗಿರವ್ವsss || **ತಂದಾನ** ||
ಎಂಜ್ಲಿಲ್ದೆ ತಗದ್ಬುಡ್ರಕ್ಕ ಅಂತ ಯೇಳ್ದಾಗsss
ನಾರಾಯ್ಣ ಮೂರ್ತಿ
ಅಲ್ಲಿ ಸುಳ್ಕಂತ ದಾಸಯ್ಯ ಬರುತ್ತಾನೆsss || **ತಂದಾನ** ||

ಸುಳ್ಕಂತ ದಾಸಪ್ಪ ಬಂದ್ಬುಟ್ಟಿದಾನೆ
ಅಪ್ಪದಾಸಪ್ಪ ಏನಯ್ಯ ಕಜ್ಜಿನಾತ
ಕತ ಕತ ಕತ ನಡಿಕ್ಕೊಂಡ್ ಬರ್ತಾ ಇದಾನೆ
ಅಯ್ಯ ಮೂಡಲು ಬರಬೇಡ

ಬಡಗಾಲು ಬರಬೇಡ ಕಜ್ಜಿಯ ನಾತ ಬಲುನಾತsss || **ತಂದಾನ** ||
ಅಯ್ಯ….. ಬಾರಯ್ಯ ದಾಸಯ್ಯsss
ತೆಕ್ಕೊಂಡು ಕೊಡೊ ಚಿಕ್ರಂಗಿsss || **ತಂದಾನ** ||
ಏಯ್ ತೆಕ್ಕೊಂಡು ಕೊಡು ಚಿಕ್ರಂಗಿ ಅನ್ನುವಾಗsss
ನಾನು ಕೊಡಾದಿಲ್ಲ ದೊಡ್ರಂಗಿ sss || **ತಂದಾನ** ||

ಆರು ಕುಸ್ಮದೇವಿ ಕಯ್‌ಲಿ ಕೊಟ್ಬುಟ್ಟಿದಾರೆ
ಕುಸ್ಮದೇವಿ ಮೂಗಿಗೆ ಬಟ್ಟೆ ಮುಚ್ಕಂಡು
ಜೊನ್ನಿಯ ತೆಕ್ಕೊಂಡೊಗಿ ಕೊಡ್ವಾಗ

ಅಲ್ಲಿ ಕೋಲ್ಜೇನು ತುಪ್ಪ ತೆಗಿತಾರೆsss || **ತಂದಾನ** ||

ದಾಸಪ್ಪ ಯಾರಪ್ಪ ನೀನು ಬಂದ್ಬುಟ್ಟೆ ಅಂದ್ರು
ಅಯ್ಯೋ ಏಡ್ ನೇತ್ರ ಕಾಣ್ಣಿಲ್ಲಮ್ಮ
ನೆಡ್ಗೆ ಬರ್ನಿಲ್ಲ ಆದಿ ತಪ್ಪೋಗ್ಬುಡ್ತು
ಅದಕ್ಕೋಸ್ಕರ ಬಂದೆ ಅಂದ್ರು
ಪಾಪ ನೀನು ಒಂಟಿಗೋಪ್ಪ ಇದೆ ಆದಿ

ಗುರುವೇ ಕೋಲ್ಜೇನ್ ತುಪ್ಪ ಕುಡ್ಕಂದ್ ನೀನ್ ಒಂಟೋಗ್ ಅಂದ್ರು
ಯೋಚ್ನೆ ಮಾಡ್ಬುಟ್ಟು ನಾರಾಯಣ್ ಮೂರ್ತಿ ಏನ್ಮಾಡ್ತ ಇದಾನೆ ಅಂದ್ರೆ

ಅಣ್ಣ ರಂಗಯ್ಯ ವನ್ನೆಯ ಮರಮೇಗಿsss
ಸನ್ನೆಯ ಮಾಡಿ ಕರಿತಾನೇ sss || **ತಂದಾನ** ||
ಅವ್ರು ಸನ್ನೆ ಮಾಡಿ ಕರಿತವ್ರೆ ನಾರಾಯ್ಣsss
ಗೆಡ್ಡೆ ಗೆಣ್ಸ ಕಿಳುತಾರೆ sss || **ತಂದಾನ** ||

ಗೆಡ್ಡೆ ಗೆಣ್ಸನ್ನು ಕಿತ್ತುಕೊಂಡು ಈ ಅಣ್ಣ ರಂಗಯ್ಯ ನೋಡು ಏನ್ಮಾಡ್ತ ಇದಾನೆ
ವನ್ನೆ ಮರದ್ ಮೇಲೆ ಸನ್ನೆ ಮಾಡ್ತ ಇದಾನೆ
ಆಹಾ ಏನಿ ಜಾಣ ರಂಗಪ್ಪ ಅವ್ನು ವನ್ನೆ ಮರಕ್ಕ ಅತ್ಬುಟ್ಟಿದಾನೆ
ವನ್ನೆ ಮರಕ್ಕ ಅತ್ಬುಟ್ಟು ಅಣ್ಣ ರಂಗಯ್ಯನವ್ರು
ಸನ್ನೆ ಮಾಡಿ ಕರೆವಾಗ ಆಗ ಚಿಕ್ಕಾಡಿ, ದೊಡ್ಕಡಿ
ಕಂಬ್ರಿಗುಡ್ಡಲ್ಲಿ ಮುಳ್ಗೆಣ್ಸು, ತಾವ್ರೆಗೆಡ್ಡೆ ಎಲ್ಲಾ ಗೆಡ್ಡೆ ಗೆಣ್ಸನ್ನು ಕಿತ್ತುಬುಟ್ರು
ತಲೆಮ್ಯಾಲೆ ವತ್ಕಂಡು ಅಕ್ಕ ನನ್ಗೇನು ಗೆಡ್ಡೆ ಗೆಣ್ಸು ಸಿಕ್ನಿಲ್ಲ
ಅಲ್ಲಿ ನೋಡ್ಕೊಂಡು ಬರ್ತಿನಿ ನಡ್ರಕ್ಕ ಅಂದ್ಬುಟ್ಟ
ಯಾರು ಕುಸ್ಮದೇವಿ
ಮಾಯ ಮಾಡ್ಬುಟ್ಟು ನಾರಾಯ್ಣಮೂರ್ತಿಯವ್ರು
ಮಾಯ ಮಾಡ್ಬುಟ್ಟು
ಆಗ ಮಾಯ ಮಾಡ್ದೊತ್ತಿಗೆ ಇವ್ರು ನಮ್ಗೆನಮ್ಮ
ಮುದ್ಕ ನೇತ್ರ ಕಾಣಲ್ಲ ನಡ್ಗೆ ಬರಲ್ಲ
ಅವ್ರಿಗೆ ಸ್ವಲ್ಪ ಗೆಡ್ಡೆ ಗೆಣ್ಸು ಬೆಯ್ಸ್ ಕೊಡ್ಬೇಕು ಅಂದ್ಬುಟ್ಟು
ಆಗ ನೋಡುದ್ರು

ಎತ್ತಲಾರದ ಗೆಣ್ಸು ಮುಳ್ಳು ಗೆಣ್ಸನ್ನು ತೆಗ್ದುsss
ಮುರ್ದು ಮೂರ್ದಂಚಿ ಮಡ್ಗತಾರೆ || **ತಂದಾನ** ||

ಮುರ್ದು ಮುರ್ದು ಮಡ್ಗ್ ಬುಟ್ಟ ಕಟ್ಕೊಳ್ಳಕೆ ಬಟ್ಟಿಲ್ಲ
ಅವ ಮುಂದಲ್ ಸೆರ್ಗನ್ನು ತಗ್ದು ಯಿಂದಕ್ಕೆ ಮಡ್ಚಿಕೊಂಡು

ಗೆಡ್ಡೆಯ ಗೆಣ್ಸ ಕಟ್ಟುತಾಳೆ sss || **ತಂದಾನ** ||

ಗೆಡ್ಡೆ ಗೆಣ್ಸನ್ನು ಕಟ್ಬುಟ್ಟು ಎತ್ತಕಾಗ್ದೆವೊಯ್ತು
ಅಯ್ಯಯ್ಯೋ ನಮ್ಮಕ್ನು ಇಲ್ಲ
ನನ್ನ ತಂಗು ಇಲ್ಲ
ನನ್ನ ಬಂದು ಬಳ್ಗ ಯಾರು ಇಲ್ಲ

ಅಂದ್ಬುಟ್ಟು ಯೆಜ್ಜೆ ಎತ್ತಕಾಗ್ದೆ ವೋಯ್ತು
ಅಣ್ಣ ರಂಗಯ್ಯ ವನ್ನೆ ಮರ್ದಮೇಲೆ ನೋಡ್ತಾ ಕೂತಿದಾನೆ

ಅಲ್ಲಿ ಕೂತಿದ್ದು ದಾಸಯ್ಯ ಬರುತಾನೆsss **|| ತಂದಾನ ||**
ಏಯ್ ದಾಸಪ್ಪ ದಾಸಪ್ಪ ಜಲ್ದಿ ಬಾರೊ ಅಪ್ಪsss
ಈ ಗೆಡ್ಡೆ ಗೆಣ್ಸಪ್ಪ ಎತ್ತಿಕೊಡೋsss **|| ತಂದಾನ ||**

ಆಗ ಕುಸ್ಮದೇವಿ ದಾಸಪ್ನ ನೋಡಿ ಗೆಲುವ್ ಆಗ್ಬುಟ್ರು
ಅಯ್ಯಯ್ಯೋ ನಮ್ಮಪ್ಪ ಮೀಸೆ ನೋಡು ಮೀಸೆ
ಮೀಸೆ ಆಚೆ ಈಚೆ ಮೀಸೆ ನವ್ರತ್ತಾರೆ ನಾರಾಯಣಮೂರ್ತಿಯವ್ರು
ಏಯ್ ಈ ಗೆಡ್ಡೆಗಣ್ಸ ಎತ್ತಿದ್ರೆ ನನ್ಗೆನಾದಯಿ ಯೇಳೆಣ್ಣೆ ಅಂದ್ರು
ಮಂಡಿಗೆತ್ತಿ ಕೊಟ್ಬುಟ್ರೆ ಮಗಳಾಯ್ತಿನಿ
ತಲೆಗೆತ್ತಿ ಕೊಟ್ಬುಟ್ರೆ ತಾಯಿ ಆಯ್ತಿನಿ
ಯೆಗಲ್ಗೆ ಎತ್ತಿ ಕೊಟ್ಬುಟ್ರೆ ತಂಗಿಯಾಯ್ತಿನಿ ಅಂದ್ಲು
ಆಹಾ ತಂಗಿ ಆಗುದುಂಟಾ

ನಂಗ ಇನ್ನೊಂದು ಮಾತ ನುಡಿರೆಣ್ಣೆsss **|| ತಂದಾನ ||**
ಇನ್ನೊಂದು ಮಾತ ನುಡಿರೆಣ್ಣೆ ಅನ್ವಾಗsss

ಗೇರೈಸಿ ಗ್ಯಾನ ಮಾಡ್ಕೊಂಡು
ಅಲ್ಲಪ್ಪ ಇಂತ ಆನೆ ಉಲಿ ಕರ್ಡಿ ಕಾಡೆಮ್ಮೆನೆಲ್ಲ
ಗೆದ್ದು ನಂಗೊತ್ತು ಇಂತ ಕುಳ ಆಸಾಮಿ
ಗೆಲ್ಲದು ಬಲು ಯೆಚ್ಚ ಅಂದ್ಬುಟ್ಟು....

ಮಡ್ದಿ ಆಯ್ತಿನಿ ದಾಸಯ್ಯನವರೇsss **|| ತಂದಾನ ||**
ಮಡ್ದಿ ಆಯ್ತಿನಿ ದಾಸಯ್ಯ ನಾನಂತೆsss
ಎತ್ತು ಬಾರಯ್ಯ ಗೆಣ್ಸಿನ ವೊರೆಯ ದಾಸಯ್ಯsss
ನಿಮ್ಮ ಮಡ್ದಿ ಮಗ್ಳಂತೆ ಆಗುತಿನಿsss **|| ತಂದಾನ ||**

ಆ ಮಾತನ್ನ ಕೇಳ್ಬುಟ್ಟು ನಾರಾಯ್ಣ ಮೂರ್ತಿಯವ್ರು

ಅಹಾ ಜೋರಾಗಿ ಕಾಕ ಆಕುತಾನೆsss **|| ತಂದಾನ ||**

ಜೋರಾಗಿ ಕಾಕ ಆಕ್ಬುಟ್ಟು ನಾರಾಯಣ ಮೂರ್ತಿಯವ್ರು ಎತ್ ಬುಟ್ರು
ಬೆಳ್ ಮಡ್ಗ್ ಬುಟ್ಟು ಕಣ್ ಬುಟ್ಟು ಮುಚ್ಚದ್ರೊಳ್ಗ ಆರ್ಬುಡ್ತು
ಗೆಡ್ಡೆ ಗೆಣ್ಸು.... ವೊರೆ ಎತ್ಬುಟ್ಟು
ನಡ್ಗೆ ಬರಲ್ಲ

ನನ್ನ ಇಸ್ಟುದ್ದ ಒರಬೇಕುsss ‖ **ತಂದಾನ** ‖
ಏಯ್ ನನ್ನ ಇಸ್ಟುದ್ದ ಒತ್ಗಂಡು ವೋದರೆsss
ಬಾಳ ಪುಣ್ಯ ಬರುತ್ತದೆsss ‖ **ತಂದಾನ** ‖
ಬಾಳ ಪುಣ್ಯ ಬರುತ್ತದೆ ಅಂದ್ಬುಟ್ಟುsss
ಕುಂತ್ಕೊ ದಾಸಪ್ಪ ಅಂತ ಕರಿತಾಳೆsss ‖ **ತಂದಾನ** ‖
ಅಯ್ಯ ಕುತ್ಗೊ ದಾಸಪ್ಪ ತಲೆ ಮ್ಯಾಲೆ ಅನ್ವಾಗsss
ಅವ್ರು ಪೊಣ್ಣನೆ ಸ್ವಾಮಿ ಆರುತ್ತಾರೆsss ‖ **ತಂದಾನ** ‖

ಸ್ವಾಮಿಯವ್ರು ಪೊಣ್ಣಾನೆ ಆರ್ಬುಟ್ಟು
ಕೂತ್ಗಂಡು ಕೊನೆ ಮೀಸೆ ತಿರ್ಗಸ್ತಾಯಿದ್ರು
ಈ ತಾಯಿ ಕುಸ್ಮದೇವಿ ಏನ್ ಮಾಡ್ದ
ಮೂರೆಜ್ಜೆ ಕಡೆ ಆಕ್ದ ಕಗ್ಗಲ್ಲ ಒರುಬಯ್ದು

ಕಲ್ ಕಲ್ಲ ಒರುಬಯ್ದು ಅಲ್ಬ ದಾಸಯ್ಯ ಒರುಬಾರsss ‖ **ತಂದಾನ** ‖
ಅಲ್ಬ ದಾಸಯ್ಯ ಒರುಬಾರ ಎಂದುಬುಟ್ಟುsss
ದುಬ್ನ ದಾಸಯ್ಯ ಇಡುತ್ತಾಳೆsss ‖ **ತಂದಾನ** ‖
ದುಬ್ನ ಕೈನ ಇಡ್ವಾಗ ವೊತ್ತಿನಲ್ಲಿsss
ಟಮ್ಮ ಟುಮ್ನೆ ಸ್ವಾಮಿ ಕುಣಿಯುತಾನೆsss ‖ **ತಂದಾನ** ‖

ಆಗ ನೋಡುದ್ರು ಕಾರೆಂಬ ಕತ್ಲೆ ಆಗ್ಬುಡ್ತು
ಬೋರೆಂಬ ಮಳೆ ಬಂದ್ಬುಡ್ತು
ಕಂಬ್ರಿ ಗುಡ್ಡಲ್ಲಿ ಕಾ ಅಂದ್ರೆ ಕಾಗೆ ಸಬ್ದವಿಲ್ಲ
ಗೂ ಎಂಬ ಗೂಗೆ ಸಬ್ದವಿಲ್ಲ
ಅಯ್ಯೋ ನಾನೇನಪ್ಪ ಮಾಡ್ಬೇಕು ಅಂದ್ರೆ
ಸೋಲಿಗರ ಬೊಮ್ಮೆಗೌಡ್ನ ಮಕ್ಕೆಲ್ಲಾ ಪೋಡು ಸೇರ್ನಿಲ್ಲ.

ಅವ್ರು ಕನಕದಾಸರ ಗವಿಗೆ ಕರಕೊಂಡುsss ‖ **ತಂದಾನ** ‖

ಸ್ವಾಮಿಯವ್ರು ಕನಕದಾಸರ ಗವಿಗೆ
ಕುಸ್ಮದೇವಿ ಕರ್ಕಂಡು ಉಗ್ನ ಕಾರಾಚೆ ಉಲ್ಲ ಆಸ್ಗೆ ಮಾಡ್ಬುಟ್ಟು
ಸಂಕ ಚಕ್ರ ಎಡ್ಗಡೆ ಬಲ್ಗಡೆ ಇಟ್ಬುಟ್ಟು
ಕುಸ್ಮಾಲೆ ಕಟ್ಕೊಂಡು ಬಂದಿದ್ರು
ಸೋಲಿಗ್ರ ಬೊಮ್ಮೆಗೌಡ ನೋಡುದ್ರೆ
ನಿನ್ನಾಗೆ ಗಡ್ಡ ಮೀಸೆ ಎಲ್ಲಾ ಕೂಡ್ಕೊಂಡು
ಬೊಮ್ಮೆಗೌಡ ನೋಡುದ್ರು
ನನ್ನ ಕಿರಿಮಗ ಉಸ್ಮದೇವಿ ಬಂದಾಳಲ್ಲ
ಯಾವ್ ಕಡೇಮ್ಮ ಬಿಟ್ರಿ ನೀವು?

ನೋಡಪ್ಪ ಇಲ್ಲಪ್ಪ ಕಂಬ್ರಿಗುಡ್ಡದ
ಅಂಜನಾಗುಡ್ಡದಲ್ಲಿ ಬಂದಿವಪ್ಪ ನಾವು
ಕುಸ್ಮದೇವಿ ಯಾಕ್ ಬಂದಿಲ್ಲ?

ಆ ಮೂಲ ಚೇಲವ ತೆಗಿರವ್ವsss || **ತಂದಾನ** ||
ಮೂಲೆ ಚೇಲವ ತೆಗಿರವ್ವ ಎನ್ನುವಾಗsss
ಕವಡೆ ಚೇಲವ ಕೊಡುತ್ತಾರೆsss || **ತಂದಾನ** ||

ಪಗಡೆ ಚೇಲ ಅಂದ್ರೆ ಯಾವ್ದು?
ಕಣಿ ಬುಡ್ತಾರೆ ಆಗ
ಮೂಲ ಕೈಯೊಳ್ಗೆ ಸಾಸ್ತ್ರ ಬಿಟ್ಟು ನೋಡುವಾಗ
ನಿಮ್ಮ ಕುಸ್ಮದೇವಿಗೆ ಏನು ಅಪಾಯ ಆಗಿಲ್ಲ

ಅಲ್ಲಿ ದಾಸಯ್ಯ ವಾಸಂತೆ ಆಗಿದಾಳೆsss || **ತಂದಾನ** ||

ಅಯ್ಯಯ್ಯೋ ನಮ್ಮಪ್ಪ ದಾಸಯ್ನ ವಾಸ ಅಂತ ವೋಗುವಾಗ
ಈ ಸೋಲಿಗ್ರ ಬೊಮ್ಮೆಗೌಡ್ನ ಮಕ್ಳು
ಗೆಡ್ಡೆಗೆಣ್ಸ್ ತೆಕ್ಕೊಂಡು ಅವ್ರು ಎಲ್ಲೋಗ್ತಾರೆ?
ಕೃಷ್ಣನ ಕಟ್ಟೆಗೋಗ್ತಾರೆ
ಕೃಷ್ಣನ ಕಟ್ಟೇಲಿ ಎನ್ಮಾಡ್ತಾರೆ ನಾರಾಯ್ಣ?
ಅಲ್ಲಿ ತಾರಮಾರ್ನೆ ಪೇಟ ಕಟ್ಬುಟ್ಟು
ಕೃಷ್ಣನ ಕಟ್ಟೆಗೆ ಬರ್ತಾ ಇದಾನೆ ಮೆಲ್ಗೆ ಕೃಸ್ಣಪ್ಪ
ಆಹಾ ಏನ್ ಕೃಸ್ಣಪ್ಪ ಇಲ್ಗೆ ಒರ್ಟಬುಟ್ರಿ ಅಂದ ಸೋಲಿಗ್ರ ಬೊಮ್ಮೆಗೌಡ
ಆಹಾ.... ಏನಪ್ಪ ಬೊಮೆಗೌಡ್ರೆ ಅಂದ್ರು
ನನ್ನ ಮಗ ವೋಗಿ ಮೂರುದಿವ್ಸ ಆಯ್ತು ಸ್ವಾಮಿ
ಕಂಬ್ರಿಗುಡ್ದಾಗ ಹೋಗ್ಬುಟ್ಟು ಮಾಯ ಆಗ್ಬುಟ್ರು ಅಂದ್ರು
ಮತ್ತೆ ಎಲ್ಲಿಗ್ ಬತ್ತಿದೆ ಬೊಮ್ಮೆಗೌಡ ಅಂದ್ರು
ನಿಮ್ಮತ್ರ ಬತ್ತಿದ್ದೆ ಗುರು ನಿಮ್ಮತ್ರ ಬತ್ತಿದ್ದೆ ಕೃಸ್ಣಪ್ಪ ಅಂದ್ರು
ನನ್ನಿಂದೇನಾಗ್ಬೇಕು ಅಂದ್ರು
ಒಂದು ಸಾಸ್ತ್ರ ನೋಡ್ಬೇಕಪ್ಪ
ಒಂದು ಸಾಸ್ತ್ರ ನೋಡ್ಬೇಕು ಕೃಸ್ಣಪ್ಪ ಅಂದ್ರು
ಅಗ ಕೃಸ್ಣನ ಕಟ್ಟೇಲಿ ಕೂತ್ಗಂಡು
ಪಗ್ಡೆಸಾಸ್ತ್ರವನ್ನು ನಾರಾಯ್ಣಮೂರ್ತಿ ಮಾಯ್ದಲ್ಲಿ ಮಾಡ್ಬುಟ್ನೂ
ಅಯ್ಯೋ ಬೊಮ್ಮೆಗೌಡ
ಯಾರೋ ಒಬ್ಬ ದಾಸಪ್ನ ವಾಸ ಆಗವ್ಳೆ ನೋಡು
ದಾಸಪ್ಪ ವಾಸ ಆಗವ್ಳೆ ನೋಡಪ್ಪ ಅಂದ್ರು
ಅಯ್ಯಯ್ಯೋ ಕೃಸ್ಣಪ್ಪ ನಾ ಏನಪ್ಪ ಮಾಡದು ಅಂದ್ರು

ಈಗ ಕೃಷ್ಣನ ಕಟ್ಟೇಲಿ ಇಂದು ನಾಮಕರಣsss **|| ತಂದಾನ ||**
ಏಯ್ ಕೃಷ್ಣ ಕಟ್ಟೆಂದು ನಾಮ್ಕರ್ಣ ಮಾಡ್ಕಂದುsss
ಮೇಲುಗಿರಿಕೆ ಬರುತ್ತಾರೆsss **|| ತಂದಾನ ||**

ನಾಮ್ಕರ್ಣ ಮಾಡ್ಬುಟ್ಟು ಬಂದ್ಬುಟ್ಟು
ಏನ್ ಅಪಾಯ ಆಗಿಲ್ಲಪ್ಪ
ಬನ್ನಿ ಗೌಡ್ರೆ ದಾಸಪ್ನ ವಾಸ ಆಗವ್ಳೆ ಅಂದ್ಬುಟ್ಟು
ಕೃಷ್ಣಪ್ಪ ಅವ್ರಿಗೆ ಯೇಳ್ಬುಟ್ಟು
ಏನ್ ಅವ್ರ ಪಂಚೆ ಆರುಗಜ್ಜೆ ನೋಡ್ತ ಅವ್ರು ಕೋರೆ….
ಪಗ್ದೆಸಾಸ್ತ್ರ ನೋಡುದ್ರು ಕೃಷ್ಣಪ್ಪ
ಈ ಬೊಮ್ಮೆಗೌಡನ್ಗೆ ಏನಾಗೊಯ್ತು
ನಿನ್ನಾಗೆ ಸೋಲಿಗ್ರ ಬೊಮ್ಮೆಗೌಡ ದಡ್ಡ ಅಲ್ವ
ಆಗೇನಿಲ್ಲ ಅಯ್ಯಯ್ಯೋ ನಮ್ಮಪ್ಪ ಕೃಷ್ಣಪ್ಪ
ಸಾಸ್ತ್ರ ನೋಡ್ದಮ್ಮಿ ಇನ್ಯಾಕಮ್ಮಿ ಎಂತಾ ಸಾಸ್ತ್ರ ನೋಡ್ದ
ದಾಸಪ್ನ ವಾಸವಾಗಿದ್ದಾಳೆ ಅವರು ಹೋಗಿ
ನಾವು ಎಲ್ಲಿದ್ದಾಳೆ ಎಂದು ಕೇಳುವಾಗ
ಕನಕದಾಸರ ಗವಿಗೆ….

ಕನಕದಾಸ ಗವಿಗೆ ಹೋಗಿದಾರೆsss **|| ತಂದಾನ ||**

ಕನಕದಾಸರ ಗವಿಯೊಳ್ಗ ಹೋಗಿ ನೋಡುದ್ರು
ಎನ್ ಬೆಂಕಿ ಬಗ ಬಗ ಅಂತದೆ
ಒಳ್ಗೆ ಆಸ್ಗೆ ಆಸಿತ್ತು
ಓಹೋ ಇಲ್ಲೆ ಇದ್ದ ಯಾರೊ ಒಬ್ಬ ಕಳ್ಳ ತೆಕ್ಕೊಂಡು ಹೋಗಿದಾನೆ
ಏಯ್ ಚಿಕ್ಕಾಡ, ದೊಡ್ಕಾಡ, ಚಿಕ್ಕಮಾದ, ದೊಡ್ಡಮಾದ….

ಅಯ್ಯ ತುಂಡು ದೊಣ್ಣೆಯ ನೀವು ತೆಕ್ಕೊಳ್ರಯ್ಯsss **|| ತಂದಾನ ||**

ತುಂಡು ದೊಣ್ಗೆ ತೆಕ್ಕೊಂಡು ತಾಯಿಪಾದ ಪುಟ್ಟಾದ
ಗೆಡ್ಡೆ ಗೆಣ್ಸ ಕಿತ್ತಂತ ಈ ಮಣ್ಣಿನ್ ಮೇಲೆ
ಕುಳಿ ಮೇಲೆ ಮಡ್ಗ್ ಬುಟ್ಟಿತ್ತು
ಆಹಾ ನೋಡಪ್ಪ ನನ್ನ ಮಗಳ ಪಾದ
ನೋಡು ಯಂಗ್ ಇಟ್ಟಿದೆ ಅಂದ್ಬುಟ್ಟು

ಮಳ್ಳಿಯಾ ಕಡ್ಡಿ ಮುರಿತಾರೆsss **|| ತಂದಾನ ||**
ಅಯ್ಯ ಮಳಿಯಾ ಕಡ್ಡಿಯ ಮುರ್ಕಂಡು ಒಂದ್ಗಳ್ಗ
ಅಜ್ಜೆಯ ಆಳ್ತೆ ತೆಗಿತಾರೆsss **|| ತಂದಾನ ||**

ಅಜ್ಜೆ ಆಳ್ತೆ ತಗ್ದು ಬುಟ್ಟು ಮೂರೆಜ್ಜೆ ಮುಂದ್ಕೆ ವೋದ್ರು
ಅಲ್ಲೊಂದು ಇಟ್ಬುಟ್ಟಿತ್ತು
ಅಯಯ್ಯೋ ನಮಪ್ಪ ಇನ್ಯಾಕ ಆಪಾದ ನೋಡುದ್ರು
ಏಯ್ ದೊಡ್ಡಮಾದ.... .
ಏನಪ್ಪಾ......?
ನೋಡೋ ಈ ಪಾದ ನೋಡೋ
ಆನೆ ಪಾದವು ಈ ತರ ಇಲ್ಲ
ಒಂಟೇ ಪಾದವು ಈ ತರ ಇಲ್ಲ
ಇದಕ್ಕೆ ದೊಡ್ಡ ಪಾದ ಅನ್ನೋದು
ಈ ಪಾದ ಪತ್ತೆ ಮಾಡ್ಬೇಕು
ಇವ್ನೆ ನನ್ನ ಮಗ್ಳ ತೆಕ್ಕೊಂಡ್ ವೋಗಿರವ
ಆಹಾ ಅಪ್ಪಾ ಅಪ್ಪಾ.... .
ಉನ್ಗನ ವುಲ್ಲು ಯಾವ್ ಕಡೆ ವೋಗಿದ್ದಾದೋ

ಅವ್ರು ಜಾದು ಕಲ್ಲಂತೆ ತೆಗಿರಪ್ಪsss || **ತಂದಾನ** ||

ಅಜ್ಜೆಯ ತೈಲತೆಕ್ಕೊಂಡು ವೋಗುತವ್ರೆ

ಗವಿಗೆ ವೋಗುತಾರೆsss || **ತಂದಾನ** ||

ಅರುವರ ಗವಿಗೆ ವೋಗುವಾಗ
ಕುಸ್ಮದೇವಿ ಏನ್ಮಾಡ್ತ ಇದಾಳೆ?
ಈ ನಾರಾಯ್ಣ ತಲೆ ತೆಗ್ದು ತೊಡೆ ಮೇಲಿಟ್ಕೊಂಡು

ಅವ ಯೇನು ಸೀರುವೆ ನೋಡುತಾಳೆsss || **ತಂದಾನ** ||

ಗಕ್ಕನ್ ಕಂಡ್ಬುಟ್ಟ ಬೊಮ್ಮೆಗೌಡ ಅವರ
ಏಯ್ ಆರಯ್ಯ ನೀನು?
ನನ್ನ ಮಗ್ಳ ತಂದದು.... .
ನಾನೇ ಬೊಮ್ಮೆ ಮಾವ
ಮಾವ ನಾನೇ ತಂದಿದ್ದೀನಿ ಮಾವ ಅಂದ್ರು
ಏಯ್ ಮಾವ ಅನ್ನೋಕೆ ನೀನ್ಯಾರೋ?
ಆರು ನೀನು?

ಆರಯ್ಯ ನೀನು ಯಾವ ಕುಲವೋ

ನೀನು ನನ್ನ ಮಗಳ ತೆಕ್ಕೊಂಡ್ ಬಂದಿದ್ದೀಯಾ
ಅಮ್ಮ ಕುಸ್ಮದೇವಿ ಅಮ್ಮ ಕುಸ್ಮಾಲೆ

ನೀನು ಈ ದಾಸಯ್ಯ ವೇಸ ನೋಡಿ ಬಂದಿಯಲ್ಲ
ನಿಂಗೇನಾದ್ರು ಬುದ್ದಿ ಕಲ್ಸನಿಲ್ವ

ನಿಂಗೆ ಕರುವ ಕಟ್ಟಕ್ಕೆ ಒಂದು ಕಂಬ್ಳದಾಳುsss
ಕರುವ ಕಟ್ಟಕೆ ಕಂಬ್ಳದಾಳ ಕೊಡ್ತಿನಿsss
ರಾಗಿ ಬೀಸಕೆ ಚೆನ್ನದ ಗುಂಟsss || **ತಂದಾನ** ||

ಮಾವ ರಾಗಿ ಬೀಸಕೆ ಚೆನ್ನದ ಗುಂಟ
ಕರುವ ಕಟ್ಟಕೆ ಕಂಬ್ಳದಾಳು ನಮ್ಮ ನೋಡಿದ್ರೆ
ಮಾವ ಚಿಕ್ಕ ಮಕ್ಕಳಿಗೆಲ್ಲ ಅಂತ ಊಟ ಕೊಡ್ತಿಯಾ ಮಾವ
ಏಯ್ ದಾಸ……
ಏಯ್ ದಾಸ ಮನೆ ಮನೆ ಯಿಟ್ ತಿರ್ಕೊಂಡು ತಿನ್ನ ದಾಸಯ್ಯ ನೀನು
ನನ್ನ ಮಗಳ ತಂದು ಆದ್ರ ಗೆಡ್ಸುಬಿಟ್ಟಿ
ಯಾವ ಕುಲ್ದವ್ನು?
ಯಾವ ಮತ್ದವ್ನು?
ಯಾವ್ ಜಾತಿಯವ್ನು ನೀನು?

ನನಗೆ ಯೆಣ್ಣಿನ ತೆರ್ವ ಕೊಟ್ಟಾರೆ ದಾಸಯ್ಯsss
ಬಿಟ್ಟು ವೋಗ್ತಿಮಿ ನಿನ್ನುಡುಗಿಯsss || **ತಂದಾನ** ||

ಅವ್ರುಗೇನು ಸಾಕ್ಸಾತ್ ಬಗವಂತ
ಅನ್ನೇಡ್ ಕೊಂಗ ರೂಪಾಯ್ ಕೊಟ್ಬುಟ್ಟ
ಈ ದಡ್ಡ ಸೋಲಿಗರ ಬೊಮ್ಮೆಗೌಡ
ಏನ್ಮಾಡ್ಡ ಮೇಲ್ಗಿರಿ ಕೈಲಾಸ್ದೊಳ್ಗೆ ನಿಂತ್ಗಂಡು
ಕಮ್ರಿ ಒಳ್ಗೆ ಅಮ ಜಲ್ ಜಲ್ನೆ ರೂಪಾಯಿ

ಅಮ ಜಲ್ ಜಲ್ನೆ ರೂಪಾಯಿ ತೂರುತ್ತಾನೆsss || **ತಂದಾನ** ||

ಅಮ ಜಲ್ ಜಲ್ನೆ ತೂರ್ಬುಟ್ರು ಎಲ್ಲಾ ಒಂಟೋಯ್ತು ಬಂಡೆಗೆ
ಆಹಾ ಒಂಟೋಯ್ತು
ಅನ್ನೇಡ್ ಕೊಂಗದ ರೂಪಾಯ್ನು ತೂರ್ಬುಟ್ಟ

ಅನ್ನೇಡುವರ್ ರೂಪಾಯಿ ಅವ್ರಿಗೆ ಸಿಕ್ಕುಬಿಡುತುsss || **ತಂದಾನ** ||

ಅನ್ನೇಡುವರ್ ರೂಪಾಯಿ ನನ್ನೆಣ್ನ ತೆರ ಆಯ್ತು
ಕತ್ತಲ್ ನೋಡ್ಲಿಲ್ಲ
ಉತ್ತ ನೋಡ್ಲಿಲ್ಲ ಅಂದ್ಬುಟ್ಟು
ಏಯ್ ಸೋಲಿಗ್ರ ಬೊಮ್ಮೆಗೌಡ್ರನವರು

ನನ್ನ ಉಗ್ದ್ ಬಿಟ್ಟಿದ್ದಿಯಾ
ಬಯ್ದ್ ಬಿಟ್ಟಿದ್ದಿಯಾ
ಕರು ಕಟ್ಟಕೆ ಕಂಬ್ಬದಾಳು
ರಾಗಿ ಬೀಸಕೆ ಚೆನ್ನದ ಗುಂಟ
ಆಸ್ಗೆ ಆರುಗಂಟ ತೆಗೆಲ್ಲ ಅಂತ ಸಾಪ ಕೊಟ್ಟಿದ್ದಿಯೇ
ಈವೊತ್ತಿನ ದಿವ್ಸ ನೋಡಪ್ಪ ನಿಂಗೆ
ಮೂರು ವರ್ಸಕ್ಕೊಂಡು ಪೋಡಾಗಲಿ
ಮೂರು ವರ್ಸ ತುಂಬಿದ ಮೇಲೆ ಅದು ದಬ್ಬೆ ದರ್ಬುಲ್ಲು…. .

ಅದು ದಬ್ಬೆ ದರ್ಬುಲು ಬರಬೇಕುsss || **ತಂದಾನ** ||
ಅಯ್ಯ ಯಿಂದು ಎತ್ತಾಗಿ ಗಂಡು ಬಳಿಯಾಗಿsss
ಅನ್ನ ಬಟ್ಟೇಕ ತಿರಿರಂತೆsss || **ತಂದಾನ** ||
ಅಯ್ಯ ಅನ್ನ ಬಟ್ಟೆಕ ತಿರ್ದುವ ದಾರಿsss
ಸೋಲ್ಗ ಬೊಮ್ಮನ ಮಕ್ಕಳು ಅಂದರೆsss
ಏಳುಕೋಟೆ ಬಂಗಾರಕ್ಕೆ ಬಾದ್ಯ ನೀನೆ ಕಾಣೋsss

ಏಳುಕೋಟೆ ಬಂಗಾರಕ್ಕೆ ನೀನೆ ಕಾವ್ಲು
ನನ್ನ ಬಂಗಾರಕ್ಕೆ ನೀನೆ ಸೈನ್ ಮಾಡಬೇಕು
ನನ್ನ ಬಂಗಾರಕ್ಕೆ ನೀನು ಬೆಟ್ಟೊತ್ತಬೇಕು
ನನಗೆ ಉರ್ದುಳ್ಳಿ ತಿನ್ನಬೇಕು
ಊಟ ಮಾಡ್ಸ್ಕ ಉಣ್ಣಬೇಕು
ರಾಗಿ ಮುದ್ದೆ ಉಣ್ಣಬೇಕು
ನನ್ನ ಮೇಲುಗಿರಿಕೆ ಬರ್ಬೇಕು ನೀನು
ನನ್ನ ಬವಾದ್ರು ನೀನು

ನೀನು ಬಾವ ಬಾಮ್ಮೈಕ ಅಂತ ಮಾತು ಅಂತೆsss || **ತಂದಾನ** ||
ಆಡಿರಿ ರಾಗಗಳ ನುಡಿಸಿರಿ ತಾಳಗಳsss
ಅಚ್ಚಿರಿ ದೀಪಗಳ ಆಕಿರಿ ದೂಪಗಳsss

ಅಂಗಂದ್ಕಂಡು ನಾರಾಯಣಮೂರ್ತಿಯವ್ರು
ಕೃಷ್ಣನ ಕಟ್ಟೆ ಪೋಡೊಳಗೆ ಉಡ್ಗಿ ತೆಕ್ಕೊಂಡೋಗಿ
ಪೋಡು ಅಂದ್ರೆ ಕಳ್ಳರ ಬೆಟ್ಟ
ಕಾಮಾರಿ ಮಲ್ಕಿ ಬೆಟ್ಟ
ಈ ದೇಸವೆಲ್ಲ ತಿರಿಕೊಂಡು ಜಾಜಿ ವನದಲ್ಲಿ ಬಂದು
ಜಾಜಿ ವೂವು ಮುಡಕೊಂಡು ಬಂದು
ನಾರಾಯಣಮೂರ್ತಿಯವ್ರು ಬಂದು
ಸೋಲಿಗ್ರ ಬೊಮ್ಮೆಗೌಡ್ನ ಪೋಡಿಗೆ ಬಂದು

ದಾಸಯ್ಯ ವೇಸವನ್ನು ತಾಳ್ಬುಟ್ಟು
ಸೋಲಿಗ್ರ ಉಡ್ಗಿ ನೋಡ್ಬುಟ್ಟು
ಈ ಉಡ್ಗಿ ತೆಕ್ಕೊಂಡ್ರೆ……

ನನ್ಗೆ ಬಾಳ ಪುಣ್ಯ ಬರುತದೆsss **|| ತಂದಾನ ||**
ಬಾಳ ಪುಣ್ಯ ಬರ್ತದೆ ಅಂದುಬುಟ್ಟುsss
ಪಾರಿವಾಳದ ಗವಿಗೆ ದಯಮಾಡಿsss **|| ತಂದಾನ ||**

ಪಾರಿವಾಳದ ಗವಿಯೊಳಗೆ
ಸೋಲಿಗರ ಬೊಮ್ಮೆಗೌಡ್ನೋರು ವೋಗ್ವಾಗ
ದಾಸಪ್ಪ ಯಂಗಸ್ರು ಮಾಯ ಆಗ್ಬುಟ್ರು
ಆಹಾ ಈ ನನ್ ಉಡ್ಗಿ ಇಲ್ಲ
ನನ್ನುಡ್ಗಿ ಯಾವ್ ಕಡೆ ಅದ್ರು ನಿಂತಿದೆ
ಈ ದಾಸಪ್ನರು ಎನ್ಮಾಡ್ತಾ ಇದ್ದಾರೆ?
ಬುಡ್‌ಬುಡ್ಕಿ ವೇಸ ತಾಳ್ಬುಟ್ಟಿದ್ದಾರೆ
ಕಲ್ಲು ಕರ್ಗೋ ಜಾಮ ನೀಲ್‌ಗಿರಿಗೋಗಿ
ಆ ಬೊಮ್ಮೆಗೌಡ್ನ ಪೋಡಿನ ತಿಟ್ಟಿನ ಮೇಲೆ ನಿಂತ್ಗಂಡು
ಬುಡ್‌ಬುಡ್ಕಿ ವೇಸ ಆಕುವಾಗ

ಅಂವ ಬುಡ್‌ಬುಡ್ಕಿ ವೇಸ ತಾಳುತಾರೆsss **|| ತಂದಾನ ||**
ಏಯ್ ಬುಡ್‌ಬುಡ್ಕಿ ವೇಸ ತಾಳ್ಕಂಡು ನಾರಾಯ್ಣsss
ಸೋಲ್ಗರ ಬೊಮ್ಮೆಗೌಡ್ರ ಮಗಳಂತೆ sss **|| ತಂದಾನ ||**
ಸೋಲ್ಗರ ಬೊಮ್ಮನ ಮಗಳು ಆದರೆ ಕಾಣೋsss
ಅವ ದಾಸಯ್ಯ ವಾಸ ಆಗಿದ್ದಾಳೆsss **|| ತಂದಾನ ||**
ಏಯ್ ಬುಡ್‌ಬುಡ್ಕಿ ಬಡ್ಡಿಗಣ್ಣ ಇಡ್ಕೊಳ್ಳಿ ಎಂದುsss
ದೇಸಂತ್ರ ಬಂದು ಸಾರುತಾರೆsss **|| ತಂದಾನ ||**

ಆ ಬುಡ್‌ಬುಡ್ಕ್ಯಾವ ಬಂದ್ರೆ ಸ್ವಲ್ಪ ಕರಿರಪ್ಪ
ಬೊಮ್ಮೆಗೌಡ್ನೋರು ಕೂಗ್ ಕೊಂಡು ಕರಿರಪ್ಪ ಅಂದ್ರು
ಬೊಮ್ಮೆಗೌಡ್ರೆ ನಿನ್ನ ಮಗ ದಾಸಯ್ಯ ವಾಸ ಆಗ್ಬುಟ್ಟ
ಅದ್ಕೇನ್ ಮಾಡ್ಬೇಕು ಅಂದ್ರೆ ನಾನು ಬರ ಮಾಡ್ತಿನಿ ಅಂದ್ಬುಟ್ಟು

ಅಂತರ ಕಟ್ಟುತಿನಿ ಮಂತರ ಮಾಡುತಿನಿsss
ಮಾಯಾವಿ ನಾನು ಬರಮಾಡಿsss **|| ತಂದಾನ ||**

# ೬. ಬಿಳಿಗಿರಿ ರಂಗನ ಕಾವ್ಯ (೫)

ಅದೆಲ್ಲಾ ಸರಿಯಪ್ಪ ಬುಡ್‌ಬುಡ್ಕ್ಯವ್ನೆ
ಬುಡ್‌ಬುಡ್ಕಿವೇಸ ತಾಳ್ಕೊಂಡು ಬರುವ
ನಾರಾಯಣಮೂರ್ತಿಯವ್ರು ಕೊರವಂಜಿ ವೇಸ ತಾಳ್ಬುಟ್ರು
ಕೊರವಂಜಿ ವೇಸ ತಾಳ್ಕೊಂಡು ಬರ್ತಾರೆ
ಇನ್ನು ಮಗ ಬರ್ಬೇಕಾದ್ರೆ ಯೇಗೆ ಬೊಮ್ಮೆಗೌಡ್ರೆ ಅಂದ್ರೆ
ಕೂಗ ಉಂಜ ಆಗ್ಬೇಕು
ಕೊಂಬಿನ್ ಟಗರಾಗ್ ಬೇಕು
ಬೇಳೆ ಕಾಳಾಗ್ ಬೇಕು
ಬೆಲ್ಲದ ನಂಜಾಗ್ ಬೇಕು
ಆಣ್ತೆಂಗಿನಕಾಯಿ
ಐದು ಮೂಲ್ಗೆ ಐದಾಬೇಕು
ಆ ದಾಸಪ್ಪ ಕೊರವಂಜಿ ಹೇಳಿದ ಮಾತ್ನೆಲ್ಲಾ ಈ ಬೊಮ್ಮೆಗೌಡ ಕೇಳ್ಬುಟ್ಟು
ಅಪ್ಪ ಆದ ಕರ್ಚೆಲ್ಲಾ ಆಗ್ಲಿ ಕೊರವಂಜಮ್ಮ
ಆದ ಕರ್ಚೆಲ್ಲಾ ಆಗ್ಲಿ ಈವೊತ್ತು
ನನ್ನ ಮಗಳ ಬರ್ಮಾಡಿ ಕೊಟ್ಬುಡಿ ಅಂದ್ಬುಟ್ಟು
ಎಲ್ಲಾ…. . ಮಾಡ್ಬುಟ್ಟು ಕುಸ್ಮದೇವಿ ಬಂದು ನೋಡ್ಕಂಡು…. .

ಅಂತರ ಕಟ್ಟಬೇಕು ಮಂತರಮಾಡಬೇಕುsss
ನನ್ಮೇಲೆ ಗ್ಯಾನ ನೀನಂತsss **|| ತಂದಾನ ||**

ಅಲ್ಲೇನ್ ಮಾಡ್ತಾನೆ ಕೊರವಂಜಮ್ಮ
ಏಯ್ ಕುಸ್ಮಾಲೆ
ಏಯ್ ಕುಸ್ಮಾಲೆ ನನ್ ಗ್ಯಾನ ನಿನ್ಗಿರಬೇಕು
ನಿನಿ ಗ್ಯಾನ ನನ್ಗಿರ್ ಬೇಕು, ಅಂತ್ರ ಕಟ್ತೆ ನಾನು
ಮಂತ್ರ ಮಾಡ್ತಿನಿ. ನನ್ ಮೇಲಿನ್ ಗ್ಯಾನ ನಿನ್ಗಿರ್ ಬೇಕು
ನಿನ್ ಮೇಲಿನ್ ಗ್ಯಾನ ನನ್ಗಿರ್ ಬೇಕು

ನೀನು ಕೋಳಿ ಗುಳ್ಳಿಗೆ ಬರಬೇಕುsss **|| ತಂದಾನ ||**
ಕೋಳಿ ಗುಳ್ಳಾರಕ್ಕೆ ಬಂದರೆ ಕುಸುಮಾಲೆsss
ಕದ್ದು ನಾಮಂತೆ ವೋಗು ಬೇಕಾsss **|| ತಂದಾನ ||**

ಆಗ ನಾ ಅಂತರ ಮಂತರ ಮಾಡ್ಬುಟ್ಟು
ಬೇಳೆ ಬೆಲ್ಲ ಗಂಟು ಎಲ್ಲ ರಂಗ ಆಕ್ಬುಟ್ರು
ಯಾವ್ ರಂಗ ಆಗ್ಬೇಕು ಬೊಮ್ಮೆಗೌಡ್ರೆ ಅಂದ್ರು

ಅಯ್ಯೋ ಕೊರ್ವಂಜಮ್ಮ

ನನಗೆ ರಂಗ, ಯಾವ ರಂಗ ಆಕ್ಬೇಕು ಗೊತ್ತಸ್ವಾಮಿ

ನಾ ಇಸ್ಟೆಲ್ಲಾ ಮಾಡ್ನೆ ಆಗಲ್ಲಪ್ಪ ಅಂತ ಬೊಮ್ಮೆಗೌಡ್ರು ಯೇಳ್ಬುಟ್ರು

ಅನುಮಂತ ರಂಗ ಆಗ್ಬೇಕು....

ಆರು ಮಂಡಲ,

ತೂರು ಮಂಡಲ

ಗೆಜ್ಜೆ ಮಂಡಲ

ಗಿರ್ಕು ಮಂಡಲ

ಉಳ್ಕು ಮಂಡಲ

ನಾಗಮಂಡಲ

ಎಪ್ಪತೇಳು ಮಂಡಲ ಬರ್ದು ಆಕ್ಬುಟ್ಟು

ಇಂಗಣ್ಣ ಒಡಿಬೇಕು

ಮಂಗಣ್ಣ ಒಡಿಬೇಕು

ಮುಕ್ಕಣ್ಣ ಕಾಯಿ ಒಡಿಬೇಕು

ಮುಕ್ಕಣ್ಣ ಕಾಯಿ ಒಡಿಬೇಕುsss **|| ತಂದಾನ ||**

ಏಯ್ ಮುಕ್ಕಣ್ಣ ಕಾಯಂತೆ ಒಡ್ದರೆ ಬೊಮ್ಮೆಗೌಡ

ನಿನ ಪಟ್ಟದ ಗಾಳಿ ಓಡುತ್ತವೆsss **|| ತಂದಾನ ||**

ಆಗ ದೊಡ್ರಂಗಿ ಕೇಳುದ್ರು

ಅಮ್ಮಾಮ್ಮೆ ರಂಗಿ......

ಏನಪ್ಪ?

ಈ ಕೊರವಂಜಮ್ಮ ಕೂಗುವಂತೆ ಉಂಜ ಆಗ್ಬೇಕು

ಕೊಂಬಿಯನ್ ಟಗ್ರು

ಬೆಲ್ಲ ನಂಜಾಗಬೇಕು ಎಲ್ಲಾ ಆಯ್ತಲ್ಲ

ಆಗೆ ನನ್ನ ಮಗ್ಳ ಕರೆಸಿ ಕೊಟ್ಬುಡಪ್ಪ

ಎಷ್ಟು ಮಂಡಲ ಯೇಳ್ತಾನೆ ಅಂದ್ರೆ

ಆರು ಮಂಡಲ

ತೂರು ಮಂಡಲ

ಗೆಜ್ಜೆ ಮಂಡಲ

ಗಿಲ್ಕು ಮಂಡ

ಉಳ್ಕು ಮಂಡಲ

ನಡುಮಂಡಲ

ಎಪ್ಪತ್ತೇಳು ಮಂಡಲ ಬರ್ದ್‌ಬುಟ್ಟು

ಆಗ ಅನುಮಂತ ರಂಗ ಆಗ್ಬುಡ್ತಾರೆ

ಆಗ ರಂಗಯ್ಯ ಸ್ವಾಮಿ ಕೊರವಂಜಿsss || **ತಂದಾನ** ||

ಏಯ್ ಬೊಮ್ಮೆಗೌಡ್ರೆ ಕೊರವಂಜಿ ವೇಸ ತಾಳ್ಕೊಂಡು
ನಾರಾಯ್ಣಮೂರ್ತಿಯವ್ರು ಬರ್ತಾ ಇದಾರೆ
ಎಲ್ಲಿ ನಿನ್ನ ಕಯ್ಯಾ ಕುಣಿತೀನಿ ಆಗಂದ್ಬುಟ್ಟು
ನಾರಾಯ್ಣಮೂರ್ತಿ ಏನ್ಮಾಡ್ತ ಇದ್ದಾನೆ

ಇಂಗಣ್ಣ ಒಡೆಯತವ್ನೆ ಮುಂಗಣ್ಣ ಒಡಿಯತವ್ನೆsss
ಒಂದು ಪಲ್ಲಿಯ ಒಡಿತಾನೆsss || **ತಂದಾನ** ||
ಅಯ್ಯ ಗಾಳಿ ಕಟ್ತಿನಿ ಗಾಚಾರ ಓಡುಸ್ತೀನಿsss
ಬೊಮ್ಮೆಗೌಡ್ನ ಮಗ್ಳು ದಾಸಯ್ಯ ವಾಸsss || **ತಂದಾನ** ||

ಅಲ್ಲಪ್ಪ ಇಸ್ಟ್ ಗಾತ್ರ ಮಾಡಿ
ಇಸ್ಟ್ ಗಾತ್ರ ಕೇಳಿ ಕೊರವಂಜಿ
ಅಂಗಾದ್ರು ದಾಸಯ್ಯ ವಾಸ ಅಂತಿಯಲ್ಲ
ನನ್ ಅಣೆಬರ್ಹ ಯೇಗಿದದಪ್ಪ ಅಂದ್ರು
ಅಪ್ಪ ಇಲ್ಲಿ ತಾತಿ ಕಟ್ವಾಗ
ಅಂತ್ರ ಮಂತ್ರ ಮಾಡ್ವಾಗ
ಏನ್ ಯೇಳ್ತಾನೆ ನಾರಾಯ್ಣ
ನನ್ ಗ್ಯಾನ ನಿಂಗಿರ್ ಬೇಕು
ನಿನ್ ಗ್ಯಾನ ನಂಗಿರ್ ಬೇಕು
ನನ್ನೊಂದ್ಗೆ ಬರ್ಬೇಕು
ಮೇಲ್ಗಿರಿ ಮೆರಿಬೇಕು
ಸೋಲ್ಗರ ಬೊಮ್ಮೆಗೌಡ್ನ ಮಕ್ಕ
ನನಗೆ ಬಾಮೈಕ ಆಗ್ಬೇಕು
ಅಕ್ಕಬಾವ ಒಂದುಗ್ ಬರ್ಬೇಕು

ಅಂತ ನೆಪ್ಪಾಗಿ ನಾನು ಪಂತ್ಯಕ್ಕೆ ಪಂತ ಕಟ್ಬುಬೇಕುsss || **ತಂದಾನ** ||
ಏಯ್ ಕಾಣ್ಕೆ ಕಪ್ಪಂತೆ ಕಟ್ಕೊಂಡು ಬರ್ವಾಗsss
ನಾವು ಮೇಲುಗಿರಿಯಲ್ಲಿ ಮೆರಿಬೇಕುsss || **ತಂದಾನ** ||

ಮಾಡ್ಬುಟ್ಟ ಅಲ್ಲೆ ರಂಗಪ್ಪ
ಮಾಯ್ದ ರಂಗಪ್ಪ ಅಂದ್ರ ಉಡುಗಾಟ್ಟ
ಎಲ್ಲಾ ಮಾಯ ಮಾಡ್ಬುಟ್ಟು ಮಂಡ್ಲ ಮಡ್ಕೆ
ಅನುಮಂತರಂಗ
ಬರ್ದ ಬುಟ್ಟು ನನ್ ಗ್ಯಾನ ನಿನ್ಗಿರ್ ಬೇಕು
ನಿನ್ ಗ್ಯಾನ ನನ್ಗಿರಬೇಕು

ಅಂತ್ರ ಬರ್ದ ಬುಟ್ಟು ಕುಸ್ಮದೇವಿ
ನಿನ್ನತ್ರ ಇಟ್ಕೊ ಅಂದ್ಬುಟ್ಟು

ಅವ ಮಾಯ ಆದಳೊ ಕುಸುಮಾಲಿsss **|| ತಂದಾನ ||**

ಮಾಯ ಮಾಡ್ಬುಟ್ಟು ಪಾರಿವಾಳದ ಗವಿಯಲ್ಲಿ
ಮಲಗಿರುವಂತ ವೊತ್ತಿನಲ್ಲಿ ವೋಗಿ ನಾರಾಯ್ಣ ಮೂರ್ತಿಯವ್ರು
ಜಾತಿ ಕುಲವನ್ನು ಕಟ್ಟಿಕೊಂಡು ವೋಗ್ವಾಗ
ಆಗಬೊಮ್ಮೆಗೌಡ್ನೋರು ಏನ್ಮಾಡ್ತ ಇದ್ದಾರೆ
ಕಂಡಿಡ್ಡ್‌ಬುಟ್ರು
ಕಂಡಿಡ್ಡ್‌ಬುಟ್ರು
ಏಯ್ ಆರಯ್ಯ ನೀನು?
ಏನಯ್ಯ ಮನ್‌ಮನೆ ಇಟ್ಟು ತಿನ್ನೋಂತ ತಿರ್ಕದಾಸ
ನೀನು ಬಂದು ನನ್ ಮಗ್ಳ ಕರ್ಕಂಡ್ ಬಂದ್ಯೆಲ್ಲಾ
ಏನಯ್ಯ ಮೋಸ್ಗಾರ್ ದಾಸಯ್ಯ
ನೀ ಎಂತ ಕೆಲ್ಸ ಮಾಡ್ತಿಯೇ
ಆಹಾ ಮಾವ ಮಾವ
ಏಯ್ ಮಾವ ಅನ್ಬೇಡ ಕಣೋ ನೀನು
ಯಾವ ಕೇರಿಯವ್ನು?
ಯಾವ್ ಮತದವ್ನು?
ನೀ ಆರಯ್ಯ …. ?
ನಾನು ಅರಿದಾಸ
ಬಿರಿದಾಸ
ವೊಟ್ಟೆದಾಸ
ಬಟ್ಟೆ ದಾಸ
ಕನಕದಾಸ
ಕರ್ಣದಾಸ
ದಾಸ ದಾಸರಿಗೆಲ್ಲಾ ಯೆಚ್ಚಿನ ಅರಿವು ನಾವೆಂದ್ರು
ಅಯ್ಯೋ ಇಸ್ಟ್ ಯೆಸ್ರ ಕರಿವಾಗ ನಾನೇನಪ್ಪ ಮಾಡ್ಬೇಕು
ಯಾವ ದಾಸ್ರೆಂದು ತಿಳಿಬೇಕು ಅಂದ್ಬುಟ್ಟು

ಅವ್ರು ದಾಸಯ್ನ ವೇಸ ತಾಳುತ್ತಾರೆsss **|| ತಂದಾನ ||**

ಕುಸ್ಮದೇವಿ ಏನ್ ಯೇಳ್ತಾ ಇದ್ದಾರೆ
ತುಳ್ಸಮ್ಮ ಅವ್ರು ಸ್ವಾಮಿಯವ್ರು ವೋಗಿ ಮೂರ್ ತಿಂಗ ಆಯ್ತು
ನಿಮ್ಮ ಸ್ವಾಮಿ ಒಡೆಯ ರಂಗಪ್ಪ ಬಂದಿಲ್ಲ
ಯಾವ್ ಕಡೆ ವೋಗಿದ್ದಾನೆಯೋ

ಅವ್ನ ಸ್ವಲ್ಪ ಉದ್ಕಬೇಕು
ಪತ್ತೆ ಮಾಡ್ಬೇಕು ಕಳ್ಳರಂಗ ವೊರ್ಟೋಗಿದಾನೆ ಅಂದ್ಬುಟ್ಟು

ಅವ್ರು ವೈರು ಮುಡಿಕೆ ವೋಗುತಾರೆsss || **ತಂದಾನ** ||

ವೈರು ಮುಡಿಕೆ ವೋಂಟೆಗ್‌ಬುಟ್ಟಿದ್ದಾರೆ
ಅಲ್ಲೇನು ವೈರು ಮುಡಿಒಳ್ಗೆ ಸ್ವಾಮಿಯವ್ರು ಒರ್ಗ್‌ತ ನಿಂತಿದಾರೆ
ಒಹೋ ಕಂಡ್ಬುಟ್ರು ತಾಯವ್ರು
ಕಲ್ಯಾಣ ಮದ್ವೆಯಾಗವ್ರು ಕಂಡ್ಬುಟ್ರು

ನಿನ್ನ ಒಂಟಾನೆ ಜಿಗಿಬಾರ
ಎಂಟಾಳು ಹೊರಬಾರsss
ಊರಿಗೆ ಸುದ್ದಿ ಬಲುಬಾರsss || **ತಂದಾನ** ||
ಏಯ್ ಕುಂಜ್‌ಗುರ್ಕ ಕಡಿಬಾರ್ದ
ಮಂಡ್ಲಾವು ಯಿಡಿಬಾರ್ದsss
ಎಂದಿಗ ಬಳೆ ಕುಕ್ಕುತ್ತಾರೋsss || **ತಂದಾನ** ||

ಕುಂಜುಗರ್ಕ ಕಡಿಯಲಿ
ಮಂಡಲ್‌ದಾವು ಇಡಿಯಲಿ
ಎಂದಿಗ ಬಳೆಕುಕ್ ಬುಟ್ಟಾವೋ ನಾವು
ನಿನ್ನ ಗಂಡನ್ ಮಾಡ್ಕೊಂಡು ಲೋಕದ್ ಮೇಲಿದ್ದು
ಬೆಳ್ಳಿ ಬೆಟ್ಟದಲ್ಲಿ ನಾವು ಬಿಳಿಗಿರಿ ರಂಗಯ್ನ ಮಡ್ದಿರು
ನಾವು ಅಂತ ಮಾತಾಡ್ಕೊಂಡು ಇರದಿದ್ರೆ

ನಿನ್ಗೆ ನಾವು ಕಣ್ಣಿಗೆ ಮರೆ ಆಗುಬೇಕುsss || **ತಂದಾನ** ||

ಏಯ್ ಮಡ್ದಿರೆ...
ಈವೊತ್ತಿನ ದಿವ್ಸ ಕೃಷ್ಣನ ಒಳ್ಗೆ
ಮರಿಕುಯ್ತಾ ಇದ್ದರೋ
ಕೋಳಿಕುಯ್ತಾ ಇದ್ದರೋ

ನಾನು ಊಟಕ್ಕೆ ಕಾಣಂತೆ ವೋಗಿದ್ದಿನಂತೆsss || **ತಂದಾನ** ||
ಅಯ್ಯ ಊಟಕ್ಕೆ ನಾನು ವೋಗಿದ್ದೆ ಮಡ್ದಿರೆsss
ಯಾಕೆಣ್ಣೆ ನನ್ನ ಬೊಯ್ಯುತ್ತೀರಿsss || **ತಂದಾನ** ||
ಮಾಕೆಣ್ಣೆ ನನ್ನ ಬೋಯ್ತಿರಿ ಎಲೆ ಉಡ್ಗಿsss
ಮೀಸೆಯ ಮೇಲೆ ನೋಡೆಣ್ಣೆsss || **ತಂದಾನ** ||

ಮೀಸೆಯ ಮ್ಯಾಗೆ ನೋಡ್ತಾವ್ರೆ ನಾರಾಯ್ಣsss
ಅನ್ನದ ಅಗ್ಳ ತೋರುತಾನೆsss || **ತಂದಾನ** ||

ಆಹಾ! ಅನುಮಂತ ಇಂವ ಅನ್ನಗಿನ್ನ ತೋರ್ಸುದ್ರು
ನಮ್ಗೇನು ಗೊತಿಲ್ಲ ನೀನೆ ನಡ್ಕಂದ್ ಬಂದ್ಬುಡಪ್ಪ ಅಂದ್ಬುಟ್ಟು
ಮೇಲ್ಗಿರಿ ಕೈಲಾಸಕ್ಕೆ ವೊಂಟೋಗ್ ಬುಟ್ರು
ಅನುಮಂತ...... ಅನುಮಂತ. .
ಅನುಮಂತ ನನ್ಗೆ ವೊಟ್ಟೆ ನೋಯ್ತದೆ
ನನ್ನ ವೊಟ್ಟೆ ನೊಯ್ತದೆ
ನಡ್ರಪ್ಪ ಪಾಯ್ಸಾನೆ ಮಾಡ್ಬೇಕು

ನನ್ನ ಬುಟ್ಟು ಕೊಡಯ್ಯ ಅನುಮಂತsss || **ತಂದಾನ** ||
ಅಯ್ಯಯ್ಯೋ ನಮ್ಮಪ್ಪ ಯಾಕಪ್ಪ ವೊಟ್ಟೆನೋವುsss
ಇಂದೆ ಮುಂದೆ ನನಗೆ ಆಗುತದೆsss || **ತಂದಾನ** ||
ಇಂದ ಮುಂದೆ ಆಯ್ತದೆ ಅನುಮಂತsss
ಬೆಟ್ಟಕ್ಕೆ ಹೋಗು ನೀ ತಾಯಿ ದಂಡೆsss || **ತಂದಾನ** ||

ಅಪ್ಪ ಅನುಮಂತ ಬಿಳಿಗಿರಿರಂಗಯ್ನ ಬೆಟ್ಟಕ ವೋಗಿ
ಮೇಲ್ಗಿರಿ ಕೈಲಾಸಕ್ಕೆ ವೋಗಿ
ನಿನ ತಾಯಿ ಲಕ್ಷ್ಮಿದೇವಿ ತೊಳ್ಸಮ್ಮ ಅವ್ರಿಗೆ
ನಿಮ್ಮ ನಾರಾಯ್ಣ ನಮ್ಮೊಡೆಯವ್ರಿಗೆ
ಇಂದ ಮುಂದಾಗೋಯ್ತು

ಬೆಟ್ಟದ ರಂಗಯ್ನಿಗೆ ಬಿದ್ರಕ್ಕಿ ಪಾಯ್ಸನsss
ಜಲ್ದಿ ಕಾಯ್ಸುರಕ್ಕ ಬಿದರಕ್ಕಿsss || **ತಂದಾನ** ||

ಅನುಮಂತನ್ಗ ಬಂಯ ಬಂದ್ಬುಡ್ತು
ನನ್ನೊಡೆಯ ಸತ್ತೋಗ್ ಬುಡ್ತಾನೆ ಅಂದ್ಬುಟ್ಟು
ಕಚ್ಚೆ ಬಿಚ್ಕೊಂಡು. .
ಇಂದೆ ಮುಂದೆ ಓಡಾಡ್ತಯಿದ್ದ
ಆಗನೋ ಮೇಲ್ ಗಿರಿ ಸೇವೆಗೆ
ನಮ್ಮ ಬೆಟ್ಟದ ರಂಗಪ್ಪನಿಗೆ
ಇಂದೆ ಮುಂದೆ ಆಗ್ ಬುಟ್ಟದ ತಾಯಿ
ಬಿದ್ರಕ್ಕಿ ಪಾಯ್ಸಾ ಕಾಯ್ಸಿ ತಕ್ಕಂಡು ನಡಿರಿ ತಾಯಿ ಅಲ್ಲಿಗೆ
ಅಯ್ಯೋ ಪಾಪ ಅಂದ್ಬುಟ್ಟು ಮೇಲ್ ಗಿರಿ ಒಳ್ಗೆ ತರಾಬಿರಿಯಲ್ಲಿ

ಅಯ್ಯ ಬಿದ್ರಕಿ ಪಾಯ್ಸವ ಕಾಯ್ಸುತಾರೆsss **॥ ತಂದಾನ ॥**
ಬಿದ್ರಕ್ಕಿ ಪಾಯ್ಸ ಕಾಯ್ಕೊಂಡು ಬರುವಾಗsss
ಮಾಯಾದನೋ ನಾರಾಯ್ಣsss **॥ ತಂದಾನ ॥**

ಆಗ ನಾರಾಯ್ಣ ಮೂರ್ತಿಯವ್ರು
ತಾಯಿಯವ್ರು ಬೆಟ್ಟಕ್ಕೆ ಬಿದ್ರಕ್ಕಿಪಾಯ್ಸಾ
ಕಾಯ್ಕೊಂಡು ಬಂದು ನೋಡುದ್ರು
ಮಾಯ ಆಗ್ಬುಟ್ಟ
ಏಯ್ ಅನುಮಂತ
ಟೇಕ್ ದಾರ್ ತಿಮ್ಮಯ್ಯ
ಮೇಲ್ಗಿರಿ ರಂಗಯ್ಯನ
ಎಲ್ ಬುಟ್ಬುಟ್ಟಿದ್ದಯಿ? ಅಂತಕೇಲ್‌ಅಗ
ತಾಯಿ ಇಲ್ಲೆ ಬುಟ್ ಬುಟ್ಟಿದ್ದೆ ತಾಯಿ
ಅದಕ್ಕೋಸ್ಕರ ಬಂದಿ ತಾಯಿ ನಾನು
ಇಲ್ಲೆ ಯಾಕಯ್ಯ ಬುಟ್ಟೆ? ಅಂದ್ಬುಟ್ಟು
ಊಡಿಕಂಡು ವೋಗ್ವಾಗ ಬೇವ್ರು ಕಿತ್ಗಂಡು
ರೂಡಿಯಾಗ್ದ ಬಾಲೆಯನ್ನು ರೂಡಿ ಮಾಡ್ಕಂಡು

ಅವ್ರು ದೊಡ್ಡಸಂಪಗೆಗೆ ವೋಗುತ್ತಾರೆsss **॥ ತಂದಾನ ॥**

ದೊಡ್ ಸಂಪಿಗೋಗ್ ಬುಟ್ಟಿದ್ದಾರೆ
ಪರಸಂ ಮೂರ್ತಿಗಳು
ನೂರೊಂದ್ ಕೋಟಿ ಜಂಗಮರಿದ್ದಾರೆ
ತಾಯವ್ರು ಅನುಮಂತನ್ ಕರ್ಕಂಡೋಗಿ
ಪರಸಂಮೂರ್ತಿ ಆಗಿರ್ವಂತ
ದೊಡ್ ಸಂಪಿಗೆಯಲ್ಲಿ
ಸಿವ ಜಂಗಮರೆಲ್ಲಾ ಇರುವಾಗ ಮಾವಿಸ್ಣು
ಬಂದಿದ್ದರಪ್ಪ ಅಂತ ಕೇಳ್ತಾರೆ
ನೆನ್ನೆ ದಿವ್ಸ ನೋಡಪ್ಪ
ಈ ಕೊಂಬೆ ಮೇಲೆ ಕೂತ್ಗಂಡು
ಕೊರಳ್ ಬಾರ್ಸುತ ಇದ್ರು
ನಾರಿ ಸೀರೆಲ್ಲಾ ತೂಗಿತ್ತು ಇಸ್ಟ್ ಕಂಡೆ ನಾನು
ಈವೋತ್ತಿಲ್ಲ ತಾಯಿ
ಅಯ್ಯಯ್ಯೊ ಯಾವ್ ಕಡೆವ್ರಪ್ಪ ತಾವು
ನೆನ್ನೆ ಮಾತ್ರ ಅನ್ನೇಡ್ ಗಂಟೆಗೆ ತಾಯಿ
ಅ ಮರ್ದ ಕೊಂಬೆ ಮೇಲ್ ಕುಂತ್ಬುಟ್ಟಿದ್ರು

ಅವ್ರು ಬುಗ್ ಬುಗ್ನೆ ಕೊರಳ ಬಾರ್ಸಿದಾರುsss **|| ತಂದಾನ ||**

ನೆನ್ನೆ ದಿವ್ಸ ಇದ್ದ ತಾಯಿ ಈವತ್ತಿಲ್ಲ
ಮಾವಿಸ್ನೂರಿಲ್ಲ
ನಾರೀರ ಸೀರೆಲ್ಲ ಊರ್ಕೊಂಡು ಕುಸಿನ್ ಮೇಲಿಟ್ಕೊಂಡಿದ ತಾಯಿ
ಅಯ್ಯಯ್ಯೊ ಅವ್ನಿಗೆಲ್ಲಿ ಬಂತು ಈ ನಾರೀನ ಸೂಳೆ
ಅವ್ರು ಸೂಳೆರಂಗಪ್ಪ ಅಂದ್ರೆ
ಮಾವಿಸ್ನು ಅಂದ್ರೆ ಸುಲ್ಬ ಅಲ್ಲ ಅಂದ್ಬುಟ್ಟು

ಅವ್ರು ನೇರಿಕೊಡೆಗೆ ಬರುತಾರೆsss **|| ತಂದಾನ ||**

ನೇರಿಕೊಡಗೆ ಬರುವಾಗ ನಾರಾಯ್ಣ ಮೂರ್ತಿಯವ್ರು
ಏನ್ಮಾಡ್ತ ಇದಾರೆ ಅಂದ್ರೆ
ನೇರಿಕೊಡೆಗೆ ಆತ್ರದಲ್ಲಿ
ಎಳಬಿಸ್ಲು ಬಗಬಗ್ನೆ ಬರ್ತಾ ಇತ್ತು ಸೂರ್ಯಕ್ಕೆ
ಆಹಾ ಸೂರ್ಯನ ಕಡೆಗೆ ಬೆನ್ನು ಕೊಟ್ಬುಟ್ಟು
ಅನುಮಂತ
ಬಾಲ ರೂಡಿ ಮಾಡ್ತಾ ಇದಾನೆ
ತಾಯಿ! ತಾಯಿ! …… ತಾಯಿ!…… ತಾಯಿ!…. .
ನೋಡಲ್ಲಿ ತಾಯಿ ಅಲ್ಲಿ

ಅಲ್ಲಿಜೋಡು ಅಗ್ಗವ ಇಡಿರಯ್ಯsss **|| ತಂದಾನ ||**

ಅವ್ರು ಗುಡಿಯಾಗ ಅಂತ ಅನುಮಂತ ದೇವ್ರನೋಡು

ಜೋಡು ಅಗ್ಗವ ಇಡುತಾರೆsss **|| ತಂದಾನ ||**

ಜೋರಾಗಿ ಬಿದ್ದದಕ್ಕೆ ಗರ್ಕ್‌ನ ತಿರ್ಗ್ ನೋಡುದ್ರು
ಅಯ್ಯಯ್ಯೊ ಅನುಮಂತ ಯಾಕಪ್ಪ ಇಟ್ಟೆ ನನಗೆ ಅಂದ್ರು
ಆಹಾ ನಿನ್ನಂತ ಯಜಮಾನ್ರು ಇದ್ಬುಟ್ರೆ
ಬಾಳ ಪುಣ್ಯ ಬರ್ತದೆ
ಈ ನೀಲ್ಗಿರಿ ಕೈಲಾಸ್ದಲ್ಲಿ ಈವೊತ್ತು ನಮ್ ಬಳೆ ಕುಕ್‌ಬುಟ್ಟು
ನಾವು ಗಂಡ್ಸತ್ತ ಮುಂಡೆ ಆಗಿದ್ಬುಟ್ರೆ ಸುಕ ಬತ್ತದೆ ಅಂದ್ರು
ಯಾಕೆಣ್ಣೆ ಉಚ್ಚೆಣ್ಣೆ, ಬೆಪ್ಪೆಣ್ಣೆ, ಮಂಕೆಣ್ಣೆ, ಮರಳೆಣ್ಣೆ ನಾನೆಲ್ಲೋಗಿದ್ದೆ?
ನೀನೆಲ್ಲೋಗಿದ್ದೆ ಮತ್ತೆ
ಏಯ್ ಉಚ್ಚೆ
ಏಯ್ ಬೆಪ್ಪಿ ನಾನು ವೋಗಿದ್ದೆ ನೋಡೆಣ್ಣೆ

ನಾಚನ ಅಟ್ಟಿಗೆ ಪಟ್ಟಾ ತೆಗಿಬೇಕು

ಅದ್ಕೋಸ್ಕರ ವೋಗಿದ್ದೆ ಯೆಣ್ಣೆ ಅಂದ್ಬುಟ್ಟು

ಅನ್ದಾನ ನೀಡ್ಬೇಕು ನಾನು ಊಟ ಕೊಡ್ಬೇಕು

ನಾನು ಅದ್ಕೋಸ್ಕರ ವೋಗಿದೆ

ಆಹಹಾ.... .

ಇವರಂತವ್ರು ಇದ್ದುಬುಟ್ರೆ ಊಟ ಕೊಡಬವ್ದು

ಕಳ್ ರಂಗ್...... ಕಳ್ಳನೀನು

ಕಳ್ಳನಿಗೆ ಕಳ್ಳ ಸುಳ್ಳನಿಗೆ ಸೂಳ್ಳಾ ಸೂರ್ರ್ಾಗಿರುವಾಗ

ನೀನು ಈವೋತ್ತು ನೀನು ಕೊಡಬಯ್ಯಾ ಅಂದ್ಬುಟ್ಟು

ಜಾಣವಂತೆ ಯಾರು ಲಕ್ಷ್ಮಿದೇವಿ

ಅಕ್ಕ.... . ಅಕ್ಕ ಇವ್ನ ಕಚ್ಚೆ ಇಡಿ

ಇವ್ನ ಮಾತನ್ನ ಕೇಳ್ಬೇಕು ಅಂದ್ಬುಟ್ಟು

ಸೋಲ್ಗರ ಬೊಮ್ಮೆಗೌಡ್ನ ಮನ್ಗೆ

ಅವ್ನು ಮತ್ತೆ ವೋಗ್ತಾ ಇದ್ದಾನೆ

ಎಲ್ಲಿ ಎಲ್ಲೋಗ್ತೀಯಾ? ಈ ವೊತ್ತು

ನಾಚನಟ್ಟೆ ಇರೊಂಬತ್ತು ಕೋಟಿ

ಜೀವರಾಸಿಗೂ ಪಟ್ಟಾತೆಗಿಬೇಕು

ಅದಕ್ಕೋಸ್ಕರ ವೋಗ್ತಾ ಇದ್ದೀನಿ

ಈವೋತ್ತು ಅದಕ್ಕೋಸ್ಕರ ವೋಗ್ತಿಯಾ ವೋಗಪ್ಪ

ಅಂತ ಕಳ್ಸ್ ಬುಟ್ಟು

ಅಕ್ಕ ಅಂದ್ರು

ಏನಮ್ಮ ತಂಗಿ ಅಂದ್ರು

ನೀನೊಂದು ಸುಣ್ಕಾಯಿ ತೆಕ್ಕೊ

ನಾನೊಂಡ್ ಸುಣ್ಕಾಯಿ ತೆಕ್ಕೋತ್ತಿನಿ

ನಾನೊಂದ್ ಇರ ಇಡ್ಕತ್ತಿನಿ

ನೀನೊಂದ್ ಇರ ಇಡ್ಕಂಡು ಕೂಡಿ

ನರಿ ಸೀರೆ ಒಳ್ಗೆ ಇಟ್ಕಂಡು

ಅವ್ನ ಅವ್ನ ಇಡಿಬೇಕು

ಮುಂದಲೆ ಇಡಿಬೇಕು ಮೀಸೆಯ ಕೀಳಬೇಕುsss

ಮೂರು ಗುದ್ದಂತೆ ಗುದ್ದಬೇಕುsss || **ತಂದಾನ** ||

ಮಾವಿಸ್ನು ರಂಗಯ್ಯ ವೊಂಟವ್ನೆ ಕೊಂಗ್ನಾಡ ಸೀಮೆಗೆ

ಕೊಂಗಾರು ಕೊಟ್ಟ ಪೂಜೆಗಾಗಿsss || **ತಂದಾನ** ||

ಅಯ್ಯ ಕೊಂಗಾರು ಕೊಟ್ಟ ಪೂಜೆಗೆ ರಂಗಪ್ಪsss

ತೇರಿನ ಸ್ವಾಮಿ ಗಿರಿಮ್ಯಾಗsss || **ತಂದಾನ** ||

ಆಗ ಇನ್ನು ಬಂದು ಪಟ್ಟೆ ಮಂಚದ ಮೇಲೆ
ಉಸ್ಸೋ ಅಂದು ಕುಂತ್ಬುಟ್ರು
ಆಹಹಾ ನಮ್ಮೆಜ್ಮಾನ್ರು ಎಸ್ಟ್ ದೇಸಕ್ಕೋಗಿದ್ದಾರೆ?
ಕುದ್ರೆ ಮೇಲೆ ಬಂದ್ಬುಟ್ಟಿದ್ದಾರಲ್ಲ
ಈ ಕುದ್ರೆ ಒಳ್ಗೆ ಅವ್ರು ಎಸ್ಟ್ ದೇಸ ನೋಡಿದ್ದಾರೆ?
ಆಗೆಂದ್ಬುಟ್ಟು ಎಲ್ಲಿ ವೋಗಿದ್ದೆ ಅಂದ್ರು
ಅಯ್ಯೋ ಉಚ್ಚೆಣ್ಣೆ ಬೆಪ್ಪೆಣ್ಣೆ
ನಾನು ನಾಚನಟ್ಟೆ ಇರೊಂಬತ್ತು ಜೀವರಾಸಿಗೆ
ಪಟ್ವಾ ತಿದ್ದಕ್ಕೊಗಿದೆ
ಅಕ್ಕನ ಕಣ್ಣ ತಂಗಿನು ನೋಡುತವಳೆ

ತಂಗಿನ ಕಣ್ಣ ಅಕ್ಕ ನೋಡಿsss **|| ತಂದಾನ ||**
ಅಕ್ಕಕ್ಕ ಕಣ್ಣು ಒಡಿತವ್ರೆ ಸನ್ನೆಯ ಮಾಡುತವ್ರೆsss
ನೆರಿಯ ಚೆಂಡಿಗೆ ಕಯ್ಯ ಇಡಿಯುತ್ತಾರೆsss **|| ತಂದಾನ ||**

ಪಟ್ವಾ ಮಂಚದ ಮೇಲೆ ಕೂತಿದ್ದ
ನಾರಾಯ್ಣಗೆ ಗೊತ್ತಾಗ್ ಬುಡ್ತು
ಏನಪ್ವಾ ಕಣ್ಣುಬ್ಬು ಬಡಿತಾರೆ
ಸನೆಯ ಮಾಡ್ತಾರೆ ನೆರಿಚೆಂಡಿಗೆ ಕಯ್ ಆಕ್ತಾರೆ
ಎಡಗಡೆ ತೊಲ್ಸಮ್ಮ ಬಲ್ಲಡೆ ಲಕ್ಷ್ಮಿದೇವಿ ಕುಳ್ತಗಂದು
ಬಾಳೆಕಾಯಿ ನೆರಿಒಳ್ಗೆ ಸುಣ್ಕಾಯಿ
ತೆಗ್ದು ತೆಗ್ದು ಇಟ್ಕೊಂಡು ನೋಡ್ತಾ ಇದ್ದಾರೆ
ನೋಡ್ತಾಯಿದ್ರೆ ಇರ ಬಾಯಲ್ಲಿ ಬತ್ತ ಕಚ್ ಬುಟ್ಟಿದೆ
ಇರಿನ ಬಾಯಿ ಒಳ್ಗೆ ರಾಗಿಬೇಳೆ ಕಚ್ಚುಟ್ಟಿದೆ
ಆಹಾ ಮಾವಿಸ್ಣು ಅಂದ್ರೆ ಇವ್ನ ಮುಂದೆ ಯಾರು ಇಲ್ಲ
ನಾಚನಟ್ಟೆ ಇರೊಂಬತ್ತು ಕೋಟಿಗೆ
ಪಟ್ವಾ ಇದ್ದುವಂತೆ ಮಾಯವಿ ನೀನು
ನಿನ್ನ ಮಾತು ಎಳ್ಳಸ್ಟು ಸುಳ್ ಬರದು ಅಂದ್ಬುಟ್ಟು
ನೋಡು ಯೆಣ್ಣು ಗಂಡು ಅಂದ್ರೆ
ಈ ಪಟ್ವ ಮಂಚ ಮಾಡುದ್ದು ಏತಕ್ಕೆ
ನೀವು ನಾನು ಮನಿಕಳಕ್ಕೆ ಅಲ್ವಾ
ಸ್ವಾಮಿ ನಾವು ಮನ್ಗಬೇಕು
ಈವೊತ್ತು ನೀನು ಎಲ್ಲೂ ವೋಗ್ಬೇಡ
ಅನ್ನ ಆಕಿದ್ದೀಯಾ ಸಾಕು ಅಂದ್ಬುಟ್ಟು
ನಾರಾಯಣ ಮೂರ್ತಿಯವ್ರಿಗೆ

ಅವ್ರು ಮಡ್ಡಿರು ಸುವ್ವಿಯ ಯೇಳುತ್ತರೆsss **|| ತಂದಾನ ||**

ಚೆಲ್ಲಿದರು ಮಲ್ಲಿಗೆಯಾsss

ಮೇಲುಗಿರಿಯ ಮ್ಯಾಗೆsss

ಅಂದುಳ್ಳ ಚೆಂದುಳ್ಳ ಚೆಲುವ ರಂಗಪ್ಪನಿಗೆsss

ಚೆಲ್ಲಿದರು ಮಲ್ಲಿಗೆಯ **|| ಚೆಲ್ಲಿದರು ||**

ಮೇಲುಗಿರಿಯ ಚೆಂದ ನಿಂಗೆsss

ಮೆರಿಯ ಮಂಟಪ ಚಂದsss

ನಿನ್ನ ಆಣೆಯ ಮೇಲಿರುವ ನಾಮ ನೋಡಲು ಚಂದsss **|| ಚೆಲ್ಲಿದರು ||**

ಮುದ್ದು ರಂಗಯ್ನಲ್ಲಿ ಏನಯ್ಯ ಐಬೋಗsss

ಇದ್ದು ಮುದಿನ ಸಿವ ಸಂಕರ ಐಬೋಗsss **|| ಚೆಲ್ಲಿದರು ||**

ಮದ್ಯಾನವೊತ್ತಿನ ಸಜ್ಜೀವ ರಂಗಯ್ಯsss

ಮುದ್ದು ರಂಗಯ್ಯ ಗಿರಿಯ ಮ್ಯಾಗೆsss **|| ಚೆಲ್ಲಿದರು ||**

ಮದ್ಯಾನದೊತ್ತಿಗೆ ಮದ್ದಾಳೆ ಗದ್ದುಗೆ ಆಕಿsss

ಸರ್ನು ಮಾಡಂತಿ ಕರ್ದವ್ರೆ ರಂಗಯ್ಯsss **|| ಚೆಲ್ಲಿದರು ||**

## ೬. ಬಿಳಿಗಿರಿ ರಂಗನ ಕಾವ್ಯ (೬)

ಆಗ ಮಡ್ಡಿರಿಗೆ ಎಂಗೆ ನಿದ್ದೆ ಕೊಡ್ಬೇಕು ಅಂದ್ಬುಟ್ಟು

ಯೆಣ್ಣೆ ಸೋಲಿಗರ ಬೊಮ್ಮೆಗೌಡ್ನ ಮಗಳ ಮ್ಯಾಲೆ

ಎಡಗಡೆ ಮಲಿಕೊಂಡ್ರು ಗ್ಯಾನ

ಬಲಗಡೆ ಮಲಿಕೊಂಡ್ರು ಗ್ಯಾನ

ಅಯ್ಯ ಈ ಸೋಲಿಗರ ಬೊಮ್ಮೆಗೌಡ್ರ ಮಗ್ಳ

ಅಡ್ವಿ ಒಳ್ಗೆ ಬಿಟ್ಟುಟ್ಟು ಬಂದು

ಈ ಯೆಣ್ಣೆಗೆ ಸಪ್ತ ಮಾಡ್ಕಂಡಿದ್ರೆ

ನನಗೆ ಅವ ಏನಾಗ್ ಬೇಕು ಅಂದ್ಬುಟ್ಟು

ಎಡಗಡೆ ಗ್ಯಾನ ಮಾಡ್ಕಂಡು

ಬಲಗಡೆ ಗ್ಯಾನ ಮಾಡ್ಕಂಡು

ಆಗ್ನು ತೆಂಕಲು ಹೋಗುತವ್ರೆ ತೇಗನ್ನು ತರಿತವ್ರೆsss

ಎಂಟು ಪಟ್ಟನ್ನು ಕಟ್ಟುತ್ತಾರೆsss **|| ತಂದಾನ ||**

ಅಯ್ಯ ಬಡಗಲು ವೋಗವ್ನೆ ಬಾಲೆಯ ಮರ ತರ್ದುsss

ಎಂಟು ಪಟ್ಟನ್ನ ಕಟ್ಟುತ್ತಾರೆsss **|| ತಂದಾನ ||**

ಅಯ್ಯ ಮೂಡಲು ಬತ್ತವ್ನೆ ಮುತ್ತುಗ ಕಡಿತವ್ನೆsss

ತನ್ನ ರೂಪನ್ನೆ ತಿದ್ದುತ್ತಾನೆsss **|| ತಂದಾನ ||**

ಬಡಗಲು ವೋದ ಬಾಳೆ ಮರ ತರ್ದ
ತೆಂಕಲು ಹೋದ ತೇಗಿನ ಮರ ತರ್ದ
ಮೂಡಗ ಬಂದ ಮುತ್ತಗದ ಮರ ತರ್ದ
ಬಡಿಗ ದಿಕ್ಕೋದ ಬನ್ನಿ ಮರ ತರ್ದ್ರು ಬುಟ್ಟಿದ್ದಾನೆ
ಎಂಟು ಪಟ್ಟು ಕುಟ್ಬುಟ್ಟು
ಕಿರಬೆಳ್ಳ ಉಳಿ ಮಾಡ್ಬಿಟ್ಟು
ಮುಂಗೈನ ಬಾಚಿ ಮಾಡ್ಬಿಟ್ಟು
ಆ ವೇಸವನ್ನು ಮಾಡ್ಬಿಟ್ಟು
ಇಬ್ರು ಮಡ್ದಿರ ಮದ್ಯೆ ಮಲಗ್ಸ್ ಬುಟ್ಟು

ಅವ್ರು ಬಾಯ್ಗ ಬೆಳ್ಳಂತೆ ಆಕುತ್ತಾರೆsss **|| ತಂದಾನ ||**

ಬಾಯಿಗೆ ಬೆಳ್ಳಾಕಿ ನೋಡ್ತಾರೆ
ಮಡ್ದಿರ್ ಗೆ ತುಂಬಾ ನಿದ್ದೆ ವೋಂಟೋಗ್ ಬುಡ್ತು
ಅದುವಲ್ದೆ ಬಾಯ್ಗೆ ಬೆಳ್ಳಾಕಬುಟ್ರ
ನಿದ್ದೆ ಎಂಬುದು ಯೇಂಗ್ಸು ಜಾತಿಗೆ ಮಾಯ
ಎದೆ ಮೇಲೆ ಕೈಯಿಟ್ಟು ನೋಡ್ತಾರೆ
ತುಂಬಾ ನಿದ್ದೆ ವೋಂಟೋಗ್ ಬುಡ್ತು
ಆಹಾ ಇದೆ ಸೌಳು ಅಂದ್ಬುಟ್ಟು

ಅವ್ರು ಎದ್ದು ವೋಗುತ್ತಾರೆ ಕಳ್ಳ ರಂಗsss **|| ತಂದಾನ ||**
ಕದ್ದು ಓಡಿನಾ ಕಳ್ರಂಗ ಸ್ವಾಮಂತೆsss
ಅವ್ರು ಮೇಲುಗಿರಲಿ ನಿಂತಿದ್ದಾರೆsss **|| ತಂದಾನ ||**

ಮಡ್ದಿರಿಗೆ ನಿದ್ದೆ ಬರ್ದೆ ವೋಗ್ಬುಟ್ರೆ ಈವೋತ್ತಿನ್ ದಿವ್ಸ
ಬಮ್ದಂತ ಸೂರ್ಯನ ಬಿಸ್ಗ ಒಳಪ ಕೊಡ್ತಿನಪ್ಪ ಅಂದ್ಬುಟ್ಟು
ಅವರಿಗೊಂದು ಕಾಣ್ಕೆ ಕಟ್ಬುಟ್ಟು
ಕಂಡಿಡ್ಡ್ಬುಟ್ರು
ಮುಡ್ಕುತೊರೆ ಮಲ್ಲಪ್ಪನಿಗೊಂದು ಕಾಣ್ಕೆ ಕಟ್ಬುಟ್ಟು
ನಂಜುಂಡೇಸ್ವರನಿಗೆ ಏನ್ ಮಾಡಿದ್ದಾರೆ?
ತೇರಿಗೆ ಗಂಡನಪ್ಪ ನೀನು
ಪಟ್ಟದ ಪಾರ್ವತಿ
ಬೆಟ್ಟದ ಚಾಮುಂಡಿ
ನಿನ್ನ ಕಯ್ ವಸ ಆಗಿದ್ದಾರೆ
ಸೋಲಿಗರ ಬೊಮ್ಮೆಗೌಡ್ನ ಮಗಳ
ಕೈವಸ ಮಾಡಿಕೊಡಪ್ಪ ಅಂದ್ಬುಟ್ಟು…. .

ಅಕ್ಕಿ ಕಾಣಿಕೆಯ ಕಟ್ಟುತ್ತಾರೆsss || **ತಂದಾನ** ||
ಅಕ್ಕಿ ಕಾಣಿಕೆ ಕಟ್ತಾರೆ ನಾರಾಯಣssss
ಮೂಡಲ ಮಲೆಯ ನೋಡುತ್ತಾರೆsss || **ತಂದಾನ** ||

ಮೂಡಲ ಮಲೆಯ ನೋಡ್ತಾ ಇದ್ದಾರೆ
ಮಾದಪ್ಪ ಸಾನೆ ಮಾಯ್ಕರ
ಇವ್ನ ಮುಂದೆ ಯಾರು ಇಲ್ಲ
ಇಂದಾಗಲಿ ಮುಂದಾಗಲಿ ಅಂದ್ಬುಟ್ಟು
ಅವರಿಗೊಂದು ಕಾಣ್ಕೆ ಕಟ್ಟಿದ್ರು
ಮೈಸೂರು ಮಟಮನೆ ಅಲ್ಲಿಂದ ಬಂದು
ಲಿಂಗಕ್ಕೆ ಕೊಳ್ಗ ದರ್ಸಬೇಕು ಅಂತ ಅರ್ಕೆ ವೊತ್ತು ಬುಟ್ರೆ
ನನ್ನ ಬಾಮೈದ ಮಾದಪ್ಪ ಅಂದ್ರೆ ಸುಲ್ಬಅಲ್ಲ
ಆಂ ಬಾಮೈದ ಅಂದ್ಬುಟ್ರೆ ಉಲಿಯೊಂದ್ಗೆ ಗೋವು ಕಟ್ತಾನೆ
ಗೋವಿನೊಂದಿಗೆ ಉಲಿ ಕಟ್ತಾನೆ

ಅಂತವ್ನಿಗೊಂದು ಕಾಣ್ಕೆ ಕಟ್ಟಲುಬೇಕುsss || **ತಂದಾನ** ||

ಅರ್ಕೆ ಕಾಣ್ಕೆ ಕಟ್ಬುಟ್ರು ಮಡ್ಗಿರ್ಗೇ
ನಿದ್ದೆ ಬಂದ್ಬುಡ್ತು
ಆಗೇನು ನಾರಾಯಣಮೂರ್ತಿ ಕದ್ದೊಡ್‌ಬುಟ್ಟಿದ್ದಾನೆ
ಕಾಕೋಳಿ ಕೂಗ್‌ಬುಡ್ತು
ಲೋಕ್ವೆಲ್ಲಾ ಬೆಳಗಾಗ್‌ಬುಡ್ತು
ನೋಡ್ತಾರೆ ಕಳ್ರಂಗಪ್ಪಿಲ್ಲ
ಏಯ್ ಅನುಮಂತ
ಏನ್ ತಾಯಿ?

ನಿಮ್ಮ ದಾಸಪ್ಪ ಯಾವುತ್ತು ಸತ್ತೋದರೋsss || **ತಂದಾನ** ||
ಎಡಗಡೆ ಕಯ್ಯ ಇಟ್ಟೆ ಬಲಗಡೆ ಕಯ್ಯ ಇಟ್ಟೆsss
ದಾಸಯ್ಯ ಯಾವ ಕಡೆ ಆಳಾದsss || **ತಂದಾನ** ||

ಯಾವ್ ಕಡೆ ವೋದ್ರು ತಾಯಿ?
ಯಾವ್ ಕಡೆ ವೋಗಿದ್ದಾರೋ
ಆ ಸೋಲಿಗರ ಬೊಮ್ಮೆಗೌಡ್ನ ಮಗಳಿಗೋಸ್ಕರ
ಅವ್ನು ಅಲ್ಲದ್ರು ಇದ್ರೆ ನೋಡಪ್ಪ ಅಂತೇಳ್ವಾಗ
ದಾಸಪ್ಪನವ್ರು ವೋಂಟೋಗ್ ಬುಟ್ಟಿದ್ದಾರೆ
ಆಗ ಸೋಲಿಗರ ಕುಸ್ಮಾಲಿ ಅತ್ರ ಹೋಗಿ……

ಅವ್ರು ಅಡ್ವಿಯೊಳ್ಗೆ ಇರುತಾರೆsss **|| ತಂದಾನ ||**

ಸ್ವಾಮಿಯವ್ರು ಅಡ್ವಿಯೊಳ್ಗೆ ಇದ್ಕಂಡು
ಮರೆ ಮಾಚಿ ಮಾಯನು ಮಾಡ್ಕಂಡು
ನಾರಾಯಣ ಮೂರ್ತಿಯವ್ರು ಈವೊತ್ತಿನ ದಿವ್ಸದಲ್ಲಿ
ನಾರಾಯಣ ಮೂರ್ತಿಯವ್ರು ಮರೆಯಾಗ್ಬುಟ್ರು
ಸೋಲಿಗರ ಬೊಮ್ಮೆಗೌಡ್ನ ಮಕ್ಕಳೊಂದಿಗೆ
ಅಸ್ಯ ಆಡ್ತ ಪಾಸ್ಯ ಆಡ್ತ ನಿಂತ್ಗೊವೊತ್ಗೆ
ಮೇಲುಗಿರಿ ಏನಾಗಬೇಕಪ್ಪ
ಬಂದಂತ ಮಾನ್ಯರೆಲ್ಲಾ ಏನಾಗ್ ಬೇಕು ಅಂದ್ಬುಟ್ಟು

ಅವರು ಬಾರಿ ಚಿಂತೆಯ ಮಾಡುತ್ತಾರೆsss **|| ತಂದಾನ ||**
ಕದ್ದು ಓಡಿನ ಕಳ್ರಂಗ ನೀನಂತೆsss
ಉಡ್ಕಿ ನೋಡಯ್ಯ ಅನುಮಂತsss **|| ತಂದಾನ ||**
ಉಡ್ಕಿ ನೋಡಯ್ಯ ಅನುಮಂತ ನೀನಯ್ಯsss
ಕದ್ದು ಓಡಿದ್ದಾನೆ ಕಳ್ಳಾರಂಗsss **|| ತಂದಾನ ||**
ಅಲ್ಲಾಣಿ ಇಲ್ಲಾಣಿ ಕಲ್ಯಾಣಿ ಕೊಳಬಿಟ್ಟುsss
ತಾನಗೋಗಿದ್ದಾರ ನೋಡಿರಯ್ಯsss **|| ತಂದಾನ ||**

ಮೇಲುಗಿರಿ ಒಳಗೆ ವೋಗಿ ಯಣ ಒಡ್ಡಿಗೆ ತಾಯವ್ರು
ಎನ್ನೋ ನೋಡ್ತಾರೆ
ತಾಮ್ರದ ಚಂಬು ನೋಡ್ತಾರೆ
ಅಗಲ್ ಗಾತ್ರ ಸಂಕ ನೋಡ್ತಾರೆ
ಮುಗಲ್‌ಗಾತ್ರ ಜ್ವಾಗ್ಟೆ ನೋಡ್ತಾರೆ
ಮೇಲುಗಿರಿ ಇಲ್ಲ ಏಯ್ ಅನುಮಂತ
ಕಲ್ಯಾಣಿ ಕೊಳಕ್ಕಾಗಿ ಜಾರಿನೋಡು
ನಾಮ ಸೇವೆ ಮಾಡ್ಬೇಕು
ತಣ್ಣೀರ್ ತಾನ ಮಾಡ್ಬೇಕು ಈವೊತ್ತು
ಅದಕ್ಕೆ ಕಳ್ಳಾರಂಗ್ನ ಉಡ್ಕು ಹೋಗು ಎಂದು ಯೇಳುವಾಗ

ಇವ್ರು ಮೆಲ್ಲಮೆಲ್ಗೆ ಸ್ವಾಮಿ ಬರುತಾರೆsss **|| ತಂದಾನ ||**
ಅಯ್ಯ ಮೆಲ್ ಮೆಲ್ಗೆ ಸ್ವಾಮಿ ಅನುಮಂತ ಬರುವಾಗsss
ನರಾರನು ನಾರಾಯ್ಣsss **|| ತಂದಾನ ||**

ನರನಾಗ್ಬುಟ್ರು ನಾರಾಯ್ಣ
ತಾಯಿ ಕಲ್ಯಾಣಿ ಕೊಳದಲ್ಲಿ ಇಲ್ಲ ತಾಯಿ
ನಾನು ಸೇವೆಯನ್ನು ಮಾಡಿದ್ದು

ನಾನು ಅಚ್ಚಿದ್ದು ಗುರ್ತು ಇದೆ ತಾಯಿ
ನಾನು ಸೇವೆ ಮಾಡಿದ್ದಾರೆ
ತಾನ ಮಾಡಿದ್ದಾರೆ ತಾಯಿ
ಅವರಿಲ್ಲ ತಾಯಿ
ಏಯ್ ಬೆಪ್ಪ ಬೆಪ್ಪ ನೀನು
ನಾರಾಯ್ಣಾ ಪತ್ತೆ ಮಾಡ್ದೆ ಬಂದಿದ್ದಿಯಲ್ಲ ನೀನು
ಎಲ್ಲವ್ನ ಅವ್ನ ನೋಡಯ್ಯ
ಅವ್ನು ಅಳ್ಳಿಮರ ಮೇಲೆ ಕೂತಿರ್ ಬಹ್ದು ನೋಡಯ್ಯ ಅಂತೇಳುವಾಗ

ಅವ್ನು ಅಳ್ಳಿಮರ್ದ ಸ್ವಾಮಿ ದಯಮಾಡಿsss || **ತಂದಾನ** ||

ಪೋಡಿಗೇನೋ ಬಂದ್ಬುಟ್ಟಿದ್ದಾರೆ
ಸೋಲಿಗರ ಬೊಮ್ಮೆಗೌಡ್ನ ಪೋಡೊಳಗೆ ಬಂದು
ಕಾಕು ಬೆಂಕಿ ಕಕ್ಕ ಸೊಪ್ಪಿನ ಗುಳ್ಳು ಕಾರಾಚಿನ ಮನೆ
ಕಬ್ಬಾಳೆ ಅಂಬು ತಿನ್ನುತ್ತಾ ಕೂತಿದ್ದಾರೆ
ಆಹಾ ಈ ದಾಸಪ್ಪ ನಮ್ಮೊಂದ್ಗೆ ಸುತ್ತ ನೋಡ್ತನಲ್ಲ
ಇವನ್ಯಾರು?
ಇವನ್ಯಾರು ಎಂದು ಕೇಳ್ವಾಗ
ನಾನು ನೋಡ್ರಿ ಸೋಲಿಗರ ಬೊಮ್ಮೆಗೌಡ ಮಾವ ಆಗ್ಬೇಕು
ಅವ್ನ ಮಕ್ಕ ಎಲ್ಲಾ ಬಾವ ಬಾಮೈಕ ಆಗ್ಬೇಕು
ಅವ ಅಕ್ಕ ತಂಗಿರೆಲ್ಲಾ ಅತ್ತೆರಾಗ್‌ಬೇಕು

ಕಿರಿಯವ ಕಾಣೋ ಕುಸುಮಾಲೆsss || **ತಂದಾನ** ||
ಆ ಕಿರಿಯವಳ ಅಂತೆ ಕುಸುಮಾಲೆ ಆದರೆsss
ಬಣ್ಣಾರು ಕಾಣಂತೆ ತಿರುಪತಿsss || **ತಂದಾನ** ||

ನಾನು ತಿರುಪತಿಯಿಂದ ಬಂದಿ ತಳಕಾಡಿನಲ್ಲಿ ನಿಂದಿ

ತಾನ ಮಾಡದಕ್ಕೆ ಬೆಳ್ಳಿ ಬೆಟ್ಟಕ್ಕೆ ಬಂದಿದೀನಿsss || **ತಂದಾನ** ||

ಬೆಳ್ಳಿ ಬೆಟ್ಟಕ್ಕೆ ಬಂದು
ಬಿಳಿ ಸೀಗೆಕಾಯಿ ತರ್ತಿನಿ ಅಂದ್ಬುಟ್ಟು ಬಂದ್ಬುಟ್ಟು
ಸೋಲಿಗರ ಬೊಮ್ಮೆಗೌಡ್ನ ಉಡ್ಗಿ ಮೊಕ ನೋಡುದ್ರು

ಗುರುವಂಜಿ ಮೊಕದವ್ಳೆsss
ಬಾಳೆಯ ಬಣ್ಣದವಳೆsss
ಈ ಉಡ್ಗಿಯ ನಾನು ಬಿಡದಿಲ್ಲsss || **ತಂದಾನ** ||

ಏಯ್ ಏಲಕ್ಕಿ ಎಲೆಸಣ್ಣ ಜೀರಗೆ ಗೊನೆ ಸಣ್ಣsss
ತಿರುಗಿ ನೋಡಣ್ಣ ಸೋಲಿಗರೆಣ್ಣsss || **ತಂದಾನ** ||
ಅಣ್ಣ ತಿರ್ಗಿ ನೋಡಣ್ಣ ಸೋಲಿಗರೆಣ್ಣsss
ಅದ ತರ್ದಿದ್ದ ಮೇಲೆ ಪಲ ಏನಾsss || **ತಂದಾನ** ||
ಏಲಕ್ಕಿ ಎಲೆ ಸಣ್ಣ ಜೀರಗಿ ಗೊನೆಸಣ್ಣsss
ತಿರ್ಗಿ ನೋಡಣ್ಣ ಸೋಲಿಗರೆಣ್ಣsss || **ತಂದಾನ** ||
ರಂಗಯ್ಯ ಉಟ್ಟಿದ್ದೆ ಜಂಬು ನೇರಳೆ ತಾಳುsss
ರಂಗಯ್ಯ ಮಡ್ಡಿ ಕುಸುಮಾಲೆsss || **ತಂದಾನ** ||
ಅಯ್ಯ ರಂಗಯ್ಯ ಮಡ್ಡಿ ಕುಸ್ಮಾಲೆ ಆದರೆsss
ದಾಸಯ್ಯ ವಾಸ ಆಗುತವ್ನೆsss || **ತಂದಾನ** ||
ದಾಸಯ್ಯ ವಾಸ ಆಗುತವ್ನೆ ಅಂದ್ಕಂಡುsss
ತೇರಿನ ತಿಮ್ಮಯ್ಯ ಬರುತವನೆsss || **ತಂದಾನ** ||

ಸೋಲಿಗರ ಬೊಮ್ಮೆಗೌಡ್ನ ಮಕ್ಕಳೆಲ್ಲಾ ಪೋಡು ಸೇರಿ……
ತಿಮ್ಮಯ್ಯ ಆಗ್ಬುಟ್ಟಿದ್ದಾನೆ
ಮೇಲುಗಿರಿ ರಂಗಯ್ಯ ಆಗ್ಬುಟ್ಟಿದ್ದಾನೆ
ಇವ್ನ ನೋಡ್ದರೆ ವೊಟ್ಟೆ ಮೇಲೆ ಬಟ್ಟನಾಮ
ತೋಳ ಮೇಲೆ ತೊಳ್ಸನಾಮ
ಎಡಗಡೆ ನೋಡಿದ್ರೆ ಏಡ್ ನಾಮ ಇಟ್ಟಿದ್ದಾರೆ
ಬಲಗಡೆ ನೋಡುದ್ರೆ ಬಿಳಿನಾಮ ಇಟ್ಟುಕೊಂಡು
ಅಗಲಗಾತ್ರ ಸಂಕ ಬಿಟ್ಕೊಂಡು
ವೊಟ್ಟೆ ನೋಡುದ್ರೆ ಬೂದುಗುಂಬಳ ಕಾಯಂಗೆ ಮಾಡ್ಕೊಂಡು
ಅಯ್ಯಯ್ಯೋ ನಮ್ಮಪ್ಪ ಇನ್ಯಾಕಪ್ಪ

ಈ ದಾಸಯ್ನ ವೊಟ್ಟೆಯ ನೋಡಿರಪ್ಪsss || **ತಂದಾನ** ||
ವೊಟ್ಟೆ ಮಾಡ್ಕೊಂಡು ಬೂದುಗುಂಬಳಕಾಯಿ
ತಲೆ ನೋಡುದ್ರೆ ಕಜ್ಜಿ
ಗಡ್ಡ ನೋಡುದ್ರೆ ಗೊಳ್ಳು ಮುಳ್ಳು
ಮೀಸೆ ನೋಡುದ್ರೆ ಗೊಡ್ಡು ಮಂಜಿ
ತಲೆ ನೋಡುದ್ರೆ ಅಂಚೆ ಕಡ್ಡಿ ಮಾಡ್ಕಂದು
ನೀಲಗಿರಿ ಕೈಲಾಸದೊಳ್ಗೆ
ಮಾಯದ ರಂಗಪ್ಪನು ಬರುವಾಗ……

ಸೋಲಿಗರ ಐಕಳ ಮೇಲೆ ಕಿರುಗಣ್ಣ ಬಲಗಣ್ಣು ಇಡುತಾರೆsss || **ತಂದಾನ** ||
ಅವ್ರು ಎಡಗಣ್ಣ ಇಡುತಾರೆ ಬಲಗಣ್ಣ ಬಿಡುತಾರೆsss
ಕೈಮಾಡಿ ಉಡ್ಗಿಯ ಕರೆತಾರೆsss || **ತಂದಾನ** ||

ಸ್ವಾಮಿ ರಂಗಯ್ಯಎಂದು ಬಾಳೆಯಣ್ಣ ಬಿಡಿರವ್ವsss
ಇಂದಿಗ ಮರೆಯೋ ಈ ಮಾಟsss **|| ತಂದಾನ ||**
ಯೆಣ್ಣು ಇಂದಿಗೆ ಮರೆಯೋ ಈ ಮಾಟ ಸೋಲಗಿತ್ತಿsss
ಬಾವ ರಂಗಯ್ಯ ಎಂದು ಕರಿರಮ್ಮsss **|| ತಂದಾನ ||**
ಬಾವ ಬಾವೆಂದು ಎಸ್ಟೊತ್ತು ಕರಿತಿರಿsss
ಬಾವ ರಂಗಯ್ಯ ಆಗುತಾನsss **|| ತಂದಾನ ||**
ಬಾವ ಬಾವ ರಂಗಬಾವ ರಂಗಬಾವsss
ಅಯ್ಯ ಬಾವ ಬಾವೆಂದು ಕೂಗಿರಯ್ಯsss **|| ತಂದಾನ ||**
ಅಕ್ಕ ಬುದ್ರಕ್ಕ ದಾಸಯ್ಯsss
ಇವ್ನ ಮೋರೆಯ ಮ್ಯಾಗೆ ತಿಮಿರವ್ವ ಅಂದ್ಬುಟ್ಟುsss
ಕಿಲಕಿಲ್ನೆ ನಗೆಯ ಆಡುತಾರೆsss **|| ತಂದಾನ ||**
ಅಯ್ಯ ಮೋರೆಯ ಮ್ಯಾಗೆತಿಮಿಯುವಾಗ ಅಂತೆsss
ಕಿಲಕಿಲ್ನೆ ನಗೆಯ ಆಡುತ್ತಾರೆsss **|| ತಂದಾನ ||**

ಕಿಲಕಿಲ್ನೆ ನಗುನಾಡುವಾಗ ನಾರಾಯಣಮೂರ್ತಿಯವ್ರು
ಈಕಡೆ ಗಡ್ಡ ನೋಡುದ್ರೆ ನುಲಿತಾರೆ
ನೋಡ್ರಕ್ಕ ನೋಡ್ರಕ್ಕ
ಆ ದಾಸಪ್ಪ ನೋಡು ಮೀಸೆ ನುಲಿತಾನೆ ನೋಡು
ಗಡ್ಡ ನೋಡುದ್ರೆ ನುಲಿತಾನೆ ನೋಡಿ
ಅಯ್ಯಯ್ಯೋ ವೊಟ್ಟೆ ನೋಡುದ್ರೆ ಪೆಟ್ಟಿಗಾತ್ರ
ಮೂಗ್ ನೋಡುದ್ರೆ ಮೂಡೆ ಗಾತ್ರ
ಎಂತದಾಸಪ್ನ

ಅಯ್ಯ ನೋಡ್ರಕ್ಕ ದಾಸಯ್ಯsss **|| ತಂದಾನ ||**
ಅಯ್ಯ ದಾಸಯ್ಯ ಬತ್ತವ್ನೆ ದೇಸದ ಮೇಲೆಲ್ಲಾssss
ದಾಸಯ್ನ ವೇಸ ನೋಡಿರವ್ವsss **|| ತಂದಾನ ||**
ಅಂಮ್ ಮಾತಾಡೊ ಮುದ್ದು ರಾಮsss
ಮಾತಾಡೋ ಗಿಣಿಯ ರಾಮsss
ಸಂಪಂಗಿ ವನದಲ್ಲಿ ಸಂಪತ್ತುಗಾರsss
ನಿಂದುವೆ ಮಾತಾಡೋsss
ಕಾರೆಂಬ ಕತ್ತಲಲ್ಲಿ ಬೋರೆಂಬsss
ಸಂಪತ್ತುಗಾರ ರಂಗಯ್ಯsss **|| ಮಾತಾಡು ||**
ಬಡವರು ಬಂದವರೆsss
ನಿಮ್ಮ ಪಾದ್ದಲ್ಲಿ ನಿಂದವರೆsss
ಬಾಗಿ ಕೊಡಯ್ಯ ದರುಸನ sss **|| ಮಾತಾಡು ||**
ಯಾಕಯ್ಯ ರಂಗಯ್ಯೋsss

ಮೋಹನನ ಮೇಗೆsss
ನಿನ್ ನೋಡಕ್ ಬಂದವರು ನಗುನಾಡಿsss || **ಮಾತಾಡು** ||
ನೋಡಕ್ಕೆ ಬಂದವರು ನಗುತಾರೆ ನಾರಾಯ್ಣsss
ನಿನ್ನ ಬೇಡಕ್ ಬಂದವರು ಅಳುತ್ತಾರೆsss || **ಮಾತಾಡು** ||
ಆಗಲ್ ಗಾತ್ರ ಸಂಕು ಮುಗಿಲ್ ಗಾತ್ರ ಜಾಗ್ಟೆ ಸಿವಸಿವ
ನಮ್ಮ ಜಗದೊಡೆಯ ಕಡೆದ ಬೂಲೋಕಕ್ಕೆsss || **ತಂದಾನ** ||
ಓ ಜಗದೊಡೆಯ ಕದ್ದ ಬಿಳಿಗಿರಿರಂಗಯ್ಯssss
ಅನ್ನ ನೀಡಯ್ಯ ಆರಿ ನಾರಾಯ್ಣsss || **ತಂದಾನ** ||

ಅಪ್ಪಾ ಕಾಡಲ್ಲಿ ಉಟ್ಟಿ ಕಾಡಲ್ಲಿಬೆಳ್ದು
ಈ ಚಂಪ ಸಾಗರ ಅರಣ್ಯದಲ್ಲಿ ಕೂತ್ಬುಟ್ಟಿದ್ದಾರೆ
ಇಲ್ಲಿ ಬಿಳಿಗಿರಿರಂಗಯ್ಯ ಆಗಿದ್ದಾರೆ
ಈ ಸೋಲಿಗರೆಲ್ಲಾ ಬಾವ ಆಗ್ಬುಟ್ಟಿದ್ದಾರೆ
ಇಂತ ಬಾವ ಜಗತ್ಗೆ ಇಲ್ಲ ಅಂದ್ಬುಟ್ಟು
ಮುಳ್ ಗೆಣ್ಸು, ತಾವರೆಗೆಂಡೆ,
ಕಿರಿಜೇನು ತುಪ್ಪ ತಂದು……

ರಂಗಯ್ನಿಗೊಂದೆಡೆಯsss
ಕೊಟ್ಟು ನೀನು ಊಟ ಮಾಡಿsss
ಅಯ್ಯನಿಮ್ಮ ಅಡ್ವಿ ಒಳ್ಗೆ ಊಟ ಕೊಡುತಾರೆsss || **ತಂದಾನ** ||
ಅಯ್ಯ ಅಡ್ವಿಯಲ್ಲಿ ಉಟ್ಬೇಕು
ನಗ್ರದಲ್ಲಿ ಬೆಳಿಬೇಕುsss
ರಂಗಯ್ನ ಪಾದ ಪೂಜ್ಸಬೇಕುsss || **ತಂದಾನ** ||
ಎದ್ದು ಬಾರಯ್ಯsss ರಂಗಯ್ಯsss
ಎದ್ದು ಕಾಯಯ್ಯ ಬರಬೇಕುsss || **ತಂದಾನ** ||
ಕಳ್ಳರು ಬೆಟ್ಟದಲ್ಲಿ ಕಳ್ರಂಗ ಬರುತವ್ನೆsss

ಸ್ವಾಮಿಯವ್ರು ಕಳ್ರಬೆಟ್ಟಕ್ಕೋದ್ರು
ಕಳ್ರಂಗ ಆಗ್ಬುಟ್ರು ಮುಲ್ಕಿ ಬೆಟ್ಕ ಬಂದ್ ಬುಟ್ಟಿದ್ದಾರೆ
ಮಲ್ಕಿ ಬೆಟ್ದಲ್ಲಿ ನಿಂತ್ಕಂಡು ಮಲ್ಕಮ್ನ ನೋಡುದ್ರು
ಆಹಾ!
ಉಡ್ಗಿ ಸುಂದ್ರವಾದಂತ ಉಡ್ಗಿ
ಇವ್ನ ನೋಡಿದ್ರ ರೂಪ್ವಂತ
ಅಯ್ಯಯ್ಯೊ ನನ್ನ ಬುಟ್ಟರಪ್ಪ ಅಂದ್ಬುಟ್ಟು
ಅಯ್ಯ ಮಲ್ಕಿ ಬೆಟ್ಟದ ಮಲ್ಕಮ್ಮ

ಅವ್ರು ಮಲ್ಕಿ ಬಿದ್ದೋಡಿ ಓಡುತಾರೆsss **|| ತಂದಾನ ||**
ಅವ್ರು ಮಲ್ಕಿ ಬೆಟ್ಟಾವ ದಾಟಿsss
ಜಗ್ಗೆ ಕಲ್ಲಿಗೆ ಬಂದುsss
ಜೈಜೈನೆ ಜಾಗ್ಗೆ ಒಡಿತಾರೆsss **|| ತಂದಾನ ||**

ಜಾಗ್ಗೆ ಕಲ್ಲಿಗೆ ಬಂದ್ಬುಟ್ರು
ಜಾಗ್ಗೆ ಒಡಿವಾಗ ಅಗಲ್ ಗಾತ್ರ ಸಂಕ
ಮುಗಲ್ ಗಾತ್ರ ಜಾಗ್ಗೆ
ಸೂರ್ಯ ಚಂದ್ರವೆಲ್ಲಾ ನಡಗ್ ಬುಡ್ತು
ಲೋಕವೆಲ್ಲಾ ಬೆಳಗಾಗ್ ಬುಡ್ತು
ಈ ದಾಸಪ್ಪ ಅಂದ್ರೆ ಯಾವುರ್ ದಾಸಪ್ನ
ಮುಂದಕ್ಕೆ ಮೂರಲ್ ಕಳ್ದೋಗ್ ಬುಟ್ಟಿದ್ದೊ
ಬಿಳಿ ಪಟ್ಟೆ ನನ್ನಾಗೆ
ಎಲ್ಲಾ ಅಲ್ ಬಿದ್ದೋಗ್ ಬುಡ್ತು
ಮಂಡಿಯೆಲ್ಲ ಕಟ್ಟೋಗ್ ಬುಡ್ತು
ವೊಟ್ಟೆ ನೋಡಿದ್ರೆ ಪೆಟ್ಟಿಗಾತ್ರ ಮಾಡ್ಕಂದ
ಮೂಗು ಮೂಡೆಗಾತ್ರ
ಅಯ ಒಂದ್ಕಡೆ ತಿರ್ಗೋಯ್ತು

ಅವ್ನು ಬೌನೆ ಸಂಕ ಊದುತ್ತಾನೆsss **|| ತಂದಾನ ||**
ರಾಮ **|| ರಾಮsss || ತಂದಾನ ||**
ರಂಗಯ್ಯಸ್ವಾಮಿsss **|| ತಂದಾನ ||**
ಕೊಡ್ವಾದು ದೂರsss
ಕಲಿವಾದು ಗೋವಿಂದsss
ಕೊಟ್ಟು ನೋಡು ಸ್ವಾಮಿ ಕಿಳುತಾರೇsss **|| ತಂದಾನ ||**
ಕೊಡದಂತೆ ಈ ಸ್ವರ ಕಿಳದಂತೆ ಗೋವಿಂದsss

ಸಾಕು ನಿನ್ನ ಅಹಂಕಾರ ಐಬೋಗ,
ಕಾಮ, ಕ್ರೋದ, ಮದ, ಮತ್ಸರಲೀಗ ನೋಡ್ಕಂಡು
ಇನ್ನು ಅಹಂಕಾರ ಬಂದ್ಬುಟ್ರೆ ಈಸ್ಪುರ ಕೊಡ್ಬುಡ್ತಾನೆ
ನೀವ್ ಕೊಡ್ಬುಡ್ತೀರಿ
ಅವ್ರು ಕಿತ್ಕೋತಾರೆ

ಅವ್ರು ಕಿತ್ತುಕೊಟ್ವಾರೆ ನಾರಾಯ್ಣsss **|| ತಂದಾನ ||**
ಮೇಲುಗಿರಿಯಲ್ಲಿ ನಾರಾಯ್ಣsss
ನಾರಾಯ್ಣ ನೆನಕೊಂಡುsss
ಅವ್ರು ಪೋಡು ಪೊನ್ನಾಚಿ ತಿರ್ಗುತ್ತಾರೆsss **|| ತಂದಾನ ||**

ಆಗ ಏನ್ಮಾಡ್ತ ಇದ್ದಾರೆ ನಾರಾಯ್ಣವ್ರು?
ಏನ್ಮಾಡ್ತ ಅವ್ರೆ?
ಬಂಗಾರದ ಕೊಳ್ಗ ತೆಕ್ಕೊಂಡ್ ಬಂದ್ಬುಟ್ಟಿದ್ದಾರೆ
ಒಹೋ ಬಂಗಾರ್ದ ಕೊಳ್ಗ ತೆಕ್ಕಂಡ್ ಬಂದು
ಬಡವರ ಮನಿಗೆಲ್ಲಾ ಆದಾರ ಆಗ್ಬೇಕು
ಬಲ್ಗಾರ ಮನೆನು
ಅಹಂಕಾರ ಪಟ್ಟವರ ಮನೆನು
ಆಳ್ ಮಾಡ್ಬೇಕು ಅಂದ್ಬುಟ್ಟು
ಅಲ್ಲಿ ...

ಅವ್ರು ತೇರು ತಾಳಿಗೆ ತಿಮ್ಮಯ್ಯನವ್ರು ಬರುತಾರೆsss **|| ತಂದಾನ ||**
ಅಯ್ಯ ತೇರು ತಾಳಿಗೆ ಬತ್ತಾವ್ರೆ ನಾರಾಯ್ಣsss
ಟುಮ್ಮ ಟುಮ್ಮನೆ ಸ್ವಾಮಿ ಕುಣಿತಾನೆsss **|| ತಂದಾನ ||**

ತೇರು ತಾಳಿಗೆ ಬಂದ್ಬುಟ್ಟಿದ್ದಾರೆ
ಚೆನ್ನಪ್ಪನಾಗ್ಬುಟ್ಟಿದ್ದಾರೆ
ಮೇಲುಗಿರ್ಕಿ ರಂಗಪ್ಪನಾಗ್ಬುಟ್ಟಿದ್ದಾರೆ
ಸೋಲಿಗರ ಬಂದುಗಳೆಲ್ಲಾ ಬಾವನಾಗ್ಬುಟ್ಟಿದ್ದಾರೆ
ಆಹಾಹ!
ಇನ್ಯಾಕಯ್ಯ! ಇನ್ಯಾಕಯ್ಯ!
ಇಂತ ಬಾವ ಸಿಕ್ಕಬೇಕಾದ್ರೆ ಅಯ್ಯೋ ರಂಗಪ್ಪ ...

ಕಗ್ಗಾಲು ಬತ್ತಿಯವ್ನೆ ಮುಗ್ಗಾಲು ಮೋರೆಯವ್ನೆsss
ಎದ್ದು ನೋಡಮ್ಮ ನಾರಾಯ್ಣsss **|| ತಂದಾನ ||**
ಎದ್ದು ನೋಡುತವ್ರೆsss
ನಾರಾಯ್ಣ ನೋಡು ಕೊಂಡುsss
ಕಿಲಕಿಲ್ನೆ ನಗುನಾಡುತ್ತಾರೆsss **|| ತಂದಾನ ||**

ಕಿಲಕಿಲ್ನೆ ನಗ್‌ನಾಡ್ಬುಟ್ರು
ಅಯ್ಯಯ್ಯೋ ಈ ಉಡ್ಗಿರೆ
ನನ್ನ ಯಿಂಗ್ ಮಾಡ್ಬೇಕು ಅಂದ್ರೆ
ಇನ್ನು ನೆಲಗಾಡವರಾದ್ರೆ
ಎಂಗಾರು ಮಾಡ್ಕೊಳ್‌ಬಹ್ದು
ಆನೆ ಕಂಡ್ರೆ ಎದ್ರುಸ್‌ಬುಡ್ತಾರೆ
ಉಲಿ ಕಂಡ್ರೆ ಬೆದ್ರುಸ್ ಬುಡ್ತಾರೆ
ಕಳ್ಳ ಮನ್ಸ ಸಿಕ್ಬುಟ್ರೆ ಕರ್ದಿ ಮಾಡ್ಬುಡ್ತಾರೆ
ಒಳ್ಳೆ ಮನ್ಸ ಸಿಕ್ಕುದ್ರು

ಉಲಿ ಮಾಡಂತ ಜಾತಿ ಅವ್ರು ಸಿಬ್ರಿಗೆ ...
ಮಂತ್ರ ನಾನಾಗ್‌ಬೇಕು ಅಂದ್ಬುಟ್ಟು
ನಾರಾಯ್ಣಮೂರ್ತಿಯವ್ರು ಪೂರಮಂತ್ರ
ಯಂತ್ರ ಮಂತ್ರ ಅಂದ್ರೆ ...
ಎಕ್ಕದ ಬೇರ ಕಿತ್ತು ಎಡಕೈಲಿ ಕಟ್ಟುವಂತೆ ಮಂತ್ರ

ಅದಕ್ಕಿಂತ ದೊಡ್ಡ ಮಂತ್ರ ಮಾಡ್ತಿನಿ ನಾರಾಯ್ಣsss **|| ತಂದಾನ ||**
ಅವ್ರು ಬುಡ್‌ಬುಡ್ಕಿ ವೇಸ ತಾಳುತಾರೆsss **|| ತಂದಾನ ||**

## ೬. ಬಿಳಿಗಿರಿ ರಂಗನ ಕಾವ್ಯ (೭)

ಬುಡ್‌ಬುಡ್ಕಿ ವೇಸಾನ ತಾಳ್ಕಂದು
ಗುಡ್ಡದ ಮೆಲೆ ನಿಂತ್ಗಂದಿದ್ದಾನೆ ನಾರಾಯ್ಣ
ಯಾರಪ್ಪ ನೀನು ಬುಡ್‌ಬುಡ್ಕ್ಯಮ?
ಈ ಬೂಲೋಕಕ್ಕೆ ಬಡ್ಕಂದ್ ಬಂದಿದ್ದಿಯಾ.
ಬುಡ್‌ಬುಡ್ಕಯ್ಯ ನನ್ನ ಸಾಸ್ತ್ರ ನೋಡು ಬಪ್ಪ ಅಂದ್ರು
ನನ್ನ ಮಗ ವೋಗಿ ಈವೊತ್ಗೆ ಮೂರು ದುವ್ಸ ಆಗೋಯ್ತು
ಮೂರ್ ದಿವ್ಸದಿಂದ ನನ್ನ ಕುಸ್ಮದೇವಿ ನನ್ನ ಕೆಗೆ ಸಿಕ್ಕಿಲ್ಲಪ್ಪ
(ಕುರಗಂಜಿ), ಬುಡ್ ಬುಡ್ಕಿ ನೀನಾದ್ರು
ಸ್ವಲ್ಪ ಸಾಸ್ತ್ರ ನೋಡು ಬಾಪ್ಪ ಅನ್ನೋ ವೊತ್ತಿಗೆ
ನಾನು ಈಗ ಮಂತ್ರ ಯೇಮ್ ಗುರು
ಸಾಂತ್ ಗುರು ಅನ್ನೋ ಮಂತ್ರಗಳನ್ನ ಪೂರ ಮಂತ್ರಸ್ತಿನಿ
ನೋಡು, ಯಾವ ಕಡೆಗಿದ್ರು
ಯಾರ್ ಕಡೆಗಿದ್ರು ನೋಡ್ತಿನಿ ಅಂದ್ಬುಟ್ಟು
ನಾರಾಯ್ಣಮೂರ್ತಿ ಕುರವಂಜಿ
ಬುಡ್ ಬುಡ್ಕಿ ರೂಪ ತಾಳ್ಕಂಡು

ಅವ್ರು ಮೆಲ್ ಮೆಲ್ಗೆ ಬೊಮ್ಮೆಗೌಡ್ನ ವೋಡ್ಗೆ ಬರುತ್ತಾರೆ sss || **ತಂದಾನ** ||

ಮೆಲ್ಲ ಮೆಲ್ಲಗೆ ಬಂದು

ಕೊರವಂಜಿ ವೇಸ ಆಕಿ ನೋಡ್ವಾಗsss

ನಾರಾಯ್ಣ ಮೂರ್ತಿಯವ್ರು ಮಾಯದ ರೂಪವನ್ನು ತಾಳ್ಕಂದು
ಓಂ ಗುರು ಮಂತ್ರ ಮಂತ್ರಿಸಿದ್ರು
ಎಕ್ಕದ ಬೇರು ಕಿತ್ತು ಎಡಕೈಗ್ ಕಟ್ಬೇಕು
ಕಕ್ಕೆ ಬೇರ್ ಕಿತು ಬಲಕೈಗ್ ಕಟ್ಟಬೇಕು

ಆರ್ ಮಂಡಲ

ತೂರ್ ಮಂಡಲ,

ಕಕ್ಕಿ ಮಂಡಲ

ಗಿರ್ಕು ಮಂಡಲ

ಉಳ್ಕು ಮಂಡಲ

ನಾಗಮಂಡಲ

ನಡು ಮಂಡಲ ಬರ್ದಬುಟ್ರೆ

ಅವ್ರಿಗೆ ಬತ್ತಿರೋ ಗಾಳಿಯಲ್ಲ ಒಂಟೊಯ್ತದೆ

ಆ ಗಾಳಿ ಓಡ್ಯೋಕೆ ನಾ ಬಂದಿದ್ದೀನಿ.

ಆದ್ಕೆನೇನ್ ಸಾಮಾನಾಗ್ ಬೇಕು?

ಐದು ಮೂಲ್ಕೆ ಐದು ತೆಂಗಿನಕಾಯಿ ಆಗ್ಬೇಕು

ಐದಚ್ ಬೆಲ್ಲ ಆಗ್ಬೇಕು

ಐದ್ಬಾವ್ ಕಳ್ಳ ಆಗ್ಬೇಕು

ಐದ್ಬಾವ್ ಅಕ್ಕಿ ಆಗ್ಬೇಕು

ಐದು ಕುಡ್ಕೆ

ಐದಣ ಆಗ್ಬೇಕು

ಬುಡ್ ಬುಡ್ಕಿ ವೇಸ ತಾಳ್ಬೇಕು ಅಂದ್ರೆ

ಬುಡ್ ಬುಡ್ಕೇರು ಏನೇಳ್ತಾರೆ ನಾರಾಯ್ಣ

ಅಯ್ಯ ಅನುಮಂತ ರೇಕೆ ಬರೆಬೇಕುsss **|| ತಂದಾನ ||**

ಅನಮಂತ ಮಂಡ್ಲ ಬರ್ದಬುಟ್ರೆ…. .

ಏ ನಿನ್ನ ಉಡ್ಗಿ ನಾ ಪತ್ತೆ ಮಾಡ್ಕೊಡ್ತಿನಿ ಅಂದ್ಬುಟ್ಟು

ಕೊರ್ವಂಜಮ್ಮ ಯೇಳ್ವಾಗ…. .

ಈ ಕೊರವಂಜಿ ಬಾಳ ಚೆನ್ನಾಗಿ ಆಟ ಆಡ್ತಾಳೆ

ಚಿಕ್ಕರಂಗಿ ದೊಡ್ಡರಂಗಿ

ನನ್ನ ಮಗಳ ಪತ್ತೆ ಮಾಡ್ ಬುಡ್ ಬಹ್ದು

ಅಮ್ಮ ಸಾಲ್ಬೋ ಸೋಲ್ಬೊ

ಮಾಡಿ ತಂದು ಕಳಪ ಕಳಿಸ್ಬೇಕು

ಆಗ ಕುಸ್ಮದೇವಿಯನ್ನು ಪತ್ತೆ ಮಾಡಿ

ಕರ್ಕಂಡ್ ಬಂದ್ ಬುಟ್ಟಿದ್ದಾರೆ

ಇವಂಗೆ ನೋಡಪ್ಪ ಒಂದ್ ಸಾಸ್ತ್ರ ಮಾಡ್ಬೇಕು

ಒಂದ್ ಅಂತ್ರ ಮಾಡ್ಬೇಕು

ಒಂದ್ ಮಂತ್ರ ಮಾಡ್ಬೇಕು

ಒಂದ್ ಮಾಯ ಮಾಡ್ಬೇಕು

ಆ ತಾತಿ ಕಟ್ಬೇಕಾದ್ರೆ ನೀವ್ ಕಟ್ಟಕ್ಕಾಗಲ್ಲ

ನಾನೇ ಕಟ್ಬೇಕು

ನಾನು ಯಂಗ್ ಕಟ್ಬೇಕು ಅಂದ್ರೆ

ನಾ ಮಂತ್ರ ಮಾಡ್ಬಾಗ ನೀ ಮಾತಡಕಿಲ್ಲ

ಓಂ ಗುರು ಮಂತ್ರ

ಜಪಮಂತ್ರ ಮಂತ್ರಸ್ಬುಟ್ಟು

ನಾ ಗಾಳಿ ಕಟ್ಟು

ಸಾಕಿ ಕಟ್ಟು

ಪೀಡೆ ಕಟ್ಟು

ಪಿಸಾಚಿ ಕಟ್ಟು

ಆಟ ಕಟ್ಟು

ಬೂತ ಕಟ್ಬೆಲ್ಲಾ ಕಟ್ಬಾಗ

ಒಬ್ರು ಮಾತಾಡಕಿಲ್ಲ ಅಂತ ಕೊರವಂಜಿ ಯೇಳ್ತಾ ಇದ್ದಾಳೆ

ಆ ಬೊಮ್ಮೆಗೌಡನ್ಗೆ ಬಾಳ ದೈರ್ಯ ಬಂದ್ಬುಡ್ತು

ಇಂತ ನಮ್ಮವ್ವ ಇದ್ಕಂದು

ನನ್ ಮಗ್ನ ಮೊಕ ನೋಡ್ದೆ

ಎಂಗಿದ್ದಳು ನೋಡಪ್ಪ ಕೊರವಂಜಮ್ಮ

ಅವ್ರು ಗಾಳಿ ಗಾಚಾರ ಕಟ್ಬುತ್ತಾರೆsss **|| ತಂದಾನ ||**

ಗಾಳಿ ಗಾಚಾರ ಕಟ್ಬುವಾಗ

ಸೋಲಿಗರ ಬೊಮ್ಮೆಗೌಡ ಏನ್ ಮಾಡ್ತಾ ಇದ್ದಾನೆ?

ಯೆಣ್ಣೆಂಬಾಕೆಗೆ ಅಯ್ಯಯ್ಯೋ ನಮ್ಮಪ್ಪ ಇಸ್ಟ್ ಮಂಡ್ಲ ಬರವಾಗೆ

ಅರ್ ಮಂಡಲ

ತೊರ್ ಮಂಡಲ

ಗೆಜ್ಜೆ ಮಂಡಲ

ಗಿರ್ಕು ಮಂಡಲ

ಉಳ್ಕು ಮಂಡಲ

ನಾಗಮಂಡಲ

ನಡು ಮಂಡಲ

ಎಪ್ಪತ್ತೇಳು ಮಂಡಲ

ಬರೆಸಿ ಅಂದ್ಬುಟ್ಟು

ಕುಸ್ಮದೇವಿ ಕುಂದ್ರುಸ್ಗಂದು ಮಧ್ಯೆ

ಕುಂಡ್ರುಸ್ಕಂದು ನಾರಾಯಣ್ ಮೂರ್ತಿ

ನಿನ್ ಮನ್ಸು ನನ್ಗಿರಬೇಕು

ನನಗ್ಯಾನ ನಿನ್ಗರಬೇಕು

ನಾ ಎಲ್ಲೋದ್ರು ನನ್ನೊಂದ್ಗೆ ಬರ್ಬೇಕು
ಆಗೆಂದ್ಬುಟ್ಟು ಮಂತ್ರ ಮಂತ್ರಸ್ತಾರೆ
ಅದಕ್ಕೆ ಮಾಯದ್ ಮದ್ದು
ಮಲೆಯಾಳ ಕಪ್ಪು
ಅಂದ್ರೆ ಮಂತ್ರುಸ್ಬುಟ್ಟು ತಾತಿ ಆಕ್ಬುಡ್ತಾರೆ
ಏ ಬೊಮ್ಮೆಗೌಡ್ರೆ ಕಾಣ್ಕೆ ಎಲ್ಲ ಪೂರ ಕೊಡು…. .
ಈ ವೊತ್ತಿನ್ ದಿವ್ಸ ನೋಡ್ರಪ್ಪ
ಕಾಣ್ಕ ಕಪ್ಪೆಲ್ಲಾ ಪೂರ
ಮುತ್ತು ಗದಗದ್ದೆ ಪೋಡಿನೊಳ್ಗೆ ಕೊಟ್ಬುಡಿ ಅಂದ್ರು
ಅಗ್ಲ್ಯೆಪ್ಪಾ ತಕೊಂಡೋಗಪ್ಪ
ನನ್ನ ಮಗಳೆಲ್ಲಿ ಅಂದ್ರು

ಅಂವ ಮಾಯ ಅಯ್ತುವ್ನೆ ನಾರಾಯ್ಣsss || **ತಂದಾನ** ||
ಮಾಯ ಆಯ್ತುವ್ನೆ || **ಮಾಯ ನಾರಾಯಣ್ಣವ್ರುssss** ||
ಮೇಲುಗಿರಿ ಬರಲಿಲ್ಲ sss || **ತಂದಾನ** ||
ಮೇಲುಗಿರಿಕಿ ಬಂದ್ನಲ್ಲಾ ನಾರಾಯ್ಣssss

ಸಾಂಬೋಗರ ಬಾವಿ ಒಳ್ಗೆ ಕೂತುಕೊಂಡು
ಸಂಪಾಗಿ ತಾನ ಮಾಡ್ತ ಅವ್ನೆ
ಕುಸ್ಮದೇವಿ ಆ ಕಟ್ಟೆ ಏರಿ ಮೇಲೆ ಕೂತ್ಕೊಂಡಿದ್ದಾಳೆ
ಯಾವ ಕಟ್ಟೆ ಏರಿ ಮೇಲಪ್ಪ?
ಸಾಮರಾಯ್ನ ಕೊಳ
ಸಾಮರಾಯ್ನ ಕೊಳ ಅಂದ್ರೆ ಕಂಬ್ರಿ ಗುಡ್ಡಲ್ಲಿ ನಿಂಗೊತ್ತಿಲ್ಲ
ಆ ಸಾಮರಾಯ್ನ ಕೊಳದಲ್ಲಿ
ತಾನ ಮಾಡ್ವಾಗ
ನಾಮಸೇವೆ ಮಾದ್ತಾ ಇದ್ದಾರೆ
ಆಗ ಕುಸ್ಮದೇವಿ ಕೂತ್ಗಂದು

ಅವ ಕಿಲಕಿಲ್ನಾ ನಗುನಾಡುತಾಳೆsss || **ತಂದಾನ** ||
ಅಯ್ಯೋ ಕಿಲ ಕಿಲ್ನ ನಗೆಯsss
ಆಡ್ಕೊಂಡು ಬರುವಾಗssss
ಗಾಳಿ ಗಾಚಾರ ಬಿಡನಿಲ್ಲsss || **ತಂದಾನ** ||

ಅಲ್ಲಪ್ಪ ನಮ್ ಕುಸ್ಮದೇವಿಗೆ
ಉಚ್ಚೆದ್ದೊ, ಬೆಪ್ಪೆದ್ದೊ
ಮಾಯೆದ್ದೊ ಒಂಟೋಗ್ ಬುಟ್ಲಲ್ಲ
ಎಲ್ಲಿ ಯಾರ್ ಮಾಡಿರ್ ಬೇಕು

ಕೊರವಂಜಿ ಕಯ್‌ಲಿ ಕಳಿಸ್ದೆ
ಅದು ಕಳಿದೆ ಓಗ್ಬುಡ್ತು
ಆಗ ಯಾರು ಅಂದ್ರೆ ಕಿಸ್ಣಪ್ಪನಾದ್ರು ಕರ್ಕೊಂಡು ಬರ್ಬೇಕು
ಆಗ ಬೀದ್ ಬೀದಿಯೊಳ್ಗೆ
ನಾರಾಯ್ಣ ಮೂರ್ತಿಯವ್ರು
ಕಿಸ್ಣಪ್ಪನ ವೇಸ ತಳ್ಬುಟ್ರು
ಕುದ್ರೆ ಕಚ್ಚೆ ಉಟ್ಗಂಡು
ಕತ್ರಿಪೇಟ ಕಟ್ಗಂಡು
ಅಂಗಾಲ್ ಗಂಟ ಪಂಚೆ ಉಟ್ಗಂಡು
ಮಾವಿನ ಮರ್ದ ಅತ್ರ ಬರ್ತಾ ಇದ್ದಾರೆ
ಸೋಲಿಗರ ಬೊಮ್ಮೆಗೌಡ್ನೋರು ವೋಗ್ತಾ ಇದ್ದಾರೆ
ಆಹಾ!
ಯಾರಪ್ಪ ಬೊಮ್ಮೆಗೌಡ್ರೆ ಪೋಡ್ಗೆ......
ಯಾರು ಯಳಂದೂರು ಕಿಸ್ಣಪ್ಪ
ಅಯ್ಯಯ್ಯೊ ಕಿಸ್ಣಪ್ಪ ನಿಮ್ಮತ್ರ ಬರ್ತಾ ಇದ್ದೆ
ಯಾಕಪ್ಪ ಬೊಮ್ಮೆಗೌಡ್ರೆ
ಒಂದ್ ಸಾಸ್ತ್ರ ನೋಡ್ಬೇಕು ಗುರು
ಒಂದ್ ಸಾಸ್ತ್ರ ನೋಡ್ಬೇಕು
ನನ್ನ ಮಗ ವೋಗಿ ಒಂಬತ್ ದಿವ್ಸ ಆಗ್ಬುಡ್ತು
ಕೊರವಂಜಿ ಕಯ್‌ಲಿ ಕಳಿಸ್ದೆ
ಇಪ್ಪತ್ತೇಳು ಮಂಡ್ಲ ಬರ್ದು ಕಳಿಸ್ದೆ ಅದು ವೋಯ್ತು
ನಿನ್ನ ಅತ್ರಕೆ ಬರ್ತಾ ಇದ್ದೆ
ಇಲ್ಲೆ ಬರ್ತಾ ಇದ್ದೆ ಬೊಮ್ಮೆಗೌಡ್ರ
ಪೋಡ್ಗೆ ಬರ್ತಾ ಇದ್ದೆ
ಅಯ್ಯ ಸ್ವಾಮಿ ನೀವ್ ಬಂದುದು ಬಾಳ ಪುಣ್ಯಪಾ
ನಮ್ಗೆ ಸಿಲ್ಪಿ ನೋಡ್ಬೇಕಪ್ಪ ಸಾಸ್ತ್ರ ನೋಡ್ಬೇಕು
ಎಲೆ ಅಡ್ಕೆ ಇದ್ದದ ಬೊಮ್ಮೆಗೌಡ್ರೆ?
ಅಯ್ಯಯ್ಯೋ ನನ್ನ ಮೂಲೆ ಚೀಲ್ದಲ್ಲಿ ಅದೆ ಇಲ್ಲೇ ನೋಡಿ ಸ್ವಾಮಿ
ಇಲ್ಲೆ ಬುಟ್ ನೋಡಿ

ಮೂರು ಪಗಡೆಯsss
ಒಂಬ್ತತ್ತು ಪಗ್ದೆ ತಗ್ದುssss
ತುಂಬ್ದ ಕಯ್ಲಂತೆ ಬಿಡುತಾರೆsss || **ತಂದಾನ** ||
ತುಂಬ್ದ ಕಯ್ಲೊಳ್ಗೆ ಬಿಡ್ತಾರೆ ನಾರಾಯ್ಣsss
ದಾಸಯ್ಯ ವಾಸ ಆಗಿದ್ದಾಳೆ sss || **ತಂದಾನ** ||
ಆದಿಲಿ ಉಡ್ಕ ಬೇಡssss

ಬೀದಿಲಿ ಉಡ್ಕ ಬೇಡsss
ಅವ ಕಾಡ ಬೀದಿಲಿ ಇರುತಾಳೆsss || **ತಂದಾನ** ||

ಬೊಮ್ಮೆಗೌಡ್ರೆ ಆದಿ ಬೀದೆಲ್ಲ ಉಡ್ಕಕಿಲ್ಲ. ….
ಕುಸ್ಮದೇವಿ ಪತ್ತೆ ಮಾಡ್ಬೇಕಾದ್ರೆ ಇದು ದಾಸಯ್ಯ ಆಗ್ಬುಟ್ಟಿದೆ
ಇದು ನಮ್ಮ ವಸಕ್ಕೆ ಸಿಕ್ಕಿಲ್ಲ
ಈ ನಮ್ಮ ವಸಕ್ಕೆ ಸಿಕ್ಬೇಕಾದ್ರೆ
ಅದ್ಕೆ ನೋಡಪ್ಪ ನಮ್ಮ ಸಾಸ್ತ್ರ ಸಂಬಂದ ಏನು ಬೇಕಿಲ್ಲ
ನಾನು ಯೇಗೆ ಮಾಡ್ತಿನಿ ಅಂದ್ರೆ
ಅವ್ರು ದಾಸಯ್ನೋರು
ಯಾರೋ ಒಬ್ಬ ಬಡದಾಸ ತೆಕ್ಕೊಂಡು ವೋಗಿದ್ದಾನೆ
ಆ ದಾಸಯ್ಯ ಉಡ್ಕಿ ಪತ್ತೆ ಮಾಡ್ಬೇಕು
ನಾನ್ ಯಾವ್ ಕಡೆಯಪ್ಪ ಉಡ್ಕೋದು
ನಾನು ಯಾವ್ ಕಡೆಯಪ್ಪ ನೋಡೋದು ಅಂದ್ಬುಟ್ಟು…. .

ಅವ್ನು ಗೋಳ್ ಗೊಳ್ನೆ ಸೋಕ ಮಾಡುತಾನsss || **ತಂದಾನ** ||

ಏ ಗೋಳ್ ಗೊಳ್ನೆ ಸೋಕ
ಮಾಡ್ಕೊಂಡು ನಾರಾಯಣ್ಗೆ

ಅಂತ ಪಾದವ ಇಡಿತಾನೆ ಕಿಸ್ಣಪ್ಪsss || **ತಂದಾನ** ||

ಏ ಬೊಮ್ಮೆಗೌಡ್ರೆ ನನ್ಯಾಕಪ್ಪ ಕಾಲಿಡ್ದಿ
ಅಯ್ಯೊ ಕಿಸ್ಣಪ್ಪ
ಒಂಬತ್ ದಿವ್ಸ ಆಯ್ತು ಕಿಸ್ಣಪ್ಪ
ನನ್ ಮಗ ವೋಗಿ
ಅಂತ ಮಗ ನಂಗೆ
ಪುಟ್ ಪಾದ್ ಮಗ ಸಿಕ್ ಬೇಕಾದ್ರೆ
ಅವ ಇದ್ದಾಗ ನೋಡಿದ್ರೆ
ನಂಗೆ ಆರಂಬ ಸಾರಂಬ
ಎಲ್ಲಾ ನನ್ಗೆ ಅನ್ಕೂಲ ಇತ್ತು
ಬಾಗ್ಯದ ಗೊಂಬೆ ಮಾಯ ಆಗ್ಬುಟ್ಟ
ಏನು ಆಗಿಲ್ಲ ಸುಮ್ಕಿರು ಬೊಮ್ಮೆಗೌಡ್ರೆ
ಆ ದಾಸಯ್ಯ ವಾಸ ಅದ್ರು ಕೂಡ ನಿನ್ನ ವಾಸ ಸೇರ್ತಾಳೆ

ನಿನಗೊಂದು ಬಾಗ ಕೊಡುತಾರೆsss || **ತಂದಾನ** ||
ಅಯ್ಯ ನಿನೊಂದು ಬಾಗssss
ಅಯ್ತದೆ ಬೊಮ್ಮೆಗೌಡsss

ಎದ್ರ ಬೇಡಯ್ಯ ಬೊಮ್ಮೆಗೌಡsss || **ತಂದಾನ** ||
ಅಯ್ಯ ಎದ್ರ ಬೇಡಯ್ಯsss
ಬೊಮ್ಮೆಗೌಡ ನೀನುsss
ಅವ ದಾಸಯ್ಯ ವಾಸ ಆಗುಬಿಟ್ಟ sss || **ತಂದಾನ** ||
ಅಯ್ಯ ದಾಸಯ್ಯ ವಾಸ ಆಗ್ಬುಟ್ಟ ಬೊಮ್ಮೆಗೌಡsss
ದುಕ್ಕ ಬೇಡಯ್ಯ ಬೊಮ್ಮೆಗೌಡsss || **ತಂದಾನ** ||

ದುಕ್ಕ ಬೇಡಯ್ಯ ಬೊಮ್ಮೆಗೌಡ್ರೆ
ದಾಸಯ್ಯ ವಾಸ ಯಾವತ್ತೊ ಆಗ್ಬುಟ್ಟ
ಇದಕ್ಕೆ ಮಂಡ್ಲ
ಅನುಮಂತ ರಂಗ ಕಳಿತೀನಿ ಅಂತೇಳಿ
ಬುಡ್ ಬುಡ್ಕಿ ವೇಸ ತಾಳ್ದಿ ಅಂತೇಳಿ
ಬುಡ್ ಬುಡ್ಕಮ್ಮ ಬಂದ್ಬುಟ್ಟೊ
ಅವ್ರು ಎಂತ ಬುಡ್ ಬುಡ್ಕಿ ದಾಸಯ್ಯ ಅಂದ್ರೆ
ಊರ ಮೇಲಿನ ದಾಸಪ್ಪ
ಎಂಗೇ ದಾಸಪ್ಪ ಅಂದ್ರೆ
ಮನೆ ಮನೆ ಮುದ್ದೆ ಮಾರಿಗುಡಿ ನಿದ್ದೆ
ಅಂತ ದಾಸಪ್ಪನತ್ರ ಒಂಟೋಗ್ ಬುಟ್ಟಿದ್ದಾಳೆ
ಕೆರಿಮನೆ ರಾಗಿ ಜೋಳ ಬಿಕ್ಸೆ ಮಾಡ ದಾಸಪ್ನೋರು

ಅವ್ರು ಊರಿಗೆ ದಾಸಪ್ಪ ಕೇರಿಗೆ ದಾಸಪ್ಪsss
ನಾಳೆ ನೋಡಪ್ಪ ಇನ್ನೊಂದ್ ಊರ್ಲಿರ್ತಾರೆsss
ಅವ್ರ ಎಲ್ಲಿ ಉಡ್ಕಿದೆ ಬೊಮ್ಮೆಗೌಡsss || **ತಂದಾನ** ||
ಅಯ್ಯಯ್ಯೋ ಕಿಸ್ಣಪ್ಪ ಇಂತ ಮಾತನ್ನು ಆಡಿದೆ ಕಿಸ್ಣಯ್ಯ
ನೀನು ಯಾವ ಕಿಸ್ಣಪ್ಪ ಆಡುತಿಯೋsss || **ತಂದಾನ** ||

ಅಂಗಾದ್ರೆ ಸಿಕ್ಕಲ್ಲವಲ್ಲ ಕಿಸ್ಣಪ್ಪ
ನಿನ್ನ ಸಾಸ್ತ್ರದಲ್ಲಿ ಸ್ವಲ್ಪ ನಿರಾಳ
ಯೇಳ್ಕಡಪ್ಪ ಅಂದ್ರು
ಪಗಡೆಯವ್ರಿಗೆ ದಾಸಪ್ನ ವಾಸ ಆಯ್ತು ಅಂದ್ರು
ತಿರ್ಗಿ ಬರ್ ಬೇಕಾದ್ರೆ ಐದುಕಾಲ್ ರೂಪಾಯಿ ಆಗ್ಬೇಕು
ಅಯ್ಯಯ್ಯೋ ನಂಚರಿ ಇಲ್ಲವಲ್ಲಪ್ಪ ಕಿಸ್ಣಪ್ಪ
ನಂಚರಿ ಇಲ್ಲ ನೋಡಪ್ಪ ತಿಂದ್ರೆ ಗೆಡ್ಡೆ ಗೆಣ್ಸು ತಿನ್ಬೇಕು
ಮನಿಕಂದ್ರೆ ಬೆಂಕಿ ಮುಂದೆ ಮನಿಕಬೇಕು

ಅವ್ರು ಮೂಲೆಯ ಚೀಲ ನೋಡುತ್ತಾರೆsss || **ತಂದಾನ** ||

ಮೂಲೆ ಚೆಲ ನೋಡ್ವಾಗ ಒಂದುಕಾಲ್ ರೂಪಾಯಿ ಸಿಕ್ಬುಡ್ತು
ಆ ಕಾಲದ ದುಡ್ಡು ಅಂದ್ರೆ ಬೆಳ್ಳಿ ದುಡ್ಡು
ಒಂದು ಕಾಲರೂಪಾಯಿ ಇದೆ ಕಿಸ್ಣಪ್ಪ ಅಂದ್ರು
ಮಡ್ಗು ನಾನು ಸ್ವಲ್ಪ ನೋಡ್ತಿನಿ ಅಂದ್ರು
ಸಿಲ್ಪಿ ನೋಡ್ದಾಗ ಕಿಸ್ಣಪ್ಪ ಅವ್ರು ಮೂರ್ ಕೈಗೆ
ಮೂರ್ ದಾರ್ಕೆ
ಆರೆ ಸಿಲ್ಪಿ ನೋಡ್ವಾಗ

ಅಲ್ಲಿ ದಾಸಯ್ನ ವಾಸವಾಗಿದ್ದಾರೆsss || **ತಂದಾನ** ||
ಏ ದಾಸಯ್ನ ವಾಸ ಆಗವ್ನೆ ಬೊಮ್ಮೆಗೌಡsss
ನೀ ಕರ್ಕೊಳ್ಳ ಬೇಡ ದಾಸಯ್ನsss || **ತಂದಾನ** ||

ಅಂವ ಎಲ್ಲಿದ್ದನು ಸ್ವಲ್ಪು ನೋಡಪ್ಪೊ
ಕಿಸ್ಣಪ್ಪ ಆ ದಾಸಪ್ಪ ಎಲ್ಲಿದ್ದನು?
ಆಗ ಕತ್ತೆತ್ತಿ ನೋಡ್ಬುಟ್ಟು
ಆ ದಾಸಪ್ಪ ಪತ್ತೆ ಮಾಡಕ ಆಗ್ತದಪ್ಪ ಬೊಮ್ಮೆಗೌಡ್ರೆ
ಅವ್ರು ಮನಿ ಮನಿ ಮುದ್ದೆ
ಮಾರಿ ಗುಡಿ ನಿದ್ದೆ
ಆದ್ರ ಉಂಡ್ಕತ್ತಾರೆ.
ಆಳ ಮಕ್ಕಾಗಿ ಮನಿಕೊತ್ತಾರೆ
ಈವೊತ್ತು ಇಲ್ಲಿರ್ತಾರೆ
ನಾಳೆ ಸಾದ್ ನುಂಡೀಲಿ ಇರ್ತಾರೆ
ಅದು ಬಿಟ್ಮೇಲೆ ನಾಳೆ ವಂಗ್ನೂರ್ಲಿ ಇರ್ತಾರೆ
ಎಲ್ಲಿಂದಪ ನಾ ನೋಡದು
ಆಗಂದ್ ಬುಟ್ಟು ಸುಳ್ ಮಾತಾಡ್ ಬುಟ್ರ
ಯಾರು ಅರಿನಾರಾಯ್ಣ ದೇವ್ರು
ಕಿಸ್ಣಪ್ಪ ಆಗಿ ರೂಪ ತಾಳ್ಕಂಡು
ಮಾಯ ಮಾಡ್ಬುಟ್ಟು ಅಯ್ಯೋ ಕಿಸ್ಣಪ್ಪ
ಮತ್ತೇನಪ್ಪ ಕಿಸ್ಣಪ್ಪ ಮಾಡ್ಬೇಕು
ಅದ್ಕೆ ಅವ್ರಿಗೆ ನಾವ್ ಮಾಡ್ಬೇಕಾದ್ರೆ
ಮಂತ್ರ ಮಾಯ ಏನು ಬೇಕಿಲ್ಲ?
ಅವರಿಂಚೆ ಅವ್ರೆ ಬರ್ತಾರೆ
ನಿನ್ನಿಚ್ಚೆ ನೀನಿರು
ಆದ್ರೆ ನಂಜೀವ ತಡೆಲಪ್ಪಾ
ಕಿಸ್ಣಪ್ಪ ನಂಜೀವ ತಡೆಲ್ಲಾ
ನನ್ನ ಮಗ ಪುಟ್ ಪಾದ್ ಮಗ

ಒಂಟೋಗ್ ಬುಟ್ಟು
ಏನಪ್ಪ ಮಾಡ್ಬೇಕು ನಾನು?

ಅಂವ ಗೊಳ್ ಗೋಳು ಅಂತ ಆಳುತ್ತಾನೆsss || **ತಂದಾನ** ||
ರಾಮsss ರಾಮsss
ಅವ್ರು ಮಾಯದ ರೂಪ ಲಕ್ತವ್ರೆ ನಾರಾಯ್ಣsss
ಅವ್ರು ಮಾಯದ ಸಂತೆ ಬರುತ್ತಾರೆsss || **ತಂದಾನ** ||

ಮಾಯದ ರೂಪದಲ್ಲಿ ಕಿಸ್ಣಪ್ಪ
ಅವ್ರು ಯೇಳ್ಬುಟ್ರು
ರಂಗಿಯವ್ರ ಆತ್ರ ಬಂದ್ನ
ಬೊಮ್ಮೆಗೌಡ ಬಂದು
ಅಮ್ಮೆ ನನ್ ಮಡ್ದೆ
ನನ್ ಮಗಳ್ ನೋಡ್ದೆ ಅಂದ
ನಾನು ಕಿಸ್ಣಪ್ಪ ಅತ್ರ ವೋಗಿದೆ
ಅವ್ರು ಸಾಸ್ತ್ರದಲ್ಲಿ ದಾಸಪ್ನತ್ರ ಅವ್ಳೆ ಅಂದ್ರು
ನನ್ಗೆ ಮೂರ್ ದಿವ್ಸ ಆಯ್ತು ಊಟ ಮಾಡಿ
ತಿರ್ಗಿ ತಿರ್ಗಿ ಮೂರ್ ದಿವ್ಸ ಆಯ್ತು
ಏನಪ್ಪ ಮಾಡಿದ್ದ ಆಡ್ಗೆ ಅಂತೇಳಿದ್ರು
ಇಲ್ಲ ಮಾರಾಯ
ಈವೊತ್ತು ಸಾಸಿವೆ ಸೊಪ್ ಆಡ್ಗೆ ಅಂದ್ರು
(ಸಾಸಿವೆ ಸೊಪ್ಪು ಆಡ್ಗೆ ಅಂದ್ರೆ ಆರ್ಥ ಆಗ್ತದ)
ಸಾಸಿವೆ ಸೊಪ್ಪು ಆಗ್ಲಿ ಕೊಡಪ್ಪ
ರಾಗಿ ಊಟ ಮಾಡ್ತಿನಿ
ನನ್ನ ಮಗ್ಳು ಸಿಕ್ಲಿಲ್ಲ
ನನ್ನ ಮಗ್ಳಾಸೆ ನನ್ಗಿಲ್ಲ
ನನ್ನಾಸೆ ನಿಂಗಿಲ್ಲ
ಅಂತ ಬಾಳ್ ಬಂದುಡ್ತು ನನಗೆ ಅಂದ್ಬುಟ್ಟು
ಅಲ್ಲ ಕಣೆ ನಾನು ಇಂತ ಅಡವಿ ಒಳ್ಗಿದ್ದು
ಆನೆ ಉಲಿ ಕರ್ಡಿ ಕಾಡೆಮ್ಮೆ ಮದ್ಯೆ ಇದ್ದು
ಆ ಉಡ್ಗಿ ಪತ್ತೆ ಮಾಡಕೆ
ನಮ್ಗೆ ಅವಕಾಸ ಇಲ್ದೆ ವೊಯ್ತಲ್ಲ ಅಂದ್ಬುಟ್ಟು
ಆಹಾ ತಾಯಾಗಿಕ್ಕಿಂತ
ಎತ್ತ ತಾಯಿ ಗರ್ಬದಲ್ಲಿ ಮಡ್ಗಿದ್ದವ

ಅವ ದುಕ್ಕ ಮಾಡುತ್ತ ಅಳುತಾಳೆ sss || **ತಂದಾನ** ||
ಅಯ್ಯ ದುಕ್ಕ ಮಾಡಂತ ಅಳ್ತವ್ರೆ ರಂಗಮ್ಮsss
ಅಳ್ಬೇಡ ಕಾಣೆ ಸುಮನಿರೆsss || **ತಂದಾನ** ||

ಸೋಲಿಗರ ಬೊಮ್ಮೆಗೌಡ್ನ ಮಕ್ಕ ಮರಿ
ಯೆಣ್ಣು ಗಂಡಿನ ಗೋಳು ನೋಡ್ಬುಟ್ಟು
ಆಗಲ್ ಗಾತ್ರ ಸಂಕು
ಮುಗಲ್ ಗಾತ್ರ ಜೆಗ್ಟೆ ಇಟುಕೊಂಡು
ಈ ಜಗದೊಡೆಯ ಗದ್ಗಿ ಅತ್ರ ಬಂದ
ಎಲ್ಗೆ?
ಗುರುವಿನ ಗದ್ಗೆ ಅತ್ರ
ಆಹಾ ದಾಸಪ್ಪ ಯಾವೂರಪ್ಪ ನೀವು?
ನಾನು ವಂಗ್ನೂರಪ್ಪ
ವಂಗ್ನೂರ್ ದಾಸಪ್ಪ ನೀವು
ಯಾವಾಗ್ ಬಂದೆ?
ಅನುಮಂತ ರಾಯ್ನ ಗುಡಿಯಲ್ಲಿಂದ ಬಂದ್ದಿದೀನಿ
ಯಾಕಯ್ಯ ದುಕ್ಕ ಮಾಡ್ದೆ
ಅಯ್ಯಯ್ಯೋ ಯಾ ದುಕ್ಕ ಯೇಳ್ಳಿ ದಾಸಪ್ಪ?
ನನ್ನ ಮಗ ಕುಸ್ಮಾಲೆ ದಾಸಪ್ಪ ತಗಂಡೋಗಿದ್ದಾನೆ?
ದಾಸಪ್ಪ ತೆಕೊಂಡೋಗಿದ್ದಾನೆ
ಸಾಸ್ತ್ರ ಸಂಬಂದ ಮಾಡಿ ವಿದ್ಯೆ ಅಲ್ಲ
ದಾಸಪ್ಪ ತೆಕೊಂಡೋದ್ರು ಅಂತಾರಲ್ಲ
ವಂಗ್ನೂರಿಂದ ಬಂದ್ರಲ್ಲ
ನೀವಾದ್ರು ಕಂಡ್ರಪ್ಪ ದಾಸಪ್ಪ
ನಾನು ದಾಸಪ್ಪನೆ ಕರ್ಕೊಂಡೋದವ್ನು ದಾಸಪ್ನೆ
ದಾಸಯ್ಯ ಅಂದ್ರೆ ಅವ್ರು ನಾಮ ಉಂಟಪ್ಪ
ನಾಮ ಆ ರುದ್ರಪ್ಪ
ನಂಗೇನು ಗೊತ್ತಿಲ್ಲ ಸ್ವಾಮಿ ದಾಸಪ್ಪ
ನಂಗೇನು ಗೊತ್ತಿಲ್ಲ ಸ್ವಾಮಿ ದಾಸಪ್ಪ
ನಂಗೇನು ಗೊತ್ತಿಲ್ಲ
ನನ್ನ ಮಗ್ನ ಕರ್ಕಡೋಗಿ ಎಲೊ ಮಾಯ ಆಯ್ತು
ಕಂಬ್ರಿ ಬುಡಕ್ಕೆ ಗೆಡ್ಡೆ ಗೆಣಸ್ಗೆ ವೋದವ್ನೆ ಮಾಯ ಆಗ್ಬುಟ್ಟ
ಆ ದಾಸಪ್ಪ ಅಂದ್ರೆ ವೊಟ್ಟೆ ಮೇಲೆ ಬಟ್ಟ ನಾಮ ಇತ್ತು
ತೋಳ ಮೇಲೆ ತೋಳ್ಸ ನಾಮ ಇಡ್ತಾರೆ
ಕಳ್ಳಗುಳಿ ಒಳ್ಗೆ ಕಳ್ಳನಾಮ ಇಡ್ತಾರೆ
ಅವ ಏನಾದ್ರು ಕರ್ಕಂಡೋಗಿದ್ರೆ

ನೀನೆ ಸ್ವಲ್ಪ ನೋಡ್ಬೇಕಲ್ಲ ಅಂದ್ಬುಟ್ಟು
ನೀವಾದ್ರು ನೋಡು ದಾಸಪ್ಪ
ಊರೂರ್ ಮೇಲ್ ವೋಯ್ತಿಯಲ್ಲ
ಅವ್ವ ನಾ ಊರೂರ್ ಮ್ಯಾಲ್ ಯಾವ್ದ
ಈಗ ಪೋಡಿಗೆ ಬಂದಿವ್ನಿ

ಈಗ ಪೋಡಿಗೆ ಬಂದಿವ್ನಿ ನಾಡಿನ ದಾಸಯ್ಯsss
ದಾನ ದರ್ಮವ ನೀಡಯ್ಯ sss || **ತಂದಾನ** ||
ನಾಡಿನ ದಾಸಯ್ಯ ಪೋಡಿಗೆ ಬಂದವ್ನೆsss
ದಾನವ ಅಂತೆ ಸಾರುತಾನೆsss || **ತಂದಾನ** ||
ನಾವು ಕಾಡನ್ನು ಕಡಿದಿಮಿsss
ಪೋಡನ್ನು ಮಾಡಿಮಿsss
ಪೋಡಿಗೆ ಇನ್ನು ಬರನಿಲ್ಲsss || **ತಂದಾನ** ||
ಅಲ್ಲ ದಾಸಪ್ಪ

ಈ ಕಾಡ್ನ ಕಡ್ದು ಪೋಡ್ ಮಾಡ್ಬಿಟ್ಟು
ನನ್ನ ಮಗ ಈವೋತ್ತು ವೋದ್ಗಲ್ಲ
ಅಗೆ ಬದ್ಕು ಬಾಳೆಲ್ಲ ಆಳಾಗೊಯ್ತು
ನೀವಾದ್ರು ಸ್ವಲ್ಪ ಪತ್ತೆ ಮಾಡ್ಯೆಪ್ಪ
ನೋಡಪ್ಪ ಸಂಕಿನ ಊದ್ದೀಮಿ
ನಾವು ಸಂಕ್ ಊದ್ಕಂಡ್ ವೋಗವ್ರು
ನಾವು ಆರು ಅಂದ್ರೆ
ಕನಕದಾಸ್ರು
ಕಾಡ ದಾಸ್ರು
ಊರಿಬತ್ತಿ ದಾಸ್ರು
ವೊಟ್ಟೆದಾಸ್ರು
ಬಟ್ಟೆದಾಸ್ರು
ಅಂದ್ರೆ ವೊಟ್ಟೆಗೋಸ್ಕರ ಊರ ಮ್ಯಾಗ ವೋಗವ್ರು
ವೊಟ್ಗೆ ಗೋಸ್ಕರ ಕೇರಿ ಮ್ಯಾಲೆ ವೋಗಿ
ರಾಗಿ ಜೋಳಕ್ಕೊಸ್ಕರ ಮನೆ ಮನೆ ಸಂಕ ಊದ್ದೀಮಿ
ಜಗಟೆ ಬಾರಸ್ತಿಮಿ
ನಮ್ಗ ನಿನ್ನ ಮಗ್ನ ಪತ್ತೆ ಮಾಡಕ್ಕಾದ್ದಮ್ಮ
ಯಾಕಾದ್ರು ಮಾಡಿ ಪತ್ತೆ ಮಾಡ್ಬೇಕಲ್ಲಪ್ಪ
ಇರ್ಲಿ ಇರ್ಲಿ
ಆಂಗಾದ್ ಮ್ಯಾಲೆ ಇದ್ರ ಮರ್ಮ ತಿಳಿಬೇಕು
ಅಂದ್ಬುಟ್ಟು ನಾರಾಯ್ಣ

ಸ್ವಾಮಿ ಇನ್ನೊಂದು ರೂಪ ತಾಳುತಾರೆsss || **ತಂದಾನ** ||
ಇನ್ನೊಂದು ರೂಪ ತಾಳ್ಕೊಂಡು ನಾರಾಯಣsss
ಮೆಲ್ ಮೆಲ್ಗೆ ಸ್ವಾಮಿ ಬರುತಾರೆsss || **ತಂದಾನ** ||

## ೬. ಬಿಳಿಗಿರಿ ರಂಗನ ಕಾವ್ಯ (೮)

ಮೆಲ್ ಮೆಲ್ಗೆ ಯಿಂಗೆ ಬತ್ರಾನೆ
ಅವ್ರು ಬುಡ್ ಬುಡ್ಕಿ ವೇಸ ಅಂದ್ರೆ
ಬುಡ್ ಬುಡ್ಕಣ್ಣ ಬುಡವೆ ಸಣ್ಣ
ಸೋಲಿಗರ ಬೋಮ್ಮೆಗೌಡ್ನ ಮಗಳ ನಡುವೆ ಸಣ್ಣ
ಆಹಾ ಯಾವ್ದಿದು ಬುಡ್ ಬುಡ್ಕಣ್ಣ
ಸೋಲಿಗರ ಬೊಮ್ಮೆಗೌಡ್ನ ಮಗಳ ನಡ್ವೆ ಸಣ್ಣ
ಅಂತ ಸಾರ್ಕೊಂಡು ಬತ್ರಾರಲ್ಲ
ಅಯ್ಯೋ ಅಡೇನಪ್ಪ ದಾಸಪ್ಪ ಬಪ್ಪ ಬಪ್ಪ
ನೀವಾರು ನೀವು?
ಬುಡ್ ಬುಡ್ಕ್ಯಮ್ಮ
ಬುಡ್ ಬುಡ್ಕ್ಯೇವು ನಾವು ಗುಟ್ಟಿಟ್ಟಿ...... ಸಾರವು
ಅದೆಂಗಪ್ಪ ನೀವೆಳ್ದದು
ಸೋಲಿಗರ್ ಬೊಮ್ಮೆಗೌಡ್ನ ಮಗ್ಳ
ನಡ್ವೆ ಸಣ್ಣ ಅಂತ ಅದೆಂಗೇಳ್ದೆ
ಕಾಡೋಳಗಿದ್ದಾರೆ
ಊರೋಳಗಿದ್ದಾರೆ
ನಡುಸಣ್ಣದ ಕುಸ್ಮದೇವಿ
ಅದನ್ನಾನು ಕಂಡ್ಬುಟ್ಟು ಬಂದಿದ್ದೀನಿ
ಅದಕ್ಕೋಸ್ಕರ ಬುಡ್ ಬುಡ್ಕ್ಯವು
ಯೇಳ್ತಾರೆ ಕೇಳ್ರಪ್ಪ ಅಂದದು
ಅಯ್ಯೋ ನಮ್ಮಪ್ಪ ನೀನಾದ್ರು
ಪತ್ತೆ ಮಾಡ್ ಕೊಡ್ಬೇಕು
ನಿನ್ಗ ನಾವು ಏನಾದ್ರು
ಅಟ್ಟಿದನ ಇಲ್ಲ
ಅಟ್ಟಲಿ ಕರ ಇಲ್ಲ
ಹುಂಡಿಲ್ಲ
ಬಂಡಿಲ್ಲ

ನಿನ್ಗೆ ಮಾರ್ಯ್ರಾರು ಕೊಟ್ಬುಡಕೆ……

ಮಣ್ಣಿನ್ ಗಡ್ಗೆ ಒಳ್ಗೆ ನೀರ್ ಕುಡಿಬೇಕಪ್ಪ
ಬುಡ್ ಬುಡ್ಕಿ ವೇಸದವ್ರೆ
ದಾಸಪ್ಪನವ್ರೆ ನೀವು

ನಂಗೊಂದು ಉತ್ಸವ್ ಕೊಡುಬೇಕು sss **|| ತಂದಾನ ||**

ಆಹಾ ಪಾಪ ಕುಡಿಯೋಕೆ
ನೀರ್ಗೆ ಮಣ್ಣ ಕರ್ಗೆಯನ್ನು ನಾಡೋಳ್ಗೆ ತರ್ಬೇಕು
ಅದ್ರಲ್ಲಿ ಕುಡಿಬೇಕು ಸಾಸಿವೆ ಸೊಪ್ಪ ತಿನ್ನಬೇಕು
ಎಡ್ಡನ ಕೀರೆಸೊಪ್ಪ ತಿನ್ಬೇಕು
ಪೋಡ್ಗಿ ಗೆಡ್ಡೆಗೆಣಸ್ನ ತರ್ಬೇಕು
ವೊಟ್ಟೆ ತುಂಬ ಉಂಡ್ಕಂದ್
ಮನ್ಸ್ಗೆ ತ್ರಿದ್ದಂತ ಮಗ್ಳು ಈಗ ವೋಗ್ಬುಟ್ಟ
ಬುಡ್ ಬುಡ್ಕ್ಯೇವ್ರೆ ಅಂದ್ರು
ಅವ್ರನ್ನ ಬರ್ ಮಾಡ್ಬುಡ್ತಿನಿ
ಏನೇನ್ ಕೊಡ್ಬೇಕು ಅಂದ್ರೆ
ಮ್ಯಾ ಎಂಬ ಆಡ್ ಕೊಡ್ಬೇಕು
ನಮ್ಮಪ್ಪ ಮರಿ ಅಂದ್ರೆ ಏನಪ್ಪ
ನಾವು ಅಂದ್ರು ಏನಪ್ಪ
ನಮ್ಮಿಂದಾಗಲಪ್ಪ
ಮರಿ ಇಲ್ದ ಮೇಲೆ ನಮ್ಗಳ್ಗೆ ರಂಗ ಆಕಕಾಗಲ್ಲ
ಪೋಡ್ಲಿರೊ ಮನೇಲಿ ರಂಗ ಆಕಕಾಗಲ್ಲ
ಅದ್ಕೆ…… ಎಪ್ಪತ್ತೇಳು ಮಂಡಲ ಬರ್ಧು
ಗಾಳಿ ಗಾಚಾರ
ದಾಸಯ್ಯ ಕರ್ಕೊಂಡೋದ್ರು
ಅಂದರು ಸಾಸ್ತ್ರದಲ್ಲಿ ಸುಳ್ಳು
ದಾಸಪ್ಪ ನಿನ್ನ ಮಗಳೇಕಪ್ಪ ಕರ್ಕೊಂಡೋದದು

ಅಯ್ಯ ದಾಸಯ್ಯ ವೇಸದssss
ಈಸರು ನೋಡಿಲ್ಲssss
ದಾಸಯ್ಯ ವೇಸ ನೋಡಿರಪ್ಪsss **|| ತಂದಾನ ||**
ಅಯ್ಯ ದಾಸಯ್ಯ ಮಾತೆಲ್ಲ
ಕುಣಕ್ಕೊಂಡು ನಾರಾಯ್ಣ
ಬೊಮ್ಮೆಗೌಡ್ರ ಪೋಡಿಗೆ ಬರುತ್ತಾರೆsss **|| ತಂದಾನ ||**

ಏಯ್ ಈ ದಾಸಯ್ಯ ಮಾತೇನು ಕಟ್ಟೇಡಿ.
ಈ ಬುಡ್ ಬುಡ್ಕ್ಯವ್ರ ಮಾತೇನು ಕಟ್ಟಕಾಗಲ್ಲ
ಪೋಡು ಪೊನ್ನಾಚಿ ಒಳ್ಗೆ ಒಬ್ಬ ಉಡ್ಕಬೇಕು
ನಮ್ಮ ಜಾತಿಯವ್ರು ಇದ್ರೆ ಅಲ್ಲೆಲ್ಲಾರ ಒಂಟೋಯ್ತರೆ
ಕಳ್ಳರ ಬೆಟ್ಟ
ಕಾಳಮಾರಿ
ಮಲ್ಕಿಬೆಟ್ಟ
ಕೊಳ್ಳಬಾವಿ
ಬೆಜ್ಜಗುಂಡಿ
ದೊಡ್ಡ ಸಂಪ್ಗೆ ಪೋಡು.
ಎಲ್ಲಾ ಪೋಡೆಲ್ಲಾ ನೋಡ್ಕ ಬಂದ್ರು
ಏನಮ್ಮ ಕುಸ್ಮದೇವಿ ಬಂದಿದಳಪ್ಪ
ಅಯ್ಯಯ್ಯೋ ಇಲ್ಲಿಗ್ಯಾಗಪ್ಪ ಬಂದ್ರು
ಆಹಾ ಬೊಮ್ಮೆ ಗೌಡ್ರ
ಅವ್ರು ಬರರ್ಲಿಲ್ಲ ಕಾ ಮಾವ
ಅವ್ರು ಬಂದಿದ್ರೆ ನಾವು ಬುಡ್ತಿಲ್ಲ ಮಾವ
ನಾವ್ ಬುಡ್ತಿಲ್ಲ ಬಾವ ಅಂದ್ರು
ಅಯ್ಯಯ್ಯೋ ಮತ್ತೇನಪ್ಪ ಅಂದ್ರು

ನೀನೊಂದು ಮೊರ ಸಾಸ್ತ್ರ ಬುಡಪ್ಪsss

ಒಂದ್ ಮೊರ ನೀ ಬುಡು
ದಾಸೇಗೌಡ ನನ್ ಮಗ ಎಲ್ಲೋ……
ದಾಸೇಗೌಡ್ರ ಅಟ್ಟಿ ಒಳ್ಗೆ ಸಾಸ್ತ್ರ ಬುಟ್ಟಾಗ

ದಾಸಯ್ಯ ವಾಸ ಆಗಿದ್ದಾಳೆ sss **|| ತಂದಾನ ||**
ಅಲ್ಲಿ ದಾಸಯ್ಯ ವಾಸ ಆಗವ್ಳೆssss
ಅವ ಕುಸ್ಮದೇವಿ ನಿಮ್ಗ ಸಿಕ್ಕಿದಿಲ್ಲsss **|| ತಂದಾನ ||**

ಕುಸ್ಮದೇವಿಯವ್ರು ಸಿಕ್ಕಿಲ್ಲ
ಯಾಕ ನೀವು ಸಾಕಾದ್ರಿ
ಅವ್ರು ನೋಡಿದ್ರೆ ದೇವೆಂದ್ರನಂತೆ
ದೇವಗಂತಿ, ದೇವೇಂದ್ರನ ಮಗ
ದೇವಗಂತಿ ಕುಸ್ಮದೇವಿ
ಅವ್ರು ಹೋಗಿ ಸೇರಿದ ಸ್ತಳ ನನ್ಗೂ ಗೊತ್ತಿಲ್ಲ
ನಿನ್ಗೂ ಗೊತ್ತಿಲ್ಲ

ನೀಲ್ಗಿರಿ ಕೈಲಾಸ್ದಲ್ಲಿ
ಅವ್ರು ಅನುಮಂತನ ಗವಿ ಒಳಗಿದ್ದಾರೆ

ಅವ್ರು ಇದ್ದು ಬುದ್ಧಿಯ ಹೇಳುತ್ತಾರೆsss **॥ ತಂದಾನ ॥**
ಇದ್ದು ಬುದ್ಧಿಯ ಯೇಳ್ತಾರೆ ನಾರಾಯ್ಣsss
ಬುದ್ಧಿ ಕಾರ್ಯವ ಯೇಳುತ್ತಾರೆsss **॥ ತಂದಾನ ॥**

ಬುದ್ದಿ ಕಾರ್ಯವ ಯೇಳ್ಬುಟ್ಟು ಏನ್ ಮಾಡ್ತ ಇದ್ದಾನೆ?
ನಿನ್ನ ಮಗ್ನ ಉಡ್ಕಬೇಕಾದ್ರೆ ನಾನೇ ನಿಮ್ಮಿಬ್ರಿಂದಾಗಲ್ಲ
ಯಾವ್ಯಾವ ಪೋಡ್ ವೋಗಿದ್ದಯ್ಯ?
ಮೊಬ್ಬೆಗೌಡ್ರೆ ಯಾವ್ ಪೋಡ್ ವೋಗಿದ್ರಿ?
ಅಯ್ಯಯ್ಯೋ ದಾಸಪ್ಪ ಕಾಳಮಾರಿ
ಕಳ್ಳರಬೆಟ್ಟ
ಸೀಗೆಬೆಟ್ಟ
ಮಂಜಿಗುಂಡಿ
ಪುರಾಣಿ
ಅಲ್ಲಿಂದ ವೋಗಿ ದೊಡ್ಡ ಸಂಪ್ಗೆ ಪೋಡ್ನೆಲ್ಲ
ಉಡ್ಕುದಿ ಎಲ್ಲೂ ಇಲ್ಲ
ನೀ ಯಾಕಪ್ಪ ಬೊಮ್ಮೆಗೌಡ್ರ ಸಾಕಾದರಿ
ನಿನ್ನ ವೊಟ್ಟೆಪಾಡ್ ನೋಡ್ಕ ನೀನು
ಅವ್ರು ನಿನ್ ಕೈಗೆ ಸಿಕ್ಕಲ್ಲ ಇನ್ನು

ಅವ್ರು ಕಂಬ್ರಿ ಗುಡ್ಡಲ್ಲಿ ಇರುತ್ತಾರೆsss **॥ ತಂದಾನ ॥**
ತಿಂಗಾಳು ಮುಣುಗಿದವೊssss
ರಂಗೋಲಿ ಬೆಳಗಿದವೋssss
ಎದ್ದರಿ ತೊಳಸಮ್ಮsss
ಬಲ್ಚರಿ ಲಕ್ಸಮ್ ದೇವಿsss
ನೆಟ್ಟ ನಡುವೆ ನಾರಾಯ್ಣ ಕೂತುಕೊಂಡು sss **॥ ತಿಂಗಳು ॥**
ಗೊನೆಬಿಟ್ಟು ರಂಗಯ್ಯsss
ತಿಂಗಳು ಪೂಜೆ ನಿನಗಾದುsss
ಅಳ್ಳ ಕೊಳ್ಳಿರಯ ನೀರು
ಬೆಳ್ಳೀಲಿ ಕಯ್ಯ ಚಂಬುsss
ಇಲ್ಲಿ ರಂಗಯ್ಯ ಸಿವಪೂಜೆsss **॥ ತಿಂಗಳು ॥**

ಇಲ್ಲಿ ರಂಗಯ್ಯನಂತೆ

ಸಿವಪೂಜೆ ನಡಿವಾಗsss

ಆಕಾಸೆ ಗಂಗೆ ಗಣಿರೆಂದೋ sss **|| ತಿಂಗಳು ||**

ನಾರಾಯಣ ಮೂರ್ತಿಯವ್ರು

ಅವ್ರು ಕಿಸ್ಣನ್ ಕಟ್ಟೇಲ ಕೂತಿದ್ದಾರೆsss**|| ತಂದಾನ ||**

ತಾಯಿಯವ್ರು ಏನಾಂದ್ರೆ

ಬೆಂಗಳೂರು

ಬೀರಳ್ಳಿ

ಹೆಗ್ಗಡದೇವನ ಕೋಟೆ

ರಂಜಕಲ್ಲು

ಪಿರಿಯಾಪಟ್ಣ

ಯಳಂದೂರು ಎಲ್ಲಾ ಉಡುಕುದ್ರು

ಈ ದಾಸ್ಗಳು ಸಿಕ್ನಿಲ್ಲ

ಅಯ್ಯಯ್ಯೋ ದಾಸ್ಗಳು

ನಾವು ವೈದಿಕ ಮಾಡ್ಬೇಕಾದ್ರೆ

ಏನೇನ್ ಆಗ್ ಬೇಕಪ್ಪ ಅಂದ್ರೆ

ಐದು ಮಂದಿ ದಾಸ್ರಾಗಬೇಕು

ಒಂದ್ ದಾಸಪ್ಪ ಸಿಕ್ ಬುಟ್ರೆ ನಂಗೆ

ದಾಸೋಹ ಮಾಡ್ಬೇಕಲ್ಲ ಅಂತಯೋಚ್ನೆ ಮಾಡ್ತಾ ಬರ್ತಾಯಿದ್ರು

ದಾಸ್ಗಳೆ ಇಲ್ಲ

ತಲೆ ಮ್ಯಾಲೆ ಸೆರ್ಗಟ್ಗೋ ಬರ್ವಾಗ

ಕಿಸ್ಣನ ಕಟ್ಟೇಲಿ ಕೂತಿದಾರೆ ದಾಸಪ್ಪೋರು

ಗಡ್ಡ ನೋಡುದ್ರೆ ಗೊಬ್ಳಿ ಮುಳ್ಳು ಮಾಡ್ಕಂಡು

ಗೊಬ್ಳಿ ಮೂಳ್ನಾಗ್ ಬಿಟ್ಕಂಡು ಕುಂತವ್ರೆ

ಚೋಳ್ಗಯಿಡ್ಕಂದ್ ಕುಂತವ್ರೆ

ಇಲ್ಲಿ ಕುಂತವ್ರೆ ನೋಡಕ್ಕ ದಾಸ್ಗೋಳು

ಯಾವೂರಪ್ಪ ದಾಸಪ್ಪ ಅಂದ್ರು

ಮಲಿಗಿರೊ ನಾರಾಯಣ ಎಲ್ಲಮ್ಮ ಹೋಗಿದ್ರಿ?

ಅಯ್ಯೋ ನಮ್ಮ ದಾಸಪ್ಪಟ್ಟಿಲಿ

ನಮ್ಮ ಯಜಮಾನ್ರು ತಿರ್ಕೊಂಡು ನೋಡಪ್ಪ ದಾಸಪ್ಪ

ಅನ್ನೇಡ್ ದಿವ್ಸ ಕರಟ್ಟಾಯ್ತು

ವೈದಿಕ ಮಾಡ್ಬೇಕು ಈವೊತ್ತು

ನೀನು ಬರ್ಬೇಕು ದಾಸಪ್ಪ

ದಾಸಪ್ನ ಉಡ್ಕಿ ಉಡ್ಕಿ ಸಾಕಾಗೊಯ್ತು

ಏನಮ್ಮ ನೀವ್ ನೋಡಿದ್ರೆ ವಯ್ಸಾದುಡ್ಗೀರು
ನಿಮ್ಮ ಜೊತೆ ನಾ ಬರಕಾಗಲ್ಲ
ನೀವ್ ಮುಂದೆ ಮುಂದೆ ನಡಿರಪ್ಪ
ನಾನು ಯಿಂದಿಂದೆ ಬರ್ತೀನಿ ಅಂದ್ರು
ಅಕ್ಕ ಓಡ್ಬುಟ್ರೆ ಕಸ್ಟ ಮುದ್ಕಪ್ನ ನಂಬಕಾಗಲ್ಲ
ದಾಸಪ್ಪ ಬೊಳ್ಳ ಬೊಳ್ಳಗೆ ಕರ್ಕಂಡೋಯ್ತಿನಿ ಬಪ್ಪ
ಇಲ್ಲ ನಡ್ರವ್ವ ನಾ ಯಿಂದಿಂದೆ ಬರ್ತೀನಿ ಅಂದ್ಬುಟ್ಟು

ಮೆಲ್ ಮೆಲ್ಗೆ ದಾಸಪ್ಪ ಬರುತ್ತಾರೆsss **|| ತಂದಾನ ||**
ಮೇಲ್ ಮಲ್ಗೆ ದಾಸಪ್ಪ ಬರ್ತಾನೆsss

ಆಹಾ!
ದಾಸಪ್ಪ ಬರ್ತಾನೆ ಅಂದ್ಬುಟ್ಟು
ಎಡ್ಕ ಬಲ್ಕ ನೋಡ್ಬುಟ್ಟು
ಆಗ ನಾರಾಯ್ಣ ಎಲ್ಲಿ ಕುಂತಿದ್ದಾರೆ?

ಅವ್ರು ಕುಂಬಾರ ದೇವಪ್ನ ಕೊಳದಲ್ಲಿ ಕುಂತಿದ್ದಾರೆsss **|| ತಂದಾನ ||**

ಸಾವಿರ ಬೀದಿ ನಡುವೊತ್ತಿಗೆ ನಡುವೆ ಕುಂತುಬುಟ್ಟಿದ್ದಾರೆ
ಅಲ್ಲಪ್ಪ ಯಾವಾಗ ಬಂದ್ಯೆಪ್ಪ ಮುದ್ಕಪ್ಪ
ಅಯ್ಯಯ್ಯೋ ತಾಯಿ
ನಿಮ್ಕೊಂಡ್ಗೆ ಬಂದೀಕಾಣಮ್ಮ ನಾನು
ಲಚ್ಚಮಿ ಯಾವ್ ನ್ಯಾರಕ್ ಬಂದ್ನಕ್ಕ
ಅರಿನಾರಾಯಣಣ್ಗೆ ಗೊತ್ತು ನಂಗೊತ್ತಿಲ
ಅಯ್ಯ ವಂದ್ಗೆ ನಡಿಯಪ್ಪ
ಆನೆ ಬರ್ತದೆ, ಉಲಿಬತ್ರದೆ
ಅಮ್ಮ ನನ್ ಮಂಡಿಯೆಲ್ಲಾ ಕಟ್ಕೋಗ್ ಬುಟ್ಟಿದೆ
ನನ್ಗ ನೇತ್ರ ಕಾಣಲ್ಲ
ತಪ್ರ ಸಾಡ್ಕಂಡು ಬತ್ತಿನಿ
ನನ್ನ ದಾಸಪ್ನ ನಾರಾಯ್ಣ
ವೈದಿಕ ಅಂದ್ರೆ ತುಂಬಾ ಆಸೆ
ನಾನ್ ಬಂದು ದಾಸೋಹ ಮಾಡ್ತಿನಿ
ನಡ್ರಮ ಅಂದ್ಬುಟ್ಟು ಬಂದು

ಅಮ ವೈರು ಮುಡೀಲಿ ನಿಂತಿದ್ದಾನೆsss **|| ತಂದಾನ ||**

ವೈರ್ ಮುಡಿ ನಾಗಾಳ ಬರವೊತ್ತಿಗೆ
ಇತ್ರಿಬುರ್ಗಿ ಮ್ಯಾಲೆ ಕೂತಿದ್ದಾನೆ
ಅಪ್ಪ ಇಂತ ಮಾಯದವ್ರು ಎಲ್ಲೂ ಇಲ್ಲ
ಯಾರಕ್ಕ ಇವ್ರು
ಆಗ ಏನ್ಮಾಡ್ತ ಇದ್ದಾರೆ?
ಅನ್ನ ಬೆಳೆ ಪಾಯ್ಸ ಎಲ್ಲಾ ಮಾಡಿ
ದಾಸೋಹ ಮಾಡ್ಬೇಕು
ಹೋಗಪ್ಪ ಪೂಜೆ ಮಾಡಿ ಅಂದ್ರು
ಆಗ ಇರೊಂಬತ್ ಕೋಟಿ
ಜೀವರಾಸಿಗಳೆಲ್ಲಾ ಪೂರಾ ಕರ್ದುಬುಟ್ರು
ಕರ್ದುಬುಟ್ರು ಮಾಡಿದನ್ನವೆಲ್ಲಾ
ಮಾಯಾ ಆಗೋಯ್ತು
ಅಟ್ಟ ಅನ್ನವನ್ನೆಲ್ಲಾ ಉಟಮಾಡ್ಬುಟ್ಟು

ಅಂತ ಬುಗ್ ಬುಗ್ನ ಸಂಕ ಊದುತ್ತಾರೆsss **|| ತಂದಾನ ||**
ಬುಗ್ ಬುಗ್ನೆ ಸುಂಕ ಊದ್ಕಂಡು ನಾರಾಯ್ಣsss
ಊಟ ಮಾಡಿದರೆ ಬನ್ನಿರಯ್ಯsss **|| ತಂದಾನ ||**

ಅನ್ನೇಡ್ ಕೌಳ್ಗೆ ಬಾಳೆ ಎಲೆ ತರ್ಬೇಕು
ದಾಸೋಹ ಮಾಡ್ಬೇಕಾಗಿದ್ರೆ
ಸ್ವಲ್ಪ ಅಂದ್ಬುಟ್ಟು ಊಟ ಮಾಡಿದ್ರು
ಮಾಯ ಆಗೋಗ್ ಬುಡ್ತು
ಏ ಮಡ್ಡೀರೆ ನನ್ನ ವೈದಿಕ ಮಾಡ್ಬೇಕಾದ್ರೆ
ನೀವಂತವ್ರಾಗಿರಬೇಕು ಅಂದುಟ್ಟು
ಈ ವೈದಿಕ ಆಗ್ಬೇಕಾದ್ರೆ
ನಾನು ತಿಸ್ಣ ಮಾಡ್ದಂತವ್ರಿಗೆಲ್ಲಾ

ಒಂದು ಅಲ್ಲೊಂದು ಉತುಪತಿ ಆಗುತ್ತದೆsss **|| ತಂದಾನ ||**
ಆಡಿರ ರಾಗಗಳ ಅಚ್ಚೆರಿ ದೀಪಗಳsss
ವೈಕುಂಟ ರಂಗಯ್ಯsss
ಬಿಳಿಗಿರಿಯಲ್ಲಿsss
ಬಂದು ನೋಡಯ್ಯ ಬಕುತರ **|| ಆಡಿರಿ ರಾಗಗಳ ||**
ರಂಗಯ್ಯ ಬಾಗಿನಲ್ಲಿsss
ಬಿಳಿ ಸಂದಾದರ ರಂಗೋಲಿsss
ರಂಗಯ್ಯ ಬಾಗಿನಲ್ಲಿsss
ಬಿಳಿ ಸಂವಾದ ಗೋಲಿsss

ರಂಗಯ್ನ ಗುಡಿಯಲ್ಲಿ sss
ಇಲ್ಲಿ ಸಂವಾದ ರಂಗೋಲಿsss
ಸ್ವಾಮಿ ಕಾದಿಗೆ ಮಲ್ಲಿ ತರುವರು sss **|| ಆಡಿರಿ ರಾಗಗಳ ||**

ಸ್ವಾಮಿಗಳವರಿಗೆ ಸಂಕು ಆರತಿ ಬಂತು
ಅಂದ್ರೆ ರಂಗೋಲಿ ಬಿಡ್ ಬೇಕಾದ್ರೆ
ನೀನವ್ವ ನಾನಲ್ಲ
ನಾಚನಟ್ಟಿ ಇರೊಂಬತ್ತು ಕೋಟಿಗಳು
ರಂಗೋಲಿ ಬಿಡ್ತಾ ಇದ್ದಾರೆ
ಕಾಲಿಗೆ ಮುಳ್ಳು ತಗುಲ್ ಬುಡ್ತದೆ ಅಂದ್ಬುಟ್ಟು
ಮಾಯಾಮೃಗ ಇಡಿಬೇಕಲ್ಲ
ಅದಕ್ಕೋಸ್ಕರದಿಂದ ಅವ್ರು
ಕಾಲಿನ ಮುಳ್ಳಿಗೆ ಕಗ್ಗಲಿದಸಿ
ಕಾಡ್ ದಸಿ ಇದೆ ಅಂದ್ಬುಟ್ಟು
ಅವ್ರು ಕಾಲ್ ದಸಿ ತೆಗಿತ ಅವ್ರೆ

ಅವ್ರು ಅಂದ್ಕೊಂಡು ರಂಗೋಲಿ ಬಿಡ್ತ ಅವ್ರೆsss **|| ತಂದಾನ ||**
ಸಂಕದಾರ್ತಿ ಬಿಡ್ತಾ ಇರ್ಯೋರ್ಯಾರುsss

ನರ್ಸಮನ್ಸರಲ್ಲ……

ಇರ ಬಿಡ್ವಂತದ್ದು ರಂಗೋಲಿ ಬಿಡ್ತಯಿದೆsss
ಅದು ಮಹಾರಾಣಿಗೆ ರಂಗೋಲಿsss

ಮಲೆಮಾದಪ್ಪನಿಗೆ ರಂಗೋಲಿ
ದೇವಾ ದೇವತೊನವರಿಗೆ ಸಂಕ್ರಾಂತಿ
ಟೈಮ್ನಲ್ಲಿ ಬಿಡ್ತಾ ಇರೋದು
ನಾಚನಟ್ಟಿ ಮೆಚ್ಚಿದಂತ ರಂಗೋಲಿ
ನಮ್ಮ ಅರಿನಾರಾಯಣ್ಣಿಗೆ ರಂಗೋಲಿ, ರಂಗೋಲಿ

ಗೋವಿಂದ ನೆsss **|| ತಂದಾನ ||**
ಗೋಪಾಲ ಕಿಸ್ಣsss **|| ತಂದಾನ ||**
ರಾಮು ರಾಮsss **|| ತಂದಾನ ||**

ಪಾರ್ವತಿ ಆರ ಆರ ಮಹಾದೇವ ಸಂಬೋ
ರಂಗಯ್ಯ ಬರ್ವಾಗ…. .

ಚೆನ್ನ ನಾರಾಯ್ಣ ಬರುತ್ತಾರೆsss || **ತಂದಾನ** ||
ಅಲ್ಲಿ ಬತ್ತವ್ರೆ ಇಲ್ಲಿ ನಿಂತವರೆsss
ಬೊಮ್ಮೆಗೌಡ್ನ ಪೋಡಿಗೆ ಬರುತಾರೆsss || **ತಂದಾನ** ||
ಆಹಾ ಬೊಮ್ಮೆಗೌಡ್ನ ಪೋಡಿಗೆsss
ಬತ್ತವ್ನೆ ನಾರಾಯ್ಣsss
ಟುಮ್ಮ ಟುಮ್ಮನೆ ಸ್ವಾಮಿ ಕುಣಿತಾನೆsss || **ತಂದಾನ** ||
ಅವ್ರು ಟುಮ್ಮಟುಮ್ಮನೆ ಕುಣ್ಕಂಡು ಬರ್ವಾಗsss
ಏನ್ ದಾಸಯ್ಯ ನಿನ್ ಸಂಪತ್ತು sss || **ತಂದಾನ** ||

ಅಲ್ಲ ದಾಸಯ್ಯ ನೀನೇನಯ್ಯ
ಸಂಪತ್ತು ಬಂದ್ಬುಡ್ತು
ನಾನೆ ನನ್ನ ಮಗ ವೋದ್ಮೇಲೆ
ವೊಟ್ಟುರ್ಕಂದು ನಾ ಕುಂತಿದ್ದೀನಿ
ನಿನ್ಯಾಕಯ? ನೀನು ಇಸ್ಟೊಂದ್
ದುಕ್ಕ ಮಾಡ್ತಿಯೇ ಬಾರಪ್ಪ ಬೊಮ್ಮೆಗೌಡ್ರೆ
ಯಾಕಪ್ಪ ಬೊಮ್ಮೆಗೌಡ್ರೆ
ಅಯ್ಯೊ ನಮ್ಮನೇಲಿ ಕುಸ್ಮದೇವಿ ವೋಗಿ
ಈವೋತ್ತಿಗೆ ಒಂಬತ್ ದಿವ್ಸ ಆಯ್ತು
ಅದ್ಕೆ ನೋಡಪ್ಪ ಉಡ್ಕ್ಕತ ಇದ್ದೀನಿ
ನೀನ್ ಬಂದು ಕುಣಿತಾ ಇದ್ದಿಯಲ್ಲ
ಎಲ್ಲೋ ಕುಸ್ಮದೇವಿಯನ್ನು ಕಂಡಂಗಿತ್ತಪ್ಪ ನಾನು
ಚಿಕ್ರಂಗಿ ದೊಡ್ರಂಗಿ ಎಲ್ಲೋ ನೋಡ್ದಾಂಗಾಯ್ತು
ಎಂದ್ಬುಟ್ಟು ನಾರಾಯ್ಣ ಮೂರ್ತಿಯವ್ರು ನುಡ್ದವ್ರೆ

ಅವ್ರು ಪಾರಿವಾಳ್ದ ಗವಿ ಒಳ್ಗೆ ಬಿಡುತಾರೆsss || **ತಂದಾನ** ||

ಪಾರಿವಾಳದ ಗವಿ ಒಳ್ಗೆ ಬಿಟ್‌ಬಿಟ್ಟಿದ್ದಾರೆ
ಈ ದಾಸಪ್ನಿಗೆ ಏನು ಅಂದ್ರೆ ಬಾರಿ ತಮಾಸೆ
ನೀ ನಂಗೆ ತಮಾಸೆ ಆಡ್ದರೆ ಬೊಮ್ಮೆಗೌಡ್ನಿಗೆ ಬಾರಿ ದುಕ್ಕ
ಎಂಗ ದುಕ್ಕ ಅಂದ್ರೆ ನನ್ನ ಮಗು ಕುಸ್ಮದೇವಿ ವೋಗ್ಬುಟ್ಟ ಅನ್ಬುಟ್ಟು

ಗೋಳು ಗೋಳನೆ ಸೋಕಮಾಡಿsss
ಸೋಲಿಗರ ಬೊಮ್ಮೆಗೌಡsss
ಯೆಂಡ್ತಿ ಮಕ್ಕೆಲ್ಲಾ ಅಳುತಾರೆsss
ಬಾ ನನ್ನ ರಂಗಯ್ಯsss
ಬಡವರ ಗೋಳಯ್ಯsss
ನಿನ್ನ ಪಾದಕ್ಕೆ ಅರುವಲು…. .

ಬಂದು ನೋಡಯ್ಯ ನಾರಾಯ್ಣsss

ಬಾ ನನ್ನ ರಂಗಯ್ಯ sss **||ಬಾ.... .||**

ಅಡವಿಯ ಒಳಗಂಜಿsss

ಬಿಡುವಿನ ಒಳಗಂಜಿsss

ಹಳ್ಳ ಕೊಳ್ಳಿಯಲ್ಲಿ ನಿಲ್ಲುತ್ತಾರೆsss

ವನ್ನು ಗಾಣಿಕೆ ಕಟ್ಟುತಾರೆsss

ಬಾ ನನ್ನ ರಂಗಯ್ಯ sss **||ಬಾ.... .||**

ಮೇಲುಗಿರಿಯಿಂದ ಬರುತಾರೆsss

ಬಾ ನನ್ನ ರಂಗಯ್ಯ sss

ಆಗ ರಂಗಪ್ಪನವ್ರು ಏನ್ಮಾಡ್ತಾರೆ

ಈ ದುಕ್ಕ ಮಾಡವೊತ್ತಿಗೆ ಬಂದ್ಬುಡ್ತಾರೆ

ಆಗಲಗಾತ್ರ ಸಂಕು

ಮುಗಿಲ್ ಗಾತ್ರ ಜಾಗ್ಟೆ ವತ್ಕಂಡ್ ಬಂದ್ಬುಟ್ಟಿದಾರೆ

ಅಯ್ಯೋ ದಾಸಪ್ನೋರೆ ಯಾಕಯ್ಯ ಸಂಪೊತ್ ಪಡ್ತಿಯ

ನೀನು ನಿನ್ನ ಸಂಪತ್ ಸಿರಿಯಲ್ಲ ನಗ್ಗಿ ನುಗ್ಗೆ ಕಾಯಿ ಆಗೋಗ

ನಮ್ಯಾಕಯ್ಯ ವೊಟ್ಟುರಿಸ್ತಿಯ

ಆಹಾ!

ನಿನ್ನ ಮಗ ನೋಡಿದ್ರೆ

ನೋಡಿದ್ರೆ ದಾಸಪ್ನ ವಾಸ ಆಗ್ಬುಟ್ಟಿದ್ದಾಳೆ

ಯಾಕ್ ಬೊಮ್ಮೆಗೌಡ್ರ ಆಳ್ತಾ ಇದ್ದೀರಿ

ಅವ ಎಂದಿದ್ರು ದಾಸಯ್ಯನ ವಾಸ ಆಗುತಾಳೆsss **|| ತಂದಾನ ||**

ಎಂದಿದ್ರು ದಾಸಯ್ಯ ವಾಸ ಆಗ್ತಾಳೆ

ಇದಕ್ಯಾಕಯ್ಯ ನೀನು ದುಕ್ಕ ಮಾಡ್ತೀಯ ಅಂದ್ರು

ಅಯ್ಯಯ್ಯೊ ನಿನ್ನ ವೊಟ್ಟೆಕಿಚ್ಚ ನೋಡ್ರಪ್ಪ

ಯಾಕಪ್ಪ ದಾಸಯ್ಯ ಈಗಾಡ್ತಿಯ ಅನ್ನುವಾಗ

ಪತ್ತೆ ಮಾಡಿ ನಾಳೆ ಕೊಡ್ಬುತಿನಿ

ನನ್ಗೇನು ಕೊಡ್ತಿರಯ ಯೇಳು

ಈಗ ನೋಡಪ್ಪ.... .ಮುದ್ಕಪ್ಪ

ಬಾಳೆಕಾಯಿ, ಕಿತ್ಕೊ ದಾಸಪ್ಪ ಬದ್ನೆ ಕಾಯಿ ಕಿತ್ಕೊ

ನನ್ಗೆ ಅದೆಲ್ಲಾ ಬೇಕಿಲ್ಲ

ಆ ಕುಸ್ಮದೇವಿಯ ಕೊಡುತಿಯಾsss **|| ತಂದಾನ ||**

ಕುಸ್ಮದೇವಿಯ ಬಿಕ್ಸೆಯ ಕೊಟ್ಟರೆsss

ಬಾಳ ಪುಣ್ಯ ಬರುತದೆsss **|| ತಂದಾನ ||**

ಮೇಲುಗಿರಕೆ ಕುಸ್ಮಾಲಿ ಬಂದರೆsss
ನೀನು ಬಾಳಬಾಗ್ಯವೆ ಬರುತದೆsss || **ತಂದಾನ** ||

ಅಯ್ಯಯ್ಯೋ ಈ ದಾಸಪ್ನೋರು
ಕುಸ್ಮದೇವಿಯನ್ನೆ ಕೇಳಿದರಲ್ಲಪ್ಪ
ಏನಪ್ಪ ಮಾಡದು ಅಂದ್ಬುಟ್ಟು
ಸೋಲಿಗರ ಬೊಮ್ಮೆಗೌಡ್ನೋರು
ಅಕ್ಕ ತಂಗಿ ಬಾರಿ ದುಕ್ಕ ಮಾಡ್ತ ಇದಾರೆ
ಕಿರಿ ತಂಗಿ ಒಂಟೋಗ್ಬುಟ್ಟ ಅಂದ್ಬುಟ್ಟು
ದುಕ್ಕ ಮಾಡ್ಕಂದ್ ಏನಪ್ಪ ಮಾಡದು
ದಾಸಪ್ಪ ಈಗ ಕೇಳ್ತಾನೆ ಅಂದ್ಬುಟ್ಟು
ನಮ್ಮ ಗಂಗಾದರಪ್ನ ಹುಡಿಗೆ ವೋಗ್ಬುಟ್ಟು ನಾವು
ಗಂಗಾದರಪ್ನ ಗುಡಿಗೆ ವೋಗಿ
ಪ್ರಸಾದ ಕೇಳಿದ್ರ ಕೊಟ್ಬುಡ್ತಾರೆ
ಅಡ್ವಿ ಒಳ್ಗೆ ಇದ್ದೊ ಇಲ್ವೊ ಅಂದ್ಬುಟ್ಟು

ಅವ್ರು ಗಂಗಾದರಪ್ನ ಗುಡಿಯಲ್ಲಿsss || **ತಂದಾನ** ||
ಅಲ್ಲಿ ಗಂಗಾದರನ ಗುಡಿಯಲ್ಲಿsss
ಈಸ್ಪುರನ ಪೂಜೆ ನಡಿತದೆ sss || **ತಂದಾನ** ||

ಸೋಲಿಗ್ರ ಬೊಮ್ಮೆಗೌಡ್ನೋರು
ತಣ್ಣೀರ್ ತಾನ ಮಾಡ್ಕಂಡು
ನಮ್ಮಪ್ನ ಮನೆದೇವ್ರು
ಅಂದ್ರೆ ಮಲೆ ಮಾದಪ್ಪ ತಾನೇ…. .
ಈಸ್ಪುರ ಅಂದ್ರೆ ಮಲೆ ಮಾದಪ್ಪ
ನಮ್ಮಪ್ನ ಮನೆ ದೇವ್ರು
ಅವ್ರು ತಾನೆ ಮಕ್ಳ ಪಲ ನೀಡೋರು
ವರ ಕೇಳ್ಬೇಕು ಅಂದ್ಬುಟ್ಟು
ಸ್ವಾಮಿಯೋರ್ನ ಪ್ರಸಾದಕೇಳವೊತ್ಗೆ

ಅವ್ರು ಎಡ್ಗಡೆ ಪ್ರಸಾದ ಕೊಡುತಾರೆsss || **ತಂದಾನ** ||
ಅಲ್ಲಿ ಎಡ್ಗಡೆ ಕೊಡ್ವಾಗ ಒಳ್ಚರಿ ಬಿಡ್ವಾಗ
ನಾರಾಯ್ಣ ರೂಪ ತಾಳುತ್ತಾರೆsss || **ತಂದಾನ** ||

## ೬. ಬಿಳಿಗಿರಿ ರಂಗನ ಕಾವ್ಯ (೯)

ಸ್ವಾಮಿ ಕಡೆ ನೋಡಿ ಗಂಗಾದರೇಶ್ವರ
ಅಂದ್ರೆ ನೀನು ಮಾದಪ್ಪ
ನನ್ಗೆ ರೂಪ್ವಾಗಿ ನೀನು ಯೇಳ್ಬೇಕು
ಸತ್ತ್ಹೋಗ್ ಬುಟ್ಲ ನೀನೆ ಯೇಳ್ಬೇಕು
ಆ ಸೋಲಿಗರ ಬೊಮ್ಮೆಗೌಡ್ರೆ
ಮಗ ನೋಡಪ್ಪ ದಾಸಯ್ಯ ವಾಸ ಆಗಿದ್ದಾಳೆ
ಮೇಲುಗಿರಿಕೋಗ್ಬೇಕು
ಮಳ್ಳಿ ಒಡ್ಡಿಗೋಗ್ಬೇಕು
ಮಳ್ಳಿ ಒಡ್ಡಿನಲ್ಲ ನೇರ್ವಾಗಿ ನೋಡು
ಅಲಿರ್ತಾ ಇದಾರೆ
ಓಹೋ ಹೋ
ಇನ್ನು ದೇವ್ರೇಳ್ದ ಮಾತು ಉಸಿ ಬರಲ್ಲ ಅಂದ್ಬುಟ್ಟು
ಇವ್ರು ಆರ್ ಮಂದಿ ಅಕ್ಕತಂಗಿರ್ನೆಲ್ಲ
ಏಳು ಮಂದಿನಲ್ಲಿ ಒಬ್ಬ ಕಾಲಿಯಾಗ್ಬುಟ್ಟ
ಆರು ಮಂದಿ ಅಕ್ಕ ತಂಗೇರು
ಸೋಲಿಗರ ಬೊಮ್ಮೆಗೌಡ್ನ ಮಕ್ಕ
ಚಿಕ್ಕಾಳ, ದೊಡ್ಡಾಳ, ಚಿಕ್ಕಮಾದ, ದೊಡ್ಡಾದ
ಎಲ್ಲಾ ಸೇರ್ಕಂಡು ವೋಗಿ ನೋಡ್ವಾಗ

ಅವ್ರು ಮಳ್ಳಿ ಒಡ್ಡಿನಲ್ಲಿ ಇರುತಾರೆsss **|| ತಂದಾನ ||**
ಮಳ್ಳಿ ಒಡ್ಡಿನಲ್ ಕೂತವ್ರೆ ರಂಗಯ್ಯsss
ಮಾಯ ರೂಪಂತೆ ತಾಳುತವ್ರೆsss **|| ತಂದಾನ ||**
ಅವ್ರು ಮಾಯದಿ ರೂಪ ತಾಳ್ಕಂಡು ರಂಗಪ್ಪsss
ಎಜ್ಜೆ ನೋಡಯ್ಯ ಆದಿನಾರsss **|| ತಂದಾನ ||**

ಆಗ ಸೋಲಿಗರ ಬೊಮ್ಮೆಗೌಡ್ನ
ಮಕ್ಳಿಗೆ ಕಂಡ್ಬುಟ್ಟು ಏ ಕಳ್‌ದಾಸ ನೀನು
ಮನೆ ಮನೆ ಇಟ್ಟು ತಿರ್ಕೊಂಡ್ ತಿನ್ನ ದಾಸ
ನನ್ನ ಮಗಳ ತಕ್ಕ ಬಂದ್ಬುಟ್ಟಿದ್ದೀಯ
ನಿನ್ನ ಮೋರೆ ಮ್ಯಾಲ್ ತಿಮಿತಿನ್ ನೋಡ್ಕೊ
ನಿನ್ಗ್ ತುಂಡುದೊಣ್ಣೇಲಿ ಬಡಿತೀನ್ ನೋಡ್ಕೋ......

ಈವೊತ್ತು ಯಾವ ಊರವ್ನ ದಾಸಯ್ಯsss **|| ತಂದಾನ ||**
ಯಾವ ಮತದವ್ನ, ಯಾವ ಕುಲದವ್ನsss
ಜಾತಿಗೆಡ್ಸಿಯಯ್ಯ ಮುದುಕಯ್ಯsss **|| ತಂದಾನ ||**

ಅಯ್ಯ ಜಾತಗೆಡ್ಸಿಯಯ್ಯ ಮುದ್ಕಯ್ಯ ನೀನಯ್ಯsss
ಕೊರ್ಗ ಬೇಡಯ್ಯ ಮುದುಕಯ್ಯsss **|| ತಂದಾನ ||**

ಯಾವ್ ಮತವಯ್ಯ ನೀನು ಯಾವ್ ಕುಲ್ದವನಯ್ಯ ನೀನು
ಅಯ್ಯೋ ಬೊಮ್ಮೆಗೌಡ್ರೆ ನೋಡಿದ್ರೆ
ಜಗತ್ನಲ್ಲಿ ದೊಡ್ಡವರಾಗಿರಬಹ್ದು ನೀನೆ ದೊಡ್ಡವ್ನು
ನಾನೆ ದೊಡ್ಡವ್ನು ಜಗತ್ತಿನಲ್ಲಿ ಯಾರು ಏನು ಕಂಡವರಿಲ್ಲ
ಸೋಲಿಗರ ಬೊಮ್ಮೆಗೌಡ ಅಂತ ನನ್ಗೆನು ಗೊತ್ತಯ್ಯ
ಅಡ್ವಿಯೊಳ್ಗೆ ಬರ್ತಾ ಇದ್ದೆ
ನಾನು ಕರ್ಕಂಡ್ ಬಂದಿ ಬೊಮ್ಮೆಗೌಡ್ರೆ
ನಿನ್ನ ಮಗ ಅಂತ ನನಗ್ ಗೊತ್ತಿಲ್ಲ
ನನ್ ಮಗ ಅಂತ ನಿನಗ್ ಗೊತ್ತಿಲ್ಲ
ನೀನು ನನಗ್ ಗೊತ್ತಿಲ್ಲ
ನಾನಿದ್ದು ನಿನಗ್ ಗೊತ್ತಿಲ್ಲ

ಇದು ಕುಸ್ಮದೇವಿ ನೋಡುತ್ತಾರೆsss **|| ತಂದಾನ ||**
ಈವೊತ್ತು ನೀನಯ್ಯ ಸಿಕ್ಕಿಬುಟ್ಟೆ ಮಗಳೆsss
ನಿನ್ನ ಮಗ ಎಂದು ನೋಡಲಿಲ್ಲsss **|| ತಂದಾನ ||**

ನೋಡಪ್ಪ ಈ ವೊತ್ತಿಗೆ ಮಗ್ನೆ ನಿನ್ನ ಮೊಕ ನನಗ್ ಬೇಕಿಲ್ಲ
ನನ್ ಮೊಕ ನಿನಗ್ ಬೇಕಿಲ್ಲ
ನೀನು ದಾಸಯ್ಯ ವಾಸ ಆಗ್ಬುಟ್ಟೆ
ನನ್ಗೆ ನೋಡಪ್ಪ ನೀನು ಸತ್ರು ಆಗಾಕಿಲ್ಲ
ಕೆಟ್ರು ಆಗಾಕಿಲ್ಲ
ನಾನ್ ನೋಡುದ್ರೆ ಜಾತಿಯೊಳ್ಗೆ ಸೋಲಿಗ್ರಾಗ್ ಉಟ್ಟಿ
ಬಡ ದಾಸಯ್ನ ವಾಸಕ್ಕ ಬಂದ್ಬುಟ್ಟೆಲ್ಲಾ
ಇಂತ ವಯ್ನಾದ ಉಡ್ಗಿನಾ ಬಿಟ್ಟು

ಅವ ಬಯ್‌ಬೊಯ್ನ ಸ್ವಾಮಿ ಬೊಯ್ಯುತಾರೆsss **|| ತಂದಾನ ||**
ಅಯ್ಯ ಬೊಯ್ ಬೊಯ್ನೆ ಸ್ವಾಮಿsss
ಬೊಯ್ತುವ್ನೆ ರಂಗಯ್ಯsss
ನನ್ನ ಬಯ್ಯಲು ಬೇಡ ಬೊಮ್ಮ ಮಾವsss **|| ತಂದಾನ ||**

ಬಯ್‌ಬೇಡ ಬೊಮ್ಮ ಮಾವ
ಬಯ್‌ಬೇಡ ಮೊಮ್ಮ ಮಾವ
ನಿಂಗೆ ಕರ ಕಟ್ಟಕೆ ಕಂಬ್ಳದ ಆಳು
ರಾಗಿ ಬೀಸಕೆ ಚೆನ್ನದ ಗುಂಟ

ಮನಿಕಳಕೆ ಪಟ್ಟಮಂಚ ಕೊಡ್ತೀನಿ ಮಾವ
ನನ್ ಒಡಿಬ್ಯಾಡ ಮಾವ
ಎಯ್ ಬಡ್ವ ನೀನ್ ನೋಡಿದ್ರೆ
ಮನೆ ಮನೆ ತಿರ್ಗೋವಂತ ಇಟ್‌ಕಾಣ್ದ ದಾಸ
ನನ್ ಮಗ್ಳ ತಕ್ಕೊಂಡ್ ಬಂದಿ ಅಂದ್ಬುಟ್ಟು

ಅವ್ರು ತುಂಡು ದೊಣ್ಣೆಯ ಯಿಡಿತಾರೆsss **|| ತಂದಾನ ||**
ಅಪ್ಪ ತುಂಡು ದೊಣ್ಣೆಯ ಯಿಡ್ದುsss
ಸಂದಿನ್ ಮ್ಯಾಲೆ ಒಡೆವಾಗsss
ಅಯ್ಯೋ ಬಡೆಯಲು ಬೇಡ ಬೊಮ್ಮೆಗೌಡsss **|| ತಂದಾನ ||**

ಮೂರ್ ಏಟ್ ಬೊಮ್ಮೆಗೌಡ್ನೋರು
ಉರ್ದುಬುಟ್ಟು ದಾಸಪ್ಪ
ಮೂರ್ ಏಟ್ ಉಗರ್ದೇಟ್ಗ ದಾಸಪ್ನೋರು
ನಿನ್ಗೆ ಪುಣ್ಯ ಕೊಟ್ಟುದ್ದೆಲ್ಲ ಆಳಾಗ್ಲಿ
ಈವೊತ್ತಿನ್ ದಿವ್ಸ ನೀ ಕರ ಕಟ್ಟೋದಕ್ಕೆ
ಕಂಬಳದ ಆಳ್ ಕೊಟ್ಟುದಕ್ಕೆ
ರಾಗಿ ಬೀಸೋದಕ್ಕೆ
ಚಿನ್ನದ ಗೂಟ ಕೊಟ್ಟೋದಕ್ಕೆ
ಚಿಕ್ಕ ಮಕ್ಕಳು ಮನಿಕಳಕೆ
ಈವೊತ್ತು ನಿನ್ಗೆ
ತಿನ್ನ ಅನ್ನ ಚಿನ್ನ ಆಗ್ಲಿ
ಕುಡಿಯಾ ನೀರು ಪಾಯ್ಸ ಆಗ್ಲಿ

ತುಂಡು ಬಟ್ಟೆ ನಿನ್ಗೆ ಎರ್ಡು ಕಾಣೊsss **|| ತಂದಾನ ||**

ಅವ್ನು ಸಾಪವನ್ನು ಕೊಟ್ಟುಬಿಟ್ಟು
ನಾರಾಯ್ಣ ಮೂರ್ತಿಯವ್ರು
ಮೂರು ವರ್ಸಕ್ಕೊಂದು ಪೋಡಾಗಲಿ
ಮೂರು ವರ್ಸ ತುಂಬಿದ
ಮೇಲೆ ದಬ್ಬೆ ವುಲ್ಲು ಬರ್ಲಿ ಅಂತ ಸಾಪ ಇಟ್ಟುಬಿಟ್ಟಿದ್ದಾರೆ
ಅಯ್ಯಯ್ಯೋ ನಿನ್ ಸಾಪ ನನ್ನೇನ್ ಮಾಡಕ್ಕಾದ್ದಯ್ಯ

ನಿನ್ ಮಾತು ನನ್ಗೇನ್ ಬೇಕಯ್ಯsss
ನನ್ಗಿಂತ್ ಎಚ್ನ ಮಂತ್ರವಂತ್ನsss?

ನೀ ನನ್ಗ ಮಗ್ಳ ಗೆಲ್ಲೊಂತ
ಮಂತ್ರ ತಂತ್ರ ಮಾಡಿ ಮೋಸ ಮಾಡ್ದಂತ
ಮುದ್ಕಪ್ಪ ನೀನು
ನಿನ್ನ ಮೊಕ ನೋಡಕಾಗಲ್ಲ ಅಂದ್ಬುಟ್ಟು …. .
ಅವ್ರು ನಿನ್ ಮೊಕ ನಾನೋಡಗಿಲ್ಲ
ನನ್ ಮೊಕ ನೀ ನೋಡಾಗಿಲ್ಲ

ಅವ್ರು ಪಾತಾಳ್ ಲೋಕಕ್ಕೆ ವೋಗುತ್ತಾರೆsss || **ತಂದಾನ** ||
ಅವ್ರು ಪಾತಾಳಲೋಕಕ್ಕೆ ವೋಗ್ತಾರೆ ಬೊಮ್ಮೆಗೌಡsss
ವೋಗಾಲು ಬೇಡ ಬೊಮ್ಮೆ ಮಾವsss || **ತಂದಾನ** ||

ವೋಗ್ಬೇಡ ಬೋಮ್ ಮಾವ
ಪಾತಾಳ್ ಲೋಕಕ್ಕೆ ವೋಗ್ಬುಟ್ರೆ
ನಿನ್‌ಪಾದ ನನ್ಗೆ ಸಿಕ್ಕಲ್ಲ ಅಂದ್ಬುಟ್ಟು

ಅಂತ ಸಂಕ್ರಾಂತಿ ದಿವ್ಸ ನಿನ್ಗೊಂದು ಪೂಜೆ ಕೊಡುತಿನಿsss || **ತಂದಾನ** ||
ನಿನ್ಗೊಂದು ಪೂಜೆ ಕೊಡ್ತಿನಿ ಬೊಮ್ಮ ಮಾವsss
ನೀನು ವೋಗ ಬೇಡ ಕಾಣೊ ಬೊಮ್ಮ ಮಾವsss || **ತಂದಾನ** ||
ಚೆಲ್ಲಿದರು ಮಲ್ಲಿಗೆಯ ಬೆಳ್ಳಿ ಬೆಟ್ಟದ ಮೇಲೆsss

ಅಂದಾದ ಚೆಂದಾದ ಚೆಲ್ವ ರಂಗಪ್ಪನಿಗೆ

ಚೆಲ್ಲಿದರು ಮಲ್ಲಿಗೆಯsss
ಮಲ್ಲಿಗೆ ವೂನಲ್ಲಿsss
ರಂಗಯ್ಯ ವಲ್ಲಿಯ ನೆಯ್ದುವರೆsss
ಇಲ್ಲೊಂದು ಗಳಿಗೆsss ತಂಗವ್ರೆ ರಂಗಯ್ಯ || **ಚೆಲ್ಲಿದರು** ||
ಆನೆಯ ಯಿಡಿದವರೆsss
ರಂಗಯ್ಯ ಆನಂದ ಮಾಡವರೇsss ಬರುತವ್ರೆsss
ಇವ್ರು ಚೆಲ್ಲಿದರು ಮಲ್ಲಿಗೆಯsss || **ಚೆಲ್ಲಿದರು** ||
ದಾಸೋಳದ ವೂವಿಲ್ಲಾ ರಂಗಯ್ಯsss
ಆಸುಗೆಗ ನಾನು ತಂದೆsss
ಸೇವಂತಿಗೆ ವೂವು ಸೀಮಂತ ರಂಗಯ್ಯ || **ಚೆಲ್ಲಿದರು** ||
ಅಲ್ಲಾಣಿ ಇಲ್ಲಾಣಿ ರಂಗಯ್ಯsss
ಕಲ್ಯಾಣಿ ಕೊಳದಾಣಿsss
ಇಲ್ಲೊಂದು ರಾತುರೆ ತಂಗಿದ್ದು ವೋಗಯ್ಯsss || **ಚೆಲ್ಲಿದರು** ||
ಅಯ್ಯ ನೆಟ್ಟ ನಡುವೆ ನಾರಾಯ್ಣ ಕೂತ್ಗಂಡು
ನೆಟ್ಟ ನಡುವೆ ನಾರಾಯ್ಣsss || **ತಂದಾನ** ||

ಅವ್ರು ನಾರಿರ್ಗ ಸುದ್ದಿ ಯೇಳ್ಕೊಂಡು ನಾರಾಯ್ಣsss
ನಾಟ್ಕ ಕಲೇಲಿ ನಲಿತಾರೇsss || **ತಂದಾನ** ||
ಅವ್ರು ನಾಟ್ಕ ಕಲೇಲಿ ನಲ್ಕಂಡು ಉಳ್ಕಂಡುsss
ತೇರ ತಾಳಿಗೆ ಸ್ವಾಮಿ ಬರುತಾರೆsss || **ತಂದಾನ** ||

ಸ್ವಾಮೇರು ನಾಟ್ಕಲಿ ನಲ್ಕೊಂದು
ತೇರ್ನ ತಾಳಿಗೆ ತೆರಳ್‌ಬುಟ್ಟಿದ್ದಾರೆ
ತೇರು ಯಾವತಪ್ಪ
ತೆಪ್ಪ ಯಾವತಪ್ಪ ಅಂದ್ರು
ಇವೆಲ್ಲ ಯೇಳ್ ಮಾತು
ಸೂಳೆ ರಂಗಮ್ಮನೋರು ಯೇಳಿದ್ದಾರೆ
ಸೂಳೆ ರಂಗಮ್ಮ ಅಂದ್ರೆ ನೀವಾರು
ಸೂಳೆ ರಂಗಮ್ಮ ಅಂದ್ರೆ
ನಾವು ನೋಡಪ್ಪ
ಕಲ್ಯಾಣಿ ಕೊಳ ಉಟ್ವಾಗ
ಕಲ್ಯಾಣಿ ಆಗ ಕೊಳ ಅಲ್ಲ
ಬೊಮ್ಮೆಗೌಡ ನೀವು ವೋದ್ರು ವೋಗು
ಮಾವ ಅಂತ ನಿಮ್ಮ ಪಾದ

ನಿನ್ಗೊಂದು ಪೂಜೆ ಕೊಡುತ್ತೀವಿsss || **ತಂದಾನ** ||
ಅಯ್ಯ ನಿನ್ಗೊಂದು ಪೂಜೆ ಕೊಡ್ತಿನಿ ಬೋಮ್ ಮಾವsss
ನಿನಗೊಂದು ವರವ ಕೊಡುತಿನಿsss || **ತಂದಾನ** ||

ಅಯ್ಯಯ್ಯೋ ಪಾತಾಳ್ ಲೋಕಕ್ಕೆ ವೋಗುವಾಗ
ಕಂಬ್ರಿ ಗುಡ್ಡದ ಮ್ಯಾಗೆ ನಿನ್ಗೊಂದು ಮನೆ ಕಟ್ಸಿ
ಮಟ ಮಾಡ್ಸ್‌ತಿನಿ ಮಾವ
ವೋಗ್ಬೇಡ ಮಾವ ನೀನು
ನನ್ ಜಮೀನ್ ಕಾಯ್ಕಂಡಿದ್ರೆ ಸಾಕು ಅಂದ್ಬುಟ್ಟು

ಅವ್ರು ಕೆಮ್ಮತ್ತಿಕೊಂತ ತರುತ್ತಾರೆsss || **ತಂದಾನ** ||

ಸೋಲಿಗರ ಬೊಮ್ಮೆಗೌಡ್ನ ಮಗ
ಕುಸ್ಮದೇವಿ ಕರ್ಕಂಡು ಮೇಲ್‌ಗಿರಿಗೆ ಬರ್ತಾ ಇದಾರೆ
ಏಯ್ ಎಡಗಡೆ ನೋಡ್ತಾರೆ ತೊಳ್ಸಮ್ಮ ಕುಳ್ತಿದಾರೆ
ಬಲ್ಗಡೆ ನೋಡ್ತಾರೆ ಲಕ್ಷ್ಮೀದೇವಿ ಇದ್ದಾಳೆ
ಸೋಲಿಗರ ಬೊಮ್ಮೆಗೌಡ್ನ ಮಕ್ಕಳು ಕಾಡ್ನಲ್ಲಿ ವುಟ್ಟಿ
ಕಾಡ್ನಲಿ ಬೆಳ್ದು ಊರ್ಗೆ ಬರ್ತಾರೆ ಅಂದ್ಬುಟ್ಟು ...

ರಂಗಯ್ಯಸ್ವಾಮಿ ಬರುತಾರೆsss || **ತಂದಾನ** ||
ಅಯ್ಯ ವೊತ್ಕಂಡು ಸ್ವಾಮಿ ಬರ್ತವ್ನೆ ರಂಗಪ್ಪsss
ಯೆಗ್ಲಲ್ಲಿ ಸ್ವಾಮಿ ಕೂತಿದಾಳೆsss || **ತಂದಾನ** ||
ಯೆಗ್ಲಲ್ಲಿ ಸ್ವಾಮಿ ಕೂತ್ಗಂಡು ನಾರಾಯ್ಣsss
ನಾರಿರ್ಗೆ ಓದ ಯೇಳುತಾರೆsss || **ತಂದಾನ** ||
ಅಯ್ಯ ನಾರಿರ್ಗೆ ಓದಿ ಯೇಳ್ಕಂಡು ನಾರಾಯಣsss
ಅವ್ರು ಮೇಲುಗಿರಿಗೆ ನಡೆದಾರೆsss || **ತಂದಾನ** ||
ಮೇಲುಗಿರಿಯಲ್ಲಿ ನೆಲ್ಗೊಂಡು ನಾರಾಯ್ಣsss
ನಾರಿರ್ಗೆ ಬೋದ ಯೇಳುತಾರೆsss || **ತಂದಾನ** ||

ಸ್ವಾಮೇರು ನಾರಿಗ್ರೂ ಇಬ್ರು
ಮಡ್ದಿರ ಮದ್ಯೆ ಕೂತ್ಗಂಡು
ಮೇಲ್ಗಿರಿ ಕೈಲಾಸವನ್ನು ಮಟದೊಳ್ಗೆ ಬಿಟ್ಗಂಡು
ಚೆಗ್ರಮರಿ ಬಿಟ್ಗಂಡು
ಕಾಡ್ ಸೋಲ್ಗಿತ್ತಿ ಒಡ್ಬತಾಳೆ ಅಂತ

ಅವ್ರಿಗೊಂದು ಮಾತ ಆಡುತಾರೆsss || **ತಂದಾನ** ||
ಅವ್ರಿಗೊಂದು ಮಾತ ಆಡ್ವಾಗ ಸೋಲ್ಗಿತ್ತಿsss
ಅವ ದುಕ್ಕ ಮಾಡಂತೆ ಬರುತಾಳೆsss || **ತಂದಾನ** ||

ದುಕ್ಕ ಮಾಡ್ವಾಗ ಏನ್ ಯೇಳ್ತಾರೆ ನಾರಾಯ್ಣ
ಮಾಂತ ಮಾರ್ಲಾಮಿ
ಜಂಬು ಸವಾರಿ ವೋಗ್ವಾಗ
ಜಾತ್ರೆಯೊಳ್ಗೆ ನಿಮ್ಗೆ ಕುಂಬ್ಳವನ್ನು ಕೊಡ್‌ಬೇಕು
ಬೂದ್‌ಗುಂಬ್ಳಕಾಯಿ ಕೊಡ್‌ಬೇಕು
ಬಾಳೆಲೆ ಕೊಡ್‌ಬೇಕು
ಬಾಳೆಕಾಯಿ ಕೊಡ್ಬೇಕು
ನಮ್ಮ ಬಾವ ಬೊಮ್ಮ ಮಾವ್ನಿಗೆ
ನಮ್ಮ ಬಾವ ಬೊಮ್ಮ ಮಾವ್ನಿಗೆ

ನಾವೊಂದು ಎಡೆಯ ಕೊಡಬೇಕುsss || **ತಂದಾನ** ||
ಬಾವ ಎಂದರೆ ದೊಡ್ಡ ಮಾದ ಬಾವಂತೆsss
ಚಿಕ್ಕಕಾಡಂತೆ ಬಾಮ್ಮೈದನೇsss || **ತಂದಾನ** ||

ಚಿಕ್ಕಾಡ ಬಾಮ್ಮೈದ,
ದೊಡ್ಡಕಾಡ ಬಾಮ್ಮೈದ,
ದೊಡ್ಡ ಮಾದನ ಯಿರಿ ಬಾವನ್ ಮಾಡ್ಬುಟ್ಟು

ನಾಳೆ ನೀವು ಏಳು ಕೊಟಿ ಬಂಗಾರಕ್ಕೆ
ಬರ್ಕೊಳ್‌ಬೇಕಪ್ಪ ಅಂದ್ಬುಟ್ಟು

ಆದಿ ನಾರಾಯ್ಣ ಬರಿತಾರೆsss **|| ತಂದಾನ ||**
ಆದಿ ನಾರಾಯ್ಣ ಆದಿಲಿ ಬರುತವ್ರೆsss
ಬುಗ್‌ಬುಗ್ನ ಸಂಕ ಊದುತಾರೆsss **|| ತಂದಾನ ||**
ಬುಗ್‌ಬುಗ್ನ ಸಂಕ ಊದ್ಕೊಂಡು ರಂಗಪ್ಪsss
ಮೇಲುಗಿರಿಗೆ ಮೆರಿತಾನೆsss **|| ತಂದಾನ ||**
ಆ ನಾಮ ಈ ನಾಮ ಮೇಲುಕೋಟೆಯನಾಮsss
ಮೇಲೊಂದು ನಾಮ ಬಿಳಿನಾಮsss **|| ತಂದಾನ ||**
ಅಯ್ಯ ಮೇಲೊಂದು ನಾಮ ಬಿಳಿನಾಮ ರಂಗಪ್ಪsss
ವೊಟ್ಟೆಯ ಮೇಗೆ ಬಟ್ಟು ನಾಮsss **|| ತಂದಾನ ||**
ಅಯ್ಯನಾಮ ಬರೆಯವ್ರು ನಾರಾಯ್ಣ ಮೂರ್ತಂತೆsss
ತಾನ ಮಾಡಾಗ ಅಳಿತಾರೆsss **|| ತಂದಾನ ||**
ಬನ್ನಿರಯ್ಯೋ ರಂಗಪ್ಪಾನೆsss
ಬನ್ನಿಸ್ವಾಮಿ ನಾರಾಯ್ಣsss
ನೀರೂರ್‍ರಿ ಸುಂದರಾಗಿ
ನೀರೂರಿ ಗಿರಿಯಲ್ಲಿsss
ಬನ್ನಿರಯ್ಯ ರಂಗಪ್ಪಯ್ಯsss
ಬನ್ನಿಬಾವ ರಂಗಪ್ಪಯ್ಯsss
ಬಾವ ಬಾ ಬಾವಯ್ಯsss
ಬಂದು ನೋಡೋ ತೇರಯ್ಯsss
ಬನ್ನಿರಪ್ಪ ರಂಗಸ್ವಾಮಿsss
ಸೋಲಿಗ್ರೈಕ ಬರುತಾವೆsss
ಸೋಲಿಗಿತ್ತಿ ಸಗುತ ನೋಡಣ್ಣsss
ಅಣ್ಣಾ ಸೋಲಗಿತ್ತಿ ಸಗುತ ನೋಡಣ್ಣsss
ಈ ರಂಗನೊಂದು ... ತೇರು ಉಂಟಣ್ಣsss
ಸೋಲಿಗಿತ್ತಿ ಸಗುತ ನೋಡುsss
ರಂಗಾನೊಂದು ತೇರನೋಡುsss
ನಿಮ್ಮ ಮುದ್ದು ರಂಗಯ್ನ ಗಿರಿಮೇಲೆsss **|| ತಂದಾನ ||**
ಅಲ್ಲಿ ಮುದ್ದು ರಂಗಯ್ನ ಗಿರಿಮ್ಯಾಲೆ ಏನೇನೋsss
ಅಲ್ಲಿ ಸಿದ್ದು ಮುದ್ದಿನ ಸಿವಸಂಕುsss **|| ತಂದಾನ ||**
ಅವು ಸಿದ್ದು ಮುದ್ದಿನ ಸಿವ ಸಂಕ ಯಿಡ್ಕಂಡುsss
ಅವ್ರು ಎದ್ದೇಳು ಬೀದಿ ಮರೆತವ್ರೆ ರಂಗಯ್ಯ
ನಮ್ ಮುದ್ದು ರಂಗಯ್ನ ಗಿರಿಯಲಿsss **|| ತಂದಾನ ||**

ಮುದ್ದು ರಂಗಯ್ನ ಗಿರಿಯೊಳ್ಗೆ ಎದ್ದು
ಮುದ್ದಿನ ಸಿವಸಂಕನ ಯಿದ್ಕಂದು ಏದ್ದೇಳು
ಬೀದಿ ಮೆರ್ದ್ ಬುಟ್ಟಿದ್ದಾರೆ
ಆಹಾ ...

ಎಲ್ಲಿ ರಂಗಯ್ನ ಒಂಟವ್ನೆ ಕೊಂಗ್‌ನಾಡ್‌ಸೀಮೆಗೆsss
ಕೊಂಗಾರು ಕೊಟ್ಟ ಕುದುರೆಲಿsss **॥ ತಂದಾನ ॥**
ಅಲ್ಲಿ ಕೊಂಗರು ಕೊಟ್ಟ ಕುದ್ರೇಲಿ ರಂಗಯ್ಯsss
ಏರಿದ ಸ್ವಾಮಿ ಗಿರಿಮಲೆsss **॥ ತಂದಾನ ॥**
ಅಲ್ಲಿ ಏರಿನ ಸ್ವಾಮಿ ಗಿರಿಯ ರಂಗಪ್ಪsss
ಅವ್ರು ಮುದ್ದು ರಂಗಯ್ಯ ಗಿರಿಮ್ಯಾಲೆ ಆದರೆssss
ಅವು ಬೆಂಡೆ ಕಡ್ಡಿಯ ಅವ್ರಗೆ ತಿರುಗಪ್ಪsss **॥ ತಂದಾನ ॥**

ಸೋಲಿಗರ ಬೊಮ್ಮೆಗೌಡ್ನ ಮಕ್ಳು
ಬೆಂಡೆ ಕಡ್ಡಿಯ ತಂದು
ತೇರು ಚಿತ್ರಾವನ್ನು ಗೇದ್ ಬುಟ್ಟಿದ್ದಾರೆ
ಮುದ್ದು ರಂಗಯ್ಯ ಸಿರಿವೊಳ್ಗೆ ಬರ್ವಾಗ
ಅವ್ರು ಮೇಲ್ಗಿರಿಯಿಂದ ಬರ್ಬೇಕಾದ್ರೆ

ಅವ್ರು ನಡ್ಕಲ್ ಮಂಟಪದ ನಲಿತಾರೇsss **॥ ತಂದಾನ ॥**
ಅಯ್ಯೊ ನಡ್ಕಲ್ ಮಂಟಪಾದ ನಲ್ಕಂಡು ಉಲ್ಕಂದುsss
ಕೆರ ತಡಿಗ ಸ್ವಾಮಿ ತೆರಕಿದಾsss **॥ ತಂದಾನ ॥**
ಅವ್ರು ಕೆರ ತಡಿಗೆ ತೆರಳಿದ ರಂಗಯ್ಯsss
ಕೂಡಿ ಆಡಿರೋ ಅಣ್ಣು ಜವನಾsss **॥ ತಂದಾನ ॥**
ಅಲ್ಲಿ ಕೂಡಿ ಆಡಿರೊ ಅಂದವ್ನೆ ನಾರಾಯ್ಣsss
ಅಲ್ಲಿ ಬೆಟ್ಟಾ ಕುಕ್ಕೇಲಿ ಮೆಕ್ಕಕಾಯಿ
ತೆಕ್ಕೊಳ್ಳಿರಕ್ಕ ತಲಿಗೊಂದsss **॥ ತಂದಾನ ॥**
ಅಯ್ಯ ತೆಕ್ಕೊಳ್ಳಿರಕ್ಕ ತಲಿಗೊಂಡು ಮೆಕ್ಕಕಾಯಿsss
ಸ್ವಾಮಿ ರಂಗಯ್ಯ ತೇರಿಗೆ sss **॥ ತಂದಾನ ॥**
ಅಯ್ಯ ಸ್ವಾಮಿ ರಂಗಯ್ಯ ಮಾತನ್ನು ಉಡ್ಗೇರಿsss
ಇಂದಿಗೆ ಮರೆಯೋ ಈ ಮಾತsss **॥ ತಂದಾನ ॥**

ಏಯ್ ಸೋಲಿಗರ ಬೊಮ್ಮೆಗೌಡ್ನ ಮಕ್ಳ
ಸ್ವಾಮಿ ರಂಗಯ್ನ ಮಾತ ಈವೊತ್ಗೆ ಮರ್ತ್‌ಬುಡಿ
ಬಾವ ರಂಗಯ್ಯ ಅಂತ ಕರಿಬೇಕು
ಅಯ್ಯೋ ದಾಸಪ್ಪ ನೀಲ್ಗಿರಿ ಕೈಲಾಸದಿಂದ ಬಂದಿರೋದು
ನಾರಾಯ್ಣಮೂರ್ತಿ ಅಂದ್ರೆ ಸುಲ್ಪ ಅಲ್ಲಪ್ಪ

ಏನಯ್ಯ ಆ ತರ ಮಾತು
ಅರ್ತವಿಲ್ಲದ ಮಾತ ಆಡ್ತಿಯಲ್ಲ
ಅಪ್ಪ ಸ್ವಾಮಿ ರಂಗಯ್ನ ತೇರು ಅಂದ್ರೆ
ಬಾವ ರಂಗಯ್ಯ ತೇರು ಅಂತಿಯಲ್ಲಿ
ಏಯ್ ಸೋಲಿಗ್ರೈಕ್ಳ ಈವೊತ್ತು
ಸ್ವಾಮಿ ರಂಗಯ್ನ ಮಾತ್ ಮರ್ತ್‌ಬುಡಿ

ನಿಮ್ಮ ಬಾವ ರಂಗಯ್ನ ಜಾತುರೆಗೆsss ‖ **ತಂದಾನ** ‖
ಅಯ್ಯ ಬಾವ ರಂಗಯ್ಯ ತೇರಿಗೆ ಉಡ್ಗೀರುsss
ಬಳಸಿ ಬುಡಿರಮ್ಮ ಬಾಳೆಅಣ್ಣsss ‖ **ತಂದಾನ** ‖
ಅಯ್ಯ ಬಳ್ಸಿಬುಡಿರೊ ಬಾಳೆಅಣ್ಣ ಉಡುಗಿರೆsss
ತೆಂಕಲ ಕಡಿಕಂತೆ ವೋಗುತದೆsss ‖ **ತಂದಾನ** ‖
ನೋಡ್ರಕ್ಕ ನೋಡ್ರಕ್ಕ ದಾಸಯ್ಯ ಸಿಡುಗಕ್ಕsss
ಸೆಡ್ಗು ನರಾರಿ ಬೇಡsss ‖ **ತಂದಾನ** ‖

ಅಕ್ಕ ಅಕ್ಕ ಚಿಕ್ರಂಗಿ ಅಕ್ಕ
ಏನವ್ವ……
ನಾರಾಗಿದ್ರು ಬಲ ಜೋರಾಗಿದ್ದಾನೆ
ಮುದ್ಕುನಾದ್ರು ಬಲು ಸಡ್ಕನಾಗಿದ್ದಾನೆ.
ನೋಡಕ್ಕ ದಾಸಯ್ನದು ಎಂತ ಸಿಡ್ಕಾಡ ಆಡ್ತಾನೆ
ಬೆಡ್ಗಾಟ ಆಡ್ತಾನೆ

ಅಪ್ಪ ಬೆಡ್ಗು ದಾಸಯ್ಯ ವೇಸ ನೋಡಿರವ್ವsss ‖ **ತಂದಾನ** ‖
ಏಯ್ ಬೆಡ್ಗು ದಾಸಯ್ಯ ವೇಸ ನೋಡ್ರಕ್ಕ ನೋಡ್ರಕ್ಕsss
ಬಾವ ರಂಗಯ್ಯ ಎನ್ನೂ ಕರೆಯಬೇಕsss ‖ **ತಂದಾನ** ‖

ಏದಾಸಯ್ಯ ಹೋಗು ಕಲ್ಯಾಣಿ ಕೊಳ್ಕ
ಕಲ್ಯಾಣಿ ಕೊಳಕ್ಕ ವೋಗಪ್ಪ ನೀನು
ಈವೊತ್ತು ನಮ್ಮೊಂದ್ಗೆ ಆಟ ಪಾಟ ಆಡ್ದೆ
ಮಾರ್ವಾದಿ ಮಾನ ಉಳಿಸ್ಬೇಕು
ವೋಗಪ್ಪ ನೀನು ನಮ್‌ಜಾತಿ ಅಂದ್ರೆ
ಕುಲ್ದಲ್ಲಿ ಕುರುಬ ಒಕ್ಲಿಗ
ಜಾತಿಲಿ ದೇವಸೋಲ್ಗ ನೀತಿಗೌಡ್ರು ನಾವು
ನಮ್ಮ ಕುಲ್ದವ್ರು ಕಂಡ್ಬುಟ್ರೆ ಅನ್ನೇಡ್ ವರ್ಸ ನಮ್ಮ
ವೊರ್ಗಿಟ್ ಬುಡ್ತಾರೆ
ವಜಾ ಮಾಡ್ಬುಡ್ತಾರೆ
ಸ್ವಲ್ಪ ನೀನು ಆಚೆ ವೋಗಪ್ಪ ಅನ್ನವೊತ್ಗೆ

ಅವ ಕಿಲಕಿಲ್ನೆ ನಗೆಯ ಆಡುತಾನೆsss **|| ತಂದಾನ ||**
ಏಯ್ ಕಿಲಕಿಲ್ನೆ ನಗೆಯ ಆಡ್ಕೊಂಡು ರಂಗಪ್ಪsss

ಟುಮ್ಮು ಟುಮ್ಮು ಟುಮ್ಮನೆ ಕುಣ್ಕಂದು ರಂಗಯ್ಯ

ಮೆಲ್‌ಮೆಲ್ಗೆ ಸ್ವಾಮಿ ಬರುತಾರೆsss **|| ತಂದಾನ ||**

ಮೆಲ್‌ಮೆಲ್ಗೆ ಬರ್ವಾಗ ಅಯ್ಯೋ ಮುದ್ಕಯ್ಯ
ಯಾಕಯ್ಯ ಸಾಕಾದಯಿ ದಾಸಯ್ಯ
ಕಲ್ಯಾಣಿ ಕೊಳಕ್ಕೋಗಪ್ಪ
ಮಗ್ಗ ಮರಳಿ, ಎಗ್ಗಡೆದೇವನಕೋಟೆ
ರಂಜಕಲ್ಲು,
ಪಿರಿಯಾಪಟ್ಣ
ಸಂತೆಸರ್ಗೂರು,
ಬೆಂಗಳೂರು
ಬೀರಳ್ಳಿ,
ಈ ಕಡೆ ಬಕ್ತಾದಿಗಳೆಲ್ಲಾ ಬಂದಿದಾರೆ
ತಂಗ್ಳನ ಉಂಡು ತಣ್ಣೀರ್ ಕುಡ್ಕೊಂದ್ ಬಂದಿದಾರೆ
ಕಲ್ಯಾಣಿ ಕೊಳಕ್ಕೊಗಪ್ಪ ಅಂತ ಯೇಳ್ವಾಗ
ದಾಸಪ್ನೋರು ಅಲ್ಲಿ ಏನಮ್ಮ ಕೊಡ್ತಾರೆ ಅಂದ್ರು
ಅಯ್ಯೊ ನಿಮ್ಮಂತ ದಾಸಪ್ನೋರು ಏನ್ಮಾಡ್ತ ಇದಾರೆ
ಈವೊತ್ತು ಅಣ್ಣು ಮುರಿತಾ ಇದಾರೆ
ಕಾಯಿ ಒಡಿತಾ ಇದಾರೆ
ಅರಿಸ್ಣ ಕುಂಕುಮ ಆಕ್ತಾರೆ
ಪಾದ ತೊಳಿತಾರೆ.

ನಿಂಗೆ ತಂಗಳು ಬುತ್ತಿ ಕೊಡುತಾರೆsss **|| ತಂದಾನ ||**
ತಂಗುಳ್ ಬುತ್ತಿಯ ಉಂಡು ತಣ್ಣಿರ್ ಕುಡುಕೊಂಡುsss
ತಣ್ಣಗೆ ಬತ್ತಾರೆ ನಿನ್ನ ಪರುಸೆsss **|| ತಂದಾನ ||**
ನಾಳೆ ಅರ್ಸೆವೆ ದಿವ್ಸ ದಾಸಯ್ಯsss
ಮರಿಯಾ ಕೋಳಿರಯ ಕುಯ್ಯುತಾರೆsss **|| ತಂದಾನ ||**

ಅಪ್ಪ ಮುದ್ಕಪ್ಪ ನಾಳೆ ದಿವ್ಸ ಮರಿ ಕುಯ್ದ್ ಬುಟ್ಟು
ಕೋಳಿ ಕುಯ್ದ್‌ಬುಟ್ಟು ಮೀಸಲು ಬಿಡದುಂಟು
ಬೇಳೆ ಬದನೆಕಾಯಿ ಆಕದುಂಟು
ದಾಸ್ಕೊಳ್ಗೆ ವೊಟ್ಟೆ ತುಂಬಾ ಊಟ ಸಿಕ್ತದೆ
ಮೂರ್ ದಿವ್ಸ ದಾಸಪ್ಪ

ಊಟ ಮಾಡ್ಕಂಡು ವೊಟ್ಟೆ ತುಂಬ್ಸು ವೋಗಪ್ಪ
ನಾವ್ ನೋಡುದ್ರೆ ಪೋಡ್ನ ಒಳ್ಗಿರುವಂತ ಸೋಲುಗ್ರು ನಾವು
ಸೋಲಗಿತ್ತಿಯ ಸಗುತ ನೋಡಕ ನೀನು
ಇಸ್ಟು ಅವತಾರಕ್ಕೆ ಬಂದಿದ್ದೀಯಲ್ಲ ಅಂದ್ಬುಟ್ಟು
ಚಿಕ್ಕಾಡಿ …. .

ಅವ ಕಣ್ಮಿಂಚ ಕಣ್ಣ ಒಡಿತಾಳೆsss || **ತಂದಾನ** ||
ಅಕ್ಕ ಚಿಕ್ರಂಗಿ ದೊಡ್ರಂಗಿ ಚಿಕ್ಕಾಡಿ ದೊಡ್ಕಾಡಿsss
ದಾಸಯ್ನ ಬುಟ್ಟು ನಡಿರಪ್ಪsss || **ತಂದಾನ** ||

ದಾಸಯ್ನ ಬುಟ್ಟು ನಡ್ರಪ್ಪ ಅಂದ್ಬುಟ್ಟು
ಈ ಮುದ್ಕ ದಾಸಪ್ನ ನೋಡುದ್ರೆ
ಬಾಳ ಸಡ್ಕ ಆಡ್ತಾನೆ ಅಂದ್ಬುಟ್ಟು
ಅಲ್ಲಾಣಿ ಇಲ್ಲಾಣಿ …
ಸೋಲಿಗ ಬೊಮ್ಮೆಗೌಡ್ನ ಮಕ್ಳು
ತೇರು ತೆಪ್ಪ ಅಸ್ರೇವೆ ಗುರ್ಸೇವೆಯಲ್ಲ ಆಗ್ಬುಡ್ತು
ಆರ್ ಸೇರಕ್ಕಿ ಒಡಿಯ ತೆಂಗಿನಕಾಯಿ
ಒಡೆಯ ರಂಗಪ್ನ ಆರ್ಸೆವೆ ಆಗೋಗ್‌ಬುಡ್ತು

ಅವ್ರು ಕಾಡ್ಗುಡಿತಮೆ ಬರುತಾರೆsss || **ತಂದಾನ** ||
ಬಾಣಿ ವುಲ್ಲಿನ ಬಗ್ಗಿ ತಾ ಬತ್ತವ್ನೆsss
ಆರು ನೋಡ್ರಕ್ಕ ದೊಡ್ರಂಗಿsss || **ತಂದಾನ** ||

ಬಾಣು ವುಲ್ಲು ನೋಡ್ತಾರೆ
ಬಗ್ತ ಇಗ್ತ ಬರ್ತಾ ಇದ್ದಾರೆ
ಆರಕ್ಕಾ ಅಲ್ಲಿಬತ್ತಾ ಇರವ್ನು ಆರಕ್ಕ

ಅಲ್ಲಿ ನಾಡಿನ ದಾಸಯ್ಯ ಪೋಡಿಗೆ ಬತ್ತವ್ನೇsss
ಬೇಗ ಬೇಗ ನಡಿರಮ್ಮsss || **ತಂದಾನ** ||
ದಾಸಯ್ನ ವೇಸವೂ ದೇಸೆಲ್ಲ ಬಲ್ಲದುsss
ದಾಸಯ್ನ ಬುದ್ದಿ ಬಿಡನಿಲ್ಲsss || **ತಂದಾನ** ||

ನಾಡಿನ ದಾಸಯ್ಯ ಪೋಡಿಗೆ ಬಂದ್ಬುಟ್ಟಿದಾನೆ ಅಂದ್ಬುಟ್ಟು
ಕದ್ದು ಬಿದ್ದೆಲ್ಲಾ ಓಡ್ಬುಟ್ರು
ಆಹಾ! ಈವೋತ್ತಿನ ದಿವ್ಸ ಸೋಲಿಗರ ಬೊಮ್ಮೆಗೌಡ್ನ
ಮಕ್ಳಲ್ಲಿ ನಿನ್ನ ತಂದು ನನ್ನ ಮೇಲುಗಿರಿಕೆ

ನಾನು ಮೆರ್ಸದ ಮೇಲೆ ಜಾಣ ರಂಗಯ್ಯನಲ್ಲ
ತೀರ್ತ ತಿಮ್ಮಯ್ಯಲ್ಲಿ ಮೇಲ್‌ಗಿರಿಕೆ ರಂಗಯ್ಯನಲ್ಲಿ ನಾನು

ನಾಮ ಇಕ್ಡಾಕೆ ನಲವೇನುsss || **ತಂದಾನ** ||
ಅಯ್ಯ ನಾಮ ಇಕ್ಡಾಕೆ ಸಲಮೆ ಎಂದ್ಬುಟ್ಟುsss
ಪಂತ ಒತ್ತವ್ರೆ ನಾರಾಯ್ಣsss || **ತಂದಾನ** ||
ಆಡಿರಿ ರಾಗಗಳ ನುಡಿಸಿರಿ ತಾಳಗಳsss
ಮುದ್ದು ರಂಗಯ್ಯ ಗಿರಿಯಮೇಲೆsss
ಅಚ್ಚಿರಿ ದೀಪಗಳ ಆಕಿರಿ ದೂಪಗಳsss || **ಆಡಿರಿ** ||
ರಾಮ ರಂಗಯ್ಯ ಗಿರೀಲಿsss
ಜಾತ್ರೆಯ ಗೊತ್ತsss
ಸಂಕು ಉಟ್ಟದ ಸನುವಾರsss || **ಆಡಿರಿ** ||
ಮುಂದಾಲ ಪರೋಸೇಲಿsss
ಬಕೌರು ಇವರ್ಯಾರುsss
ಲೋಕ ತಂದವ್ರು ನಾರಾಯ್ಣsss || **ಆಡಿರಿ** ||
ಮುಂದಲ ಪರಸೇಲಿsss
ಬರವ್ರು ಇವರ್ಯಾರುsss
ಲೋಕ ಕಂಡವ್ರು ನಾರಾಯ್ಣsss || **ಆಡಿರಿ** ||

## ೭. ಅನುಬಂಧ: ೧.

## ಬಿಳಿಗಿರಿರಂಗನ ಕಾವ್ಯದ ಪ್ರಧಾನ ಕಲಾವಿದರಾದ ಶ್ರೀ ದಂಬಡಿ ಕ್ಯಾತೇಗೌಡ ಅವರೊಡನೆ ಸಂದರ್ಶನ

**ಸಂದರ್ಶಿಸಿದವರು : ಡಾ. ಕೆ. ಕೇಶವ್ ಪ್ರಸಾದ್**

**ಸಂ :** ನಮಸ್ಕಾರ ಯಜಮಾನ್ರೆ ನೀವು ಬಿಳಿಗಿರಿ ರಂಗನ ಬಗ್ಗೆ ಹಾಡ್ ಹೇಳ್ತಿರ ಅಂತ ಗೊತ್ತಾಯ್ತು. ಅದಕ್ಕೆ ನಿಮ್ಮತ್ರ ಬಂದೆ. ನಿಮ್ಮ ಹೆಸರೇನು?.

**ಕಲಾವಿದ :** ನೋಡಪ್ಪಾ ನನ್ನೆಸ್ರು ಕ್ಯಾತೇಗೌಡ ಅಂತ. ಎಲ್ರು ನನ್ನ ದಂಬ್ಡಿ ಕ್ಯಾತೇಗೌಡಾಂತ ಕರಿತಾರೆ.

**ಸಂ :** ನಿಮ್ದು ಯಾವ್ ಪೋಡ್ ಕ್ಯಾತೇಗೌಡ್ರೇ?

**ಕಲಾವಿದ :** ಮಂಜಿಗುಂಡಿ ಪೋಡಪ್ಪ

**ಸಂ :** ನಿಮ್ಗೆಎಷ್ಟು ಜನ ಮಕ್ಳು?

**ಕಲಾವಿದ :** ಇದಾರಪ್ಪ ಏನುಪಯೋಗ? ಮಗ ಇದಾನೆ, ಮಾಗ್ಳಿದ್ದಾಳೆ, ನಾನು ನಮ್ಮೆಂಗ್ಸು ಇದ್ದೀವಿ.

**ಸಂ :** ಮಕ್ಳಿಗೆ ಮದ್ವೆ ಆಗಿದೆಯಾ?

**ಕಲಾವಿದ :** ಆಗಿದ್ಯಪ್ಪ

**ಸಂ :** ನೀವು ಏನ್ ಕೆಲ್ಸ ಮಾಡ್ಕಂತ ಇದ್ದೀರಿ?

**ಕಲಾವಿದ :** ಒಂದಿಸ್ಟ್ ಬೂಮಿ ಉಂಟಪ್ಪ, ಅದ್ರಾಗೆ ಏನಾದ್ರು ಬೆಳೆತಿವಿ. ಆನೆ ಬಂದು ತುಳ್ದಾಕ್ ಬಿಟ್ರೆ ನಮ್ ಕೈಗೆ ಏನು ಸಿಗಲ್ಲ

**ಸಂ :** ನೀವು ಹಾಡ್ ಹೇಳ್ತಿರಲ್ಲ, ಯಾವ್ ಯಾವ ಹಾಡ್ ಹೇಳ್ತಿರಿ?

**ಕಲಾವಿದ :** ಎಲ್ಲಾ ಆಡ್ತಿವಪ್ಪ, ಬಿಳ್ಗಿರಿರಂಗುನ್ದು ಗೊತ್ತು , ಮಾದಪ್ನ ಹಾಡು ಗೊತ್ತು ಮುಡ್ಕು ತೊರೆ ಮಲ್ಲಪ್ನ ಹಾಡು ಗೊತ್ತು.

**ಸಂ :** ನಿಮ್ದು ಯಾವ್ ಕುಲ ಯಜಮಾನ್ರೇ?

**ಕಲಾವಿದ :** ನಮ್ದು ಕುಲ ಅಂದ್ರೆ ನೋಡ್ಯಪ್ಪ ತೆನೇರ್ ಕುಲ

**ಸಂ :** ನಿಮಗೆ ದಂಡಬಿ ಕ್ಯಾತೇಗೌಡ ಅನ್ನೊ ಹೆಸ್ರು ಯಾಕ್ಬಂತು?

**ಕಲಾವಿದ :** ನಾನು ದಂಬ್ಡಿ ಬಡ್ಕೊಂದ್ ಹಾಡೇಳ್ತಿನಲ್ಲ ಅದಕ್ಕೆ ಆಗಂತ ಕರಿತಾರಪ್ಪ

**ಸಂ :** ಸರಿ ಯಜಮಾನ್ರೆ ನೀವು ಹಾಡೇಳ್ತ ಎಲ್ಲೆಲ್ಲೋಗ್ತಿರಿ?

**ಕಲಾವಿದ :** ಎಲ್ಲುಯಿಲ್ಲಪ್ಪ. ನಾಡ್ಗೋಗ್ತಿನಿ ದೇವಸ್ತಾನ್ದಲ್ಲಿ ಕುತ್ಗೊಂದು ಹಾಡ್ತಿನಪ್ಪ. ಬಂದ ಬಕ್ತ್ರು ತಮ್ಮ ದುಡ್ಡಲ್ಲಿ ಇದ್ದಸ್ಟ್ ಕೊಡ್ತಾರಪ್ಪ.

**ಸಂ :** ದಿನಕ್ಕೆ ಎಷ್ಟ್ ಗಳಿಸ್ತೀರಿ?

**ಕಲಾವಿದ :** ಎಷ್ಟುಯಿಲ್ಲಪ್ಪ, ಅತ್ತಿಪ್ಪತ್ ರೂಪಾಯಿ ಸಿಕ್ಕುತ್ತೆ. ದೇವ್ರ ಪ್ರಸಾದ ಕೊಡ್ತಾರೆ.ಎನೋ ದೇವ್ರಯೆಸ್ರೇಳಿ ಬೇಡ್ಕೊಂತ ಬದ್ಕಿದ್ದೀವಪ್ಪ.

**ಸಂ :** ಯಾಕೆ ಯಜಮಾನ್ರೇ ನಿಮ್ಗೆ ಸರ್ಕಾರದಿಂದ ಬೇಕಾದಷ್ಟ್ ಸಹಾಯ ಮಾಡ್ತಾಯಿದ್ದಾರಲ್ಲ. ನಿಮ್ಗೆ ಏನು ಅಲ್ಕೂಲ ಆಗಿಲ್ಲಾ?

**ಕಲಾವಿದ :** ಒಂದ್ ಮನೆ ಕೊಟ್ಟಿದ್ದಾರಪ್ಪ

**ಸಂ :** ನಿಮ್ಮ ಮಕ್ಕಳು ಯಾರು ಓದಿಲ್ವಾ?

**ಕಲಾವಿದ :** ಕೇಂದ್ರಕೋಗ್ತಿದ್ವಪ್ಪ (ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ) ಅದೇನೋ ಒಂದಸ್ಟ್ ಓದಿ ಮುಂದೆ ವೋಗಿಲ್ಲಪ್ಪ

**ಸಂ :** ಯಾಜಮಾನ್ರೆ ನೀವು ಬಿಳ್ಗಿರಿರಂಗಪ್ನ ಕತೆನಾ ಪೂರಾ ಹಾಡ್ಬೇಕಲ್ಲ. ನಿಮ್ಜೊತೆಗೆ ಯಾರನ್ನಾದ್ರು ಸೇರಿಸ್ಕೋಳ್ಳಿ. ಅಂಥವ್ರು ಯಾರಾದ್ರು ಇದ್ದಾರಾ?

**ಕಲಾವಿದ :** ಯಿಲ್ಲಪ್ಪ ಅವ್ರು ಬೇಕಂದ್ರೆ ಕೊಳೇಗಾಲ್ದ ಕಡೆಗೇ ಹೋಗ್ಬೇಕು.

**ಸಂ :** ಆಗ್ಲಿ ಪರ್ವಾಗಿಲ್ಲ. ಒಟ್ನಲ್ಲಿ ನೀವು ರಂಗಪ್ನ ಕತೆ ಪೂರ್ತಿ ಹೇಳಿ. ನಾನು ಅದನ್ನ ರೆಕಾರ್ಡ್ ಮಾಡ್ಕಂಡು ನಮ್ಮ ವಿಶ್ವವಿದ್ಯಾಲಯದಿಂದ ಪುಸ್ತಕ ಮಾಡಿ ಕೊಡ್ತಿವಿ.

**ಕಲಾವಿದ :** ಆಗ಼್ಪ್ಪ ಬಿಳಿಕಲ್ ಬೆಟ್ಟದ ರಂಗಪ್ಪ ಅಂದ್ರೆ ಸೋಲುಗ್ರುಗೆ ಬಾವ ಆಗ್ಬೇಕು. ಸೋಲುಗ್ರ ಹೆಣ್ಣ ಕದ್ಕೊಂಡ್ಹೋಗಿ ಮದ್ವೆ ಆದ್ನಲ್ಲ ಅದ್ನೆಲ್ಲ ಹೇಳ್ಬೇಕು.

**ಸಂ :** ಹಾಗಾದ್ರೆ ರಂಗಪ್ಪ ನಿಮ್ಗೆ ಬಾವ ಮತ್ತೆ ದೇವ್ರು

**ಕಲಾವಿದ :** ಹೌದಪ್ಪ, ಬಾಳ ಸತ್ವಂತ ದೇವ್ರು.

**ಸಂ :** ರಂಗಪ್ನ ಜಾತ್ರೆ ಯಾವಾಗ್ ಆಗುತ್ತೇ ಯಜಮಾನ್ರೇ?

**ಕಲಾವಿದ :** ಚಿಕ್ಕಜಾತ್ರೆ, ದೊಡ್ ಜಾತ್ರೆ ಅಂತ ಮಾಡ್ತಾರಪ್ಪ

**ಸಂ :** ಅವುನಡೆಯೋದ್ ಯಾವಾಗ

**ಕಲಾವಿದ :** ಸಂಕ್ರಾತಿಯಲ್ಲಿ ಚಿಕ್ಕಜಾತ್ರೆ ನಡಿತದಪ್ಪ. ಆಗ ರಂಗಪ್ನ ದೇವಸ್ಥಾನದ ಉತ್ತರದ ಬಾಗ್ಲು ತೆಗಿತಾರಾಪ್ಪ. ಅದನ್ನ ಸ್ವರ್ಗದ್ ಬಾಗ್ಲು ಅಂತಾರೆ. ಆಗ ಬಾಳಜನ ಬರ್ತಾರಪ್ಪ.

**ಸಂ :** ಹಾಗಾದ್ರೆ ದೊಡ್ಡ ಜಾತ್ರೆ ಯಾವಾಗ?

**ಕಲಾವಿದ :** ಅದು ನೋಡಪ್ಪ ಹುಣ್ಮೇಲಿ ಆಗುತಪ್ಪ, ಬೇಸ್ಗೆ ಇರ್ತದೆ. ಕೆರೇಲಿ ನೀರು ಕಮ್ಮಿಯಿರ್ತದೆ. ಪುರಾಣಿ ಕೊಳ್ದಲ್ಲಿ ಮಾತ್ರ ನೀರಿರ್ತದೆ. ಅಲ್ಲಿ ತೆಪ್ಪೋತ್ಸವ ಮಾಡ್ತಾರಪ್ಪ.

**ಸಂ :** ಇದು ಎಷ್ಟು ದಿನ ನಡಿತದೆ ಯಜಮಾನ್ರೇ?

**ಕಲಾವಿದ :** ಇದು ನೋಡಪ್ಪ ಮೂರ್ ದಿನ ನಡಿತದೆ. ನಾಡಿನ್ ಜನ ಎಲ್ಲ ಬರ್ತಾರೆ. ಸರ್ಕಾದವ್ರು ಜಾಸ್ತಿ ಬಸ್ ಬುಡ್ತಾರೆ. ಬಾರಿ ಜನ ಸೇರ್ತಾರೆ.

**ಸಂ :** ಈ ಎರಡು ಜಾತ್ರೆ ಜೊತೆಗೆ ಮತ್ತೆ ಯಾವ್‌ಯಾವ ಹಬ್ಬಗಳಿವೆ.

**ಕಲಾವಿದ :** ಮಾದಪ್ನ ಜಾತ್ರೆ, ಜಡೇಸ್ವಾಮಿ ಹಬ್ಬ, ಕ್ಯಾತೇದೆವ್ರ ಹಬ್ಬ, ರೊಟ್ಟಿ ಹಬ್ಬ ಉಂಟಪ್ಪ.

**ಸಂ :** ನೀವು ಮಾದಪ್ಪನನ್ನು ಪೂಜೆ ಮಾಡ್ತೀರಾ?

**ಕಲಾವಿದ :** ಮಾದಪ್ನ ವರ್ದಲ್ಲಿ ಹುಟ್ದವ್ರು ಕಾರಯ್ಯ ಬಿಲ್ಲಯ್ಯ ಸೋಲಿಗ್ರ ಮಕ್ಳು. ಅವ್ರು ಮಾದಪ್ನ ಶಿಷ್ಯಂದ್ರು. ಈ ಪೂಜೆ ಮಾಡೋ ಬೇಡಗಂಪ್ನದವ್ರು ಬಿಲ್ಲಯ್ಯನ ಮೂಲ್ದವ್ರು. ಆದ್ರಿಂದ ಕೊಳ್ಳೇಗಾಲ್ದ ನಮ್ ಸೋಲುಗ್ರು ಮಾದಪ್ಪನ್ನ ಪೂಜುಸ್ತಾರೆ. ನಾವು ಹೋಗ್ತಿವಿ.

**ಸಂ :** ಹಾಗಾದ್ರೆ ಮಾದೇಶ್ವರ ಬೆಟ್ಟದ ಕಡೆ ಇರೋ ಸೋಲಿಗರಿಗೆ ಮಾದಪ್ಪ ಮನೆದೇವ್ರು. ಬಿಳಿಗಿರಿರಂಗನ ಬೆಟ್ಟದಲ್ಲಿ ಇರೋ ನಿಮ್ಗೆ ರಂಗಪ್ಪ ಮನೆದೇವ್ರು ಹೌದೋ?

**ಕಲಾವಿದ :** ಹೌದಪ್ಪ. ಕುಲದೇವ್ರನ್ನು ಪೂಜಿಸ್ತೀವಿ.

**ಸಂ :** ನಿಮ್ಮ ಕುಲದೇವ್ರು ಅಂದ್ರಲ್ಲ ಅದೇಲ್ಲಿದೆ.

**ಕಲಾವಿದ :** ಅದು ಇಲ್ಲು ಇದೆ. ಕೊಳ್ಳೇಗಾಲ್ದಲ್ಲು ಇದೆ. ವರ್ಸದಲ್ಲಿ ಒಂದ್ಸಾರಿ ಹಬ್ಬ ಮಾಡ್ತಿವಿ.

**ಸಂ :** 'ರೊಟ್ಟಿ ಹಬ್ಬ ' ಅಂದ್ರಲ್ಲ ಅದೇನು?

**ಕಲಾವಿದ :** ಅದು ನೋಡಪ್ಪ ರಾಗಿ ಬೆಲೆ ಬಂದ್ಮೇಲೆ ಕುಲ್ದವ್ರೆಲ್ಲ ಸೇರಿ ತೀರ್ಮಾನ ಮಾಡ್ತಿವಿ.

**ಸಂ :** ಅದು ಎಲ್ಲಿ ನಡಿತದೆ?

**ಕಲಾವಿದ :** ರೊಟ್ಟಿ ಹಬ್ಬ ಮಾಡ್ವಾಗ ಬೇಸ್ಗೆ ಇರ್ತದಪ್ಪ. ಅದಕ್ಕೆ ನೀರಿರ್ ಬೇಕು. ನಮ್ಮ ಸೋಲುಗ್ರ ಜನರೆಲ್ಲಾ ಸೇರ್ತದಲ್ಲ ಜಾಸ್ತಿ ಜಾಗಬೇಕು. ಅದಕ್ಕೆ ಒಂದ್ ಬಯ್ಲಾಗಿರೋ ಕಡೆ ಮಾಡ್ತಿವಪ್ಪ.

**ಸಂ :** ಅದರ ವಿಶೇಷ ಹೇಳ್ತಿರಾ?

**ಕಲಾವಿದ :** ಬಾಳ ನೇಮದಿಂದ ಮಾಡ್ಬೇಕಪ್ಪ ಅದು. ರಾಗಿ ಬೆಳಿದಿರೋರೆಲ್ಲಾ ಸರ್ದಿಕೊಡ್ತರಪ್ಪ. ಕಾಳು ಕೋಡೋರು ಕೊಡ್ತಾರೆ. ಹಣ ಕೊಡೋರು ಕೊಡ್ತಾರೆ. ಎಲ್ಲ ಸೇರಿದ್ಮೇಲೆ ತೀರ್ಮಾನ ಆದ ದಿನ ಎಲ್ಲಾ ಸೇರ್ತಾರೆ. ಕಾಡಿಂದ ಬಿದ್ರು (ಬಾಳ ನೇಮದಿಂದ ತರಬೇಕು) ತಂದು ದೇವಸ್ಥಾನ ಕಟ್ತಾರೆ. ಅದ್ರಲ್ಲಿ ಕುಲ್ದೇವ್ರ ಇಟ್ಟು ಪೂಜಾ ಮಾಡ್ತಿವಿ. ಆಮೇಲೆ ರಾಗಿ ರೊಟ್ಟಿ ಮಾಡೋದುಈ ಹಬ್ದ ವಿಶೇಷ. ಅವರೆ ಕಾಳು ಹಲಸಿನ ಕಾಯಿ ತಾಳ್ದ (ಪಲ್ಯ) ಮಾಡ್ತಿವಪ್ಪ.

**ಸಂ :** ರೊಟ್ಟಿ ಮಾಡೊ ಕ್ರಮ ಹೇಗೆ?

**ಕಲಾವಿದ :** ರಾಗಿಯಿಟ್ ಕಲ್ಸಿ ಅದನ್ನ ತೇಗ್ದ ಎಲೆಯಲ್ಲಿ ತಟ್ಟಿ ಮೇಲೊಂದ್ ತೇಗ್ದ ಎಲೆ ಮುಚ್ಚಿ ಬೆಂಕಿಯಲ್ಲಿ ಹಾಕ್ತಿವಿ. ಅದನ್ನ ಹುಡುಗ್ರು ಬಿದ್ರಿನ ಕೋಲಿನಿಂದ ಮೇಲ ಕೆಳ್ಗ ಮಾಡಿ ಬೇಯಿಸ್ತಾರೆ. ಅದನ್ನೆಲ್ಲ ತುಂಬಿ ದೇವಾಸ್ಥಾನದಲ್ಲಿಟ್ಟು ಪೂಜಾ ಮಾಡಿ ಮೊದ್ಲು ನಮ್ ಕುಲ್ದೇವ್ರಿಗೆ ಎಡೆಮಾಡಿ (ನೈವೇದ್ಯ) ಆಮೇಲೆ ಬಂದ ಜನ್ರಿಗೆಲ್ಲ ಹೆಣ್ಣು ಗಂಡು, ಮಕ್ಳು ಮರಿ, ಮನೇಲಿರಾ ಪ್ರತಿಯೊಬ್ರಿಗೂ ಪ್ರಸಾದ ಕೊಡ್ಬೇಕು. ಹಬ್ಬಕ್ಕೆ ಬರ್ಲಿಲ್ಲ ಅಂದ್ರೆ ಅವ್ರ ಪಾಲ್ನ ಪ್ರಸಾದ ಮನೆಗೆ ಕಳಿಸ್ ಬೇಕು. ಗರ್ಭಿಣಿ ಹೊಟ್ಟೇಲಿರೋ ಮಗುಗೂ ಈ ಪ್ರಸಾದ್ದ ಪಾಲು ಕೊಡಬೇಕಪ್ಪ.

**ಸಂ :** ಮತ್ತೇ ಹಬ್ಬದ ವಿಶೇಷ ಏನು?

**ಕಲಾವಿದ :** ಬಂದವರ್ಗೆಲ್ಲಾ ಊಟ ಆದ್ಮೇಲೆ ಆವೊತ್ತು ರಾತ್ರಿ ಪೂರ್ತಿ ಪೂಜೆ ಮಾಡ್ಬೇಕಪ್ಪ. ದೇವ್ರಹತ್ರ ಬಂದ ಜನ ತಮ್ಮ ಕಷ್ಟ ಸುಖ ಕೇಳ್ತಾರಪ್ಪ. ಅದಕ್ಕೆ ದೇವ್ರು ಈಗಾಗುತ್ತೆ ಈಗ್ಮಾಡ್ಬೇಕು ಅಂತ ವಾದ್ಗಾನ ಕೊಡುತ್ತೆ. ಹೆಣ್ಣು ಗಂಡು ದೇವಸ್ಥಾನದ ಮುಂದೆ ಹಾಡೇಳ್ತಾ ಕುಣಿತ್ತಾರೆ. ಜನ್ರಿಗೆಲ್ಲ ಖುಷಿ ಕೊಡ್ತಾರೆ. ನಕ್ಲಿ ವೇಷ ಹಾಕದು ಉಂಟು.

**ಸಂ :** ನಕ್ಲಿ ವೇಷ ಅಂದ್ರೇನು?

**ಕಲಾವಿದ :** ಒಬ್ಬ ಹುಡ್ಗ ಹೆಣ್ ವೇಷ ಹಾಕ್ಕೊಂಡು ಕುಣ್ತಾ ಮಾಡ್ತಾರಲ್ಲ ಅವ್ರ ಜೊತೆ ತಮಾಷೆ ಮಾಡ್ತ ಖುಷಿ ಕೊಡ್ತಾನೆ.

**ಸಂ :** ಯಜಮಾನ್ರೆ ಬಹಳಷ್ಟು ವಿಚಾರ ತಿಳಿದಿದ್ದೀರಿ ನೀವು ಮತ್ತು ಇನ್ನಿಬ್ರು ಕಲಾವಿದರಾದ ಶ್ರೀ ಶ್ರೀ ತಂಬೂರಿ ದಾಸ್ಸೇಗೌಡ ಮತ್ತು ಶ್ರೀ ಸಪ್ಪೇ ಸಿದ್ದೇಗೌಡ ಅವರು ಸೇರಿ ಬಿಳಿಗಿರಿರಂಗಪ್ಪನ ಹಾಡೇಳಿ ರೆಕಾರ್ಡ್ ಮಾಡ್ಕೊಳ್ಳಕ್ಕೆ ಸಹಕಾರಿ ನೀಡಿದ್ದೀರಿ. ಆದ್ದರಿಂದ ತಮಗೆ ಬುಡಕಟ್ಟು ಅಧ್ಯಯನ ವಿಭಾಗದ ಪರವಾಗಿ, ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಮತ್ತು ನನ್ನ ಪರವಾಗಿ ನಿಮಗೆ ವಂದನೆಗಳನ್ನ ಹೇಳ್ತೀನಿ. ನೀವ್ ಏನು ಹಾಡಿದ್ದೀರಿ ಅದನ್ನ ಪುಸ್ತ್ಕ ಮಾಡಿದ ಮೇಲೆ ನಿಮ್ಗು ಒಂದೊಂದ್ ಪ್ರತಿ ಕೊಡ್ತೇವೆ. ಅದ್ರಲ್ಲಿ ನಿಮ್ ಹೆಸ್ರು ಇರುತ್ತೆ. ಮತ್ತೊಂದ್ ಸಾರಿ ನಿಮ್ಗೆ ವಂದನೆಗಳು.

## ೭. ಅನುಬಂಧ: ೨. ವಕ್ತೃಗಳ ವಿವರ

| ಕ್ರ. ಸಂ | ಹೆಸರು | ವಯಸ್ಸು | ವಿದ್ಯೆ | ಕಸುಬು | ಗ್ರಾಮ | ಜಾತಿ |
|---|---|---|---|---|---|---|
| ೦೧. | ಶ್ರೀ ದಂಬಡಿ ಕ್ಯಾತೇಗೌಡ | ೬೦ | ಇಲ್ಲ | ಕಲಾವಿದ | ಮಂಜಿಗುಂಡಿಪೋಡು | ಸೋಲಿಗ |
| ೦೨. | ಶ್ರೀ ಸಪ್ಪೇ ಸಿದ್ದೇಗೌಡ | ೫೫ | ಇಲ್ಲ | ಕಲಾವಿದ | ಕೊಳ್ಳೆಗಾಲ ತಾಲ್ಲೂಕು | ಸೋಲಿಗ |
| ೦೩. | ಶ್ರೀ ತಂಬೂರಿ ದಾಸೇಗೌಡ | ೬೫ | ಇಲ್ಲ | ಕಲಾವಿದ | ಕೊಳ್ಳೆಗಾಲ ತಾಲ್ಲೂಕು | ಸೋಲಿಗ |
| ೦೪. | ಶ್ರೀ ಮಾದೇಗೌಡ | ೭೦ | ಇಲ್ಲ | ಸಣ್ಣರೈತ | ಬಿಳಿಗಿರಿರಂಗನ ಬೆಟ್ಟ | ಸೋಲಿಗ |
| ೦೫. | ಶ್ರೀ ಜಡೇಗೌಡ | ೩೨ | ಎಂ.ಎಸ್ಸಿ., ಅಗ್ರಿ ಪಿಎಚ್.ಡಿ | ವಿದ್ಯಾರ್ಥಿ | ಬಿಳಿಗಿರಿರಂಗನ ಬೆಟ್ಟ | ಸೋಲಿಗ |
| ೦೬. | ಶ್ರೀ ಬಸವರಾಜ | ೩೦ | ೭ನೇ ತರಗತಿ | ಕಲಾವಿದ | ಯರಕನಗದ್ದೆ ಪೋಡು | ಸೋಲಿಗ |
| ೦೭. | ಶ್ರೀ ಮಾದೇಗೌಡ | ೩೦ | ಎಂ.ಎಸ್.ಡಬ್ಲ್ಯೂ | ಸ್ವಯಂ ಸೇವಕ | ಬಿಳಿಗಿರಿರಂಗನ ಬೆಟ್ಟ | ಸೋಲಿಗ |
| ೦೮. | ಶ್ರೀ ರಾಜು | ೨೮ | ೧೦ನೇ ತರಗತಿ | ಸ್ವಯಂ ಸೇವಕ | ಬಿಳಿಗಿರಿರಂಗನ ಬೆಟ್ಟ | ಸೋಲಿಗ |
| ೦೯. | ಶ್ರೀಮತಿ ಬಾಲನಾಗಮ್ಮ | ೪೨ | ೧೦ನೇ ತರಗತಿ | ಶಿಕ್ಷಕಿ | ಬೂದಿಪಡುಗ | ಇತರೆ |
| ೧೦. | ಶ್ರೀ ಮಲ್ಲೇಶ್ | ೪೫ | ೧೦ನೇ ತರಗತಿ | | ಬಿಳಿಗಿರಿರಂಗನ ಬೆಟ್ಟ | ಇತರೆ |
| ೧೧. | ಶ್ರೀ ಚಕ್ರವರ್ತಿ | ೪೫ | ೧೦ನೇ ತರಗತಿ | ನೌಕರ(ಖಾಸಗಿ) | ಬಿಳಿಗಿರಿರಂಗನ ಬೆಟ್ಟ | ಇತರೆ |
| ೧೨. | ಶ್ರೀ ರಾಮಾಚಾರಿ | ೪೫ | ೧೦ನೇ ತರಗತಿ | ನೌಕರ(ಖಾಸಗಿ) | ಬಿಳಿಗಿರಿರಂಗನ ಬೆಟ್ಟ | ಇತರೆ |

# ೭. ಅನುಬಂಧ: ೩. ಅರ್ಥಸೂಚಿ (೧)

| | |
|---|---|
| ತಾನ/ಸ್ತಾನ | ಸ್ನಾನ |
| ಬುಗು ಬುಗ್ನೆ | ಭಂ ಭಂ ಎಂಬ ಶಂಕದ ಶಬ್ದ |
| ಸರ್ನೋಗ್ಬುಡ್ತವೆ | ಬೇಗ ಹಾಳಾಗಿ ಬಿಡುತ್ತವೆ |
| ಬೊಳ್ಳ ಬೊಳ್ಳಗೆ | ನಿಧಾನವಾಗಿ/ಮೆಲ್ಲಮೆಲ್ಲಗೆ |
| ರೂಪು ರೇಸ | ರೂಪು, ಸೌಂದರ್ಯ |
| ಆರಪ್ಪ ಇಂವ | ಯಾರಪ್ಪ ಇವನು |
| ಬುಟ್ತಾರ? | ಬಿಡುತ್ತಾರೆಯೇ? |
| ಮಲ್ಕಸ್‌ಬುಟ್ರೆ | ಅಲುಗಾಡಿಸಿದರೆ |
| ಮಂಟು | ಕದಲಿಸು |
| ಸುಳಿ ಜೇನು | ಒಂದು ಜಾತಿಯ ಜೇನು |
| ನಾರಿ ಜೇನು | ಒಂದು ಜಾತಿಯ ಜೇನು |
| ಸೂಳೇರಗ್ಯಾನ | ವೇಶ್ಯಯರ ಮೇಲಿನ ಚಪಲ |
| ಏಡು | ಎರಡು |
| ಕೂತ್ಗಂಡು | ಕುಳಿತುಕೊಂಡು |
| ಎಡ್ಕ ಬಲ್ಕೆಲ್ಲಾ | ಎಡ ಬಲ ದಿಕ್ಕುಗಳಿಗೆಲ್ಲಾ |
| ತಳ | ಸ್ಥಳ |
| ನಿಂತ್ಗೊಳ್ಳಕ್ಕಾರು | ನಿಂತು ಕೊಳ್ಳುವುದಕ್ಕಾದರು |
| ಎಳನಾಮ | ತೆಳುವಾದ ಅಥವಾ ಸಣ್ಣದಾದ |
| ನಾಮ | ವೈಷ್ಣವ ಸಮುದಾಯದ ಸಂಪ್ರದಾಯದಂತೆ ಹಣೆಗೆ ಬರೆಯುವ ನಾವು |
| ಉಲಿಸರ್ಮ | ಹುಲಿಚರ್ಮ |
| ಆಸ್ಗೊಂಡಿದ್ದಿನಿ | ಹಾಸಿಕೊಂಡಿದ್ದೇನೆ |
| ವುಲ್ಲೇ ಸರ್ಮ | ಹುಲೆ ಅಥವಾ ಜಿಂಕೆ |
| ಮಡ್ಗಿದ್ದೀನಿ | ಇಟ್ಟಿದ್ದೇನೆ |
| ಪಲ್ಸಿಸಬ್ದ | ಪಕ್ಷಿಶಬ್ದ |
| ಅಕ್ಕಿಸಬ್ದ | ಹಕ್ಕಿಶಬ್ದ |
| 'ಕಾ' ಎಂಬ 'ಕಾಗೆ' ಸದ್ದಿಲ್ಲ | 'ಕಾ' ಎನ್ನುವ ಕಾಗೆಯ ಸುಳಿವಿಲ್ಲ / ಶಬ್ದವಿಲ್ಲ |
| 'ಗೂ' ಎಂಬ ಗೂಗೆ ಸದ್ದಿಲ್ಲ | ಗೂ ಎನ್ನುವ ಗೂಬೆಯ ಸುಳಿವಿಲ್ಲ / ಶಬ್ದವಿಲ್ಲ |
| ಸಟ್ಗ ಮಡಿಕೊ | ಸ್ವಲ್ಪ ಇಟ್ಟುಕೊಳ್ಳು |
| ಮಾಡ್ಗವೊತ್ಗ | ಇಟ್ಟು ಕೊಂಡ ಕಾರಣಕ್ಕೆ |
| ಬಾನಗ್ಲ | ಆಗಸದಷ್ಟು ವಿಸ್ತಾರವಾದ |
| ಕಂತೆ ಬೊಂತೆ | ಗಂಟು / ಮೂಟೆ |

| | |
|---|---|
| ಬಿರ್ದುಗಳ್ಗೆ | ಬಿರುದುಗಳಿಗೆ |
| ಬಾಳ | ಬಹಳ |
| ಯೋಗವಾದವ್ರು | ಯೋಗಪುರುಷರು |
| ತಕ್ಕಂಡು | ತೆಗೆದುಕೊಂಡು |
| ವಾಕ್ಯದಂತೆ | ಮಾತಿನಂತೆ / ಹೇಳಿಕೆಯಂತೆ |
| ಮೂಡಲು | ಪೂರ್ವ |
| ಪಡವಲು | ಪಶ್ಚಿಮ |
| ಬುಡ್ಕನೆಯ | ಬುಡದಲ್ಲಿಯೇ |
| ಬಗಬಗನೆ | ತರಾತುರಿಯಲ್ಲಿ |
| ಮಕ್ಕ | ಮಕ್ಕಳು |
| ಹೈಕ | ಮಕ್ಕಳು |
| ಎಬ್ಬಿದಿರು | ದೊಡ್ಡ ಬಿದಿರು |
| ದಂಡೇಲಿ | ಹತ್ತಿರ |
| ಗಕ್ಕನ್ | ತಕ್ಷಣ |
| ಪಂಡರಗಾಳಿ ಗುಂಡರನಾಮ | ಒಂಟಿ / ಏಕಾಂಗಿ ಗುರುಗುಂಜಿಯಷ್ಟು ಸುಂದರವಾದ ನರಿಗೆ ಹಾಗೂ ತುರುಬಿರುವವಳೆ |
| ಇಕ್ಕಲು ಬಟ್ಟೆ | ಹೊಲಸು/ಕೊಳೆಬಟ್ಟೆ |
| ಸೋಲಗಿತ್ತಿ | ಸೋಲಿಗರ ಹೆಣ್ಣು |
| ಇನ್ಯಾಕಯ್ಯ! | ಆಶ್ಚರ್ಯ ಪೂರಕ ಪದ/ಇನ್ನು ಯಾಕಯ್ಯ! |
| ತೇರು | ದೇವರ ಉತ್ಸವದ ರಥ |
| ತೆಪ್ಪ | ಕೆರೆ ಅಥವಾ ಕೊಳದಲ್ಲಿ ನಡೆಯುವ ದೇವರ ಉತ್ಸವ |
| ಅರ್ಸೇವೆ | ಹರಿಸೇವೆ |
| ತಲ್ಗೊಂದ್ಕಯ್ಯ | ಒಬ್ಬೊಬ್ಬರು ಒಂದೊಂದು ಕೈ ಹಾಕುವುದು |
| ಟಮ್ಮ ಟುಮ್ಮನೆ | ಕುಣಿತದ ಒಂದು ಶೈಲಿ |
| ಮೆರ್ದುಬುಟ್ಟು | ಮೆರವಣಿಗೆಯಾದ ಬಳಿಕ |
| ಸನ್ವಾರ | ಶನಿವಾರ |
| ಬೂತ ಅರ್ಸೇವೆ | ಭೂತ ಹರಿಸೇವೆ |
| ಒತ್ಗಂದ್ | ಹೊತ್ತುಕೊಂಡು |
| ಸಕುತ | ಸಗುತ ಶಕ್ತಿ |
| ಅಲ್ಲಾಣಿ | ಇಲ್ಲಾಣಿ - ಆ ಕಡೆ ಈ ಕಡೆ ಮಾರ್ಗವಾಗಿ |
| ಸುಳಿವೂವು | ಸುಳಿಹೂವು ದೇವರ ತಲೆ ಮೇಲೆ ಇರಿಸಿದ ಹೂಮ |
| ದಡ್ಡು | ಪೆದ್ದ |
| ಕಕ್ಕೆಯ ಜೊನ್ನಿ | ಕಕ್ಕೆಯ ಎಲೆಗಳಿಂದ ಎಣೆದ ಜೊನ್ನಿ |
| ಸದ್ದು ಸದ್ದು ಉಸ್ರು | ಸುಮ್ಮನಿರು ಸುಮ್ಮನಿರು ಉಸಿರು ಬಿಡಬೇಡ |

| | |
|---|---|
| ಕಿಮಿ | ಕಿವಿ |
| ಮೋರೆ ತಿಮಿರವ್ವ | ಮುಖಕ್ಕೆ ತಿವಿಯಿರಿ |
| ಜಡಿ | ಎಳೆಯಿರಿ |
| ಇವ್ರ್ಯಾವುರಪ್ಪ | ಇವರು ಯಾವ ಊರಿನವರು |
| ಪೂರ್ವದ ಆದಿ | ಹಳೆಯ ಮಾರ್ಗ |
| ಅತ್ತಿಕಣಿವೆ ಆದಿ | ಅತ್ತಿ ಕಣಿವೆ ಮಾರ್ಗ |
| ಬಾಳ ಉಸಾರಾಗಿ | ಬಹಳ ಜಾಗರೂಕತೆಯಿಂದ |
| ಕೇಡಿ | ಕೆಡುಕುಗಾರ |
| ಬತ್ತಿಯ ಅಂದೊತ್ತಿಗೆ | ಬರುವೆಯ ಎಂದು ಕೇಳಿದ್ದಕ್ಕೆ |
| ಮೀಸೆನುಲಿ | ಮೀಸೆ ತಿರುವು |
| ಗೊಡ್ಡು | ತೆಂಗಿನ ನಾರಿನಂತೆ ಇರುವ |
| ಕಿಲಾಡಿ | ಚತುರ |
| ತೂರು ಆಡುತ್ತ | ಜೋಲಾಡುತ್ತ |
| ತಾರು ಆಡುತ್ತ | ಜೋರಾಡುತ್ತ |
| ಗಕ್ಕನ್ ತಿರ್ಗ್ ನೋಡ್ಬುಟ್ಟ | ತಕ್ಷಣ ತಿರುಗಿ ನೋಡಿದ |
| ಬಾಳಯುಕ್ತಿವಂತೆ | ಬಹಳ ಜಾಣೆ |
| ಅನ್ನೇಡ್ ವರ್ಸ | ಹನ್ನೆರಡು ವರುಷ |
| ಸುಲ್ಬವಲ್ಲ | ಸುಲಭವಲ್ಲ/ಸಾಮಾನ್ಯವಲ್ಲ |
| ಕಜ್ಜಿ | ಮೈಮೇಲೆ ಬರುವ ಚರ್ಮರೋಗ |
| ಜಗ್ಗಿ ಕುಣಿ | ಕುಣಿತದ ಒಂದು ಮಾದರಿ |
| ಮೋರೆಲಾ ಬತ್ತೊಯ್ತು | ಮುಖವೆಲ್ಲಾ ಸೊರಗಿ ಹೋಯಿತು |
| ಕೋರಿರ ಗ್ಯಾನ ನಿನಗ್ಯಾಕ | ಹದಿಹರೆಯದ ಹುಡುಗಿಯರ ಆಸೆ ನಿನಗೇತಕ್ಕೆ |
| ಅಣ್ಣೆವೂವ್ನಾಗೆ ತಲೆಯೆಲ್ಲ ಬೆಳ್ಳಗಾಯ್ತು | ಅಣ್ಣೆಗಿಡದ ಹೂವಿನಂತೆ ತಲೆಯ ಕೂದಲೆಲ್ಲಾ ಬಿಳಿಯಾಯಿತು |
| ಕನ್ನುಡ್ಗಿಯರ ಸುದ್ದಿ ನಿನಗ್ಯಾಕ | ಕನ್ಯೆಯರು/ ಹದಿಹರೆಯದವರು ಅವರ ಸಹವಾಸ ನಿನಗೇತಕ್ಕೆ |
| ಅತ್ತಿವೂವ್ನಂಗ ನೆತ್ತಿಯೆಲ್ಲ ಬತ್ತೋಗ್ ಬುಡ್ತು | ಅತ್ತಿ ಮರದ ಹೂವಿನಂತೆ (ನೆತ್ತಿ) ತಲೆಯ ಮೇಲ್ಭಾಗವೆಲ್ಲಾ ಒಣಗಿ ಹೋಯಿತು |
| ಬಡಗಲು | ಉತ್ತರ |
| ತೆಂಕಲು | ದಕ್ಷಿಣ |
| ನಾಚನಟ್ಟೆ ಎರೊಂಬತ್ತು ಕೋಟಿ | ಜಗತ್ತಿನ ಕೋಟಿ ಕೋಟಿ ಜೀವರಾಶಿಗಳು |
| ಬಡತನವನ್ನು ತಿದ್ದುಬುಟ್ಟು | ಬಡತನ ನಿವಾರಿಸಿದ ಬಳಿಕ |
| ಅಂದ್ಕೊಂಡು ವೂವು | ಅಂದಕ್ಕೊಂದು ಹೂವು |
| ಪಟ್ಟ ತಿದ್ದುಕೊಂಡು | ಜಗತ್ತಿನ ಜೀವರಾಶಿಗಳಿಗೆಲ್ಲಾ ಅನ್ನದಾನ ಮಾಡಿ |
| ಆರ್ಸಿ ಇಳ್ಯವ ಕೊಡ್ಬೇಕು | ಹರಸಿ ವೀಳ್ಯವನ್ನು ಕೊಡಬೇಕು |
| ಬೌಆಸೆ | ಬಹು/ ಬಹಳ ಆಸೆ |

| | |
|---|---|
| ಆರಾರ | ಯಾರನ್ನಾದರೂ |
| ಅರಿಶಿನಕೊಟ್ಟು | ಲಗ್ನಕ್ಕೆ ಒಪ್ಪಿಗೆ ಕೊಟ್ಟು |
| ಆರ್ಕಿನ ಅಂಬ್ಲಿ | ಆರಕ ಎಂಬ ಧಾನ್ಯದ ಅಂಬಲಿ ಅಥವಾ ಗಂಜಿ |
| ಅಡ್ಬ | ಹಡಪ, ಬಟ್ಟೆಯ ಚೀಲ |
| ದಾಸಪ್ನ ಗಿಲ್ಕ್ಮಲಿ | ದಾಸಪ್ಪನ ದೆಸೆಯಲಿ |
| ಪತ್ರಗುಟ್ತವೆ | ಕೂಗುತ್ತ ಓಡಾಡುತ್ತವೆ/ ನಡುಗುತ್ತವೆ |
| ಕುಕ್ಕರಗಾಲಲ್ಲಿ | ವೀರ ಮಂಡಿಗಾಲಾತಾನನಗೆ |
| ಬೇಗ ಕಡಸ್ಸೈಪ | ಬೇಗ ಓಡಿಸಿರಿ |
| ಆಗನೊ | ಆವಾಗ |
| ಬಂಡಿಗೂಡ | ಚಳಿಗೆ ಬೆಂಕಿ ಹಾಕುವ ಮಣ್ಣಿನ ಮಡಕೆಯ ಸಾಧನ |
| ನೋಡುತವ್ರೆ | ನೋಡುತ್ತಿದ್ದಾರೆ |
| ಐಕ್ಯಕೊಟ್ಟು | ಜ್ಞಾನಕೊಟ್ಟರು/ ಸುದ್ಧಿ ಕೊಟ್ಟರು |
| ಆಕ್ರಮಳೆ | ಅಕ್ಕರಮಳೆ |
| ಬಲಗ್ರ | ಬಲವಾದ |
| ಕಾರಮಳೆ | ಜೋರುಮಳೆ (ಮರೆಯ ಒಂದು ಮಾದರಿ) |
| ಮೇಲು ಮುಸ್ಕಂತೆ | ಹೊದ್ದಿರುವ ಅರಿಮೆಯನ್ನು |
| ಗುಳ್ಳ | ಸೊಪ್ಪುಗಳಿಂದ ನಿರ್ಮಿಸಿದ ಗುಡಿಸಲು |
| ಸಿವಪೂಜೆ | ಶಿವಪೂಜೆ |
| ಎಣೆಗಂಟು | ಜಡೆಯನ್ನು ಹಾಕದೆ ಕೂದಲನ್ನು ಒಟ್ಟಾರೆ ಎತ್ತಿ ಗಂಟು ಕಟ್ಟುವುದು |
| ಕಣ್ಣುಬ್ಬ ಒಡೆಯುತವ್ನೆ | ಕಣ್ಣನ್ನು ಮಿಟುಗಿಸುತ್ತಿದ್ದಾನೆ |
| ಮೆಂಗಣ್ಣ ತಿರುಗ್ಸ್ ತವ್ನೆ | ಓರಗಣ್ಣ ತಿರುಗಿಸುತ್ತಿದ್ದಾನೆ |
| ಬೇರ್ ತಾಳಿಗೆ | ಬೇರಿನ ತಾಳಿಗೆ/ಮರದ ಬುಡದ ಬಳಿಗೆ |
| ಹೆಗ್ಗಜ್ಜಿ | ಚರ್ಮ ರೋಗ ದೊಡ್ಡದಾಗಿ ಹುಟ್ಟುವ ಗಾಯ |
| ಹೆಗ್ಗಜಿ ಮೂರಕಂಡ್ಗ | ಮೂರು ಕುಡುಗ ದೊಡ್ಡಕಜ್ಜಿ |
| ತುರ್ಗಜ್ಜಿ ಮೂಗಂಡ್ಗ | ಮೂರು ಕುಡುಗ ಸಣ್ಣಕಜ್ಜಿ |
| ಅತಿಯಾದವಾಸನೆ | ಅತಿದುರ್ವಾಸನೆ |
| ಕಸಕಿತ್ತುಬಿಡಿ | ಜಡೆ ಕಿತ್ತಾಕಿ ಬಿಡು |
| ಸ್ರಿಸಕ್ತಿ | ಶ್ರೀಶಕ್ತಿ |
| ಕಟಕಟ ಮಾಡ್ಬೇಡ | ಕಿರಿಕಿರಿಮಾಡಬೇಡ |
| ಬುಡ್ಲಾರ | ಬಿಡಲಾರ |
| ಕಾಣ್ಕೆ ಕಟ್ಬುಡಾನ | ಕಾಣಿಕೆ ಕಟ್ಬೋಣ |
| ತೂರಾಡ್ಕ ತುಂಟಾಡ್ಕ | ತೂರಾಡುತ್ತ ವಾಲಾಡುತ್ತ |
| ತಲುಳ್ಳವ | ತಲೆವುಳ್ಳವ/ ಬುದ್ದಿವಂತೆ |

| | |
|---|---|
| ತಂಗ್ದಿರೆ | ತಂಗಿಯಂದಿರೆ |
| ಅಕ್ದಿರೆ | ಅಕ್ಕಂದಿರೆ |
| ಹೊನ್ನೆಚ್ | ದೇವರಿಗೆ ಮೀಸಲು ಕಟ್ಟು |
| ಕಾಡ್ಗಲ್ಲ ತಗ್ದು ಕಾಣ್ಕ ಕಟ್ಬುಡ್ತಿನಿ | ಕಾಡಿನಲ್ಲಿ ಸಿಗುವ ಒಂದು ಕಲ್ಲನ್ನೇ ತೆಗೆದುಕೊಂಡು ಕಾಣಿಕೆ ಕಟ್ಟುತ್ತೇನೆ. |
| ಕಾಸಿನ ದೂಪ | ಕಾಸುಕೊಟ್ಟು ಧೂಪ ತೆಗೆದುಕೊಂಡು, ದೇವರ ಹೆಸರೇಳಿ ಧೂಪ ಹಾಕುವುದು. |
| ಅರ್ಕೆ | ಹರಕೆ |
| ಹೊನ್ನುಗಾಣಿಕೆ | ದೇವರಿಗೆ ಚಿನ್ನದ ರೂಪದಲ್ಲಿ ಕಾಣಿಕೆ ಕೊಡುತ್ತೇನೆಂದು ಹರಕೆ ಮಾಡಿಕೊಳ್ಳುವುದು |
| ನಿಗ್ರೋಗ್ ಬುಟ್ಟಿದ್ದಾನೆ | ಸತ್ತೋಗಿದ್ದಾನೆ |
| ದೊಡ್ಡರೋಗ | ಸಾಂಕ್ರಾಮಿಕ ಕಾಯಿಲೆ |
| ತಂಗಳನ್ನು | ಹಳಸಲು ಅನ್ನ/ತಂಗಳು ಅನ್ನ |
| ತಣ್ಣೀರ್ | ತಣ್ಣಗಿರುವ ನೀರು |
| ಕರ್ದಿ ಕಕ್ಕರ್ದ್‌ಬುಡ್ತು | ಕರಡಿ ಕೂಗುವುದಕ್ಕೆ ಈ ರೀತಿ ಹೇಳುತ್ತಾರೆ |
| ಉಲಿ ಅಮ್ಮರ್ದ್‌ಬುಡ್ತು | ಹುಲಿ ಕೂಗುವುದಕ್ಕೆ ಈ ರೀತಿ ಹೇಳುತ್ತಾರೆ |
| ಬಾಳ ದರ್ಮಾಂತಿ | ಬಹಳ ಧರ್ಮವಂತರು |
| ಸತ್ತುಳ್ಳ ಜನ | ಸತ್ಯವಂತ ಜನರು |
| ಬಿದ್ರುಬಿಂಕಿ | ಬಿದಿರಿಗೆ ಹಚ್ಚಿದ ಬೆಂಕಿ |
| ಕಾರೆಂಬ ಕತ್ಲು | ಕಗ್ಗತ್ತಲು |
| ಬೋರೆಂಬ ಮಳೆ | ಒಂದೇ ಸಮನೆ ಗಟ್ಟಿಯಾಗಿ ಸುರಿಯುವ ಮಳೆ |
| ಕಾಕೋಳಿ ಕೂಗ್ಬುಡ್ತು | ಕೋಳಿಕೂಗುವ ಸಮಯವಾಯಿತು/ಬೆಳಗಾಯಿತು |
| ಅರೆಗಣ್ಸಿನ ಅಂಬಲಿ | ಅರೆಗೆಣಸಿನಿಂದ ಮಾಡಿದ ಅಂಬಲಿ/ಗಂಜಿ |
| ಕೂಳು-ಗೀಳು | ಊಟ |
| ಅರಿಕೋಲ್ | ಗೆಡ್ಡೆ ಗೆಣಸು ಅಗೆಯುವ ಕಟ್ಟಿಗೆ ಸಾಧನ |
| ಬಾಜರಕಂತ | ಬಜರಿಗಂದು |
| ಉಸ್ನಗೆ | ಹುಸಿನಗೆ |
| ಒಡೆದು ಮೂಡು | ಉದ್ಭವಿಸು |
| ವೈರುಮುಡಿ | ಮೀಸಲು/ಪೂಜಾ ಸಾಮಾಗ್ರಿಗಳುಂಟು |
| ಎಡ್ಚರಿ | ಎಡಗಡೆ |
| ಬಲ್ಚರಿ | ಬಲಗಡೆ |
| ನೆಟ್ಟ ನಡುವೆ | ಮಧ್ಯ |
| ಗಣಿರೆಂದೂ | ಗಂಟೆಯ/ಗೆಜ್ಜೆಯನಾದದಂತೆ |
| ಬಳ್ಸಿಬುಡಿ | ಬಳಸುತ್ತ ಎಸೆಯಿರಿ |
| ಕುಯ್ಯುತ್ತಾರೆ | ಕತ್ತರಿಸುತ್ತಾರೆ |
| ಅಕ್ಕಿ ಆಕ್ತಾರೆ | ಅನ್ನ ಮಾಡುತ್ತಾರೆ |

| | |
|---|---|
| ಬೇಳೆ ಆಕ್ತಾರೆ | ಸಾಂಬಾರು ಮಾಡುತ್ತಾರೆ |
| ಆರ್ಗೆ? | ಯಾರಿಗೆ? |
| ಮೀಸಲು | ಹರಕೆ ತೆಗೆದಿರುಸುವುದು, ನೈವೇದ್ಯವನ್ನು ಮೀಸಲಿಡು |
| ಎಂಜಲು | ದೇವರಿಗೆ ಒಪ್ಪಿಸುವ ಮೊದಲು ಸಿದ್ದಪಡಿಸಿದ ಅಡುಗೆಯನ್ನು ಯಾರು ಸೇವಿಸಬಾರದು |
| ಸುಳ್ಕೆಂತ | ಸುಳಿದಾಡುತ್ತ |
| ಕತ ಕತ ಕತ ನಡಿಕೊಂಡು | ಗಡ ಗಡ ಗಡ ನಡುಗಿಕೊಂಡು |
| ಕರಿತಾನೆ | ಕರೆಯುತ್ತಾನೆ |
| ಮುರ್ದು ಮುರ್ದಂಚಿ ಮುತ್ಗುತ್ತಾರೆ | ಮುರಿದು ಮುರಿದು ಹಂಚಿ ಇಡುತ್ತಾರೆ. |
| ಕಟ್ಕೊಳ್ಳಕೆ | ಕಟ್ಟಿಕೊಳ್ಳುವುದಕ್ಕೆ |
| ಎತ್ತಕಾಗ್ದೆ ವೋಯ್ತು | ಎತ್ತುವುದಕ್ಕೆ ಸಾಧ್ಯವಾಗಲಿಲ್ಲ |
| ಜಲ್ಜಿ/ಜಲ್ದಿ | ಬೇಗನೆ |
| ಮೀಸೆ ನವ್ರುತ್ತಾರೆ | ಮೀಸೆ ತಿರುವುತ್ತಾರೆ |
| ಗ್ಯೆರ್ಯೆಸಿಗ್ಯಾನ ಮಾಡುತಾರೆ | ಯೋಚಿಸಿ ವಿಚಾರ ಮಾಡುತ್ತಾರೆ |
| ಮಡ್ಡಿ ಆಯ್ತಿನಿ | ಹೆಂಡತಿಯಾಗುತ್ತೇನೆ |
| ಕಾಕ ಆಕ್ಬುಟ್ಟು | ಕೂಗು ಹಾಕಿ |
| ಬೆಳ್ಮಡ್ಗ್‌ಬುಟ್ಟು | ಬೆರಳನ್ನಿಟ್ಟು |
| ಪೊಣ್ಣನೆ | ಚಂಗನೆ |
| ದುಬ್ನ | ಡಬ್ ಎಂದು |
| ಆಗ್ನ | ಆಗ |
| ಕವಡೆಚೀಲ | ಶಾಸ್ತ್ರದ ಕವಡೆ ಇಟ್ಟುಕೊಳ್ಳುವ ಚೀಲ |
| ಕಣಿ | ಶಾಸ್ತ್ರ ಹೇಳುವುದು |
| ದಾಸಯ್ನ ವಾಸಂತೆ | ದಾಸಯ್ಯನ ವಶವಾಗಿದ್ದಾಳಂತೆ |
| ತಾರ್ಮಾನ್ರೆ ಪೇಟೆ ಕಟ್ಬುಟ್ಟು | ಆಕಾರದಲ್ಲಿ ಕಟ್ಟುವ ಪೇಟ |
| ಪಗ್ದೆಶಸ್ತ್ರ | ಪಗಡೆಯನ್ನು ಬಿಟ್ಟು ಹೇಳುವ ಶಾಸ್ತ್ರ |
| ಆರುಗಚ್ಚೆ ಪಂಚೆ | ಹಾರುವರು ಧರಿಸುವ ಕಟ್ಟೆ ಪಂಚೆ ಮಾದರಿ |
| ಕೋರೆ ಕಳ್ಕಂಡು | ಕೋರೆ |
| ಪುಟ್ಬಾದ | ಸಣ್ಣದಾದ ಹೆಜ್ಜೆ/ಪಾದ್ಗದ |
| ಮಡ್ಗ್‌ಬುಟ್ಟಿತು | ಇಟ್ಟಿತ್ತು |
| ಮುರ್ಕಂಡು | ಮುರಿದುಕೊಂಡು |
| ಒಂದ್ಗಳ್ಗೆ | ಒಂದು |
| ಅಜ್ಜೆಯ ಅಳ್ತೆ | ಹೆಜ್ಜೆಯ ಅಳತೆ |
| ಜಾದು ಕಲ್ಲಂತೆ | ಮಾಯದ ಕಲ್ಲು |
| ಆರುವರಗವಿ | ಹಾರುವರ ಗುಹೆ |

| | |
|---|---|
| ಯೇನು-ಸೀರು | ಹೇನು-ಸೀರು, ಹೇನು ಮತ್ತು ಹೇನಿನ ಮೊಟ್ಟೆ |
| ಯೆಣ್ಣಿನ ತೆರ್ವ | ಹೆಣ್ಣಿಗೆ ಕೊಡುವ ದಕ್ಷಿಣೆ |

## ೬. ಅನುಬಂಧ: ೩. ಅರ್ಥಸೂಚಿ (೧)

| | |
|---|---|
| ಅನ್ನೇಡ ಕೊಂಗ ರೂಪಾಯಿ | ಹನ್ನೆರಡು ಕೊಂಗ ರೂಪಾಯಿ |
| ಕೊಂಗ | 'ಮೊರ'ದ ಮಾದರಿಯಲ್ಲಿರುವ ಧಾನ್ಯ ತೂರುವ ಸಾಧನ ಬಿದಿರು/ಲೋಹದ ಧಾನ್ಯ ತೂರುವ ಮೊರ |
| ಕಮ್ರಿ ಒಳ್ಗೆ | ಕಮರಿಯ ಒಳಗೆ |
| ಅಮ | ಅವನು |
| ಜಲಜಲ್ನೆ | ಜಲದಂತೆ |
| ನನ್ನ ಉಯ್ದ್ ಬಿಟ್ಟಿದ್ದಿಯಾ | ನನ್ನ ಹೊಡೆದು ಬಿಟ್ಟಿದ್ದಿಯಾ |
| ಕಂಬಳದಾಳು | ಕೂಲಿ ಆಳು |
| ಆಸ್ಗೆ ಆರುಗಂಟ | ಸ್ವಲ್ಪ ಸಮಯದಲ್ಲೇ |
| ಸೈನು | ಸಹಿ ಅಥವಾ ಹೆಬ್ಬೆಟ್ಟಿನ ಗುರುತು |
| ಬೆಟ್ಟೊತ್ತಬೇಕು | ಹೆಬ್ಬೆರಳಿ ಗುರುತು ಹಾಕಬೇಕು |
| ಉರ್ದುಳ್ದಿ | ಹುರಿದಿರುವ ಹುರುಳಿ ಕಾಳು |
| ತಿರಿಕೊಂಡು | ಭಿಕ್ಷೆ ಬೇಡಿಕೊಂಡು |
| ವೇಸವನ್ನು ತಾಳ್ಕುಟ್ಟು | ವೇಷವನ್ನು ಧರಿಸಿ |
| ಬುಡ್‌ಬುಡ್ಕಿ ವೇಷ | ಬುಡುಬುಡಿಕೆ ವೇಷ |
| ಕಲ್ಲು ಕರ್ಗೊ ಜಾಮ | ಕಲ್ಲು ಕರಗುವ ಸಮಯ/ಸರಿರಾತ್ರಿ/ಮಧ್ಯರಾತ್ರಿ |
| ತಿಟ್ಟಿನ ಮೇಲೆ | ಎತ್ತರದ ಪ್ರದೇಶದ ಮೇಲೆ |
| ಕರಿಕಪ್ಪ | ಕರೆಯಿರಿ |
| ಬುರ್ಕಾಬುಡ್ತಿನ | ಬರೆದುಕೊಳ್ಳುವೆನು |
| ಅಂತರ ಕಟ್ತಿನಿ | ಯಂತ್ರ ಕಟ್ಟುವೆ |
| ಮಂತರ ಮಾಡುತಿನಿ | ಮಂತ್ರ ಹಾಕುವೆ |
| ಕೂಗ ಉಂಜ | ಕೂಗುವ ಹುಂಜ/ಕೋಳಿ |
| ಕೊಂಬಿನ ಟಗರು | ಕೊಂಬು ಬಂದಿರುವ ಟಗರು |
| ಬೆಲ್ಲದ ನಂಜ್ ಆಗ್ಬೇಕು | ಬೆಲ್ಲದ ಸಿಹಿ ಆಗಬೇಕು |
| ಅಣ್‌ತೆಂಗಿನ ಕಾಯಿ | ಹಣ್ಣು ತೆಂಗಿನ ಕಾಯಿ/ಬಲಿತದ್ದು |
| ಬರ್ಮಾಡಿ ಕೊಟ್ಬುಡಿ | ಬರಮಾಡಿ ಕೊಡಿರಿ |
| ಆರುಮಂಡಲ | ಹಾರುವ ಮಂಡಲ |
| ತೂರು ಮಂಡಲ | ತೂರುವ ಮಂಡಲ |

| | |
|---|---|
| ಗೆಜ್ಜೆ ಮಂಡಲ | ಗೆಜ್ಜೆ ಮಂಡಲ |
| ಉಳ್ಕುಮಂಡಲ | ಉಳುಕು ಮಂಡಲ |
| ನಾಗಮಂಡಲ | ನಾಗಮಂಡಲ |
| ನರಮಂಡಲ | ನರಮಂಡಲ |
| ಎಪ್ಪತ್ತೇಳು ಮಂಡಲ | ಎಪ್ಪತ್ತೇಳು ಮಂಡಲ |
| ಇಂಗಣ್ಣ | ಹಿಂದೆ ಕಣ್ಣುಳ್ಳವ |
| ಮುಂಗಣ್ಣ | ಮುಂದೆ ಕಣ್ಣುಳ್ಳುವ |
| ಮುಕ್ಕಣ್ಣ ಕಾಯಿ | ಮೂರುಕಣ್ಣಿನಕಾಯಿ/ತೆಂಗಿನಕಾಯಿ |
| ತುಣಿತಿನಿ | ತುಳುಯುತ್ತೇನೆ |
| ಗಾಚಾರ | ಗ್ರಹಚಾರ |
| ತಾತಿ | ತಾಯಿತ |
| ನೆಪ್ಪಾಗಿ | ಜೋಪಾನವಾಗಿ/ಮರೆಯದೆ |
| ಪಂತಕ್ಕೆ ಪಂತ್ಯ | ಸ್ಪರ್ಧೆಗೆ ಪ್ರತಿಸ್ಪರ್ಧೆ |
| ಕಾಣ್ಕೆ ಕಪ್ಪಂತೆ | ಕಾಣಿಕೆ - ಹರಕೆ |
| ಒಂಟಾನೆ ಜಿಗಿಬಾರ | ಒಂದು ಆನೆ ಜಗ್ಗಿಸಲಾರದಷ್ಟು ಭಾರ |
| ಎಂಟಾಳು ಹೊರಬಾರ | ಎಂಟು ಆಳು ಹೊರಲಾಗದಷ್ಟು ಭಾರ |
| ಕುಂಚ್‌ಗುರ್ಕ | ಕಚ್ಚಿದರೆ ಉರಿಯುವ ಒಂದು ಜಾತಿ ಹುಳು |
| ಅನ್ನದ ಅಗಳ | ಅನ್ನದಕಾಳು |
| ಯಿಂದ-ಮುಂದೆ | ಹಿಂದ-ಮುಂದೆ/ವಾಂತಿ ಬೇಧಿ |
| ತಾಯಿ ದಂಡೆ | ತಾಯಿ ಹತ್ತಿರಕ್ಕೆ |
| ಬಿದ್ರಿಕ್ಕಿ ಪಾಯ್ಸ | ಬಿದಿರ ಅಕ್ಕಿಯಿಂದ ಸಿದ್ಧಪಡಿಸಿದ ಪಾಯಸ |
| ಬಯ | ಭಯ |
| ಬೆವ್ರು ಕಿತ್ಗಂಡು | ಬೆವರು ಹರಿಯುವಂತೆ |
| ಪರಸಂ ಮೂರ್ತಿ | ಪರಮ ಮೂರ್ತಿ/ಪರಶಿಮೂರ್ತಿ |
| ಕುಸಿನ್‌ಮ್ಯಾಲ | ಖುಷಿಯಿಂದ |
| ಸೀರೆ ಕೊಡೆ | ಸ್ಥಳದ ಹೆಸರು |
| ಸುಳಿಯ/ಸುಣ್ಕಾಯಿ | ಸುಣ್ಣದ ಡಬ್ಬ |
| ಕೊಂಗ್ನಾಡು ಸೀಮೆಗೆ | ತಮಿಳರು ವಾಸಿಸುವ ನಾಡು |
| ನೆರಿಯ ಚೆಂಡಿಗೆ | ನಡುವಿನ ಸೀರೆ ಕಟ್ಟಿರುವ ಜಾಗಕ್ಕೆ |
| ಕುಳ್ತ್ಗಂಡು | ಕುಳಿತುಕೊಂಡು |
| ಬಾಳೆಕಾಯಿ ನರಿಯವೆಳ | ಸೀರೆ ತೊಟ್ಟಾಗ ನಡುವಿನ ಬಳಿ ಬಾಯಿಕಾಯಿಯಂತೆ ಆಕಾರ ಬರುವುದಕ್ಕೆ ಬಾರೆಕಾಯಿ ನರಿಯುವಳು ಎನ್ನುವರು |
| ಬಾಯ್ಗೆ ಬತ್ತ ಕಚ್ಚುಟ್ಟಿದೆ | ಬಾಯಿಯಲ್ಲಿ ಬತ್ತವನ್ನು ಕಟ್ಟಿಕೊಂಡಿದೆ |

| | |
|---|---|
| ಇರಿನ್‌ಬಾಯಿಬಳ್ಗೆ ರಾಗಿ ಬೇಳೆ ಕಚ್ಚುಟ್ಟಿದೆ | ಇರುವೆ ಬಾಯಿಯಲ್ಲಿ ರಾಗಿಯ ಚೂರು ಕಚ್ಚಿಕೊಂಡಿದೆ |
| ಮನಿಕಳಕ್ಕೆ | ಮಲಗಿಕೊಳ್ಳಲು |
| ಐಬೋಗ | ವೈಭವ/ಶ್ರೀಮಂತಿಕೆ/ಸಂಪತ್ತು |
| ಮಧ್ಯಾನದೊತ್ತಿನ | ಮಧ್ಯಾಹ್ನದ ಸಮಯಕ್ಕೆ |
| ಸಜ್ಜೀನ ರಂಗಯ್ಯ | ಸಜ್ಜಾಗಿರುವ ರಂಗಯ್ಯ |
| ಎಂಟುಪಟ್ಟು | ಎಂಟು ಮುಖದ |
| ಬಾಯಾಗೆ ಬೆಳ್ಳಾಕಿ | ಬಾಯಿಗೆ ಬೆರಳನ್ನು ಹಾಕಿ |
| ಇದೇ ಸೌಳು | ಇದೇ ಸಮಯ |
| ಕದ್ದು ಓಡಿನಾ | ಕದ್ದು ಓಡಿದ |
| ಬಿಸ್ಲ ಒಳಪ | ಬಿಸಿಲ ಬೆಳಕು |
| ಕೈವಸ ಕೈವಶ | ಅಧೀನವಾಗುವುದು |
| ಸಾನೆ ಮಾಯ್ಕಾರ | ಮಹಾ ಮಾಯಕಾರ |
| ಕೊಳ್ಗ ದರ್ಸಬೇಕು | ಲಿಂಗಕ್ಕೆ ಕೊಳಗದಾಕಾರದ ಚಿನ್ನದಿಂದ ಮಾಡಿದ ಸಾಧನಿವನ್ನು ಧರಿಸುವುದು |
| ಅಸ್ಯ-ಪಾಸ್ಯ ಆಡ್ತ ನಿಂತ್ಗೊವೊತ್ಗ | ಹಾಸ್ಯ ಮಾಡುತ್ತ ನಿಂತುಕೊಂಡ ಕಾರಣ |
| ಕಾಂಚಿನ ಮನೆ | ಕಾಂಚನ ಹುಲ್ಲಿಂದ ನಿರ್ಮಿಸಿದ ಮನೆ |
| ಗೊಡ್ಡುಮಂಜಿ | ಕತ್ತಾಳೆಯಿಂದ ತೆಗೆದ ಮಂಜಿ. ಸಿಕ್ಕುಸಿಕ್ಕಾದ ಮಂಜಿಯನ್ನು ಗೊಡ್ಡು ಮಂಜಿ ಎನ್ನುವರು |
| ಎಡೆ | ಮಿಸಲು/ನೈವೈದ್ಯ |
| ಮಂಡಿಯೆಲ್ಲ ಕಟ್ಗೋಗ್ ಬುಡ್ತು | ನಡೆಯಲು ಬಾರದಾಯಿತು |
| ಮೂಡೆಗಾತ್ರ | ಧಾನ್ಯ ತುಂಬಿಡಲು ಹಂಚಿ ಹುಲ್ಲಿಂದ ಸಿದ್ಧಪಡಿಸುವ ಸಾಧನ ಅದರ ಗಾತ್ರದಷ್ಟು |
| ಚಾನಸಂಕು | ಬೋನಾಸಿ+ಶಂಕು |
| ಬಂಗಾರದ ಕೊಳಗ | ಚಿನ್ನದ ಲಿಂಗಾಕಾರ |
| ಕಗ್ಗಾಲು ಬತ್ತಿಯವೆಳ | ತಲೆಗೆ ಸ್ನಾನವಿಲ್ಲದೆ ತೆಂಗಿನನಾರಿನಂತಾದ ಕೂದಲಿರುವವರು |
| ಮುಗ್ಗಾಲು ಮೋರೆಯವೆಳ | ಮುಖ ತೊಳೆಯದೆ ಎಷ್ಟೊ ದಿನಗಳಾದ ಸ್ತ್ರೀ |
| ನೆಲಗಾಡವರಾದ್ರ | ಬಯಲು ಸೀಮೆಯವರಾದರೆ |
| ಸಿಬ್ರಿ | ಬೇಸರ |
| ಗಾಳಿ | ಭೂತ/ದೆವ್ವ |
| ಐದಚ್‌ಬೆಲ್ಲ | ಐದು ಅಚ್ಚು ಬೆಲ್ಲ |
| ಐದ್ಪಾವು ಕಳ್ಳ | ಐದು ಪಾವು ಪುಟಾಣಿ |
| ಐದ್ ಕುಡ್ಕ | ಐದು ಮಣ್ಣಿನ ಸಣ್ಣ ಗಡಿಗೆ |
| ಐದಣ | ನಾಲ್ಕಾಣೆಯ ಐದು ನಾಣ್ಯಗಳು |
| ಸಾಲ್ವೊ ಸೋಲ್ವೊ | ಸಾಲವೂ-ಶೂಲವೋ ಗಾಳಿಕಟ್ಟು, ಸಾರ ಹಟ್ಟು, ಪೀಡೆ ಕಟ್ಟು, ಪಿಶಾಚಿ ಕಟ್ಟು, ಆಟಕಟ್ಟು, |

| | |
|---|---|
| ಭೂತ ಕಟ್ಟು | ತಂತ್ರ ಮಂತ್ರದ ಕಟ್ಟುಗಳು. ಎದುರಾಳಿ ಅಥವಾ ವಿರೋಧಿಗೆ ಹಾಕುವ ಬಂಧನಗಳು |
| ಮಾಯದ ಮದ್ದು | ಮಾಯದ ಕಪ್ಪು |
| ಮಲೆಯಾಳ ಕಪ್ಪು | ಮಲೆಯಾಳದವರ ಮಾಯದ ಕಪ್ಪು |
| ಸಾಂಬೋಗರ ಬಾವಿ | ಶಾನುಭಾಗರ ಬಾವಿ |
| ಸಂಪಾಗಿ ತಾನ | ಸೊಂಪಾಗಿ ಸ್ನಾನ |
| ಹುಟ್ಟಿದ್ದು ಬೆದೆದ್ದು ಮಾಯೆದ್ದು | ಹುಟ್ಟು, ಬೆಪ್ಪು, ಮಾಯಾಕ್ಕೆ ಒಳಗಾಗಿ |
| ಏಸ ತುಳ್ಬುಟ್ಟು | ವೇಷಧರಿಸಿ |
| ಕಾಡೆ ಕಚ್ಚೆ ಉಟ್ಗಂಡು | ಕಚ್ಚೆ ಪಟ್ಟಿ ಧರಿಸಿಕೊಂಡು |
| ಬಾಳ ಪುಣ್ಯಪ | ಬಹಳ ಪುಣ್ಯ ಬರುತ್ತದೆ |
| ಸಿಲ್ಪಿ ನೋಡ್ಬೇಕಾದ್ರ | ಶಾಸ್ತ್ರ ನೋಡಬೇಕು |
| ಉಡ್ಕಬ್ಯಾಡ | ಹುಡುಕಬೇಡ |
| ಅವ್ನುಗೊಳ ಗೊಳ್ನ ಸೋಕ | ಅವನು ಗೋಳೋ ಎಂದು ಶೋಕ |
| ನಂಚರಿ | ನನ್ನ ಕಡೆ/ನನ್ನ ಹತ್ತಿರ |
| ಆಳ ಮಕ್ಕಾಗಿ | ಕೂಲಿ ಮಕ್ಕಳಂತೆ |
| ಅವರಿಂಚೆ | ಅವರಾಗಿಯೇ |
| ಕಲ್ತವ್ರೆ | ಕಲಿತ್ತಿದ್ದಾರೆ |
| ದುಕ್ಕ | ದುಃಖ |
| ಮೋಡಿವಿದ್ಯೆ | ಮೋಡಿ |
| ಕಾಡನ್ನು ಕಡಿದೀನಿ | ಕಾಡನ್ನು ಕತ್ತರಿಸಿದ್ದೇನೆ |
| ಪೋಡನ್ನು ಮಾಡಿಸು | ವಾಸಸ್ಥಳ/ಪೋಡು ಮಾಡಿದ್ದೇನೆ |
| ಬದ್ದು ಬಾಳೆಲ್ಲ | ಬದುಕಿದ ಬಾಳೆಲ್ಲಾ |
| ಬಟ್ಟಿದಾಸ್ತು | ಬಟ್ಟೆ ಭಿಕ್ಷೆ ಮಾಡುವವರು |
| ಅಂಗಾದ ಮೇಲೆ | ಆ ರೀತಿ ಆದ ಮೇಲೆ |
| ಮರ್ಮ | ರಹಸ್ಯ |
| ಹಂಡಿಲ್ಲ - ಬುಂಡಿಲ್ಲ | ಪಾತ್ರ ಪಗಟೆ ಇಲ್ಲ |
| ಮಾರ್ಯಾರು ಕೊಟ್ಟುವಡಕೆ | ಮಾರಾಟ ಮಾಡಿ ಕೊಡುವುದಕ್ಕೆ |
| ಕರ್ಗೆ | ಮಣ್ಣಿನ ಸಣ್ಣ ಮಡಕೆ |
| ಕೂಕ್ಕೊಂಡು | ಕೂಗಿಕೊಂಡು |
| ಕಟ್‌ಬೇಡಿ | ನಂಬ ಬೇಡಿ |
| ಅಲ್ಲೆಲ್ಲಾರ | ಅಲ್ಲಿ ಎಲ್ಲಾದರು/ಯಾರ ಬಳಿಯಾದರು |
| ಮೊರಶಾಸ್ತ್ರ | ಮೊರದಲ್ಲಿ ಕವಡೆಬಿಟ್ಟು ಶಾಸ್ತ್ರ ಕೇಳುವುದು |
| ಸಾಕಾದರಿ | ದಣಿಯಬೇಡಿ |
| ಬುದ್ದಿಕಾರ್ಯವ | ಬುದ್ದಿ ಮಾತ |

| | |
|---|---|
| ತಲೆಮ್ಯಾಲೆಸೆರ್ಗಿಟ್ಗೊ ಬರ್ವಾಗ | ತಲೆ ಮೇಲೆ ಸೆರಗು ಹಾಕಿಕೊಂಡು ಬರುವಾಗ |
| ಲಚ್ಚುಮಿ | ಲಕ್ಷ್ಮಿ |
| ಕೌಳ್ಗೆ | ಕೌಳಿಗೆ ಇಪ್ಪತ್ತು ವೀಳ್ಯದೆಲೆ ಕಟ್ಟು |
| ಉತುಪತಿ | ಉತ್ಪತ್ತಿ |
| ಬಕುತರ | ಭಕ್ತರ |
| ಸಂದಾದ ರಂಗೋಲಿ | ಚೆಂದಾದ ರಂಗೋಲ |
| ತಗುಲ್ ಬಿಡ್ತದೆ | ಚುಚ್ಚಿಕೊಳ್ಳುತ್ತದೆ |
| ಕಗ್ಗಲದಸಿ | ಕಗ್ಗಲಿಗಿಡದ ಚೂಪಾದ ಕಡ್ಡಿ |
| ಕಾಡದಸಿ | ಯಾವುದಾದರೂ ಗಿಡದ ಚೂಪಾದ ಕಡ್ಡಿ |
| ಕಾಲ್ದಸಿ | ಕಾಲಿಗೆ ಚುಚ್ಚಿಕೊಂಡ ಚೂಪಾದ ಕಡ್ಡಿ |
| ಸಂಕುದಾರುತಿ | ಶಂಕದ ಆರತಿ |
| ನರಮನ್ಸರೆಲ್ಲಾ | ಮನುಷ್ಯರೆಲ್ಲಾ |
| ವೊಟ್ಟುರ್ಕಂಡ | ಹೊಟ್ಟೆ ಕಿಚ್ಚಿನಿಂದ/ಅಸೂಯೆಯಿಂದ |
| ಕಂಡಂಗಿತ್ತು | ಕಾಣಿಸಿದಂತೆ ಇತ್ತು |
| ಅರುವಲು | ತಿಳಿಯಲು/ಅರಿಯಲು |
| ಅಡವಿಯ ಒಳಗಂಜ | ಅಡವಿಯ ಒಳಭಾಗದಲ್ಲಿ |
| ಬಿಡುವಿನ ಒಳಗಂಜ | ಅಡವಿ ಹೊರ ಭಾಗದಲ್ಲಿ |
| ಸಂಪತ್ತು | ಸಂತೋಷ |
| ತಿರ್ಕೊಂಡು ತಿನ್ನದಾಸ | ಭಿಕ್ಷೆ ಬೇಡಿ ತಿನ್ನುವ ದಾಸ |
| ತಿಮಿತಿನ್ ನೋಡ್ಕೊ | ತಿವಿಯುತ್ತೇನೆ ನೋಡು |
| ಮೊಕ | ಮುಖ |
| ಉರ್ಗ್ದಿದೇಟ್ಗೆ | ಹೊಡೆದ ತಕ್ಷಣ |
| ಪಾತಾಳ ಲೋಕ | ಭೂಮಿಯ ಕೆಳಗಿರುವ ಕಲ್ಪನಾಲೋಕ |
| ರಾತುರ | ರಾತ್ರಿ |
| ನಾರಿರ್ಗೆ | ಸ್ತ್ರೀಯರಿಗೆ |
| ನಾಟಕ ಕಲೇಲಿ | ನಾಟಕ ಕಲೆಯಲ್ಲಿ |
| ತೇರ್ನತಡಿಗೆ | ತೇರಿನ ಕೆಳಗೆ |
| ಓದು ಹೇಳ್ಕೊಂಡು | ಬುದ್ಧಿಮಾತ ಹೇಳುತ್ತಾ |
| ಬೋದ ಹೇಳುತ್ತಾರೆ | ಬೋಧನೆ ಮಾಡುತ್ತಾರೆ |
| ಜಿಗ್ರಿಮರಿ | ಜಿಂಕೆ |
| ಮಾಂತ ಮಾರ್ಲಾಮಿ | ಮಹಾನವಮಿ |
| ಜಂಬು ಸವಾರಿ ಹೋಗ್ವಾಗ | ಜಂಬು ಸವಾರಿಗೆ ಹೋಗುವ ಸಮಯ ಜಾತ್ರೆ ಸಂದರ್ಭದಲ್ಲಿ ಸೋಲಿಗರು ಕೊಡಬೇಕಾದ |

| | |
|---|---|
| | ಪದಾರ್ಥಗಳು ಸಾಂಪ್ರದಾಯಿಕವಾಗಿ ಬಂದಿರುವುದು ಕುಂಬಳದನ್ನ ಬೂದು ಗುಂಬಳಕಾಯಿ ಬಾಳೆ ಎಲೆ ಬಾಳೆ ಕಾಯಿ |
| ಅಳಿತಾರ | ಕಳೆಯುವುದು/ಶುಚಿಗೊಳಿಸುವುದು |
| ಸುಂಗರಾಗಿ | ಶೃಂಗಾರವಾಗಿ |
| ಬೆಂಡೆಕಡ್ಡಿ | ಬೆಂಡಿನಂತಹಕಡ್ಡಿ |
| ತೇರುಚಿತ್ರವನ್ನು ಗೇದ್‌ಬುಟ್ಟಿದ್ದಾರೆ | ತೇರಿನ ಚಿತ್ರವನ್ನು ಬಿಡಿಸಿದ್ದಾರೆ |
| ನಡುಕಲ ಮಂಟಪ | ಮಧ್ಯೆದ ಮಂಟಪ |
| ಕೆರೆ ತಡಿಗೆ | ಕೆರೆಯ ಹತ್ತಿರಕ್ಕೆ/ದಂಡೆಗೆ ಹಣ್ಣು ಜವನ |
| ಕುಕ್ಕೇಲಿ | ಬುಟ್ಟಿಯಲ್ಲಿ |
| ತಲೆಗೊಂದ | ಒಬ್ಬರಿಗೆ ಬಂದರಂತೆ |
| ತೆಂಕಲ ಕಾಡಿ ಕಂಚಿ ಹೋಗುತ್ತದೆ | ದಕ್ಷಿಣದ ಕಡೆಗೆ ವಾಲಿನ ಹೋಗುತ್ತದೆ |
| ಸಿಡ್ಕಾಟ | ಸಿಟ್ಟು/ಸಿಡುಕಾಟ |
| ನರಾರಿಬೇಡ | ಬಾಯಿ ಬಡಿಬೇಡ/ಕಿರುಚಬೇಡ |
| ನಾರಾಗಿದ್ರು | ನಾರಿನಂತೆ ಇದ್ದರು |
| ಬಲುಸಿಡ್ಕಾ | ಬಹಳ ಜೋರಾಗಿದ್ದಾನೆ |
| ಹೊರ್ಗಿಟ್ ಬುಡ್ತಾರೆ | ಜಾತಿಯಿಂದ ಹೊರಗೆ ಹಾಕುತ್ತಾರೆ |
| ಪಸ್ಯೆ | ಪರುಸೆ/ಭಕ್ತರು |
| ನಾಮ ಇಕ್ಡಾಕೆ ಸಲವೇನು | ಹಣೆಗೆ ನಾಮವನ್ನು ಬರೆದವಳು ನನಗೆ ಹೆಂಡತಿಯಾಗಬೇಕು |

## ೭. ಅನುಬಂಧ: ೩. ಅರ್ಥಸೂಚಿ (೩)

**ಕಾವ್ಯದಲ್ಲಿ ಉಲ್ಲೇಖಿತವಾದ ಸ್ಥಳಗಳು**

| | |
|---|---|
| ಬೂದುಬಾಳು | ಗ್ರಾಮದ ಹೆಸರು. ಕೊಳ್ಳೇಗಾಲ ತಾಲ್ಲೂಕು ಬೂದುಬಾಳು ತಿರುಪತಿ ವೆಂಕಟರಮಣಸ್ವಾಮಿ ಭವ್ಯವಾದ ಗುಡಿ ಇದೆ. ಇದು ಈ ಸುತ್ತಿನ ಜನರಿಗೆ ತಿರುಪತಿಯಷ್ಟೆ ಪವಿತ್ರವಾದುದಾಗಿದೆ. |
| ತಿರ್ಪತಿ | ತಿರುಪತಿ. ಆಂಧ್ರಪ್ರದೇಶ |
| ಹೊನ್ನಾಳಿ | ಗ್ರಾಮದ ಹೆಸರು |
| ಗೋಕುಲ/ಗೋಕುನಾಡು | ಒಂದು ಪ್ರದೇಶದ ಹೆಸರು ಪಶುಸಾಕುವಸ್ತ್ರದ ಹೆಸರು |
| ಪೋಡ್ನಾಡು | ಪೋಡುಗಳು ನಾಡು ಸೋಲಿರು ವಾಸಿಸುವ ಪ್ರದೇಶ |
| ಸಿವನ ಸಮುದ್ರ | ಶಿವನಸಮುದ್ರ - ವಿದ್ಯುತ್ ಉತ್ಪಾದನಾ ಕೇಂದ್ರ ಮಳವಳ್ಳಿ ತಾಲ್ಲೂಕು. ಪ್ರವಾಸಿ ಕೇಂದ್ರ |
| ಶ್ರೀರಂಗಪಟ್ಣ | ಶ್ರೀರಂಗಪಟ್ಟಣ. ತಾಲ್ಲೂಕು ಕೇಂದ್ರ. ಟಿಪ್ಪು ಸುಲ್ತಾನ ಆಳಿದ ರಾಜ್ಯ ರಾಜಧಾನಿಯೂ ಹೌದು. |

| | |
|---|---|
| | ಶ್ರೀರಂಗ ನೆಲೆಗೊಂಡಿರುವ ಭೌವ್ಯವಾದ ಗುಡಿ ಇದೆ. ಶ್ರೀರಂಗನ ಶಯನ ಅವಸ್ಥೆಯಲ್ಲಿದ್ದಾನೆ |
| ಕಲ್ಯಾಣಿ | ಒಂದು ಗ್ರಾಮದ ಹೆಸರು. ತಿರುಮಕೂಡಲ. ನರಸೀಪುರ ತಾಲ್ಲೂಕು |
| ತಲಕಾಡು | ಗ್ರಾಮದ ಹೆಸರು. ತಿ.ನರಸೀಪುರ ತಾಲ್ಲೂಕು ಗಂಗರು ಆಳಿದ್ದು ರಾಜಧಾನಿ ಐತಿಹಾಸಿಕ ಸ್ಥಳ |
| ಮೇಲುಗಿರಿ ಕೈಲಾಸ | ಬಿಳಿಗರಿ ರಂಗಸ್ವಾಮಿ ನೆಲೆಗೊಂಡಿರುವ ಗಿರಿಯನ್ನು ಕಾವ್ಯದಲ್ಲಿ ಮೇಲುಗಿರಿ ಕೈಲಾಸ ಎಂದು ಕರೆದಿದ್ದಾರೆ. ಅದು ಬಿಳಿಗಿರಿಯೂ ಹೌದು |
| ಮಗ್ಗ ಮರಳ್ಳಿ | ಗ್ರಾಮದ ಹೆಸರು. ಚಾಮರಾಜ ನಗರ ತಾಲ್ಲೂಕು |
| ಹೆಗ್ಗಡದೇವನ ಕೋಟೆ | ಗ್ರಾಮದ ಹೆಸರು. ತಾಲ್ಲೂಕು ಕೇಂದ್ರ. ಓರ್ವ ಪಾಳೆಗಾರನ ರಾಜ್ಯವಾಗಿತ್ತು |
| ರಂಜಕಲ್ಲು | ಗ್ರಾಮದ ಹೆಸರು |
| ಪಿರಿಯಾಪಟ್ಣ/ಪಟ್ಟಣ | ಗ್ರಾಮದ ಹೆಸರು, ತಾಲ್ಲೂಕು ಕೇಂದ್ರ |
| ಸಂತೆ ಸರಗೂರು | ಗ್ರಾಮ ಹೆಸರು ಚಾಮರಾಜ ನಗರ ತಾಲ್ಲೂಕು |
| ಮರಳ್ಳಿ | ಗ್ರಾಮದ ಹೆಸರು ಚಾಮರಾಜ ನಗರ |
| ಮಗಡಳ್ಳಿ | ಗ್ರಾಮ ಹೆಸರು ಚಾಮರಾಜ ನಗರ ತಾಲ್ಲೂಕು |
| ಅರ್ಧನಳ್ಳಿ | ಗ್ರಾಮ ಹೆಸರು ಚಾಮರಾಜ ನಗರ ತಾಲ್ಲೂಕು |
| ಗುಂಡ್ಲುಪೇಟೆ | ಗ್ರಾಮ ಹೆಸರು. ತಾಲ್ಲೂಕು ಕೇಂದ್ರ |
| ಕಪ್ಪ | ಗ್ರಾಮದ ಹೆಸರು |
| ಗೂಡ್ಲೂರು | ಗ್ರಾಮದ ಹೆಸರು |
| ನೀಲಗಿರಿ | ಗ್ರಾಮದ ಹೆಸರು. ತಮಿಳುನಾಡು |
| ಕೋತ್‌ಗಿರಿ | ಗ್ರಾಮದ ಹೆಸರು. ತಮಿಳುನಾಡು |
| ದಾಸಯ್ನುಹುಂಡಿ | ಗ್ರಾಮದ ಹೆಸರು. ಚಾಮರಾಜ ನಗರ ತಾಲ್ಲೂಕು |
| ಗಂಗವಾಡಿ | ಗ್ರಾಮದ ಹೆಸರು. ಚಾಮರಾಜ ನಗರ ತಾಲ್ಲೂಕು |
| ಉನಗನ ಮುಂಟಿ | ಪೋಡಿನ ಹೆಸರು |
| ಕೋಳಿಗುಂಡಾ | ಪೋಡಿನ ಹೆಸರು |
| ಮಲ್ಕಿಬೆಟ್ಟಿ | ಬಿಳಿಗಿರಿರಂಗನ ಬೆಟ್ಟದ ಸಾಲಿನಲ್ಲಿರುವ ಒಂದು ಬೆಟ್ಟದ ಹೆಸರು. ಮೂಲಿಕೆ ಬೆಟ್ಟ>ಮೂಲ್ಕಿ ಬೆಟ್ಟ>ಮುಲ್ಕಿ ಬೆಟ್ಟ ಮಲ್ಕಿಬೆಟ್ಟ |
| ಜಗ್ಗೆಕಲ್ಲು | ಒಂದು ಸ್ಥಳದ ಹೆಸರು |
| ಸತ್ರ | ಛತ್ರ ಗ್ರಾಮದ ಹೆಸರು. ಯಳಂದೂರು ತಾಲ್ಲೂಕು |
| ಮಸ್ಣಪುರ/ಮಸಣಾಪುರ | ಗ್ರಾಮದ ಹೆಸರು. ಯಳಂದೂರು ತಾಲ್ಲೂಕು |
| ವಂಗ್ನೂರು/ಹೊಂಗುನೂರು | ಗ್ರಾಮದ ಹೆಸರು. ಚಾಮರಾಜನಗರ ತಾಲ್ಲೂಕು |
| ಬೆಳ್ಳಿಕೆರೆ | ಕೆರೆಯ ಹೆಸರು ಬಿಳಿಗಿರಿರಂಗನ ಬೆಟ್ಟದ ಸುತ್ತಿನ ಪ್ರದೇಶ |
| ಗೋಕುಲ ದೇಶ | ಗೋವು ಸಾಕುವ ನಾಡು |
| ಕೋಳಿಗುಳ್ಳಾರ | ಕಾಡಿನ ಒಂದು ಪ್ರದೇಶದ ಹೆಸರು |
| ಕನಕದಾಸರ ಗವಿ | ಕಾಡಿನ ಒಂದು ಪ್ರದೇಶದ ಹೆಸರು |
| ಕಾಡುದಾಸರ ಗವಿ | ಬಿಳಿಗಿರಿರಂಗನ ಬೆಟ್ಟದಲ್ಲಿರುವ ಒಂದು ಗವಿ ಹೆಸರು |

| | |
|---|---|
| ಹನುಮಂತ ರಾಯನ ಕಣಿವೆ | ಒಂದು ಕಣಿವೆಯ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಸೋಮಾರಿಯಪ್ಪನ ಕೊಳ | ಸೋಮೇಶ್ವರ ಕೊಳ ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಬೊಮ್ಮನ ಕೊಳ | ಕೊಳದ ಹೆಸರು ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಈಶ್ವರನ ಕಟ್ಟೆ | ಒಂದು ಕೆರೆ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಕೃಷ್ಣನ ಕಟ್ಟೆ | ಕೆರೆಯ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಕಂಬ್ರಿಪುರ | ಗ್ರಾಮದ ಹೆಸರು |
| ಅಂಜನಾಗುಡ್ಡ | ಒಂದು ಗುಡ್ಡದ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಕಳ್ಳರ ಬೆಟ್ಟ | ಬೆಟ್ಟದ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಕಾಮಾರಿ ಬೆಟ್ಟ | ಬೆಟ್ಟದ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಜಾಜಿವನ | ಜಾಜಿ ಹೂವು ಯೇಥಚ್ಛಾಗಿ ಬಿಡುವ ಪ್ರವೇಶದ ಹೆಸರು |
| ಪರಿಮಳದ ಗವಿ | ಒಂದು ಗುಹೆಯ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಕೊಂಗ್ನಾಡ ಸೀಮೆ | ತಮಿಳುನಾಡು |
| ಪೊನ್ನಾಚಿ | ಗ್ರಾಮದ ಹೆಸರು. ಕೊಳ್ಳೇಗಾಲ ತಾಲ್ಲೂಕು ಸೋಲಿಗರು ವಾಸಿಸುವ ಪ್ರದೇಶ ತಮಿಳರು ಇದ್ದಾರೆ |
| ಕಾಳಮಾರಿ | ಒಂದು ಪ್ರದೇಶದ ಹೆಸರು |
| ಬೆಜ್ಜಗುಂಡಿ | ಪೋಡಿನ ಹೆಸರು |
| ಜಾಜರೆ | ಒಂದು ಪ್ರದೇಶದ ಹೆಸರು ಅರಣ್ಯ ಪ್ರದೇಶ |
| ಪುರಾಣಿ | ಒಂದು ಪೋಡಿನ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ |
| ಮಂಜಿಗುಂಡಿ | ಒಂದು ಪೋಡಿನ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ. ಸೋಲಿಗರ ಬಿಳಿಗಿರಿರಂಗನ ಕಾವ್ಯವನ್ನು ಹಾಡಿರುವ ಪರಮುಖ ಕಲಾವಿದನ ಪೋಡು |
| ಸೀಗೆಬೆಟ್ಟ | ಪೋಡಿನ ಹೆಸರು. ಬಿಳಿಗಿರಿರಂಗನ ಬೆಟ್ಟದಲ್ಲಿದೆ. ೧೯೪೨ರಲ್ಲಿ ಮಹಾತ್ಮಗಾಂಧೀಜಿ ಇಲ್ಲಿಗೆ ಬಂದು ಹೋಗಿದ್ದಾರೆಂದು ಹೇಳುತ್ತಾರೆ. ಅವರ ನೆನಪಿಗಾಗಿ ಇಲ್ಲೊಂದು ಗಾಂಧಿ ಆಶ್ರಮ ಶಾಲೆ ಇದೆ. |
| ಕುಂಬಾರ ದೇವರ ಕೊಳ | ಒಂದು ಕೊಳದ ಹೆಸರು ಬಿಳಿಗಿರಿರಂಗನ ಬೆಟ್ಟದಲ್ಲಿದೆ |

## ದೇವತೆ

| | |
|---|---|
| ತುಳಸಮ್ಮ | ಬಿಳಿಗಿರಿರಂಗಯ್ಯನ ಹೆಂಡತಿ |
| ಲಕ್ಷ್ಮೀದೇವಿ | ಬಿಳಿಗಿರಿರಂಗಯ್ಯನ ಹೆಂಡತಿ |
| ಪಟ್ಟದ ರಂಗಸ್ವಾಮಿ | ಬಿಳಿಗಿರಿರಂಗಸ್ವಾಮಿ ಇನ್ನೊಂದು ಹೆಸರು |
| ಕರಿರಂಗಪ್ಪ | ರಂಗಸ್ವಾಮಿ ಇನ್ನೊಂದು ಹೆಸರು ರಂಗ |
| ಸಿಂಗ | ಅಣ್ಣ ತಮ್ಮಂದಿರು |
| ಕಳ್ಳರಂಗಪ್ಪ | ರಂಗಸ್ವಾಮಿ ಇನ್ನೊಂದು ರೂಪ/ಹೆಸರು |
| ಈಶ್ವರ | ಶಿವ |
| ಪಟ್ಟದ ಪಾರ್ವತಿ | ಶಿವನ ಹೆಂಡತಿ |

| | |
|---|---|
| ಬೆಟ್ಟದ ಚಾಮುಂಡಿ ತಾಯಿ | ಮೈಸೂರು ಮಹಾರಾಜರ ಮನೆ ದೇವರು ನಂಜಗೂಡಿನ ನಂಜುಂಡೇಶ್ವರನ ಪ್ರೇಯಸಿ |
| ಸೋಸಲೆ ಹೊನ್ನಾದೇವಿ | ಸೋಸಲೆ ಗ್ರಾಮದ 'ಗ್ರಾಮದೇವತೆ' ಸಪ್ತಮಾತ್ರಕೆಯದಲ್ಲಿ ಒಬ್ಬರು |
| ಗಂಗಾದೇವಿ | ಮುಡುಕುತೊರೆ ಮಲ್ಲಪ್ಪನ ಹೆಂಡತಿ |
| ಚೆನ್ನನಾರಾಯಣ | ರಂಗಸ್ವಾಮಿ ಇನ್ನೊಂದು ರೂಪ/ಹೆಸರು |
| ಸೂಳಿ ರಂಗಮ್ಮ | |
| ಮಲೆಮಾದಪ್ಪ | ಸಾಂಸ್ಕತಿಕ ವೀರ ಮಲೆಗಳ ಮಧ್ಯೆ ನೆಲೆಸಿ ಮಲೆ ಮಾದಪ್ಪನಾದ ಮಹಾಪುರುಷ. ಸುಮಾರು ೧೪ನೇ ಶತಮಾನದಲ್ಲಿ ಇದ್ದಾದಾಗಿ ಹೇಳುತ್ತಾರೆ. |

## ವ್ಯಕ್ತಿ

| | |
|---|---|
| ಬೊಮ್ಮೆಗೌಡ | ಬಿಳಿಗಿರಿರಂಗಯ್ಯನ ಕಾವ್ಯದಲ್ಲಿ ಬರುವ ಸೋಲಿಗ ಕುಟುಂಬದ ನಾಯಕ. ಬಿಳಿಗಿರಿರಂಗಯ್ಯನ ಮಾವ ಕುಸ್ಮದೇವಿ ತಂದೆ |
| ಚಿಕ್ಕಕಾಡಿ | |
| ದೊಡ್ಡಕಾಡಿ | |
| ಚಿಕ್ಕರಂಗಿ | |
| ದೊಡ್ಡರಂಗಿ | |
| ಕ್ಯಾತಿ | |
| ಮಾದಿ | |
| ಕುಸ್ಮದೇವಿ/ಕುಸ್ಮಾಲ | ಬೊಮ್ಮೆಗೌಡನ |
| ಏಳು ಜನ ಹೆಣ್ಣು ಮಕ್ಕಳು | |
| ಸಟ್ಟಗಾರ | |
| ಯಾಜಮಾನ | |
| ಕೋಲ್ಕಾರ | ಸೋಲಿಗ ಸಮುದಾಯದ ಪ್ರಮುಖ ಮೂರು ಮಂದಿ ಹಿರಿಯರ ಸ್ಥಾನ ಮತ್ತು ಹೆಸರು |
| ಸಸ್ಯ | |
| ಕಾಡ ಕೆಬ್ಬಾರಹೂವು | |
| ಕಾರೆ ಹೂವು | |
| ಅಣ್ಣೆ ಹೂವು /ಸೊಪ್ಪು | |
| ಅತ್ತಿಹೂವು | |
| ಬಾನೆಹುಲ್ಲು | |
| ನೂರೆ ಗೆಣಸು | |
| ಮೆಳ್ಗೆಣಸು | |
| ತಾವ್ರ ಗೆಣಸು | |

| | |
|---|---|
| ಕಾರಂಜಿ ಹುಲ್ಲು | |
| ಮಲ್ಲಿಯಾ ಕಡ್ಡಿ | |
| ಉನ್ಗನ ಹುಲ್ಲು | |
| ದುರ್ಬಲ್ಲು / ದಬ್ಬೆ ಹುಲ್ಲು | |
| ಬಿದ್ರಕ್ಕಿ /ಬಿದಿರು | |
| ಹೆಬ್ಬಿದಿರು | |
| ತೇಗು | |
| ಬಾಳೆಯ ಮರ | |
| ಮುತ್ತುಗ | |
| ಬನ್ನಿಮರ | |
| ಕಾರಾಚಿ ಹುಲ್ಲು | |
| ಕಬ್ಬಾಳೆ ಹಂಬು | |
| ಬಿಳಿ ಸೀಗೆಕಾಯಿ | |
| ಗೊಬ್ಬಳಿ ಮುಳ್ಳು | |
| ಹಂಚಿ ಕಡ್ಡಿ /ಹುಲ್ಲು | ಒಂದು ಜಾತಿಯ ಹುಲ್ಲು. ಹುಲ್ಲು ಮನೆಯ ಚಾವಣಿಗೆ ಹೊದಿಸುವರು |
| ಕಗ್ಗಳೀ ಮರ | ಕಗ್ಗಲಿ ಒಂದು ಜಾತಿಯ ಮರ. ವ್ಯವಸಾಯ ಉಪಕರಣಕ್ಕೆ ಬೇಕಾದ ಮರ |
| ಕಕ್ಕಬೇರು /ಗಿಡ/ ಸೊಪ್ಪು | ಒಂದು ಜಾತಿಯ ಗಿಡ. ಸೊಪ್ಪನ್ನು ಗುಡಿಸಲು, ಬೇಲಿ ಹಾಕಲು ಬಳಸುವರು |
| ಎಕ್ಕದ ಬೇರು/ ಹೂ/ ಎಲೆ | ಮಾಟ - ಮಂತ್ರದಲ್ಲಿ ಬೇರು ಬಳಕೆ. ವಿಶೇಷ ಪೂಜೆಯಲ್ಲಿ ಹೂವು ಬಳಕೆ ಹಾಗೆಯೇ ಎಲೆಯೂಸಹ |
| ಸಾಸಿವೆ | ಸೋಲಿಗರು ಸಾಸಿವೆ ಸೊಪ್ಪನ್ನು ಆಹಾರವಾಗಿ ಬಳಸುವರು. ಮೂಲಂಗಿ ಸೊಪ್ಪಿನ ಮಾದರಿ |
| ಎಡ್ಡನ ಕೀರೆ | ಕೀರೆ ಸೊಪ್ಪಿನಂತೆ ಇದ್ದರೂ ೪ ರಿಂದ ೫ ಅಡಿ ಎತ್ತರ ಬೆಳೆಯುತ್ತದೆ. ನವಣೆ ತೆನೆಯಂತೆ ಹೂ ಬಿಟ್ಟು ಕಾಳುಗಳಾಗುತ್ತವೆ. ಸೊಪ್ಪನ್ನು ಆಹಾರವಾಗಿ ಬಳಸುವರು. |
| ಬದನೆಕಾಯಿ | ಸೋಲಿಗರು ಬೆಳೆಯುತ್ತಿದ್ದ ತರಕಾರಿಯಲ್ಲಿ ಒಂದು |
| ಬಾಳೆಕಾಯಿ/ಎಲೆ/ ಹಣ್ಣು | ಜಾತ್ರೆಯಲ್ಲಿ ಬಾಳೆಕಾಯಿಯನ್ನು ದೇವರಿಗೆ (ಬಾವ) ಸಾಂಪ್ರದಾಯಿಕವಾಗಿ ನೀಡುವುದು ವಾಡಿಕೆ. ಎಲೆ ಊಟಕ್ಕೆ ನೀಡಬೇಕು. ಹಣ್ಣನ್ನು ಸಾರ್ವಜನಿಕರೆಲ್ಲರಾದಿಯಾಗಿ ತೇರಿಗೆ ಹಣ್ಣು- ಜನ ಕೂಡಿಸಿ ಎಸೆಯುವುದು ಪದ್ಧತಿ. (ಕಾಡುಬಾಳೆ) |
| ಕುಂಬಳಕಾಯಿ/ ಬೂದಗುಂಬಳ | ಮೇಲೆ ಹೇಳಿದಂತೆ ಬೂದಗುಂಬಳ ಕಾಯಿಯನ್ನು ನೀಡುವುದುಂಟು. |
| ಬೆಂಕಿಕಡ್ಡಿ | ಬೆಂಡಿನ ಮಾದರಿ ಕಡ್ಡಿ - ಇದರಿಂದ ಚಿತ್ರಗಳನ್ನು ರಚಿಸಲು ಬಳಸುವರು |
| ಮೆಕಿಕಾಯಿ | ಒಂದು ಜಾತಿಯ ಗಿಡ ಕಾಡಲ್ಲ ಬೆಳೆಯುವುದು ಅದು ಬಿಡುವ ಕಾತಿ ಮೆಕ್ಕಿಕಾಯಿ |

## ವಸ್ತುಗಳು

| | |
|---|---|
| ಪಟ್ಟಮಂಚ | ದೇವತೆಗಳ ಸಿಂಹಾಸನ |
| ಸಂಕ | ಶಂಕ - ಶಂಕು |
| ಜಗ್ತೆ | ಜಾಗಟೆ |
| ಬುಸಿ | ಬೋನಾಸಿ - ಬೌನಾಸಿ |
| ನಾಮ | ವಿಭೂತಿಗಟ್ಟಿ |
| ಉಲಿಸರ್ಮ | ಹುಲಿಯ ಚರ್ಮ |
| ವುಲ್ಲೆ ಸರ್ಮ | ಹುಲ್ಲೇ ಚರ್ಮ |
| ತ್ರಿಸೂಲ | ತ್ರಿಶೂಲ |
| ಮೂಲೆ ಚೀಲ | ಅಜ್ಜಂದಿರು ಇಟ್ಟುಕೊಂಡಿರುವ ವಿವಿದ್ದೋದ್ದೇಶದ ಚೀಲ |
| ಗೆಜ್ಜೆಸ್ ದೊಣ್ಣೆ | ಅಜ್ಜಂದಿರು ಮೂರನೆ ಕಾಲಾಗಿ ಬಳಸುವ ದೊಣ್ಣೆ ಅದಕ್ಕೆ ಗೆಜ್ಜೆ ಕಟ್ಟಿರುತ್ತಾರೆ |
| ಕವಡೆ ಚೀಲ | ಕವಡೆ ಕಾಯಿಯನ್ನು ಇಡುವ ಚೀಲ |
| ಪಗಡೆ | ಪಗಡೆ |
| ತಾತಿ | ತಾಯಿತ |
| ಸುಣ್ಕಯಿ | ಸುಣ್ಣದ ಡಬ್ಬ |
| ಕಮ್ಮತ್ತಿ ಕೊಂತ | ಕಮ್ಮತ್ತಿ ಮರದ ಕೊಂಡು |
| ಕುಕ್ಕೆ | ಬುಟ್ಟಿ |

## ಕಾಲ

| | |
|---|---|
| ಕಲ್ಲು ಕರ್ಗುವ ಜಾಮ | ಸರಿ ರಾತ್ರಿ/ ಮಧ್ಯೆ ರಾತ್ರಿ/ ಸಮರಾತ್ರಿ |
| ಲೋಕವೆಲ್ಲಾ ಬೆಳಗಾಯ್ತು | ಸೂರ್ಯ ಉದಯಿಸಿತು |
| ಕಾಕೋಳ ಕೂಗ್ಬುಡ್ತು | (ಕಾಡುಕೋಳಿ) ಬೆಳಗಾಯಿತು |

### ಐದು ಕುಲದ ಸೋಲಿಗರು

| | |
|---|---|
| ಹೊಂಗೆಲರ ಕುಲ | ಹೊಂಗೆ ಮರದ ಸಂಕೇತ ಇದರ ಸಂಬಂಧ ನಿಷೇಧಗಳಿವೆ |
| ಆಲುರು ಕುಲ | ಮಾದಪ್ಪ ಕುಲದೇವತೆ |
| ಬೆಲ್ಲರ ಕುಲ | ಬೆಳ್ಳಕುಲ. ಚಿನ್ನ ಬೆಳ್ಳಿ ಕೆಲಸ ನಿರ್ವಹಿಸಿದ್ದರ ಸಂಕೇತ |
| ಸೂರ್ಯಕುಲ | ಸೂರ್ಯ ದೇವತೆ. ಕೈಲಿಚೂರಿ ಹಿಡಿದ್ದರಿಂದ ಈ ಹೆಸರು ಬಂತು |
| ತೆನೇರು ಕುಲ | ರಾಗಿ ತೆನೆಯ ಸಂಕೇತವಾಗಿ ಈ ಹೆಸರು ಬಂತು |

**ಸೋಲಿಗ ಗುಂಪುಗಳು**

| | |
|---|---|
| ಉರುಳಿ ಸೋಲಿಗರು | ಚಾಮರಾಜನಗರ, ಸತ್ಯಮಂಗಲ ಕಾಡಲ್ಲಿ ವಾಸ |
| ಕಾಡು ಸೋಲಿಗರು | ಬಿಳಿಗಿರಿರಂಗಬೆಟ್ಟ, ಮಹದೇಶ್ವರ ಬೆಟ್ಟ ಸುತ್ತಲಿನ ಕಾಡು |
| ಮಲೆಸೋಲಿಗರು | ಬಿಳಿಗಿರಿರಂಗಬೆಟ್ಟ, ಮಹದೇಶ್ವರ ಬೆಟ್ಟ ಸುತ್ತಿನ ಕಾಡು |
| ಉರುಬತ್ತಿ ಸೋಲಿಗರು | ಕಾಕನ ಕೋಟೆ ಕಾಡು |
| ಬುರುಡೆ ಸೋಲಿಗರು | ಕೊಳ್ಳೇಗಾಲ ಸುತ್ತಮುತ್ತ ಹೆಗ್ಗಡ ದೇವನ ಕೋಟೆ ಸುತ್ತಲಿನ ಕಾಡುಗಳು |